"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

(156ನೇ ಅಧಿವೇಶನ)

ಸೋಮವಾರ, 11ನೇ ಆಗಸ್ಟ್ 2025

ವಿಷಯಾನುಕ್ರಮಣಿಕೆ (INDEX)

01. ಭಾರತ ಸಂವಿಧಾನ ಪ್ರಸ್ತಾವನೆಯ ಬೋಧನೆ

02. ಸಂತಾಪ ಸೂಚನೆ

"ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು ಹಾಗೂ ಉಪ ಸಭಾಪತಿಗಳಾಗಿದ್ದ ಡೇವಿಡ್ ಸಿಮೆಯೋನ್, ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಪ್ರೋಟೆಮ್ ಸಭಾಪತಿಗಳಾಗಿದ್ದ ಡಾ: ಎನ್. ತಿಪ್ಪಣ್ಣ, ಮಾಜಿ ಸಚಿವ ಬೇಗಾನೆ ರಾಮಯ್ಯ, ಭಾರತದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿ ಡಾ: ಕೆ. ಕಸ್ತೂರಿರಂಗನ್, ಖ್ಯಾತ ವಿಮರ್ಶಕ ಹಾಗೂ ಹಿರಿಯ ಸಾಹಿತಿಗಳಾಗಿದ್ದ ಡಾ: ಜಿ.ಎಸ್. ಸಿದ್ದಲಿಂಗಯ್ಯ, ಖ್ಯಾತ ಕೃಷಿ ವಿಜ್ಞಾನಿಯಾಗಿದ್ದ ಪ್ರೊ. ಸುಬ್ಬಣ್ಣ ಅಯ್ಯಪ್ಪನ್, ಹಿರಿಯ ಪರಮಾಣು ವಿಜ್ಞಾನಿ ಡಾ: ಎಮ್.ಆರ್. ಶ್ರೀನಿವಾಸನ್, ಹಿರಿಯ ಸಾಹಿತಿಗಳು, ಅಂಕಣಕಾರರು ಹಾಗೂ ವಿಮರ್ಶಕರಾಗಿದ್ದ ಡಾ: ಹೆಚ್.ಎಸ್. ವೆಂಕಟೇಶ್ ಮೂರ್ತಿ ಹಾಗೂ ಬಹುಭಾಷಾ ತಾರೆ ಡಾ: ಬಿ. ಸರೋಜಾದೇವಿ" – ಇವರುಗಳ ನಿಧನದ ಬಗ್ಗೆ

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸುನೀಲ್ ವಲ್ಕಾಪುರ್
- ಶ್ರೀ ಸಿ.ಟಿ.ರವಿ
- ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಟಿ.ಎ.ಶರವಣ
- ಶ್ರೀಮತಿ ಉಮಾಶ್ರೀ
- ಶ್ರೀ ತಿಪ್ಪಣ್ಣಪ್ಪ ಕಮಕನೂರ

03. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

ದಿನ್ನೂರು ಗ್ರಾಮದ ಹಿಂದುಳಿದ ಮತ್ತು ದಲಿತ ರೈತರ ಭೂಮಿಯನ್ನು ಅರಣ್ಯ ಭೂಮಿ ಎಂದು ಘೋಷಿಸಿರುವುದರಿಂದ ದಲಿತರು ಹಾಗೂ ತಳ ಸಮುದಾಯಕ್ಕೆ ಸೇರಿದ ರೈತರ ಜೀವನೋಪಾಯ ಅಪಾಯದಲ್ಲಿರುವ ಬಗ್ಗೆ.

- ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

04. ಅಧಿವೇಶನ ಪ್ರಾರಂಭದ ದಿನ ಸದನದಲ್ಲಿ ವಂದೇ ಮಾತರಂ ಗೀತೆಯ ನಂತರ ನಾಡಗೀತೆಯನ್ನು ಸಹ ನುಡಿಸಬೇಕೆನ್ನುವ ಕುರಿತು

– ಶ್ರೀ ಎಸ್.ಎಲ್.ಭೋಜೇಗೌಡ

05. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

85 – ಮಾಹೆಯಾನ ಪಡಿತರ, ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುತ್ತಿರುವ ಅಕ್ರಮ ಮತ್ತು ಬಿಪಿಎಲ್ ಕಾರ್ಡ್‌ಗಳ ಬಗ್ಗೆ.

– ಶ್ರೀ ಎಂ.ನಾಗರಾಜು
– ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು)

113+164+144 – ಶಾಲಾ-ಕಾಲೇಜುಗಳಲ್ಲಿ ಸ್ವಚ್ಛತಾ ಕಾರ್ಯಕ್ಕೆ ಹೊರಗುತ್ತಿಗೆ ನೀಡಿರುವ ಕುರಿತು

– ಶ್ರೀ ರಾಮೋಜಿಗೌಡ
– ಶ್ರೀ ಮಧು ಜಿ.ಮಾದೇಗೌಡ
– ಶ್ರೀ ಕೆ.ವಿವೇಕಾನಂದ
– ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

21 – ವೈದ್ಯಕೀಯ ಶಿಕ್ಷಣ ಕಾಲೇಜುಗಳ ಹುದ್ದೆಗಳ ಬಗ್ಗೆ

– ಶ್ರೀ ಸಿ.ಎನ್.ಮಂಜೇಗೌಡ
– ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವರು)

76 – ಅಜೀಂ ಪ್ರೇಮ್ ಜಿ.ಫೌಂಡೇಶನ್ ವತಿಯಿಂದ ಮೊಟ್ಟೆ ನೀಡುವ ಕುರಿತು

– ಶ್ರೀ ಎನ್.ರವಿಕುಮಾರ್
– ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

34 – ರಾಜ್ಯಾದ್ಯಂತ ಸರ್ಕಾರದ ಸ್ಮಾರ್ಟ್ ಮೀಟರ್ ಅಳವಡಿಕೆಗೆ ನಿರ್ಧರಿಸಿರುವ ಬಗ್ಗೆ

– ಶ್ರೀ ಸಿ.ಟಿ.ರವಿ
– ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

94 – ಏಪ್ರಿಲ್, 2025ರ ಎಸ್.ಎಸ್.ಎಲ್.ಸಿ.ಯಲ್ಲಿ ವಿಷಯವಾರು ಶೇಕಡ 60 ಕ್ಕಿಂತ ಕಡಿಮೆ ಫಲಿತಾಂಶ ಪಡೆದ ವಿಷಯ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳುವ ಕುರಿತು.

– ಶ್ರೀ ಎಸ್.ವಿ.ಸಂಕನೂರ
– ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

19 – ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಮಂಜೂರು ಮಾಡುವ ಕುರಿತು

- ಶ್ರೀ ಶರಣಗೌಡ ಬಯ್ಯಾಪುರ
- ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)

63+5 – ಕಾಡಾನೆಗಳ ಹಾವಳಿಯ ಕುರಿತು

- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

139 – ಅನುದಾನಿತ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಮಾಹಿತಿ ಬಗ್ಗೆ

- ಶ್ರೀ ಪುಟ್ಟಣ್ಣ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

20 – ರಾಜ್ಯದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಕುರಿತು

- ಶ್ರೀ ಕೆ.ಅಬ್ದುಲ್ ಜಬ್ಬಾರ್
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

142 – ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಕುರಿತು

- ಶ್ರೀ ಶರವಣ ಟಿ.ಎ.
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

135 – ಫೈರ್ ಸೇಫ್ಟಿ ಪರ್ಮಿಷನ್ ವಿನಾಯಿತಿ ನೀಡುವ ಬಗ್ಗೆ

- ಡಾ: ಧನಂಜಯ ಸರ್ಜಿ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

35 – ಮಂಗಳೂರು ತಾಲ್ಲೂಕಿನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಬ್ ಸ್ಟೇಷನ್ ನಿರ್ಮಿಸುವ ಬಗ್ಗೆ

- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

06, ನಿಯಮ 58ಎ ಮೇರೆಗೆ ಶೂನ್ಯ ವೇಳೆ ಪ್ರಸ್ತಾವಗಳು

ಅ) ರಾಜ್ಯದ ಧಾರ್ಮಿಕ ಹೆಮ್ಮೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ಅನಾಮಿಕ ವ್ಯಕ್ತಿಯೊಬ್ಬರು ಯಾವುದೇ ಸಾಕ್ಷ್ಯವಿಲ್ಲದೆ ಆರೋಪ ಮಾಡಿರುವ ಬಗ್ಗೆ ದೃಶ್ಯ ಮಾಧ್ಯಮದಲ್ಲಿ, ಡಿಜಿಟಲ್ ಪ್ಲಾಟ್‌ಫಾರ್ಮ್ ನಲ್ಲಿ ವರದಿ ಪ್ರಕಟವಾಗುತ್ತಿರುವ ಬಗ್ಗೆ.

- ಶ್ರೀ ಡಿ.ಎಸ್.ಅರುಣ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಆ) ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ, 187 ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಅವಧಿ ಮುಗಿದಿದ್ದರೂ, ರಾಜ್ಯ ಸರ್ಕಾರ ಈವರೆಗೂ ಮೀಸಲಾತಿ ಪಟ್ಟಿ ನೀಡದಿರುವ ಬಗ್ಗೆ.

– ಶ್ರೀ ಸಿ.ಎನ್.ಮಂಜೇಗೌಡ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಇ) ರಾಜ್ಯದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ನಾಪತ್ತೆ ಪ್ರಕರಣಗಳ ಬಗ್ಗೆ.

– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಈ) ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲು ಪ್ರಾರಂಭವಾದ ಗುಲಬರ್ಗಾ ದೂರದರ್ಶನ ಕೇಂದ್ರವನ್ನು ಕೇಂದ್ರ ಸರ್ಕಾರ ಬಂದ್ ಮಾಡಲು ಹೊರಟ್ಟಿರುವ ಕುರಿತು.

– ಶ್ರೀ ತಿಪ್ಪಣ್ಣಪ್ಪ ಕಮಕನೂರು
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಉ) ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೋರ್ಡ್, ಡಿಜಿಟಲ್ ಕ್ಲಾಸ್‌ಗಳಲ್ಲಿ ಭೋಧನೆ ಮಾಡುವ ಮೂಲಕ ಮಕ್ಕಳನ್ನು ಆಧುನಿಕ ಜಗತ್ತಿಗೆ ತಯಾರುಗೊಳಿಸಿ ಮಾನವ ಸಂಪನ್ಮೂಲವನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಕುರಿತು.

– ಶ್ರೀ ಹನುಮಂತ ರುದ್ರಪ್ಪ ನಿರಾಣಿ
– ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

ಊ) "ನಂದಗಡ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಅವ್ಯವಹಾರದ" ಕುರಿತು.

– ಶ್ರೀ ಎಂ.ನಾಗರಾಜು
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಋ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಗಣಿಗಾರಿಕೆ ಹಾಗೂ ಮರಳುಗಾರಿಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಕೂಲಿ ಕಾರ್ಮಿಕರು ಹಾಗೂ ಸಣ್ಣ ಗುತ್ತಿಗೆದಾರರು ತೊಂದರೆಯಲ್ಲಿದ್ದು ಜಿಲ್ಲೆಗೆ ಹೊಸ ಮರಳು ನೀತಿಯನ್ನು ಜಾರಿಗೊಳಿಸಿ ಪರವಾನಗಿ ನೀಡಬೇಕೆಂದು ಕೋರಿರುವ ಕುರಿತು.

– ಶ್ರೀ ಐವನ್ ಡಿ'ಸೋಜಾ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಎ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಗರ್ಭಿಣಿ, ಬಾಣಂತಿಯರು, ಕಿಶೋರಿಯರು ಹಾಗೂ 6 ವರ್ಷದೊಳಗಿನ ಮಕ್ಕಳ ಆರೋಗ್ಯದ ಮೇಲೆ ನಿಗಾ ವಹಿಸಲು ಹಾಗೂ ಫಲಾನುಭವಿಗಳಿಗೆ ಫೇಸ್ ಕ್ಯಾಪ್ಚರ್ ಮೂಲಕ ಪೌಷ್ಟಿಕ ಆಹಾರ ಸರಬರಾಜು ಮಾಡುವಲ್ಲಿ ಆಗುತ್ತಿರುವ ತೊಂದರೆ ಬಗ್ಗೆ.

– ಶ್ರೀ ಗೋವಿಂದರಾಜು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

ಏ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇಲ್ಲಿನ ನಿವೃತ್ತ ಪ್ರಾಧ್ಯಾಪಕರುಗಳು ಮತ್ತು ಸಿಬ್ಬಂದಿಗಳು ಪ್ರತಿ ತಿಂಗಳು ಪಿಂಚಣಿ ಹಣ ಪಾವತಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿರುವ ಬಗ್ಗೆ.

– ಶ್ರೀ ಎಸ್.ವಿ.ಸಂಕನೂರ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

07. ಹಕ್ಕುಚ್ಯುತಿ ಪ್ರಸ್ತಾವ

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಕಲಬುರಗಿಯ ಚಿತ್ತಾಪುರದ Circuit House ನಲ್ಲಿ ದಿಗ್ಬಂಧನದಲ್ಲಿರಿಸಿದ್ದ ಬಗ್ಗೆ.

– ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ನಾಯಕರು)
– ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಐವನ್ ಡಿ'ಸೋಜಾ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
– ಶ್ರೀ ಎನ್.ರವಿಕುಮಾರ್
– ಶ್ರೀ ಜಗದೇವ್ ಗುತ್ತೇದಾರ್
– ಶ್ರೀ ಶರಣ ಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು)
– ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)
– ಶ್ರೀ ಸಿ.ಟಿ.ರವಿ
– ಶ್ರೀ ಎ.ವಸಂತ್ ಕುಮಾರ್
– ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
– ಶ್ರೀ ಎಂ.ನಾಗರಾಜು
– ಶ್ರೀ ಬಸನಗೌಡ ಬಾದರ್ಲಿ
– ಶ್ರೀ ಎಸ್.ರವಿ

08. ಸಭೆಯ ಮುಂದಿಡಲಾದ ಕಾಗದ ಪತ್ರಗಳು

09. ಕಾರ್ಯದರ್ಶಿಯವರ ವರದಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10. ಗಮನ ಸೆಳೆಯುವ ಸೂಚನೆಗಳು

ಅ) ಕಲಬುರಗಿ ಜಿಲ್ಲೆಯಲ್ಲಿನ ಜಮೀನುಗಳನ್ನು ಖರೀದಿಸಿ ಅತ್ಯಮೂಲ್ಯವಾದ ಸುಣ್ಣದ ಕಲ್ಲಿನ ನೈಸರ್ಗಿಕ ಸಂಪನ್ಮೂಲ ಬಳಸಿಕೊಂಡು ಸಿಮೆಂಟ್ ಉತ್ಪಾದನೆ ಮಾಡುತ್ತಿರುವ ಕಾರ್ಖಾನೆಗಳಿಂದ ಜನ ಜಾನುವಾರು ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಬಗ್ಗೆ.

- ಡಾ:ತಳವಾರ್ ಸಾಬಣ್ಣ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅರಣ್ಯ ವಿಭಾಗದಲ್ಲಿ ಆನೆಗಳ ಸಂಘರ್ಷವನ್ನು ತಡೆಯಲು "ಎಲಿಫೆಂಟ್ ಟಾಸ್ಕ್ ಫೋರ್ಸ್" ಅನ್ನು ರಚಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

- ಶ್ರೀ ಐವನ್ ಡಿ'ಸೋಜಾ
- ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಇ) ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಅನುದಾನದ ಕೊರತೆಯಿಂದಾಗಿ ಬಸವ ಕಲ್ಯಾಣದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.

- ಡಾ: ಎಂ.ಜಿ.ಮುಳೆ
- ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

11. ನಿಯಮ ೩೩೦ರ ಮೇರೆಗೆ

ಅ) ರಾಜ್ಯಾದ್ಯಂತ ನಿರ್ಮಾಣಗೊಳ್ಳುತ್ತಿರುವ ಅಕ್ರಮ ಬಡಾವಣೆಗಳನ್ನು ತಡೆಗಟ್ಟಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳದಿರುವ ಕುರಿತು.

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಭೈರತಿ ಸುರೇಶ್

12. ನಿಯಮ ೬೮ರ ಮೇರೆಗೆ

ದಿನ್ನೂರು ಗ್ರಾಮದ ಹಿಂದುಳಿದ ಮತ್ತು ದಲಿತ ರೈತರ ಭೂಮಿಯನ್ನು ಅರಣ್ಯ ಭೂಮಿ ಎಂದು ಘೋಷಿಸಿರುವುದರಿಂದ ದಲಿತರು ಹಾಗೂ ತಳ ಸಮುದಾಯಕ್ಕೆ ಸೇರಿದ ರೈತರ ಜೀವನೋಪಾಯ ಅಪಾಯದಲ್ಲಿರುವ ಬಗ್ಗೆ.

- ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)

- - -

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(595) 11/08/2025 11-00 ಬಿಕೆಪಿ-ಬಿಎನ್ಎಸ್

ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ, 11ನೇ ಆಗಸ್ಟ್ 2025

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ
ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಬೆಳಗ್ಗೆ 11 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು
ಪೀಠದಲ್ಲಿ ಉಪಸ್ಥಿತರಿದ್ದರು

(ಸದನವು "ವಂದೇ ಮಾತರಂ" ಗೀತೆಯೊಂದಿಗೆ ಪ್ರಾರಂಭಗೊಂಡಿತು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1, ಭಾರತದ ಸಂವಿಧಾನ ಪ್ರಸ್ತಾವನೆಯ ಬೋಧನೆ

(ಸನ್ಮಾನ್ಯ ಸಭಾಪತಿಯವರು ಸದನದಲ್ಲಿ ಈ ಕೆಳಕಂಡಂತೆ
ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು)

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ;
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(596) 11.08.2025 11.10 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ದಯಮಾಡಿ, ಕಳೆದ ಎರಡು ಅಧಿವೇಶನಗಳ ಹಿಂದೆ...

ಸಭಾಪತಿಯವರು:- ಮಾನ್ಯ ಭೋಜೇಗೌಡರವರೆ, ಒಂದು ನಿಮಿಷ... ಮೊದಲಿಗೆ ಸಂತಾಪ ಸೂಚನಾ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು. ನಂತರ ತಾವು ಮಾತನಾಡಿ.

02. ಸಂತಾಪ ಸೂಚನೆಗಳು

ವಿಷಯ:- "ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು ಹಾಗೂ ಉಪ ಸಭಾಪತಿಗಳಾಗಿದ್ದ ಡೇವಿಡ್ ಸಿಮೆಯೋನ್, ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಪ್ರೋಟೆಮ್ ಸಭಾಪತಿಗಳಾಗಿದ್ದ ಡಾ: ಎನ್. ತಿಪ್ಪಣ್ಣ, ಮಾಜಿ ಸಚಿವ ಬೇಗಾನೆ ರಾಮಯ್ಯ, ಭಾರತದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿ ಡಾ: ಕೆ. ಕಸ್ತೂರಿರಂಗನ್, ಖ್ಯಾತ ವಿಮರ್ಶಕ ಹಾಗೂ ಹಿರಿಯ ಸಾಹಿತಿಗಳಾಗಿದ್ದ ಜಿ.ಎಸ್. ಸಿದ್ದಲಿಂಗಯ್ಯ, ಖ್ಯಾತ ಕೃಷಿ ವಿಜ್ಞಾನಿಯಾಗಿದ್ದ ಪ್ರೊ. ಸುಬ್ಬಣ್ಣ ಅಯ್ಯಪ್ಪನ್, ಹಿರಿಯ ಪರಮಾಣು ವಿಜ್ಞಾನಿ ಡಾ: ಎಮ್.ಆರ್. ಶ್ರೀನಿವಾಸನ್, ಹಿರಿಯ ಸಾಹಿತಿಗಳು, ಅಂಕಣಕಾರರು ಹಾಗೂ ವಿಮರ್ಶಕರಾಗಿದ್ದ ಡಾ: ಹೆಚ್.ಎಸ್. ವೆಂಕಟೇಶ್ ಮೂರ್ತಿ ಹಾಗೂ ಬಹುಭಾಷಾ ತಾರೆ ಡಾ: ಬಿ. ಸರೋಜಾದೇವಿ – ಇವರುಗಳ ನಿಧನದ ಬಗ್ಗೆ

***

ಸಭಾಪತಿಯವರು:- ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು ಹಾಗೂ ಉಪ ಸಭಾಪತಿಗಳಾಗಿದ್ದ ಶ್ರೀ ಡೇವಿಡ್ ಸಿಮೆಯೋನ್, ವಿಧಾನ ಪರಿಷತ್ತಿನ ಮಾಜಿ ಶಾಸಕರು ಹಾಗೂ ಪ್ರೋಟೆಮ್ ಸಭಾಪತಿಗಳಾಗಿದ್ದ ಡಾ: ಎನ್. ತಿಪ್ಪಣ್ಣ, ಮಾಜಿ ಸಚಿವ ಶ್ರೀ ಬೇಗಾನೆ ರಾಮಯ್ಯ, ಭಾರತದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿ ಡಾ: ಕೆ. ಕಸ್ತೂರಿರಂಗನ್, ಖ್ಯಾತ ವಿಮರ್ಶಕ ಹಾಗೂ ಹಿರಿಯ ಸಾಹಿತಿಗಳಾಗಿದ್ದ ಶ್ರೀ ಜಿ.ಎಸ್. ಸಿದ್ದಲಿಂಗಯ್ಯ, ಖ್ಯಾತ ಕೃಷಿ ವಿಜ್ಞಾನಿಯಾಗಿದ್ದ ಪ್ರೊ. ಸುಬ್ಬಣ್ಣ ಅಯ್ಯಪ್ಪನ್, ಹಿರಿಯ ಪರಮಾಣು ವಿಜ್ಞಾನಿ ಡಾ: ಎಮ್.ಆರ್. ಶ್ರೀನಿವಾಸನ್, ಹಿರಿಯ ಸಾಹಿತಿಗಳು, ಅಂಕಣಕಾರರು ಹಾಗೂ ವಿಮರ್ಶಕರಾಗಿದ್ದ ಡಾ: ಹೆಚ್.ಎಸ್. ವೆಂಕಟೇಶ್ ಮೂರ್ತಿ ಹಾಗೂ ಬಹುಭಾಷಾ ತಾರೆ ಡಾ: ಬಿ. ಸರೋಜಾದೇವಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಡೇವಿಡ್ ಸಿಮೆಯೋನ್

ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು, ಮಾಜಿ ಉಪ ಸಭಾಪತಿಗಳು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಡೇವಿಡ್ ಸಿಮೆಯೋನ್ ಅವರು ದಿನಾಂಕ:10.06.2025 ರಂದು ನಿಧನ ಹೊಂದಿರುತ್ತಾರೆ.

1950ರ ಜೂನ್ 11ರಂದು ಗುಲಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಮಲ್ಹಾರ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ.(ರಾಜಕೀಯ ವಿಜ್ಞಾನ) ಪದವೀಧರರಾಗಿದ್ದು, ವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. 1973-74ರಲ್ಲಿ ಕಲಬುರ್ಗಿ ಕಲಾ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾಗಿ, 1974ರಿಂದ 1976ರವರೆಗೆ ಕಲಬುರ್ಗಿಯ ಜಿಮ್‌ಖಾನಾ ಉನ್ನತ ಶಿಕ್ಷಣ ಕೇಂದ್ರದ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ 1983 ರಿಂದ 1988 ರವರೆಗೆ ಕಲಬುರ್ಗಿ ನಗರ ಸಭೆಯ ಸದಸ್ಯರಾಗಿ ಮತ್ತು 1988 ರಿಂದ 1991 ರವರೆಗೆ ಕಲಬುರಗಿ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

1996 ರಿಂದ 2002ರ ಅವಧಿಗೆ ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿದ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. 1999 ರಿಂದ 2002 ರವರೆಗೆ ಉಪ ಸಭಾಪತಿಗಳಾಗಿ ಹಾಗೂ 2000 ದಿಂದ 2001 ರವರೆಗೆ ವಿಧಾನ ಪರಿಷತ್ತಿನ ಸಭಾಪತಿಯವರ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

2. ಡಾ: ಎನ್. ತಿಪ್ಪಣ್ಣ

ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು ಹಾಗೂ ಮಾಜಿ ಸದಸ್ಯರಾಗಿದ್ದ ಡಾ: ಎನ್. ತಿಪ್ಪಣ್ಣ ಅವರು ದಿನಾಂಕ:11.07.2025 ರಂದು ನಿಧನ ಹೊಂದಿರುತ್ತಾರೆ.

1928ರ ನವೆಂಬರ್ 23 ರಂದು ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಬಿ.ಎಲ್., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. 1988-1994, 1994-2000 ಹಾಗೂ 2006-2012ರವರೆಗೆ ಮೂರು ಬಾರಿ ವಿಧಾನ ಪರಿಷತ್ತಿನ ಶಾಸಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ದಿನಾಂಕ:01-07-2008 ರಿಂದ ದಿನಾಂಕ 05-08-2008ರವರೆಗೆ ವಿಧಾನ ಪರಿಷತ್ತಿನ ಪ್ರೋಟಮ್ ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ಕಾನೂನು, ರಾಜಕೀಯ ಮತ್ತು ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಸುಮಾರು 26 ವರ್ಷಗಳ ಕಾಲ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಗೌರವಾನ್ವಿತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ 40 ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ನೇತೃತ್ವ ವಹಿಸಿದ್ದರು. ಇವರ ಶೈಕ್ಷಣಿಕ ಕ್ಷೇತ್ರದ ಕೊಡುಗೆಗೆ ವಿಜಯನಗರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ.

12 ವರ್ಷಗಳ ಕಾಲ ಬಳ್ಳಾರಿಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ರಾಗಿ, ಕರ್ನಾಟಕ ರಾಜ್ಯ ವಕೀಲರ ಸಂಘದ ಅಧ್ಯಕ್ಷರಾಗಿ, ಹೊಸಪೇಟೆಯ ಬಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷರಾಗಿ, ಬಳ್ಳಾರಿ ರಾಮಕೃಷ್ಣ ವಿವೇಕಾನಂದ ಕೇಂದ್ರದ ಉಪಾಧ್ಯಕ್ಷರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಬಸವಾದಿ ಪ್ರಮಥರ ತತ್ವಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನದಾಸೋಹ, ಜ್ಞಾನದಾಸೋಹಕ್ಕೆ ದಾರಿದೀಪವಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

೩. ಬೇಗಾನೆ ರಾಮಯ್ಯ

ಮಾಜಿ ಸಚಿವ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಬೇಗಾನೆ ರಾಮಯ್ಯ ಅವರು ದಿನಾಂಕ:24.04.2025ರಂದು ನಿಧನ ಹೊಂದಿರುತ್ತಾರೆ.

1922ರ ಏಪ್ರಿಲ್ 20ರಂದು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಅಡ್ಡಗದ್ದೆ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಬಿ.ಎಲ್., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. 1972ರಲ್ಲಿ ನರಸಿಂಹರಾಜಪುರ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದ ಶ್ರೀಯುತರು 1978ರಲ್ಲಿ 6ನೇ ವಿಧಾನಸಭೆಗೆ ಶೃಂಗೇರಿ ಕ್ಷೇತ್ರದಿಂದ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಮಾಜಿ ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್ ಅವರ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಲೆನಾಡು ಭಾಗಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಕ್ಕಾಗಿ ಶ್ರೀಯುತರು "ಮಲೆನಾಡಿನ ಭಗೀರಥ" ಹಾಗೂ "ಬೋರ್‌ವೆಲ್ ರಾಮಯ್ಯ" ಎಂಬ ಅಂಕಿತದಿಂದ ಪ್ರಸಿದ್ಧರಾಗಿದ್ದರು.

ಅಧ್ಯಯನಶೀಲತೆ ಹಾಗೂ ವಿಚಾರ ಮಂಡನೆ ಚಾಕಚಕ್ಯತೆಯಿಂದಾಗಿ ಅತ್ಯುತ್ತಮ ಸಂಸದೀಯ ಪಟು ಎಂದು ಗುರುತಿಸಲ್ಪಟ್ಟಿದ್ದ ಶ್ರೀಯುತರು ಜನಪರ ಚಿಂತನೆ, ಗ್ರಾಮೀಣಾಭಿವೃದ್ಧಿ, ನಿಸ್ವಾರ್ಥ ಸೇವೆಯ ಮೂಲಕ ಮಾದರಿ ವ್ಯಕ್ತಿಯಾಗಿ ಜನಮಾನಸದಲ್ಲಿ ಉಳಿದಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4. ಡಾ: ಕೆ. ಕಸ್ತೂರಿರಂಗನ್

ಭಾರತದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ಡಾ: ಕೆ. ಕಸ್ತೂರಿರಂಗನ್ ಅವರು ದಿನಾಂಕ:25.04.2025ರಂದು ನಿಧನ ಹೊಂದಿರುತ್ತಾರೆ.

1940ರ ಅಕ್ಟೋಬರ್ 24ರಂದು ಕೇರಳದ ಎರ್ನಾಕುಲಂನಲ್ಲಿ ಜನಿಸಿದ್ದ ಶ್ರೀಯುತರು ಮುಂಬೈ ವಿಶವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು, ಅಹಮದಾಬಾದ್ ವಿಶ್ವವಿದ್ಯಾಲಯದಿಂದ "High Energy Astronomy "ಯಲ್ಲಿ Ph.D., ಪದವಿಯನ್ನು ಪಡೆದಿದ್ದರು. 1971ರಲ್ಲಿ ಇಸ್ರೋದೊಂದಿಗೆ ತಮ್ಮ ವೃತ್ತಿ ಜೀವನವನ್ನು ಆರಂಭಿಸಿ, ಭಾರತದ ಮೊದಲ ಎರಡು ಭೂವೀಕ್ಷಣಾ ಉಪಗ್ರಹಗಳಾದ ಭಾಸ್ಕರ-I ಮತ್ತು ಭಾಸ್ಕರ-IIರ ಯೋಜನಾ ನಿರ್ದೇಶಕರಾಗಿ, ಇಸ್ರೋ ಉಪಗ್ರಹ ಕೇಂದ್ರದ ನಿರ್ದೇಶಕರು ಹಾಗೂ ಅಧ್ಯಕ್ಷರಾಗಿ, ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿದ್ದರಲ್ಲದೆ ರಾಷ್ಟ್ರೀಯ ಶಿಕ್ಷಣ ನೀತಿ 2020ನ್ನು ರಚಿಸುವ ಸಮಿತಿಯ ಮುಖ್ಯಸ್ಥರಾಗಿ, ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆ ಟ್ರಸ್ಟ್ ನ ಮಂಡಳಿ ಸದಸ್ಯರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ.

2003 ರಿಂದ 2009ರವರೆಗೆ ರಾಜ್ಯಸಭೆಯ ಸದಸ್ಯರಾಗಿ ಮತ್ತು 2015ರಲ್ಲಿ ನೀತಿ ಆಯೋಗ ಎಂದು ಮರುನಾಮಕರಣಗೊಂಡ ಭಾರತದ ಯೋಜನಾ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಹಲವು ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ವಿಜ್ಞಾನ ಕ್ಷೇತ್ರದಲ್ಲಿ ನೀಡಿರುವ ಅಪಾರ ಕೊಡುಗೆಗೆ 27 ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿಗಳು ದೊರೆತಿವೆ. ಆರ್ಯಭಟ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಹಾಗೂ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಮಹಾನ್ ವಿಜ್ಞಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

5. ಜಿ.ಎಸ್. ಸಿದ್ದಲಿಂಗಯ್ಯ

ಖ್ಯಾತ ವಿಮರ್ಶಕ ಹಾಗೂ ಹಿರಿಯ ಸಾಹಿತಿಗಳಾಗಿದ್ದ ಡಾ: ಜಿ.ಎಸ್. ಸಿದ್ದಲಿಂಗಯ್ಯ ಅವರು ದಿನಾಂಕ:07.05.2025ರಂದು ನಿಧನ ಹೊಂದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1931ರ ಫೆಬ್ರವರಿ 20ರಂದು ತುಮಕೂರು ಜಿಲ್ಲೆಯ ಬೆಳ್ಳಾವೆಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ. ಆನರ್ಸ್ ಮತ್ತು ಎಂ.ಎ., ಪದವಿಯನ್ನು ಕನ್ನಡದಲ್ಲಿ ಪಡೆದಿದ್ದರು. ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಶ್ರೀಯುತರು ಪ್ರಾಚಾರ್ಯರಾಗಿ, ಉಪ ಪ್ರಾಧ್ಯಾಪಕರಾಗಿ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಹೆಚ್ಚುವರಿ ನಿರ್ದೇಶಕರಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಬಸವಾದಿ ಶರಣ ಸಾಹಿತ್ಯ ಕೇಂದ್ರದ ನಿರ್ದೇಶಕರಾಗಿ ಹಾಗೂ ಬೆಂಗಳೂರು, ಮೈಸೂರು, ಕರ್ನಾಟಕ, ಗುಲ್ಬರ್ಗಾ ಮತ್ತು ಮಂಗಳೂರು ವಿಶ್ವವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

(ಮುಂದು)

(597) 11-08-2025 (11.20) ಕೆಜಿ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಸಭಾಪತಿಯವರು (ಮುಂದು):-

ಸಾಹಿತ್ಯದ ಬಗ್ಗೆ ಅಪಾರ ಒಲವು ಹೊಂದಿದ್ದ ಶ್ರೀಯುತರು ರಸಗಂಗೆ, ಉತ್ತರ, ಚಿತ್ರ-ವಿಚಿತ್ರ, ಐವತ್ತರ ನೆರಳು, ಸೇರಿ ವಿವಿಧ ಕವನ ಸಂಕಲನಗಳು, ಹೊಸಗನ್ನಡ ಕಾವ್ಯ, ಪಂಚಮುಖ ಚಾಮರಸ, ವಚನ ಸಾಹಿತ್ಯ - ಒಂದು ಇಣುಕು ನೋಟ ಸೇರಿ ವಿವಿಧ ವಿಮರ್ಶಾ ಕೃತಿಗಳು, ಮಹಾನುಭಾವ ಬುದ್ಧ, ಬಸವಣ್ಣ ಮೊದಲಾದ ಜೀವನಚರಿತ್ರೆ ಕೃತಿಗಳನ್ನು ರಚಿಸುವುದರ ಜೊತೆಗೆ ಕೆಲವೊಂದು ಕೃತಿಗಳನ್ನು ಅನುವಾದಿಸಿದ್ದಾರೆ.

ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ವಿಶೇಷ ಗೌರವ ಬಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

6. ಪ್ರೊ: ಸುಬ್ಬಣ್ಣ ಅಯ್ಯಪ್ಪನ್

ಪದ್ಮಶ್ರೀ ಪುರಸ್ಕೃತ ಖ್ಯಾತ ಕೃಷಿ ವಿಜ್ಞಾನಿಯಾಗಿದ್ದ ಪ್ರೊ. ಸುಬ್ಬಣ್ಣ ಅಯ್ಯಪ್ಪನ್ ಅವರು ದಿನಾಂಕ:10.05.2025ರಂದು ನಿಧನ ಹೊಂದಿರುತ್ತಾರೆ.

1955ರ ಡಿಸೆಂಬರ್ 10ರಂದು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಅಲ್ಕೆರೆ ಗ್ರಾಮದ ಅಗ್ರಹಾರದಲ್ಲಿ ಜನಿಸಿದ್ದ ಶ್ರೀಯುತರು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಪಿಎಚ್‌ಡಿ ಪದವಿ ಮತ್ತು ಮಂಗಳೂರಿನ ಮೀನುಗಾರಿಕೆ ಕಾಲೇಜಿನಿಂದ ಮೀನು ಉತ್ಪಾದನೆ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿದ್ದು, 1978ರಲ್ಲಿ ಬ್ಯಾರಕ್‌ಪೋರ್‌ನ ಕೇಂದ್ರೀಯ ಒಳನಾಡಿನ ಮೀನುಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ಸರ್ಕಾರಿ ಸಂಸ್ಥೆಗಳಲ್ಲಿ ಹಲವಾರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೀನುಗಾರಿಕೆ ಮತ್ತು ಜಲಕೃಷಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹಲವಾರು ಹೊಸ ಯೋಜನೆಗಳನ್ನು ಮುನ್ನಡೆಸಿದ್ದ ಶ್ರೀಯುತರು ಕೇಂದ್ರೀಯ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿದ್ದರು. ಇವರ ಜಲಕೃಷಿ ಮತ್ತು ಮೀನುಗಾರಿಕೆ ಸಂಶೋಧನೆ ಭಾರತದ ಕರಾವಳಿ ಪ್ರದೇಶಗಳಲ್ಲಿ ಆರ್ಥಿಕ ಸಬಲೀಕರಣಕ್ಕೆ ಸಹಾಯಕವಾಗಿತ್ತು.

ಭಾರತದ ನೀಲಿ ಕ್ರಾಂತಿಗೆ ಶಕ್ತಿ ತುಂಬುವಲ್ಲಿ ಪ್ರಮುಖ ಪಾತ್ರ ವಹಿಸಿದ್ದನ್ನು ಗುರುತಿಸಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಲಾಗಿದ್ದು, ಜಲಚರ ಸಾಕಣೆ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ಸಂಬಂಧಿಸಿದ ಕೆಲಸಕ್ಕಾಗಿ ಹಲವಾರು ಮನ್ನಣೆ ಮತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಶ್ರೀಯುತರು ಭಾಜನಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಕೃಷಿ ವಿಜ್ಞಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

7. ಡಾ: ಎಮ್.ಆರ್. ಶ್ರೀನಿವಾಸನ್

ಹಿರಿಯ ಪರಮಾಣು ವಿಜ್ಞಾನಿ ಪದ್ಮವಿಭೂಷಣ ಡಾ: ಎಮ್.ಆರ್. ಶ್ರೀನಿವಾಸನ್ ಅವರು ದಿನಾಂಕ:20.05.2025ರಂದು ನಿಧನ ಹೊಂದಿರುತ್ತಾರೆ.

1930ರಲ್ಲಿ ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಯಾಂತ್ರಿಕ ಎಂಜಿನಿಯರಿಂಗ್ ಪದವಿ, 1952ರಲ್ಲಿ ಸ್ನಾತಕೋತ್ತರ ಪದವಿ ಹಾಗೂ ಕೆನಡಾದ ಎಂ.ಸೀ.ಗಿಲ್. ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿಗಳನ್ನು ಪಡೆದಿರುತ್ತಾರೆ.

1955ರಲ್ಲಿ ಪರಮಾಣು ಶಕ್ತಿ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ಶ್ರೀಯುತರು ಭಾರತ ದೇಶದ ಪ್ರಥಮ ಪರಮಾಣು ಸಂಶೋಧನಾ ರಿಯಾಕ್ಟರ್ 'ಅಪ್ಸರ' ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮದ್ರಾಸ್ ಪರಮಾಣು ವಿದ್ಯುತ್ ಕೇಂದ್ರದ ಮುಖ್ಯ ಯೋಜನಾ ಇಂಜಿನಿಯರ್ ಹುದ್ದೆ ಅಲಂಕರಿಸಿದ್ದರಲ್ಲದೆ ಪರಮಾಣು ಶಕ್ತಿ ಆಯೋಗದ ಅಧ್ಯಕ್ಷರಾಗಿ, ಇಲಾಖೆಯ ಕಾರ್ಯದರ್ಶಿಯಾಗಿ ಭಾರತದ ಪರಮಾಣು ಪವರ್ ಬೋರ್ಡಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಭಾರತದ ಎಲ್ಲಾ ಪರಮಾಣು ವಿದ್ಯುತ್ ಯೋಜನೆಗಳ ನಿರ್ವಹಣೆ ಮತ್ತು ಕಾರ್ಯಾಚರಣೆ ನಡೆಸುವ ಉನ್ನತ ವಿಜ್ಞಾನಿಯಾಗಿದ್ದ ಶ್ರೀಯುತರ ನೇತೃತ್ವದಲ್ಲಿ ದೇಶದ ವಿವಿಧೆಡೆ 18 ಪರಮಾಣು ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗಿದೆ. ಶ್ರೀಯುತರು ಪರಮಾಣು ಹಾಗೂ ಇಂಧನ ಕ್ಷೇತ್ರಕ್ಕೆ ನೀಡಿರುವ ಅಪಾರವಾದ ಕೊಡುಗೆಯನ್ನು ಗುರುತಿಸಿ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

"ವಿಯೆನ್ನಾ"ದ ಇಂಟರ್‌ನ್ಯಾಷನಲ್ ಅಟಾಮಿಕ್ ಎನರ್ಜಿ ಏಜೆನ್ಸಿಯಲ್ಲಿ ಹಿರಿಯ ಸಲಹೆಗಾರರಾಗಿ ಹಾಗೂ ವಿಶ್ವದ ವಿಭಕ್ತ ಆಪರೇಟರ್ಸ್ ಅಸೋಸಿಯೇಷನ್‌ನಲ್ಲಿ ಸ್ಥಾಪಕ ಸದಸ್ಯರಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸಿದ್ದರಲ್ಲದೆ, ಭಾರತ ಸರ್ಕಾರದ ಯೋಜನಾ ಆಯೋಗದ ಸದಸ್ಯರಾಗಿ, ಭದ್ರತಾ ಸಲಹಾ ಬೋರ್ಡಿನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರಾಗಿ, ಕರ್ನಾಟಕದ ಉನ್ನತ ಶಿಕ್ಷಣದ ಕಾರ್ಯಪಡೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಶ್ರೀಯುತರು ಪದ್ಮಭೂಷಣ, ಪದ್ಮಶ್ರೀ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಪರಮಾಣು ವಿಜ್ಞಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

೮. ಡಾ: ಹೆಚ್.ಎಸ್. ವೆಂಕಟೇಶ್ ಮೂರ್ತಿ

ಹಿರಿಯ ಸಾಹಿತಿಗಳು, ಅಂಕಣಕಾರರು ಹಾಗೂ ವಿಮರ್ಶಕರಾಗಿದ್ದ ಡಾ: ಹೊದಿಗೆರೆ ಶಂಭೋಗ್ ವೆಂಕಟೇಶ್ ಮೂರ್ತಿ ಅವರು ದಿನಾಂಕ:೩೦.೦೫.೨೦೨೫ರಂದು ನಿಧನ ಹೊಂದಿರುತ್ತಾರೆ.

1944ರ ಜೂನ್ 23ರಂದು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ., ಪದವೀಧರರಾಗಿದ್ದು, "ಕನ್ನಡದಲ್ಲಿ ಕಥನ ಕವನಗಳು" ಮಹಾಪ್ರಬಂಧ ಮಂಡಿಸಿ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದರು. ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಉಪನ್ಯಾಸಕರಾಗಿ ಮತ್ತು ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀಯುತರು ನವ್ಯಪೂರ್ವ ಬರಹಗಾರ ಮತ್ತು ಭಾವಗೀತೆ ಕವಿಯಾಗಿದ್ದು, 100ಕ್ಕೂ ಹೆಚ್ಚು ಪುಸ್ತಕಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಶ್ರೀಯುತರು ರಚಿಸಿದ ನಾಟಕ ಹೂವಿ ಐಸಿಎಸ್ಇ ಶೈಕ್ಷಣಿಕ ಮಂಡಳಿಯಿಂದ ಒಂಭತ್ತು ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ಗುರುತಿಸಲ್ಪಟ್ಟಿದೆ.

ಶ್ರೀಯುತರು ಕವಿತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆ, ಮೊದಲಾದ ಪ್ರಕಾರಗಳಲ್ಲಿ ಅಪರವಾದ ಕೊಡುಗೆಯನ್ನು ನೀಡಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಹಳೆಯ ಸಂಪ್ರದಾಯದಲ್ಲಿ ಕೃಷಿ ಮಾಡಿ, ಆಧುನಿಕ ಸಾಹಿತ್ಯದ ಕೃತಿಗಳನ್ನು ಸಾಹಿತ್ಯ ಪ್ರಿಯರಿಗೆ ನೀಡಿದ್ದರು. ಇವರು ಕನ್ನಡ ಚಲನಚಿತ್ರಗಳಿಗೆ ಸಾಹಿತ್ಯ, ಚಿತ್ರಕಥೆ, ಸಂಭಾಷಣೆ ಮತ್ತು ಹಾಡುಗಳನ್ನು ಬರೆದಿದ್ದಾರೆ.

ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ದೇವರಾಜ ಬಹಾದ್ದೂರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

೯. ಡಾ: ಬಿ. ಸರೋಜಾದೇವಿ

ಭಾರತೀಯ ಸಿನಿಮಾ ರಂಗದ ಹಿರಿಯ ನಟಿ ಪದ್ಮಭೂಷಣ ಡಾ: ಬಿ. ಸರೋಜಾದೇವಿ ಅವರು ದಿನಾಂಕ:14.07.2025ರಂದು ನಿಧನ ಹೊಂದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1938ರ ಜನವರಿ 7ರಂದು ಮೈಸೂರು ರಾಜ್ಯದ ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಬಾಲ್ಯದಿಂದಲೇ ಲಲಿತಕಲೆಗಳ ಬಗ್ಗೆ ಆಸಕ್ತಿ ಹೊಂದಿದ್ದು, ತಮ್ಮ 17ನೇ ವಯಸ್ಸಿನಲ್ಲಿ ಮಹಾಕವಿ ಕಾಳಿದಾಸ ಚಿತ್ರದ ಮೂಲಕ ಕನ್ನಡದ ಬೆಳ್ಳಿತೆರೆಗೆ ಪಾದಾರ್ಪಣೆ ಮಾಡಿದರು. ಶ್ರೀಯುತರು ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಚಲನಚಿತ್ರಗಳಲ್ಲಿ ನಟಿಸಿ 'ಚತುರ್ಭಾಷಾ ತಾರೆ' ಎನ್ನುವ ಕಿರೀಟವನ್ನು ಪಡೆದು ಸುಮಾರು 200 ಚಿತ್ರಗಳಲ್ಲಿ ನಟಿಸಿ, ಕನ್ನಡ ಚಿತ್ರರಂಗದ 'ಮೊದಲ ಮಹಿಳಾ ಸೂಪರ್‌ಸ್ಟಾರ್' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಕನ್ನಡದ ಕಿತ್ತೂರು ರಾಣಿ ಚನ್ನಮ್ಮ ಚಿತ್ರದಲ್ಲಿ ಬ್ರಿಟಿಷರ ವಿರೋಧಿ ರಾಣಿಯಾಗಿ ನಟಿಸಿದ ಅವರ ದೇಶಭಕ್ತಿ ಅಭಿನಯವು ವ್ಯಾಪಕವಾಗಿ ಪ್ರಶಂಸಿಸಲ್ಪಟ್ಟಿದೆ. ಶ್ರೀಯುತರು ಕನ್ನಡದಲ್ಲಿ "ಅಭಿನಯ ಸರಸ್ವತಿ" ಮತ್ತು ತಮಿಳನಲ್ಲಿ "ಕನ್ನಡತು ಪೈಂಗಿಳಿ" (ಕನ್ನಡದ ಗಿಳಿ) ಎಂಬ ಉಪನಾಮಗಳಿಂದ ಕರೆಯಲ್ಪಡುತ್ತಿದ್ದರು. 1960ರ ದಶಕದಲ್ಲಿ ಯಶಸ್ವಿ ಚಿತ್ರಗಳಲ್ಲಿ ನಟಿಸಿ ದಕ್ಷಿಣ ಭಾರತದ ಮಹಿಳೆಯರಲ್ಲಿ ಫ್ಯಾಷನ್ ಐಕಾನ್ ಆಗಿ ಗುರುತಿಸಿಕೊಂಡಿದ್ದರು.

ಶ್ರೀಯುತರು ತಮ್ಮ ಪತಿ ಮತ್ತು ತಾಯಿಯ ಹೆಸರಿನಲ್ಲಿ ಅನೇಕ ದೇಣಿಗೆ ಶಿಬಿರಗಳನ್ನು ಆಯೋಜಿಸುವುದರ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲಿ, ದತ್ತಿ ಟ್ರಸ್ಟ್‌ಗಳು, ಪುನರ್ವಸತಿ ಕೇಂದ್ರಗಳು ಮತ್ತು ಆರೋಗ್ಯ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದರು. ಕನ್ನಡ ಚಲನಚಿತ್ರ ಸಂಘದ ಉಪಾಧ್ಯಕ್ಷರಾಗಿ ಮತ್ತು ತಿರುಮಲ ತಿರುಪತಿ ದೇವಸ್ಥಾನಗಳ ಸ್ಥಳೀಯ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

2010ರಲ್ಲಿ ಭಾರತೀಯ ವಿದ್ಯಾಭವನವು "ಪದ್ಮಭೂಷಣ ಬಿ. ಸರೋಜಾ ದೇವಿ ರಾಷ್ಟ್ರೀಯ ಪ್ರಶಸ್ತಿ" ಅನ್ನು ಸ್ಥಾಪಿಸಿ, ಪ್ರತಿ ವರ್ಷ ಪ್ರದರ್ಶನ ಕಲೆಯ ಕ್ಷೇತ್ರದಲ್ಲಿನ ಕಲಾವಿದರನ್ನು ಗೌರವಿಸಲು ಜೀವಮಾನದ ಸಾಧನೆ ಪ್ರಶಸ್ತಿಯಾಗಿ ಪರಿಗಣಿಸಿದೆ.

ಶ್ರೀಯುತರು ಭಾರತದ 60ನೇ ಸ್ವಾತಂತ್ರದ ದಿನಾಚರಣೆ ಅಂಗವಾಗಿ ಭಾರತ ಸರ್ಕಾರದಿಂದ ಜೀವಮಾನ ಸಾಧನೆ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ತಮಿಳುನಾಡು ಸರ್ಕಾರದಿಂದ ಎಂಜಿಆರ್ ಪ್ರಶಸ್ತಿ ಹಾಗೂ ಕಲೈ ಮಾಮಣಿ ಜೀವಮಾನ ಸಾಧನೆ ಪ್ರಶಸ್ತಿ, ಆಂಧ್ರ ಪ್ರದೇಶ ಸರ್ಕಾರದಿಂದ ಎನ್‌ಟಿಆರ್ ರಾಷ್ಟ್ರೀಯ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಹಾಗೂ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ದೇಶವು ಅತ್ಯುತ್ತಮ ನಟಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ತಾವು ಪ್ರಸ್ತಾಪಿಸಿದಂತೆ, ಮಾನ್ಯ ಡೇವಿಡ್ ಸಿಮೆಯೋನ್‌ರವರು ಕಲ್ಯಾಣ ಕರ್ನಾಟಕ ಭಾಗಕ್ಕೆ ಸೇರಿದಂತಹವರು. ಶ್ರೀಯುತರು ವಿಧಾನ ಪರಿಷತ್ತಿನ ಉಪ ಸಭಾಪತಿಗಳಾಗಿ ಹಾಗೂ ಸಭಾಪತಿಗಳಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರು ಸಮಾಜದಲ್ಲಿ ಶಿಕ್ಷಣ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಷೇತ್ರಕ್ಕೆ ಸ್ಫೂರ್ತಿ ನೀಡಿದಂತಹವರು. ಆ ಭಾಗದಲ್ಲಿ ಯಾವುದೇ ಗಲಭೆಗಳು ಆದಂತಹ ಸಂದರ್ಭದಲ್ಲಿ ತಕ್ಷಣ ಆ ಪ್ರದೇಶಕ್ಕೆ ಬಂದು ಶಾಂತಿಯನ್ನು ಕಾಪಾಡುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದರು. ಶ್ರೀಯುತರು ಸಮಾಜದಲ್ಲಿ ಎಲ್ಲರ ಜೊತೆಯಲ್ಲಿ ಉತ್ತಮ ವ್ಯಕ್ತಿಯಾಗಿ ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರ ನಿಧನದಿಂದ ಆ ಭಾಗದ ರಾಜಕೀಯ ಕ್ಷೇತ್ರಕ್ಕೆ ಒಬ್ಬ ನಾಯಕನನ್ನು ಕಳೆದುಕೊಂಡಂತಾಗಿದೆ.

ಅದೇರೀತಿಯಾಗಿ ಡಾ॥ ಎನ್. ತಿಪ್ಪಣ್ಣನವರು ಅತ್ಯಂತ ಹಿರಿಯರಾಗಿದ್ದು, ಮುತ್ಸದ್ಧಿಯ ರಾಜಕಾರಣಿಯಾಗಿದ್ದರು. ಶ್ರೀಯುತರು ಕಾನೂನು ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಾಕಷ್ಟು ಅನುಭವವನ್ನು ಹೊಂದಿದ್ದರು. ಅಲ್ಲದೇ, ಇವರು ವಿದ್ಯಾವರ್ಧಕ ಶೈಕ್ಷಣಿಕ ಸಂಸ್ಥೆಯನ್ನು ಪ್ರಾರಂಭ ಮಾಡಿ ಅನೇಕ ವರ್ಷಗಳ ಕಾಲ ಅದರ ಗೌರವಾನ್ವಿತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಇವರು ಶಿಕ್ಷಣಕ್ಕಾಗಿ ಅನೇಕ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಸಂಘಟನೆ ಮಾಡಿದ್ದರು. ಅಲ್ಲದೇ, ನಮ್ಮ Bar Association ನ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರು ಎಲ್ಲಾ ಕ್ಷೇತ್ರಗಳಲ್ಲಿಯೂ ಅತ್ಯಂತ ಸ್ಫೂರ್ತಿದಾಯಕವಾಗಿ ಕೆಲಸ ಮಾಡಿರುವುದರ ಜೊತೆಗೆ ಮಾರ್ಗದರ್ಶನವನ್ನು ನೀಡಿರುವಂತಹ ಒಬ್ಬ ಮುತ್ಸದ್ಧಿಯ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಯುತರು ಅವರ ಜೀವನದ ಉದ್ದಕ್ಕೂ ರಾಜಕೀಯದಲ್ಲಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

(ಮುಂದು)

(598) 11-08-2025/11.30/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎನ್.ಎಸ್.ಬೋಸರಾಜು (ಮುಂದು):-

ಅವರ ಅಗಲಿಕೆಯಿಂದ ರಾಜ್ಯವು ಒಬ್ಬ ನಿಷ್ಠಾವಂತ ಹಾಗೂ ಜನಪರ ನಾಯಕರನ್ನು ಕಳೆದುಕೊಂಡಂತಾಗಿದೆ.

ಶ್ರೀ ಬೇಗಾನೆ ರಾಮಯ್ಯನವರು ಎಲ್ಲರಿಗೂ ಗೊತ್ತಿರುವಂತೆ ಅವರು ಅಜಾತಶತ್ರುವಾಗಿದ್ದರು. ಅವರು ಎಲ್ಲರ ಜೊತೆಯಲ್ಲಿ ಸ್ನೇಹಿತರಾಗಿ ಮಾನ್ಯ ಗುಂಡೂರಾವ್‌ರವರ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಉತ್ತಮವಾಗಿ ಕೆಲಸ ಮಾಡಿರತಕ್ಕಂತಹವರು. ಅವರು ರಾಜ್ಯದ ಎಲ್ಲಾ ಭಾಗಗಳಿಗೆ ಬಂದು ಆ ಭಾಗದಲ್ಲಿ ಇರತಕ್ಕಂತಹ ಸಮಸ್ಯೆಗಳನ್ನು ಬಗೆಹರಿಸುವಂಥದ್ದಕ್ಕೆ ಸಾಕಷ್ಟು ಪ್ರಯತ್ನ ಮಾಡಿರತಕ್ಕಂತಹವರು. ನಾವು ಇವತ್ತಿನ ದಿವಸ ಅವರನ್ನು ಕಳೆದುಕೊಂಡಿರುವುದು ಒಬ್ಬ ನಿಷ್ಠಾವಂತ ನಾಯಕರನ್ನು ಕಳೆದುಕೊಂಡಂತಾಗಿದೆ.

ಡಾ: ಕೆ. ಕಸ್ತೂರಿರಂಗನ್ ರವರು ವಿಜ್ಞಾನಿಯಾಗಿ ಭಾಸ್ಕರ-I ಮತ್ತು ಭಾಸ್ಕರ-IIರ ಯೋಜನಾ ನಿರ್ದೇಶಕರಾಗಿ, ಇಸ್ರೋ ಉಪಗ್ರಹ ಕೇಂದ್ರದ ನಿರ್ದೇಶಕರು ಹಾಗೂ ಅಧ್ಯಕ್ಷರಾಗಿ ಹಾಗೂ ತಂತ್ರಜ್ಞಾನದಲ್ಲಿ ಜಾಗತಿಕ ಮಟ್ಟದಲ್ಲಿ ಸಾಕಷ್ಟು ಪ್ರಮುಖ ವಿಷಯದ ಬಗ್ಗೆ ಚರ್ಚೆ ಮಾಡುವ ಇಚ್ಛೆಯಲ್ಲಿ ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆ ಟ್ರಸ್ಟ್‌ನ ಮಂಡಳಿ ಸದಸ್ಯರಾಗಿ ವೈಜ್ಞಾನಿಕ ಮತ್ತು ಶೈಕ್ಷಣಿಕದಲ್ಲಿ ಬಹಳ ಉತ್ತಮ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಜ್ಞಾನಿಯಾಗಿದ್ದರು. ಅವರು 2003ರಿಂದ 2009ರವರೆಗೆ ಆರು ವರ್ಷಗಳ ಕಾಲ ರಾಜ್ಯಸಭೆಯ ಸದಸ್ಯರಾಗಿದ್ದರು. ಅವರಿಗೆ ಸುಮಾರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿಗಳು ದೊರೆತಿವೆ. ಅದೇ ರೀತಿ 'ಪದ್ಮಶ್ರೀ' 'ಪದ್ಮಭೂಷಣ' ಮತ್ತು 'ಪದ್ಮವಿಭೂಷಣ' ಹಾಗೂ ಹಲವಾರು ಪ್ರಶಸ್ತಿಗಳನ್ನು ಪಡೆದಿರುವಂತಹವರು. ಅವರ ಅಗಲಿಕೆಯಿಂದ ಕೇವಲ ವಿಜ್ಞಾನ ಮಾತ್ರವಲ್ಲ ವಿಜ್ಞಾನ ಕ್ಷೇತ್ರದ ದಾರಿದೀಪವನ್ನೇ ಕಳೆದುಕೊಂಡಂತಾಗಿದೆ.

ಶ್ರೀ ಜಿ.ಎಸ್.ಸಿದ್ದಲಿಂಗಯ್ಯನವರು ಚಿಂತನಪರ ಸಾಹಿತಿಗಳಾಗಿ, ಕನ್ನಡ ಅಧ್ಯಾಪಕರಾಗಿ, ಪ್ರಾಚಾರ್ಯರಾಗಿ, ಉಪ ಪ್ರಾಧ್ಯಾಪಕರಾಗಿ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಹೆಚ್ಚುವರಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿರುವಂತಹವರು. ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳಿಗೆ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ನೀತಿ ನಿರೂಪಣಾ ವಿಷಯದಲ್ಲಿ ಉತ್ತಮ ವ್ಯಕ್ತಿಗಳಾಗಿದ್ದರು. ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಹಾಗೂ ಗೌರವ ಬಸವ ಪ್ರಶಸ್ತಿ ಈ ರೀತಿ ಅವರ ಸಾಧನೆಗೆ ಅನೇಕ ಪ್ರಶಸ್ತಿಗಳು ಸಿಕ್ಕಿರುವಂಥದ್ದು. ಇದರಿಂದ ರಾಜ್ಯವು ಒಬ್ಬ ನಿಷ್ಠಾವಂತ ಮತ್ತು ಚಿಂತನಪರ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಪ್ರೊ: ಸುಬ್ಬಣ್ಣ ಅಯ್ಯಪ್ಪನ್ ರವರು 'ಪದ್ಮಶ್ರೀ' ಪುರಸ್ಕೃತ ಖ್ಯಾತ ಕೃಷಿ ವಿಜ್ಞಾನಿಯಾಗಿದ್ದ ಅವರು ಜಲಕೃಷಿ ಹಾಗೂ ಮೀನುಗಾರಿಕೆ ವಿಷಯದಲ್ಲಿ ಸಾಕಷ್ಟು ಸಂಶೋಧನೆ ಮಾಡಿ, ಆ ಭಾಗದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದು, ಅವರು ಸಹ ಅನೇಕ ಪ್ರಶಸ್ತಿ ಹಾಗೂ ಮನ್ನಣೆಗಳಿಗೆ ಸಾಧಕರ ಸಾಧನೆಗೆ ಸಾಕ್ಷಿಯಾಗಿದ್ದಾರೆ. ಇವತ್ತು ಇಂತಹ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ.

ಡಾ: ಎಂ.ಆರ್.ಶ್ರೀನಿವಾಸನ್ ರವರು ವಿಜ್ಞಾನದ ಚಿಂತಕರಾಗಿದ್ದರು. ಭಾರತದ ಮೊದಲ ಪರಮಾಣು ಸಂಶೋಧನಾ ರಿಯಾಕ್ಟರ್ 'ಅಪ್ಸರ' ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ಪರಮಾಣು ಶಕ್ತಿ ಆಯೋಗದ ಅಧ್ಯಕ್ಷರಾಗಿದ್ದರು. ಪರಮಾಣು ವಿದ್ಯುತ್ ಯೋಜನೆಗಳಿಗೆ ಪ್ರಮುಖ ಪಾತ್ರ ವಹಿಸಿದ್ದರು. ಇವರು ಭಾರತ ಸರ್ಕಾರದ ಯೋಜನಾ ಆಯೋಗದ ಸದಸ್ಯರಾಗಿ, ಭದ್ರತಾ ಸಲಹಾ ಬೋರ್ಡಿನ ಸದಸ್ಯರಾಗಿ ಹಾಗೂ ಕರ್ನಾಟಕ ಉನ್ನತ ಶಿಕ್ಷಣದ ಕಾರ್ಯಪಡೆಯ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡಿರತಕ್ಕಂಹವರು. ಅವರ ಅಗಲಿಕೆಯಿಂದ ರಾಜ್ಯದ ನಿಷ್ಠಾವಂತ ಮತ್ತು ಪ್ರಜ್ಞಾವಂತ ಹಾಗೂ ಅಂತರರಾಷ್ಟ್ರೀಯ ವಿಜ್ಞಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಡಾ: ಹೆಚ್.ಎಸ್.ವೆಂಕಟೇಶ್ ಮೂರ್ತಿ ರವರು ಹಿರಿಯ ಸಾಹಿತಿಗಳಾಗಿದ್ದಂತಹವರು. ಇವರು ಹೆಚ್ಚು ಕೃತಿಗಳನ್ನು ರಚಿಸಿ, ಕವಿತೆ, ನಾಟಕ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ ಇವುಗಳನ್ನು ತಮ್ಮ ಸಾಹಿತ್ಯದಲ್ಲಿ ಮೂಡಿಸಿರತಕ್ಕಂತಹವರು. ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದೇವರಾಜ ಬಹದ್ದೂರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುವಾದ ಪ್ರಶಸ್ತಿ ಈ ರೀತಿ ಅವರಿಗೆ ಹಲವಾರು ಗೌರವಗಳು ಅವರ ಸಾಧನೆಗೆ ಸಾಕ್ಷಿಯಾಗಿರುವಂಥದ್ದು. ರಾಜ್ಯವು ಒಬ್ಬ ನಿಷ್ಠಾವಂತ ಮತ್ತು ಚಿಂತನಪರ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಬಿ. ಸರೋಜಾದೇವಿ ರವರು ಎಲ್ಲರಿಗೂ ಸಾಕಷ್ಟು ಪರಿಚಯವಿರುವಂತಹವರು. ಇವರು ಪದ್ಮಭೂಷಣ ಪ್ರಶಸ್ತಿಗೆ ಪುರಸ್ಕೃತರಾಗಿದಂತಹವರು. ಇವರು 'ಮೊದಲ ಮಹಿಳಾ ಸೂಪರ್‌ಸ್ಟಾರ್' ಎಂದು ಅವರಿಗೆ ಗೌರವ ಪಾತ್ರ ಸಿಕ್ಕಿರುವಂಥದ್ದು. ಅವರು ತಮಿಳು, ಕನ್ನಡ, ತೆಲುಗು ಹಾಗೂ ಇತರೆ ಭಾಷೆಗಳಲ್ಲಿ ಸುಮಾರು 200 ಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ಕನ್ನಡದಲ್ಲಿ 'ಅಭಿನಯ ಸರಸ್ವತಿ' ಮತ್ತು ತಮಿಳಿನಲ್ಲಿ 'ಕನ್ನಡತು ಪೈಂಗಿಳಿ' ಎಂಬ ಬಿರುದುಗಳನ್ನು ಹೊಂದಿದಂತಹವರು.

ಎಲ್ಲಾ ಮಹನೀಯರುಗಳ ಬಗ್ಗೆ ತಾವು ಈಗಾಗಲೇ ಪ್ರಸ್ತಾಪಿಸಿರುವಂತೆ, ಇವರುಗಳ ನಿಧನದಿಂದ ದೇಶ ಹಾಗೂ ರಾಜ್ಯಕ್ಕೆ ಸಾಕಷ್ಟು ತೊಂದರೆಯಾಗಿದೆ. ಅದರಲ್ಲಿ ಅನೇಕ ಪ್ರಶಸ್ತಿಗಳನ್ನು ಪಡೆದಿರತಕ್ಕಂತಹವರು, ಮಾರ್ಗದರ್ಶನ ನೀಡಿರತಕ್ಕಂತಹವರು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರತಕ್ಕಂತಹ ಇವರುಗಳ ಆತ್ಮಕ್ಕೆ ಶಾಂತಿ ಕೋರಿ, ಅವರ ಕುಟುಂಬ ವರ್ಗದವರಿಗೆ ಇವರ ನಿಧನದಿಂದಾಗಿರುವಂತಹ ತೊಂದರೆಗೆ ಎಲ್ಲಾ ರೀತಿಯಾದಂತಹ ಶಕ್ತಿ ನೀಡಲೆಂದು ಆ ದೇವರಲ್ಲಿ ಪ್ರಾರ್ಥಿಸಿ, ತಾವು ತಂದಿರತಕ್ಕಂತಹ ಸಂತಾಪ ಸೂಚನೆಯ ಪ್ರಸ್ತಾವನೆಯನ್ನು ಅನುಮೋದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಿಂದ ಹಿಡಿದು ಇವತ್ತು ಅಧಿವೇಶನ ಪ್ರಾರಂಭವಾಗುವ ಮಧ್ಯದಲ್ಲಿ ತಾವು ಪ್ರಸ್ತಾಪ ಮಾಡಿರತಕ್ಕಂತಹ ಶ್ರೀ ಡೇವಿಡ್ ಸಿಮೆಯೋನ್, ಡಾ: ಎನ್.ತಿಪ್ಪಣ್ಣ, ಶ್ರೀ ಬೇಗಾನೆ ರಾಮಯ್ಯ, ಡಾ: ಕೆ. ಕಸ್ತೂರಿರಂಗನ್, ಶ್ರೀ ಜಿ.ಎಸ್. ಸಿದ್ದಲಿಂಗಯ್ಯ, ಪ್ರೊ: ಸುಬ್ಬಣ್ಣ ಅಯ್ಯಪ್ಪನ್, ಡಾ: ಎಂ.ಆರ್.ಶ್ರೀನಿವಾಸನ್, ಡಾ: ಹೆಚ್.ಎಸ್. ವೆಂಕಟೇಶ್ ಮೂರ್ತಿ ಹಾಗೂ ಡಾ: ಬಿ. ಸರೋಜಾದೇವಿ ಇಂತಹ ಒಂಬತ್ತು ಜನ ಹಿರಿಯರನ್ನು ಕಳೆದುಕೊಂಡಿದ್ದೇವೆ. ತಾವು ಅವರ ಸಾಧನೆಗಳನ್ನು ಪ್ರಸ್ತಾಪ ಮಾಡುವಾಗ ಅದನ್ನು ಓದಿದ್ದೀರಿ. ನಾನು ಮತ್ತೆ ಅದನ್ನು ಹೇಳುವಂತಹ ಅವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಆದರೆ, ಅವರವರ ವೃತ್ತಿ ಮತ್ತು ಅವರು ಯಾವ ಕರ್ಮ ಸ್ಥಾನಗಳನ್ನು ಅಲಂಕರಿಸಿದ್ದರು, ಅದರಲ್ಲಿ ಒಂದು ಉತ್ತಮ ಸಾಧನೆಯನ್ನು ಈ ಒಂಭತ್ತು ಜನರು ಸಹ ಮಾಡಿದ್ದಾರೆ. ಈ ಕಾರಣದಿಂದಾಗಿ, ಅದು ಸಾಹಿತ್ಯ ರಂಗ ಇರಬಹುದು, ಶೈಕ್ಷಣಿಕ ರಂಗ ಇರಬಹುದು ಮತ್ತು ಸಾಮಾಜಿಕ ಜೀವನದಲ್ಲಿ ಇರಬಹುದು, ಹೀಗೆ ಹಲವು ಕ್ಷೇತ್ರಗಳಲ್ಲಿ ಅವರ ಸೇವೆಗಳನ್ನು ನಾವುಗಳು ಸ್ಮರಿಸಬೇಕಾಗಿದೆ. ಮತ್ತೆ ಇದರಿಂದ ಅವರು ರಾಷ್ಟ್ರ ಮತ್ತು ರಾಜ್ಯಕ್ಕೆ ಒಂದು ಉತ್ತಮ ಸೇವೆಯನ್ನು ಮಾಡಿದ್ದಾರೆ. ಆ ಕಾರಣದಿಂದಾಗಿ ಅವರು ನಮ್ಮನ್ನು ಅಗಲಿದ ಈ ಸಂದರ್ಭದಲ್ಲಿ ಸದನದಿಂದ ಅಗಲಿದ ಗಣ್ಯರಿಗೆ ಶಾಂತಿ ಸಿಗಲಿ ಎಂದು ಮತ್ತು ಅವರ ಕುಟುಂಬಗಳಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಆ ಭಗವಂತ ನೀಡಲೆಂದು ನಾನೂ ಕೂಡ ಅವರಿಗೆ ಸಂತಾಪ ಸೂಚಿಸುವುದಕ್ಕೆ ಬಯಸುತ್ತೇನೆ.

ಸಭಾಪತಿಯವರು:– ಈಗ ಶ್ರೀ ಡೇವಿಡ್ ಸಿಮೆಯೋನ್ ಮತ್ತು ಡಾ: ಎನ್. ತಿಪ್ಪಣ್ಣ ನವರು ಈ ಸದನದ ಸಭಾಪತಿಗಳಾಗಿದಂತಹವರು. ಅವರುಗಳ ಬಗ್ಗೆ ಬೇರೆ ಸದಸ್ಯರು ಮಾತನಾಡುವುದಾದರೆ, ಮಾತನಾಡಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶರವಣ.ಟಿ.ಎ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಇದರಲ್ಲಿ ಎಲ್ಲಾ ಗಣ್ಯ ವ್ಯಕ್ತಿಗಳ ಬಗ್ಗೆ ಬಂದಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಆರ್.ಸಿ.ಬಿ. ವಿಚಾರದಲ್ಲಿ ಕಾಲ್ತುಳಿತದಲ್ಲಿ ಹನ್ನೊಂದು ಜನರು ತಮ್ಮ ಜೀವವನ್ನು ಕಳೆದುಕೊಂಡಿದ್ದರು. ಅವರ ಬಗ್ಗೆಯೂ ಕೂಡ ಪ್ರಸ್ತಾಪಿಸಿದ್ದರೆ, ಚೆನ್ನಾಗಿರುತ್ತಿತ್ತು ಎಂಬುದು ನನ್ನ ಭಾವನೆ.

ಸಭಾಪತಿಯವರು:– ಆಯಿತು, ನನಗೆ ಅದು ಗೊತ್ತಾಗಿಲ್ಲ. ಅದನ್ನು ಮುಂದೆ ಮಾಡುತ್ತೇನೆ.

ಶ್ರೀ ಸುನಿಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಶ್ರೀ ಡೇವಿಡ್ ಸಿಮೆಯೋನ್ ರವರು ನಮ್ಮ ಕಲಬುರಗಿ ಜಿಲ್ಲೆಯವರು. ನಾವು ಅವರ ಬಗ್ಗೆ ಹೇಳಬೇಕೆಂದರೆ, ಅವರು ಜನತಾ ಪರಿವಾರದ ಮುಖಾಂತರ ಬಂದಂತಹವರು. ಮತ್ತೆ ಅವರು ವಿದ್ಯಾರ್ಥಿ ಸಂಘಟನೆ ಮುಖಾಂತರ ಹೋರಾಟವನ್ನು ಮಾಡಿದಂತಹವರು. ಅವರು ಯಾದಗಿರಿ ಜಿಲ್ಲೆಯಲ್ಲಿ ಜನಿಸಿದ್ದರು. ಆಗ ಕಲಬುರಗಿ ಅಖಂಡ ಜಿಲ್ಲೆಯಾಗಿತ್ತು. ಆ ಕಲಬುರಗಿ ಅಖಂಡ ಜಿಲ್ಲೆಯಲ್ಲಿ ಶ್ರೀ ಡೇವಿಡ್ ಸಿಮೆಯೋನ್ ರವರು ಸಾಕಷ್ಟು ಸಾಮಾಜಿಕ ಸೇವೆಯನ್ನು ಮಾಡಿರತಕ್ಕಂತಹವರು. ಮತ್ತೆ ಅವರು ಯಾವಾಗಲು downtrodden community ಗಳ ಬಗ್ಗೆ ಚಿಂತನೆ ಮಾಡತಕ್ಕಂತಹವರಲ್ಲಿ ಶ್ರೀ ಡೇವಿಡ್ ಸಿಮೆಯೋನ್ ರವರು ಒಬ್ಬರಾಗಿದ್ದರು. ಅವರು ಕೇವಲ ಒಂದೇ ಸಮಾಜಕ್ಕೆ ಅಲ್ಲ, ಅವರು ಪ್ರತಿಯೊಂದು ಜಾತಿವರ್ಗದ ಸಮಾಜದವರಿಗೆ ಪ್ರೀತಿ ಪಾತ್ರರಾಗಿದ್ದರು. ಹೀಗಾಗಿ ಶ್ರೀ ಡೇವಿಡ್ ಸಿಮೆಯೋನ್‌ರವರ ಬಗ್ಗೆ ಹೇಳಬೇಕೆಂದರೆ ಬಹಳಷ್ಟು ವಿಷಯ ಇದೆ. ಆದರೆ, ಈಗ ಸಮಯದ ಅಭಾವವಿರುವುದರಿಂದ ಇವತ್ತು ಶ್ರೀ ಡೇವಿಡ್ ಸಿಮೆಯೋನ್‌ರವರ ಬಗ್ಗೆ ಹೇಳಬೇಕಂದರೆ, ಅವರು ಅನೇಕ ಹೋರಾಟಗಳಲ್ಲಿ ಪಾಲ್ಗೋಳ್ಳುತ್ತಿದ್ದರು. ಅಂದಿನ ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್ ರವರಂತಹ ಹಿರಿಯ ನಾಯಕರ ಜೊತೆ ಕೂಡಿಕೊಂಡಿದ್ದರು. ಅನೇಕ ಜನತಾಪಕ್ಷದ ನಾಯಕರಲ್ಲಿ ತಾವು ಕೂಡ ಒಬ್ಬರಾಗಿದ್ದೀರಿ. ತಮಗೂ ಕೂಡ ಅವರ ಜೊತೆಯಲ್ಲಿ ನಿಕಟವಾದ ಸಂಬಂಧವಿತ್ತು. ಹೀಗಾಗಿ, ಇಡೀ ರಾಜ್ಯದಲ್ಲಿ ಅವರಿಗೆ ಬಹಳ ಅತೀ ನಿಕಟ ಸಂಬಂಧ ಹಾಗೂ ಒಂದು ಸಂಘಟಿತ ಹೋರಾಟ ಮಾಡುವ ಮನೋಭಾವನೆ ಇತ್ತು. ಈಗ ನಾವು ಶ್ರೀ ಡೇವಿಡ್ ಸಿಮೆಯೋನ್‌ರವರನ್ನು ಕಳೆದುಕೊಂಡಿದ್ದೇವೆ. ದೇವರು ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ವರ್ಗದವರಿಗೆ ದೇವರು ಧೈರ್ಯ ಕೊಡಬೇಕೆಂದು ಹೇಳಿ, ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ತಾವು ತಂದಿರತಕ್ಕಂತಹ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ, ಶ್ರೀ ಡೇವಿಡ್ ಸಿಮೆಯೋನ್‌ರವರದ್ದು ಒಂದು ರೀತಿಯ ನಗುಮುಖದ ವ್ಯಕ್ತಿತ್ವ. ಅವರದ್ದು ಯಾವಾಗಲೂ ಅರ್ಧ ಬಿಳಿ, ಅರ್ಧ ಕಪ್ಪು ಗಡ್ಡ. ಮಧ್ಯದಲ್ಲಿ ಬಿಳಿ ಗಡ್ಡ ಇರುತ್ತಿತ್ತು, ಆ ಕಡೆ ಈ ಕಡೆ ಕಪ್ಪು ಗಡ್ಡ. ಅವರು ಎಲ್ಲಿ ಸಿಕ್ಕಿದರೂ ಸಹ ಬಹಳ ಆತ್ಮೀಯತೆಯಿಂದ ಮಾತನಾಡುತ್ತಿದ್ದರು. ಅವರು ಸಾಮಾನ್ಯ ಕುಟುಂಬದಿಂದ ಬಂದು ಸಭಾಪತಿಯವರ ಸ್ಥಾನದವರೆಗೂ ಏರುವಂಥದ್ದು ಒಂದು ರೀತಿಯ ಸಾಮಾನ್ಯ ಸಾಧನೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಭಾವಿಸುವಂತಿಲ್ಲ. ಅದು ಒಂದು ರೀತಿಯ ಅಸಾಮಾನ್ಯವಾಗಿರುವಂತಹ ಸಾಧನೆಯಾಗಿದೆ. ಅವರದು ಒಂದು ಸ್ನೇಹಮಯ ವ್ಯಕ್ತಿತ್ವ ಎಂದು ಹೇಳಿದರೆ ತಪ್ಪಾಗಲಾರದು.

ಡಾ: ಎನ್. ತಿಪ್ಪಣ್ಣನವರು ಹಿರಿಯ ಮುತ್ಸದಿ ರಾಜಕಾರಣಿ. ಹಿಂದೆ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅವರು ಮತ್ತು ಅವರ ಕುಟುಂಬದ ಪಾತ್ರ ಬಹಳ ದೊಡ್ಡದಿತ್ತು ಎಂದು ಕೇಳಿದ್ದೇನೆ. ಆ ಭಾಗದಲ್ಲಿ ಬಳ್ಳಾರಿ ಜಿಲ್ಲೆ ಆಂಧ್ರಪ್ರದೇಶಕ್ಕೆ ಸೇರಬೇಕೆಂದು ಕೆಲವರು ಒತ್ತಡ ತರುವಂತಹ ಸಂದರ್ಭದಲ್ಲಿ ಆಗ ಅಲ್ಲಿದಂತಹ ಕನ್ನಡಿಗರನ್ನೆಲ್ಲಾ ಒಗ್ಗೂಡಿಸಿ, ಅವರಿಂದ ಸಹಿ ಸಂಗ್ರಹ ಮಾಡಿ, ಅದು ಕರ್ನಾಟಕಕ್ಕೆ ಸೇರುವಂತೆ ಮಾಡುವುದರಲ್ಲಿ ಅವರ ಕುಟುಂಬದ ಪಾತ್ರ ಬಹಳ ದೊಡ್ಡದು ಎಂದು ನಾನು ಕೇಳಿದ್ದೇನೆ. ಅವರು ಕೂಡ ಸಭಾಪತಿಗಳಾಗಿ ಕಾರ್ಯನಿರ್ವಹಿಸಿ ನಮ್ಮನ್ನು ಅಗಲಿದ್ದಾರೆ.

(ಮುಂದು)

(599) 11.08.2025 11.40 LL-MD (ಸಭಾಪತಿಯವರ ಉಪಸ್ಥಿತಿ)

ಶ್ರೀ ಸಿ.ಟಿ. ರವಿ (ಮುಂದು)

ಶ್ರೀ ಬೇಗಾನೆ ರಾಮಯ್ಯನವರು ನಮ್ಮ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು. ಶ್ರೀಯುತರು ಶ್ರೀ ಗುಂಡೂರಾಯರ ಸಂಪುಟದಲ್ಲಿ ಸಚಿವರಾಗಿದ್ದರು. ಆಗ ಬೋರ್‌ವೆಲ್ ತಾಂತ್ರಿಕತೆ ಹೊಸದಾಗಿ ಪ್ರಾರಂಭವಾಗಿತ್ತು. ಅದಕ್ಕಿಂತಲೂ ಮೊದಲು ಕೇವಲ ಓಪನ್ ವೆಲ್‌ಗಳು, ಕೆರೆ-ಕಟ್ಟೆಗಳಿಂದ ನೀರು ಬಳಕೆ ಮಾಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಎಲ್ಲಾ ಜನರಿಗೂ ನೀರು ಕೊಡಬೇಕೆನ್ನುವ ದೃಷ್ಟಿಯಿಂದ ಬೋರ್‌ವೆಲ್ ಟೆಕ್ನಾಲಜಿಯನ್ನು ಉಪಯೋಗಿಸುವುದಕ್ಕೆ ಪ್ರಾರಂಭವಾದಂತಹ ಸಂದರ್ಭದಲ್ಲಿ ಶ್ರೀ ಬೇಗಾನೆ ರಾಮಯ್ಯನವರನ್ನು 'ಬೋರ್‌ವೆಲ್ ರಾಮಯ್ಯ' ಎಂತಲೇ ಕರೆಯುತ್ತಿದ್ದರು. ಅಂದರೆ, ಬೇಗಾನೆ ರಾಮಯ್ಯ ಎಂಬ ಹೆಸರಿಗೆ ಪರ್ಯಾಯವಾಗಿ ಶ್ರೀಯುತರನ್ನು ಬೋರ್‌ವೆಲ್ ರಾಮಯ್ಯ ಎಂತಲೇ ಕರೆಯುತ್ತಿದ್ದರು. ಶ್ರೀಯುತರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಕೆಲಸ ಮಾಡಿ ನಮ್ಮ ಭಾಗಕ್ಕೆ ನೀರು ಕೊಟ್ಟ 'ಭಗೀರಥ' ಎಂದು ಕರೆಸಿಕೊಂಡಂತಹವರು ಅವರು. ಶ್ರೀಯುತರು ಒಂದು ತರಹ smart, ಯಾವಾಗಲೂ ಕೂಡ well-dressed behaviour ನಿಂದ ಕೂಡಿದ್ದರು. ಅಂದರೆ, ಬಹಳ ನೀಟಾಗಿ ಬಟ್ಟೆ ಧರಿಸಿಕೊಳ್ಳುತ್ತಿದ್ದರು. ಅವರು ಒಂದು ಮದುವೆಗೆ ಬಂದರೂ ಸಹ ಬಹಳ ನೀಟಾಗಿ ಬಟ್ಟೆ ಧರಿಸಿಕೊಂಡು ಬರುತ್ತಿದ್ದಂತಹ dress sense ಇದ್ದಂತಹವರು. ಶ್ರೀಯುತರ ಮಗಳು ಡಾ॥ ಆರತಿ ಕೃಷ್ಣ ಎಂದು. ಅವರು ಕೂಡ ವಿದೇಶಾಂಗ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಶ್ರೀ ಬೇಗಾನೆ ರಾಮಯ್ಯನವರು ಗ್ರಾಮೀಣಾಭಿವೃದ್ಧಿ ಚಿಂತನೆಯನ್ನು ಹೊಂದಿದಂತಹ ಒಬ್ಬ ಹಿರಿಯ ಮುತ್ಸದ್ಧಿಯಾಗಿದ್ದರು. ಇಂತಹ ಮುತ್ಸದ್ಧಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ದಯಪಾಲಿಸಿಲಿ ಎಂದು ಪ್ರಾರ್ಥಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಂತಹ ಸಂದರ್ಭದಲ್ಲಿ ಡಾ॥ ಕಸ್ತೂರಿ ರಂಗನ್‌ರವರು Karnataka Knowledge Commission Chairman ಆಗಿದ್ದರು. ಡಾ॥ ಕಸ್ತೂರಿ ರಂಗನ್‌ರವರು ವಿಜ್ಞಾನಿಯಾಗಿ, ಒಬ್ಬ ದಾರ್ಶನಿಕನಾಗಿ ಸಮಾಜಕ್ಕೆ ಒಂದು ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು ಹುಟ್ಟಿದ್ದು ಕೇರಳ ರಾಜ್ಯದಲ್ಲಾದರೂ ಸಹ, ಅವರು ಕನ್ನಡವನ್ನು ಬಹಳ ಸ್ಫುಟವಾಗಿ ಮಾತನಾಡುತ್ತಿದ್ದಂತಹ ವಿಜ್ಞಾನಿಯಾಗಿದ್ದರು. ಅಲ್ಲದೇ, ಶ್ರೀಯುತರು Karnataka Knowledge Commission Chairman ಆಗಿ ರಾಷ್ಟ್ರೀಯ ಶಿಕ್ಷಣ ನೀತಿ ಅಂದರೆ ಈಗ ಎನ್‌ಇಪಿ ಏನಿದೆ, ಆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಂರಕ್ಷಿಸುವಂತಹ ಮುಖ್ಯಸ್ಥರಾಗಿಯೂ ಕೂಡ ಕಾರ್ಯನಿರ್ವಹಿಸಿದ್ದರು. ಶಿಕ್ಷಣದಲ್ಲಿ ಮಾತೃಭಾಷೆ ಇರಬೇಕು. ಮಾತೃಭಾಷೆಯ ಮೂಲಕ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕು ಎನ್ನುವುದನ್ನು ಪ್ರತಿಪಾದಿಸಿದ್ದರು. ಆ ರೀತಿ ಎನ್‌ಇಪಿಗೆ ಒಂದು ದೊಡ್ಡ ಕೊಡುಗೆಯನ್ನು ನೀಡದಂತಹ ಡಾ॥ ಕಸ್ತೂರಿ ರಂಗನ್‌ರವರು ರಾಜ್ಯಸಭಾ ಸದಸ್ಯರಾಗಿ, ವಿಜ್ಞಾನಿಯಾಗಿ, ಭಾರತ ವಿಜ್ಞಾನ ಕ್ಷೇತ್ರದಲ್ಲಿ ತನ್ನದೇ ಆದಂತಹ ಕೊಡುಗೆಯನ್ನು ಕೊಡುವುದಕ್ಕೆ ಸಾಕಷ್ಟು ಕೆಲಸ ಮಾಡಿದ್ದಾರೆ. ಇವೊತ್ತಿನ ದಿವಸ ಭಾರತ ದೇಶ ಜಾಗತಿಕವಾಗಿ ಒಂದು ದೊಡ್ಡ ಶಕ್ತಿಯಾಗಿ ಗುರುತಿಸಿಕೊಳ್ಳುವುದರಲ್ಲಿ ಡಾ॥ ಕಸ್ತೂರಿ ರಂಗನ್‌ರವರ ಪಾತ್ರವೂ ಕೂಡ ಇದೆ ಎನ್ನುವ ಮಾತನ್ನು ಹೇಳುತ್ತಾ, ಈ ಸಂದರ್ಭದಲ್ಲಿ ತಾವು ತಂದಂತಹ ಸಂತಾಪ ಸೂಚನೆಯಲ್ಲಿ ಉಳಿದ ಎಲ್ಲಾ ಗಣ್ಯ ವ್ಯಕ್ತಿಗಳಿಗೂ ಕೂಡ ನಾನು ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ. ಈಗಾಗಲೇ ಮಾನ್ಯ ಶರವಣರವರು ಪ್ರಸ್ತಾಪಿಸಿದಂತೆ, ನಾನು ಕೂಡ ವಿನಂತಿ ಮಾಡುವುದೇನೆಂದರೆ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತಕ್ಕೆ ಒಳಗಾಗಿ 11 ಜನ ಅಮಾಯಕರು ತಮ್ಮ ಪ್ರಾಣವನ್ನು ತೆತ್ತಿದ್ದಾರೆ. ಅದರಲ್ಲಿ ವಿದ್ಯಾರ್ಥಿಗಳು ಕೂಡ ಇದ್ದಾರೆ. ಭವಿಷ್ಯದ ಕನಸು ಕಂಡಂತಹ ಮತ್ತು ಮನೆಗೆ ಏಕೈಕ ಆಸರೆಯಾಗಿದ್ದಂತಹವರು ಸಹ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಹಾಗಾಗಿ, ಆ ಮೃತರ ಸಂತಾಪಕ್ಕೂ ಕೂಡ ನಾನು ಸಂತಾಪವನ್ನು ಸಲ್ಲಿಸಿ, ಅವರ ಆತ್ಮಕ್ಕೂ ಕೂಡ ಸದ್ಗತಿಯನ್ನು ಆ ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತಾ, ನನ್ನ ಸಂತಾಪದ ನುಡಿಗಳನ್ನು ಅಂತಿಮ ಮಾಡುತ್ತೇನೆ.

ಶ್ರೀ ಈಶ್ವರ್ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಈ ದಿನ ತಾವು ತಂದಂತಹ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಡಾ॥ ಎನ್. ತಿಪ್ಪಣ್ಣನವರು ನಮ್ಮೆಲ್ಲರಿಗೆ ಮತ್ತು ವಿಶೇಷವಾಗಿ ನನಗೆ ಹಿರಿಯಣ್ಣನಂತಿದ್ದರು. ನಮ್ಮೆಲ್ಲರಿಗೂ ಕೂಡ ಮಾರ್ಗದರ್ಶಕರಾಗಿದ್ದರು. ಸರಳ-ಸಜ್ಜನಿಕೆಯ ಒಬ್ಬ ಸಾಕಾರ ಮೂರ್ತಿಗಳಾಗಿದ್ದರು. ಶ್ರೀಯುತರು ವಿವಿಧ ಕ್ಷೇತ್ರಗಳಲ್ಲಿ ಅಂದರೆ, ಸಾಮಾಜಿಕ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮದೇ ಆದಂತಹ ವಿಶಿಷ್ಟವಾದಂತಹ ಒಂದು ಕೊಡುಗೆಯನ್ನು ಕೊಟ್ಟಿದ್ದಾರೆ. ಅಲ್ಲದೇ, ಅವರು ಒಬ್ಬ ಅಜಾತ ಶತ್ರುವಾಗಿದ್ದರು. ಸಂಘಟನಾ ಚತುರರಾಗಿದ್ದರು. ಶಿಕ್ಷಣ ಪ್ರೇಮಿಯೂ ಕೂಡ ಆಗಿದ್ದರು. ಅವರ ಸಾಮಾಜಿಕ ಕಳಕಳಿ ಮತ್ತು ಸೇವೆಯನ್ನು ಪರಿಗಣಿಸಿ, ಅವರಿಗೆ ಇವೊತ್ತಿನ ವಿ.ಎಸ್.ಕೆ. ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಸಿಕ್ಕಿರುತ್ತದೆ. ಮಾನ್ಯ ಎನ್. ತಿಪ್ಪಣ್ಣನವರು ಒಬ್ಬ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿರಿಯ ವಕೀಲರಾಗಿ ಮತ್ತು ಅಭಿಯೋಜಕರಾಗಿಯೂ ಕೂಡ ಈ ರಾಜ್ಯದ ಸೇವೆ ಮಾಡಿರುತ್ತಾರೆ. ಅವರು ಸರ್ಕಾರಿ ಅಭಿಯೋಜಕರಾಗಿದ್ದಂತಹ ಸಂದರ್ಭದಲ್ಲಿ ಸುಮಾರು ಒಂದು ಸಾವಿರ ಅಪರಾಧಿಗಳಿಗೆ ಶಿಕ್ಷೆ ಆಗುವಂತೆ ಮಾಡಿದ್ದಂತಹವರು. ಅದೇ ರೀತಿಯಲ್ಲಿ ಯಾರು ನಿರಪರಾಧಿಗಳಾಗಿದ್ದರು, ಅವರನ್ನು ಪ್ರಕರಣದಿಂದ ಖುಲಾಸೆ ಮಾಡುವಂಥದ್ದರಲ್ಲಿಯೂ ಸಹ ಅವರ ದೊಡ್ಡ ಕೊಡುಗೆ ಇದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ ತಿಪ್ಪಣ್ಣನವರು ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾಗಿ ಸುಮಾರು ಮೂರು ದಶಕಗಳವರೆಗೆ ಸಾವಿರಾರು ವಿದ್ಯಾರ್ಥಿ-ವಿದ್ಯಾರ್ಥಿನೀಯರಿಗೆ ಆಶ್ರಯ ಕೊಟ್ಟು, ಶಿಕ್ಷಣ ಕೊಟ್ಟು, ಅವರು ಉತ್ತಮ ರೀತಿಯಲ್ಲಿ ಬೆಳೆಯುವುದಕ್ಕೆ ಕಾರಣರಾಗಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಉತ್ತಮ ಸೇವೆ ಸಲ್ಲಿಸುವುದರ ಮೂಲಕ ಅವರು ಇವೊತ್ತಿನ ದಿವಸ ದೊಡ್ಡ ದೊಡ್ಡ ಸ್ಥಾನಗಳಿಗೆ ಹೋಗುವುದಕ್ಕೆ ಕಾರಣಕರ್ತರಾಗಿರುತ್ತಾರೆ. ಅಖಿಲ ಭಾರತ ವೀರಶೈವ ಲಿಂಗಾಯುತ ಮಹಾಸಭಾ ರಾಜ್ಯಾಧ್ಯಕ್ಷರಾಗಿಯೂ ಕೂಡ ಸಮಾಜದ ಬಗ್ಗೆ ಹೆಚ್ಚಿನ ಕಳಕಳಿ ಇಟ್ಟುಕೊಂಡು, ಸಮಾಜವನ್ನು ಒಗ್ಗೂಡಿಸಬೇಕೆಂದು ನಮ್ಮ ತಂದೆಯವರ ಜೊತೆಯಲ್ಲಿ ಸುಮಾರು ವರ್ಷಗಳ ಕಾಲ ಸೇವೆಯನ್ನು ಮಾಡಿದ್ದಾರೆ. ಆದುದರಿಂದ, ಇವೊತ್ತಿನ ದಿವಸ ಅವರ ಬಗ್ಗೆ ಎಷ್ಟು ಹೇಳಿದರೂ ಸಹ, ಕಡಿಮೆಯಾಗುತ್ತದೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ವಕೀಲ ಪರಿಷತ್ತಿನ ಅಧ್ಯಕ್ಷರಾಗಿದ್ದರೂ ಸಹ, ಅವರು ವಕೀಲರಿಗಾಗಿ ಒಂದು ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡಿದ್ದರು. ಶ್ರೀಯುತರು ನಮ್ಮ ವಿಧಾನ ಪರಿಷತ್ತಿನ ಸದಸ್ಯರಾಗಿ, ಸಭಾಪತಿಯವರಾಗಿ, ಜೆಡಿ(ಎಸ್) ಪಕ್ಷದ ರಾಜ್ಯಾಧ್ಯಕ್ಷರಾಗಿಯೂ ಕೂಡ ಸೇವೆಯನ್ನು ಸಲ್ಲಿಸಿರುತ್ತಾರೆ. ಆದರೆ, ಇವೊತ್ತಿನ ದಿವಸ ಅವರು ನಮ್ಮಿಂದ ಅಗಲಿ ಹೋಗಿರುತ್ತಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ ಮತ್ತು ಅವರ ಅಗಲಿಕೆಯಿಂದಾಗಿ ಉಂಟಾದ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ಅವರ ಎಲ್ಲಾ ಅಭಿಮಾನಿಗಳಿಗೆ ಮತ್ತು ಅವರ ಪರಿವಾರದವರಿಗೆ ಆ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಅದೇ ರೀತಿ, ಶ್ರೀ ಡೇವಿಡ್ ಸಿಮೆಯೋನ್‌ರವರು ನಮ್ಮ ಕಲ್ಯಾಣ ಕರ್ನಾಟಕ ಭಾಗದವರಾಗಿದ್ದು, ಇತ್ತೀಚಿನವರೆಗೂ ಕೂಡ ಅವರು ನಮ್ಮ ಜೊತೆ ಒಳ್ಳೆಯ ಒಡನಾಟ ಇಟ್ಟುಕೊಂಡಿದ್ದರು. ಅಲ್ಲದೇ, ನಮ್ಮ ಜೊತೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ಬಹಳಷ್ಟು ಚರ್ಚೆ ಮಾಡುತ್ತಿದ್ದರು. ಅದೇ ರೀತಿ, ಶಿಕ್ಷಣದ ಬಗ್ಗೆ, ಆರೋಗ್ಯದ ಬಗ್ಗೆ ಮತ್ತು ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಅಭಿವೃದ್ಧಿಯ ಬಗ್ಗೆ ಬಹಳ ಕಳಕಳಿಯನ್ನು ಇಟ್ಟುಕೊಂಡಿದ್ದರು. ಆದರೆ, ಅವರು ಇಷ್ಟು ಬೇಗ ನಮ್ಮನ್ನು ಅಗಲಿ ಹೋಗುತ್ತಾರೆಂದು ನಮಗೆ ಅನ್ನಿಸಿರಲಿಲ್ಲ. ಅವರು ಒಬ್ಬ ಉತ್ತಮ ಸಂಸದೀಯ ಪಟುವಾಗಿ ವಿಧಾನ ಪರಿಷತ್ತಿನಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಅವರ ಆತ್ಮಕ್ಕೂ ಕೂಡ ಆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಕೋರುತ್ತಾ, ಹಾಗೂ ಶ್ರೀ ಬೇಗಾನೆ ರಾಮಯ್ಯನವರು ಮತ್ತು ಇತರೆ ಎಲ್ಲಾ ಗಣ್ಯವ್ಯಕ್ತಿಗಳಿಗೆ ಸಂಬಂಧಿಸಿದಂತೆ ಇವೊತ್ತಿನ ದಿವಸ ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಅವರೆಲ್ಲರೂ ಸಹ ತಮ್ಮ ತಮ್ಮ ಕ್ಷೇತ್ರದಲ್ಲಿ ವಿಶಿಷ್ಟವಾದ ಒಂದು ಸಾಧನೆಯನ್ನು ಮಾಡಿರುತ್ತಾರೆ. ಆದುದರಿಂದ, ಎಲ್ಲಾ ಗಣ್ಯವ್ಯಕ್ತಿಗಳ ಆತ್ಮಕ್ಕೆ ಶಾಂತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತಾ, ಅವರ ಪರಿವಾರದವರಿಗೆ ಮತ್ತು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಎಲ್ಲಾ ಅನುಯಾಯಿಗಳಿಗೆ ಹಾಗೂ ಅವರ ಬಂಧು-ಬಳಗದವರಿಗೆ ಅವರ ಅಗಲಿಕೆಯಿಂದ ಉಂಟಾದ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾ, ಮೃತರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಸಲೀಂ ಅಹ್ಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ತಾವು ತಂದಿರುವಂತಹ ಸಂತಾಪ ಸೂಚನೆಗೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ವಿಶೇಷವಾಗಿ ಶ್ರೀ ಡೇವಿಡ್ ಸಿಮೆಯೋನ್‌ರವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರು ಮತ್ತು ಅಧ್ಯಕ್ಷರು ಕೂಡ ಆಗಿದ್ದರು. ಶ್ರೀಯುತರು ಒಬ್ಬ ಅಪರೂಪದ ರಾಜಕಾರಣಿ ಮತ್ತು ಸ್ನೇಹಜೀವಿಯಾಗಿದ್ದರು. ಅವರು ಅಧಿಕಾರದಲ್ಲಿರಲಿ ಅಥವಾ ಇಲ್ಲದೇ ಇರಲಿ, ಅವರು ಯಾವಾಗ ಸಿಕ್ಕಿದರೂ ಸಹ, ಬಹಳ ಆತ್ಮೀಯತೆಯಿಂದ ಮಾತನಾಡುವಂತಹ ಒಬ್ಬ ನಾಯಕರಾಗಿದ್ದರು. ಅವರು ವಿಧಾನ ಪರಿಷತ್ತಿನ ಸಭಾಪತಿಯವರಾಗಿದ್ದಂತಹ ಸಂದರ್ಭದಲ್ಲಿ ನಾವು ಸದನದಲ್ಲಿ ಬಹಳ ಸಮಯ ಮಾತನಾಡಿದರೂ ಸಹ, ಬಹಳ ಶಾಂತಿಯಿಂದ ಎಲ್ಲರ ಮಾತುಗಳನ್ನು ಕೇಳಿ, ಅಂತಿಮವಾಗಿ ಎಲ್ಲರಿಗೂ ಮಾತನಾಡಲು ಅವಕಾಶಗಳನ್ನು ಕೊಡುತ್ತಿದ್ದರು. ಅದೇ ರೀತಿ, ಡಾ॥ ತಿಪ್ಪಣ್ಣನವರು ಕೂಡ most sophisticated Chairman ಆಗಿದ್ದರು. ಅವರ dressing sense ಇರಬಹುದು ಅಥವಾ ಅವರ ಮಾತುಗಳು ಇರಬಹುದು, ಅವರಿಂದ ನಾವು ಸಾಕಷ್ಟು ವಿಷಯಗಳನ್ನು ಕಲಿತಿರುತ್ತೇವೆ. ಡಾ॥ ಎನ್. ತಿಪ್ಪಣ್ಣನವರು ಒಬ್ಬ ಉತ್ತಮ ವಾಗ್ಮಿಯಾಗಿ ಮತ್ತು ವಿಶೇಷವಾಗಿ ಯುವಕರಿಗೆ ಹೆಚ್ಚು ಒತ್ತನ್ನು ಕೊಟ್ಟು, ಸಭಾಪತಿ ಸ್ಥಾನದಲ್ಲಿ ಕುಳಿತು ಅವರಿಗೆ ಹೆಚ್ಚಿನ ಅವಕಾಶಗಳನ್ನು ಕೊಡುತ್ತಿದ್ದರು. ಅವರನ್ನು ನಾವು ಇವೊತ್ತಿನ ದಿವಸ ಕಳೆದುಕೊಂಡಿದ್ದೇವೆ. ಅದೇ ರೀತಿ, ಶ್ರೀ ಬೇಗಾನೆ ರಾಮಯ್ಯನವರ ಬಗ್ಗೆ ಬಹಳಷ್ಟು ಸದಸ್ಯರು ಸಾಕಷ್ಟು ಮಾತನಾಡಿರುತ್ತಾರೆ. ಶ್ರೀಯುತರು ಯುವ ಕಾಂಗ್ರೆಸ್ ಮುಖಂಡರಾಗಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರ ಕಾಲದಲ್ಲಿಯೂ ಸಹ ಸಾಕಷ್ಟು ಕೆಲಸ ಮಾಡಿದ್ದರು. ಶ್ರೀಯುತರು ಮಂತ್ರಿಯಾಗಿ, ಶಾಸಕರಾಗಿ ಬಹಳ ಸ್ನೇಹಜೀವಿಯಾಗಿದ್ದರು. ಇವೊತ್ತಿನ ದಿವಸ ನಾವು ಅವರನ್ನು ಕಳೆದುಕೊಂಡಿರುತ್ತೇವೆ. ಅದೇ ರೀತಿ, ಇನ್ನುಳಿದ ಗಣ್ಯವ್ಯಕ್ತಿಗಳನ್ನು ನಾವೇನು ಕಳೆದುಕೊಂಡಿದ್ದೇವೆ, ಅವರ ಆತ್ಮಕ್ಕೂ ಸದ್ಗತಿಯನ್ನು ಕೋರುತ್ತಾ, ಅವರ ಕುಟುಂಬದವರ ದುಃಖದಲ್ಲಿ ನಾವು ಕೂಡ ಭಾಗಿಯಾಗಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಐವನ್ ಡಿ' ಸೋಜಾ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ತಾವು ತಂದಿರುವಂತಹ ಸಂತಾಪ ಸೂಚನೆ ಪ್ರಸ್ತಾಪವನ್ನು ನಾನು ಬೆಂಬಲಿಸುತ್ತೇನೆ. ಶ್ರೀ ಡೇವಿಡ್ ಸಿಮೆಯೋನ್‌ರವರು ನಮ್ಮ ಸಮುದಾಯದಲ್ಲಿನ ಒಬ್ಬ ಉತ್ತಮ ನಾಯಕರಾಗಿದ್ದರು ಮತ್ತು ನಮ್ಮ ಸಮುದಾಯದ ಎಲ್ಲಾ ಆಗುಹೋಗುಗಳಲ್ಲಿಯೂ ಕೂಡ ಅವರು ಭಾಗಿಯಾಗುತ್ತಿದ್ದರು. ಅದರಲ್ಲಿಯೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಈ ಭಾಗಗಳಲ್ಲಿ ನಮ್ಮ ಸಮುದಾಯದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುತ್ತಿದ್ದರು. ವಿಧಾನ ಪರಿಷತ್ತಿನ ಒಂದು ಅವಧಿಗೆ ಮಾನ್ಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರಾಗಿ ಕಾರ್ಯನಿರ್ವಹಿಸಲು ಅವರಿಗೆ ಒಂದು ಅವಕಾಶ ಸಿಕ್ಕಿತ್ತು. ಶ್ರೀಯುತರು ಜನತಾ ಪಾರ್ಟಿಯಲ್ಲಿದ್ದರು, ಜನತಾದಳದಲ್ಲಿಯೂ ಸಹ ಇದ್ದರು. ಮಾನ್ಯ ಹೆಚ್.ಡಿ. ದೇವೇಗೌಡರವರ ಮತ್ತು ಮಾನ್ಯ ಸಿದ್ದರಾಮಯ್ಯನವರ ಜೊತೆಯಲ್ಲಿ ಮತ್ತು ಶ್ರೀ ಜೆ.ಹೆಚ್. ಪಟೇಲ್‌ರವರ ಜೊತೆಯಲ್ಲಿ ಇದ್ದರು. ಆಗ ನಾನು ಕೂಡ ಅವರ ಜೊತೆಯಲ್ಲಿ ಇದ್ದೆನು. 1994ರಲ್ಲಿ ನಾನು ಕಾಪು ವಿಧಾನಸಭಾ ಕ್ಷೇತ್ರದಿಂದ ಜನತಾದಳದ ಅಭ್ಯರ್ಥಿಯಾಗಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದೆನು.

(ಮುಂದು)

(600) 11.08.2025 11.50 ವೈಎಲ್-ಎಂಡಿ (ಸಭಾಪತಿಯವರ ಉಪಸ್ಥಿತಿ)

ಶ್ರೀ ಐವನ್ ಡಿ'ಸೋಜಾ (ಮುಂದು):-

ಆ ಸಂದರ್ಭದಲ್ಲಿಯೂ ಕೂಡಾ ಶ್ರೀ ಡೇವಿಡ್ ಸಿಮೆಯೋನ್‌ರವರಿಗೆ ಟೀಕೆಟ್ ಸಿಗುವ ಅವಕಾಶ ಸಿಕ್ಕಿರುವುದಿಲ್ಲ. ಅನಂತರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅವರನ್ನು ಕರೆಸಿ, ವಿಧಾನ ಪರಿಷತ್ತಿನಲ್ಲಿ ಅವಕಾಶ ಸಿಗುವಂತೆ ಮಾಡಿಕೊಟ್ಟರು. ಒಂದು ಅವಧಿಯಲ್ಲಿ ಉಪ ಸಭಾಪತಿಯಾಗಿ ಹಾಗೂ ಒಂದು ವರ್ಷದ ಅವಧಿಗೆ ಸಭಾಪತಿಯವರ ಸ್ಥಾನವನ್ನು ಅಲಂಕರಿಸಿದಂಥ ಉತ್ತಮ ಹೋರಾಟಗಾರರಾಗಿದ್ದರು. ಶ್ರೀಯುತರು ವಿದ್ಯಾರ್ಥಿಗಳ ದೆಸೆಯಿಂದ ರಾಜಕಾರಣಕ್ಕೆ ಆಗಮಿಸಿದ್ದವರಾಗಿದ್ದು, ಯಾರು ವಿದ್ಯಾರ್ಥಿಗಳ ದೆಸೆಯಿಂದ ರಾಜಕಾರಣಕ್ಕೆ ಆಗಮಿಸಿರುತ್ತಾರೆ, ಅಂಥವರು ಸಾಧಾರಣವಾಗಿ ತಮಗೆ ಸಿಕ್ಕಿರುವಂಥ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುತ್ತಾರೆ ಎಂಬುದಕ್ಕೆ ಶ್ರೀಯುತರು ಉತ್ತಮ ಉದಾಹರಣೆ ಎಂದು ಹೇಳಬಯಸುತ್ತೇನೆ. ಅವರು ಮರಣ ಹೊಂದುವ ಮುನ್ನಾ ಅವರ ಜೊತೆಯಲ್ಲಿಯೇ ಆಸ್ಪತ್ರೆಯಲ್ಲಿದ್ದೆನು. ಕರ್ನಾಟಕ ಕ್ರೈಸ್ತ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ಮಾನ್ಯ ಕೆ.ಜೆ.ಜಾರ್ಜ್‌ರವರನ್ನು ಹಾಗೂ ಶ್ರೀ ಡೇವಿಡ್ ಸಿಮೆಯೋನ್‌ರವರನ್ನು, ನನ್ನನ್ನು ಹಾಗೂ Smt Vinisha Nero ರವರನ್ನು ಸದಸ್ಯರನಾಗಿ ನೇಮಕ ಮಾಡಿದ್ದರು. ಆ ಸಂದರ್ಭದಲ್ಲಿಯೂ ಸಹ ಆಸ್ಪತ್ರೆಯಿಂದ ಸಭೆಗೆ ಬರುವಾಗ ಇಂಜೆಕ್ಷನ್ ಹಾಕುವಂಥ ಚುಚ್ಚುಮದ್ದಿನ ಪೆಟ್ಟಿಗೆಯನ್ನಿಟ್ಟುಕೊಂಡು ಸಭೆಗೆ ಆಗಮಿಸಿ, ಜನರ ಪರವಾಗಿ ಹಾಗೂ ಸಾಮಾಜಿಕ ಚಿಂತನೆ ಪರವಾಗಿ ಅವರು ಹೇಳಬೇಕಾದಂಥ ವಿಚಾರವನ್ನು ಹೇಳಿಕೊಳ್ಳುತ್ತಿದ್ದರು. ಅಂದರೆ, ಆ ಒಬ್ಬ ವ್ಯಕ್ತಿ ಸಮಾಜದಲ್ಲಿ ಗುರುತಿಸಿಕೊಂಡಿದ್ದಲ್ಲದೇ, ಎಲ್ಲಾ ವರ್ಗದ ಜನರ ಪ್ರೀತಿಯನ್ನು ಗಳಿಸಿದಂಥವರಾಗಿದ್ದು, ಶ್ರೀಯುತರ ನಿಧನ ನಿಜವಾಗಿಯೂ ನಷ್ಟವನ್ನುಂಟು ಮಾಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರಾಗಿದ್ದು, ಗುಲ್ಬರ್ಗಾ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂತಾಪ ಸೂಚನೆಯಲ್ಲಿ ಬರೆದಿದ್ದಾರೆ. ಅದರ ಜೊತೆಗೆ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಅವರು ಸಿಂಡಿಕೇಟ್ ಸದಸ್ಯರಾಗಿ ಸಹ ಕೆಲಸ ಮಾಡಿದ್ದಾರೆ. ಅದಲ್ಲದೇ ವಿದ್ಯಾರ್ಥಿಗಳ ಪರವಾಗಿ ಬಹಳ ದೊಡ್ಡ ಹೋರಾಟ ಮಾಡಿದ್ದರು. ಹಾಗಾಗಿ, ಅವರ ನಿಧನ ನಿಜಕ್ಕೂ ಬೇಸರದ ಸಂಗತಿ ಎಂದು ಹೇಳಬಯಸುತ್ತೇನೆ.

ಈಗಾಗಲೇ ಮಾನ್ಯ ಸಿ.ಟಿ.ರವಿರವರು ಹೇಳಿದ ಹಾಗೆ ಶ್ರೀಯುತರ ಗಡ್ಡವು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರ ಹಾಗೆ ಮಧ್ಯ ಭಾಗದಲ್ಲಿ ಸ್ವಲ್ಪ ಮಾತ್ರ ಬಿಳಿ ಬಣ್ಣ ಇದ್ದು, ಉಳಿದ ಗಡ್ಡವು ಕಪ್ಪು ಬಣ್ಣದಿಂದ ಇರುತ್ತಿತ್ತು. He was well known to all. ಅವರು ನಗುಮುಖದೊಂದಿಗೆ ಎಲ್ಲರೊಂದಿಗೆ ಮಾತನಾಡುತ್ತಾ, ಕೊನೆಯವರೆಗೂ ಸೇವೆಯನ್ನು ಸಲ್ಲಿಸಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈ ಒಂದು ಸಂತಾಪ ಸೂಚನೆಗೆ ಸಹಮತವನ್ನು ವ್ಯಕ್ತಪಡಿಸುತ್ತಾ, ಮಾನ್ಯ ಡೇವಿಡ್ ಸಿಮೆಯೋನ್‌ರವರ ಬಗ್ಗೆ ಹೇಳುವುದಾದರೆ, ಶ್ರೀಮಾನ್‌ರವರು ನಮ್ಮ ಪಕ್ಷದಲ್ಲಿಯೇ ವಿಧಾನ ಪರಿಷತ್ತಿನ ಸದಸ್ಯರಾಗಿ, ಸಭಾಪತಿಯವರಾಗಿ ಹಾಗೂ ನಮ್ಮ ಪಕ್ಷದ ವರಿಷ್ಠರಾದಂಥ ಮಾನ್ಯ ಹೆಚ್.ಡಿ.ದೇವೇಗೌಡರವರ ಜೊತೆಯಲ್ಲಿ ಬಹಳಷ್ಟು ಒಡನಾಟವನ್ನಿಟ್ಟುಕೊಂಡು ಇಡೀ ರಾಜ್ಯದಲ್ಲಿ ಆ ಸಮಾಜಕ್ಕೆ ನ್ಯಾಯ ಕೊಡಿಸುವಂಥ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ. ಅವರು ಎಲ್ಲಿಯೇ ಸಿಕ್ಕಿದರೂ ಲವಲವಿಕೆಯಿಂದ ಸ್ಪಂದಿಸುವಂಥ ಹಾಗೂ ಮಾತನಾಡುವಂಥ ರೀತಿ, ಸಮಾಜದ ಕಳಕಳಿ ಎಲ್ಲವನ್ನೂ ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲೇಬೇಕು. ಶ್ರೀಯುತರು ಉತ್ತರ ಕರ್ನಾಟಕ ಭಾಗದ ಬಗ್ಗೆ ತುಂಬಾ ಹೆಚ್ಚಿನ ಕಾಳಜಿಯನ್ನಿಟ್ಟುಕೊಂಡು ಯಾವಾಗಲೂ ಕೆಲಸ ಮಾಡುತ್ತಿದ್ದರು. ಶ್ರೀಯುತರವರ ಕುಟುಂಬ ವರ್ಗದವರಿಗೆ ಹಾಗೂ ಅವರ ಅಭಿಮಾನಿಗಳಿಗೆ ಅವರ ಅಗಲಿಕೆಯ ನಷ್ಟವನ್ನು ಭರಿಸುವಂಥ ಶಕ್ತಿಯನ್ನು ಪರಮಾತ್ಮ ಕರುಣಿಸಲಿ ಎಂದು ಹೇಳುತ್ತೇನೆ. ಹಾಗೆಯೇ ಇದೇ ವಿಧಾನ ಪರಿಷತ್ತಿನ ಹಿರಿಯ ಸದಸ್ಯರಾಗಿ ಕೆಲಸ ಮಾಡಿದಂಥ ಡಾ॥ ಎನ್.ತಿಪ್ಪಣ್ಣನವರು ಜೆ.ಡಿ.(ಎಸ್) ಪಕ್ಷದ ರಾಜ್ಯಾಧ್ಯಕ್ಷರಾಗಿ ಹಾಗೂ ಸಭಾಪತಿಯವರಾಗಿ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರವರೊಂದಿಗೆ ಬಹಳಷ್ಟು ಒಡನಾಟದಿಂದ ಇದ್ದು, ಲಿಂಗಾಯತ ಸಮುದಾಯದ ತಿಲಕವಾಗಿ ಕೆಲಸ ಮಾಡುತ್ತಿದ್ದರು. ನನಗೆ ಅವರೊಂದಿಗೂ ಸಹ ಬಹಳಷ್ಟು ಒಡನಾಟ ಇತ್ತು. ಇವತ್ತಿನ ದಿವಸ ಅವರನ್ನು ಸಹ ಕಳೆದುಕೊಂಡಿರುವುದು ಬಹಳ ನೋವಿನ ಸಂಗತಿ ಎಂದು ಹೇಳುತ್ತಾ, ಅವರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿಮಾನಿಗಳಿಗೆ ಮತ್ತು ಕುಟುಂಬ ಸದಸ್ಯರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಜೊತೆಗೆ ಕನ್ನಡ ಚಿತ್ರರಂಗದಲ್ಲಿ ನಟಿಸಿದಂಥ ಮಹಿಳಾ ಸೂಪರ್ ಸ್ಟಾರ್ ಎಂದರೆ, ಅದು ಡಾ॥ ಬಿ.ಸರೋಜಾದೇವಿಯವರು ಎಂದು ಹೇಳಬಯಸುತ್ತೇನೆ. ಅವರು ನಮ್ಮ ವರನಟ ಡಾ॥ ರಾಜ್‌ಕುಮಾರ್, ತಮಿಳುನಾಡಿನ ಡಾ॥ ಎಂ.ಜಿ.ಆರ್., ಹಾಗೂ ಆಂಧ್ರಪ್ರದೇಶದ ಎಂ.ಟಿ.ಆರ್. ಆಗಿರಬಹುದು. ಎಲ್ಲಾ ಭಾಷೆಯ ಉನ್ನತ ಕಲಾವಿದರೊಂದಿಗೆ ನಟಿಸಿರುವಂಥ ಒಂದು ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬಹುಶಃ ಕಲಾ ಸರಸ್ವತಿ ಎಂದರೆ ತಪ್ಪಾಗಲಾರದು. ಬಹಳಷ್ಟು ಚಿತ್ರರಂಗಗಳಲ್ಲಿ ಅಭಿನಯಿಸಿ, ಎಲ್ಲಾ ರೀತಿಯ ಪ್ರಶಸ್ತಿಗೂ ಪಾತ್ರರಾಗಿ ದೊಡ್ಡ ಹೆಸರನ್ನು ಗಳಿಸಿದವರಾಗಿದ್ದು, ಅವರು ಸಹ ಇವತ್ತು ನಮ್ಮ ಮುಂದೆ ಇಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪಡೆದಂಥವರು. ಅನೇಕ ಚಿತ್ರರಂಗದಲ್ಲಿ ಬಹಳಷ್ಟು ಹೋರಾಟದ ಮೂಲಕ ಕೆಲಸ ಮಾಡಿರುವಂಥ ಕೀರ್ತಿಗೆ ಪಾತ್ರರಾಗಿದ್ದರು. ಡಾ॥ ಬಿ.ಸರೋಜಾದೇವಿಯವರ ಮನೆಯೂ 11ನೇ ಕ್ರಾಸ್, ಮಲ್ಲೇಶ್ವರಂನಲ್ಲಿದ್ದು, ನಾನು ಸಹ ಅಲ್ಲಿಗೆ ಹೋಗಿದ್ದೆನು. ಅವರ ಹೆಸರನ್ನು ಜನರು ನೆನಪಿನಲ್ಲಿಟ್ಟುಕೊಳ್ಳಬೇಕೆಂದರೆ, ಮಲೇಶ್ವರಂನ 11ನೇ ಕ್ರಾಸ್‌ಗೆ 'ಸರೋಜಾದೇವಿ ರಸ್ತೆ' ಎಂಬ ಹೆಸರನ್ನಿಟ್ಟು, ನಾಮಕರಣ ಮಾಡಬೇಕೆಂದು ಸರ್ಕಾರಕ್ಕೂ ಒಂದು ಒಳ್ಳೆಯ ಹೆಸರು ಬರುತ್ತದೆ ಎಂಬುವಂಥ ಸಲಹೆಯನ್ನು ನೀಡಬಯಸುತ್ತೇನೆ. ಇವತ್ತಿನ ಸಂತಾಪ ಸೂಚನೆಯಲ್ಲಿರುವಂಥ ಎಲ್ಲಾ ಹಿರಿಯ ಗಣ್ಯರಿಗೂ ಸಂತಾಪವನ್ನು ಸೂಚಿಸುತ್ತೇನೆ. ಈಗಾಗಲೇ ಹೇಳಿದ ಹಾಗೆ ಆರ್.ಸಿ.ಬಿ. ವಿಜಯೋತ್ಸವದ ದಿನದಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತಕ್ಕೆ ಒಳಗಾಗಿ 11 ಮಂದಿ ಜೀವವನ್ನು ಕಳೆದುಕೊಂಡಿದ್ದರು, ಅವರ ಮನೆಗಳಿಗೂ ಸಹ ಈ ಸದನದಿಂದ ಸಂತಾಪ ಸೂಚನೆಯನ್ನು ಕಳುಹಿಸಿಕೊಡುವಂಥ ಕೆಲಸವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಾಗಿ ವಿನಂತಿಸಿಕೊಳ್ಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ತಾವು ಮಂಡಿಸಿರುವಂಥ ಸಂತಾಪ ಸೂಚನೆಗೆ ಸ್ವಾಗತ ಬಯಸುತ್ತೇನೆ. ಈ ಸಂತಾಪ ಸೂಚನೆಯ ಮಂಡನೆಯಲ್ಲಿರುವಂಥ ಡಾ॥ ಎನ್.ತಿಪ್ಪಣ್ಣ, ಬೇಗಾನೆ ರಾಮಯ್ಯ, ಡಾ॥ ಕೆ.ಕಸ್ತೂರಿರಂಗನ್, ಜಿ.ಎಸ್.ಸಿದ್ದಲಿಂಗಯ್ಯ, ಪ್ರೊ: ಸುಬ್ಬಣ್ಣ ಅಯ್ಯಪ್ಪನ್, ಡಾ॥ ಎಮ್. ಆರ್.ಶ್ರೀನಿವಾಸನ್, ಡಾ॥ ಹೆಚ್.ಎಸ್.ವೆಂಕಟೇಶ್ ಮೂರ್ತಿ, ಡಾ॥ ಬಿ.ಸರೋಜಾದೇವಿ, ಇಷ್ಟು ಮಂದಿಯೂ ನಮ್ಮ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಡಿಗೆ, ದೇಶಕ್ಕೆ ದೊಡ್ಡ ದೊಡ್ಡ ಕೊಡುಗೆಯನ್ನು ನೀಡಿ ಕಾಲವಶವಾಗಿದ್ದಾರೆ. ರಾಜಕೀಯ ಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರ, ಕೃಷಿ ಕ್ಷೇತ್ರ, ವಿಜ್ಞಾನ ಕ್ಷೇತ್ರ, ಸಾಹಿತ್ಯ ಹೀಗೆ ಅನೇಕ ಕ್ಷೇತ್ರಗಳಿಂದ ಬಂದಿದ್ದು, ಇವೆಲ್ಲರೂ ನಮ್ಮೊಂದಿಗೆ ಇದ್ದು, ನಮ್ಮೆಲ್ಲರಿಗೂ ಗೌರವವನ್ನು ತರುವಂಥ ದೊಡ್ಡ ದೊಡ್ಡ ಕೆಲಸವನ್ನು ಮಾಡಿದ್ದಾರೆ. ನಾನು ವಿಧಾನ ಪರಿಷತ್ತಿನ ಸದಸ್ಯೆಯಾಗಿ ಮೊದಲ ಬಾರಿಗೆ ಸದನಕ್ಕೆ ಬಂದಾಗ ಡಾ॥ ಎನ್.ತಿಪ್ಪಣ್ಣ, ಡೇವಿಡ್ ಸಿಮೆಯೋನ್, ಎಲ್ಲರೊಂದಿಗೆ ಕೆಲಸ ಮಾಡುವಂಥ ಅವಕಾಶ ಸಿಕ್ಕಿತ್ತು. ಡೇವಿಡ್ ಸಿಮೆಯೋನ್‌ರವರು ಹೈದ್ರಾಬಾದ್-ಕರ್ನಾಟಕವಾದ ಕಲ್ಯಾಣ-ಕರ್ನಾಟಕದ ವತಿಯಿಂದ ಬಂದಿದ್ದರೂ ಕೂಡ ಅವರ ನಡೆ-ನುಡಿ, ಸ್ವಭಾವ ಎಲ್ಲವೂ ನೋಡಿದಾಗ ಅತ್ಯಂತ ಸಾಮಾನ್ಯ, ಸಹಜವಾದ ವ್ಯಕ್ತಿತ್ವದಿಂದ ಜನರೊಂದಿಗೆ ಬೆರೆತು ಕೆಲಸ ಮಾಡುವಂಥ ಮನೋಭಾವ ಸ್ಥಿತಿಯಿಂದ ನಗುನಗುತ್ತಾ ಕೆಲಸ ಮಾಡಿದ್ದಾರೆ. ಇತ್ತೀಚೆಗೂ ಇದೇ ವಿಧಾನಸೌಧದ ಸುತ್ತಮುತ್ತ ಅವರನ್ನು ಎರಡು-ಮೂರು ಬಾರಿ ಭೇಟಿ ಮಾಡಿದ್ದೇನೆ. ಅವರು ಕಾಲವಶವಾಗುತ್ತಾರೆ ಎಂದು ನಾವು ಯಾರೂ ನಿರೀಕ್ಷೆ ಮಾಡಿರಲಿಲ್ಲ. ದೈವ ಅವರನ್ನು ಕರೆದುಕೊಂಡಿರುವುದು ಬಹಳ ವಿಷಾಧಕರವಾದ ಸಂಗತಿಯಾಗಿದೆ. ಅವರು ಜನಪರವಾಗಿ ಹೋರಾಟದ ಮೂಲಕ ಆಯ್ಕೆಯಾಗಿ ಬಂದವರಾಗಿದ್ದು, ನಿರ್ಗತಿಕ ಸಮುದಾಯಗಳಿಗೆ ಬಹಳಷ್ಟು ಕೊಡುಗೆಗಳನ್ನು, ಸಹಾಯವನ್ನು ಮಾಡಿದಂಥವರಾಗಿದ್ದಾರೆ.

ಹಾಗೆಯೇ ಡಾ॥ ಎನ್.ತಿಪ್ಪಣ್ಣನವರು ಬಹಳ ಸುಸಂಸ್ಕೃತ, ಸಜ್ಜನ, ಬಹಳ ಹಿರಿಯ ರಾಜಕಾರಣಿಯಾಗಿದ್ದು, ಅವರೊಂದಿಗೂ ಕೆಲಸ ಮಾಡಿರುವುದು ನನ್ನ ಭಾಗ್ಯ ಎಂದು ಭಾವಿಸುತ್ತೇನೆ. ಜೊತೆಗೆ ದೇಶಕ್ಕೆ ಮತ್ತು ರಾಜ್ಯಕ್ಕೆ ಕೃಷಿ ಮತ್ತು ವಿಜ್ಞಾನದ ವಿಚಾರಗಳಲ್ಲಿ ಕೊಡುಗೆಯನ್ನು ಕೊಟ್ಟಿರುವಂಥ ಡಾ॥ ಕಸ್ತೂರಿ ರಂಗನ್‌ರವರು, ಪ್ರೊ: ಸುಬ್ಬಣ್ಣ ಅಯ್ಯಪ್ಪನ್, ಡಾ॥ ಎಮ್.ಆರ್.ಶ್ರೀನಿವಾಸನ್, ಇವರೆಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ವಿಶೇಷವಾಗಿ ಡಾ॥ ಹೆಚ್.ಎಸ್.ವೆಂಕಟೇಶ್ ಮೂರ್ತಿರವರು ಕವಿಯಾಗಿ, ಸಾಹಿತಿಯಾಗಿ, ರಂಗಭೂಮಿಗೆ ಒಳ್ಳೆಯ ನಾಟಕವನ್ನು ಕೊಡುವ ಮೂಲಕ ಕೊಡುಗೆಯನ್ನು ಕೊಟ್ಟಿದ್ದು, ಅವರ ಕೊಡುಗೆ ನಮ್ಮ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವಿಸ್ಮರಣೀಯವಾದುದು ಎಂಬುದನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(601) 11.08.2025/12.00/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀಮತಿ ಉಮಾಶ್ರೀ (ಮುಂದು):-

ಹಿರಿಯ ನಟಿ ಡಾ॥ ಬಿ. ಸರೋಜಾದೇವಿಯವರು ನಮ್ಮೊಂದಿಗೆ ಬಹಳಷ್ಟು ಒಡನಾಟವನ್ನು ಹೊಂದಿದ್ದರು. ಚಿತ್ರರಂಗದಲ್ಲಿ ಡಾ॥ ರಾಜಕುಮಾರ್ ಸರ್‌ರವರಿಗೆ ನಮ್ಮೊಂದಿಗೆ ಗೌರವಪೂರ್ವಕವಾದ ಆ ಒಂದು ನಡವಳಿಕೆಗಳು ಇರುತ್ತಿತ್ತೋ, ಅದೇ ರೀತಿಯ ನಡವಳಿಕೆಗಳು ಡಾ॥ ಬಿ. ಸರೋಜಾದೇವಿಯವರಿಗೂ ಕೂಡ ಇರುತ್ತಿತ್ತು. ಎತ್ತರದ ವ್ಯಕ್ತಿತ್ವವನ್ನು ಹೊಂದಿದ್ದ ಅವರು ಚಿತ್ರರಂಗದಲ್ಲಿ ಉನ್ನತವಾದಂತಹ ಸಾಧನೆಯನ್ನು ಮಾಡಿದಂತಹವರು. ಅವರು ಚಿಕ್ಕವರಿಂದಲೂ ಕಲೆಯ ಬಗ್ಗೆ ಆಸಕ್ತಿಯನ್ನು ಹೊಂದಿದ್ದರು. ಅವರು ಕಲಾವಿದೆ ಆಗಬೇಕೆಂಬುದು ಅವರ ಇಚ್ಛೆಯಲ್ಲ, ಹಾಡುಗಾರಿಕೆ ಮತ್ತು ಲಲಿತಕಲೆಗಳಲ್ಲಿ ಆಸಕ್ತಿ ಹೊಂದಿದ್ದರು. ಮೊದಲನೆಯದಾಗಿ, ಶ್ರೀ ಹೊನ್ನಪ್ಪ ಭಾಗವತರ್‌ರವರು "ಕವಿರತ್ನ ಕಾಳಿದಾಸ" ಚಿತ್ರದಲ್ಲಿ ಪಾತ್ರ ಮಾಡುವುದಕ್ಕೆ ಅವರನ್ನು ಕರೆದರು. ಪುಟ್ಟ ವಯಸ್ಸಿನಲ್ಲಿಯೇ ಅವರಿಂದ ಪಾತ್ರವನ್ನು ಮಾಡಿಸಿದಾಗ, ಮೊದಲನೇ ಚಿತ್ರದಲ್ಲಿ ಬಹಳ ದೊಡ್ಡ ಹೆಸರನ್ನು ಮಾಡಿದ ಕೀರ್ತಿ ಮತ್ತು ಅವರ ಶಕ್ತಿಯನ್ನು ನಾವು ಕಾಣಬಹುದು. ಅವರು ಸುಮಾರು 200 ಚಿತ್ರಗಳಲ್ಲಿ ನಟಿಸಿದಂತಹವರು. ದಕ್ಷಿಣ ಭಾರತದ ಬಹು ದೊಡ್ಡ ಮೇರು ನಟಿ ಎಂದು ಹೇಳುವುದಕ್ಕೆ ನಮಗೆಲ್ಲರಿಗೂ ಹೆಮ್ಮೆ ಎನಿಸುತ್ತದೆ. ನಾನು ಅವರನ್ನು ಗಮನಿಸಿದಂತೆ, ಅವರ ಸುಸಂಸ್ಕೃತವಾದಂತಹ ನಡವಳಿಕೆ. ಅವರು ನಟಿಯಾಗಿದ್ದರೂ ಕೂಡ ಸಾಮಾಜಿಕ ಗೌರವದ ಬಗ್ಗೆ ಹಿರಿಯರು ಹಾಕಿಕೊಟ್ಟಂತಹ ಮಾರ್ಗದಲ್ಲಿ ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಬಹು ದೊಡ್ಡ ಯಶಸ್ಸನ್ನು ನಮ್ಮ ಚಿತ್ರರಂಗದಲ್ಲಿ ಕಂಡಿರುವಂತಹವರು ಎಂದರೆ ಡಾ॥ ಬಿ. ಸರೋಜಾದೇವಿಯವರು ಎಂದು ನಾನು ಹೇಳಬಯಸುತ್ತೇನೆ. ಅವರು "ನನ್ನ ತಾಯಿ" ಎಂದು ನಾನು ಯಾವಾಗಲೂ ಹೇಳುತ್ತೇನೆ. ನನ್ನ ತಾಯಿ ಹಾಕಿಕೊಟ್ಟಂತಹ ಮಾರ್ಗದರ್ಶನದಲ್ಲಿ ಇವತ್ತಿಗೂ ಮತ್ತು ಕೊನೆಯವರೆಗೂ ನಾನು ಬದುಕಿ ಬಾಳಬೇಕು. ಅದನ್ನೇ ಮುಂದುವರೆಸಿದರೂ ಅವಿರತವಾಗಿ ಅದನ್ನು ಅವರು ಶ್ರದ್ಧೆ-ಭಕ್ತಿಯಿಂದ ಸ್ವೀಕರಿಸಿದರು. ಒಬ್ಬ ತಾಯಿ ಕುಟುಂಬದಲ್ಲಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನು ಹಾಕಿಕೊಟ್ಟರು. ಕೊನೆಯವರೆಗೂ ಕೂಡ ಮಕ್ಕಳ ಮೇಲೆ ತುಂಬಾ ಪರಿಣಾಮ ಬೀರುತ್ತದೆ ಎಂಬುದಕ್ಕೆ ಅವರ ತಾಯಿಯ ಮಾರ್ಗದರ್ಶನ ಡಾ॥ ಬಿ. ಸರೋಜಾದೇವಿಯವರ ಮೇಲೆ ಎಷ್ಟೊಂದು ಪರಿಣಾಮ ಬೀರಿತ್ತು ಎಂಬುದನ್ನು ನಾವು ಗಮನಿಸಬಹುದಾಗಿದೆ. ಅವರು ಕನ್ನಡದ "ಅಭಿನಯ ಸರಸ್ವತಿ" ಮತ್ತು ತಮಿಳಿನಲ್ಲಿ "ಕನ್ನಡತು ಪೈಂಗಿಳಿ" (ಕನ್ನಡದ ಗಿಳಿ) ಎಂಬ ಬಿರುದುಗಳನ್ನು ತೆಗೆದುಕೊಂಡಂತಹವರು. ನಾವು ಗಮನಿಸಿದಂತೆ, ದಕ್ಷಿಣ ಭಾರತದ ನಟಿಯಾದಂತಹ ನಮ್ಮ ಹೆಮ್ಮೆಯ ಕನ್ನಡತಿ ಡಾ॥ ಬಿ. ಸರೋಜಾದೇವಿಯವರು. ನಮ್ಮ ರಾಜ್ಯದಲ್ಲಿ ನಾಯಕಿ ಪಾತ್ರದಲ್ಲಿ ಯಾರಾದರೂ ಕಲಾವಿದರು "ಪದ್ಮಶ್ರೀ ಮತ್ತು ಪದ್ಮಭೂಷಣ" ಎಂಬ ಎರಡು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದರೆ, ಅದು ಡಾ॥ ಬಿ. ಸರೋಜಾದೇವಿಯವರು ಎಂದು ಬಗ್ಗೆ ನಾನು ತುಂಬಾ ಹೆಮ್ಮೆಯಿಂದ ಹೇಳಬಯಸುತ್ತೇನೆ. "ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವ ಗಾದೆ ಮಾತಿನಂತೆ, ಅವರು ಮಾಡದೇ ಇರುವಂತಹ ಪಾತ್ರವೇ ಇಲ್ಲ. ಇವತ್ತಿಗೆ ಡಾ॥ ರಾಜ್‌ಕುಮಾರ್‌ರವರು ಮತ್ತು ಹಿರಿಯ ನಟಿಯರು ಹಾಗೂ ಡಾ॥ ಬಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರೋಜಾದೇವಿಯವರ ಪಾತ್ರಗಳನ್ನು ನೋಡುತ್ತಿದ್ದರೆ, ಹಿಂದಿನ ತಲೆಮಾರಿಗೆ ಅದೆಲ್ಲವೂ ಕೂಡ ಬಹಳ ದೊಡ್ಡ ಕೊಡುಗೆ ಮತ್ತು ಈಗಿನ ಕಲಾವಿದರಿಗೆ ಅದು ಮಾರ್ಗದರ್ಶನವಾಗುತ್ತದೆ. ಅಂತಹ ವಿಭಿನ್ನವಾದ ಪಾತ್ರವನ್ನು ಮಾಡಿದಂತಹ ಡಾ॥ ಬಿ. ಸರೋಜಾದೇವಿಯವರು ನಮ್ಮ ಚಿತ್ರರಂಗಕ್ಕೆ ಅತಿದೊಡ್ಡ ಶಕ್ತಿಯಾಗಿದ್ದಂತಹವರು. ಅವರು ನಮ್ಮನ್ನು ಅಗಲಿ ಹೋಗಿರುವುದು ದುಃಖದ ಸಂಗತಿ. ಈ ಎಲ್ಲಾ ಮಹನೀಯರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬಗಳಿಗೆ ಈ ಒಂದು ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ವಾರ್ತಾ ಮತ್ತು ಪ್ರಚಾರ ಇಲಾಖೆಯವರು ಪ್ರತಿ ವರ್ಷ ಅನೇಕ ಪ್ರಶಸ್ತಿಗಳನ್ನು ಕೊಡುತ್ತಾರೆ. ಹಾಗಾಗಿ ಯಾವ ನಟಿಯರು ಹೆಚ್ಚಿನ ಸಾಧನೆಯನ್ನು ಚಿತ್ರರಂಗದಲ್ಲಿ ಮಾಡಿದ್ದರೆ, ಡಾ॥ ಬಿ. ಸರೋಜಾದೇವಿಯವರ ಹೆಸರಿನಲ್ಲಿ ಸರ್ಕಾರ ಪ್ರಶಸ್ತಿ ಸ್ಥಾಪನೆ ಮಾಡಿ, ವಿಶೇಷವಾಗಿ ಮಹಿಳೆಯರನ್ನು ಗುರುತಿಸಿ, ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ಕೊಡುವಂತಹ ಒಂದು ಪದ್ಧತಿಯನ್ನು ಹಾಕಿಕೊಟ್ಟರೆ ತುಂಬಾ ಒಳ್ಳೆಯದು ಮತ್ತು ಅದನ್ನು ಮಾಡಲಿ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ನಿವೇದನೆ ಮಾಡಿಕೊಳ್ಳುತ್ತಾ, ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಮಸ್ಕಾರಗಳು.

ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಾವು ಸಂತಾಪ ಸೂಚನೆಯನ್ನು ಮಂಡಿಸಿರುವ ಬಗ್ಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಶ್ರೀ ಡೇವಿಡ್ ಸಿಮೆಯೋನ್‌ಯವರು ಅತ್ಯಂತ ಸರಳ ಸಜ್ಜನಿಕೆಯ ಪ್ರಮಾಣಿಕ ರಾಜಕಾರಣಿ. ಶ್ರೀಯುತರ ನಿಧನದಿಂದಾಗಿ ಕಲ್ಯಾಣ ಕರ್ನಾಟಕ ಭಾಗಕ್ಕೆ ತುಂಬಲಾರದಂತಹ ನಷ್ಟವಾಗಿದೆ ಎಂಬ ಬಗ್ಗೆ ಹೇಳಬಯಸುತ್ತೇನೆ. ಶ್ರೀ ಡೇವಿಡ್ ಸಿಮೆಯೋನ್‌ರವರ ದಕ್ಷತೆ, ಪ್ರಮಾಣಿಕತೆಯನ್ನು ಕಂಡು ಆಗಿನ ಕಾಲದಲ್ಲಿ ಶ್ರೀ ಬಾಪುಗೌಡ ದರ್ಶನಾಪುರ ಅವರು ಹೌಸಿಂಗ್ ಬೋರ್ಡ್‌ನ ಅಧ್ಯಕ್ಷರಾಗಿರುವ ಸಂದರ್ಭದಲ್ಲಿ ಶ್ರೀ ಡೇವಿಡ್ ಸಿಮೆಯೋನ್‌ರವರು ಕಡುಬಡತನದಲ್ಲಿದ್ದಂತಹ ಸಂದರ್ಭದಲ್ಲಿ ಅವರನ್ನು ಕರೆದು ಪುಕ್ಕಟೆಯಾಗಿ ಅವರಿಗೆ ಹೌಸಿಂಗ್ ಬೋರ್ಡ್‌ನಲ್ಲಿ ಒಂದು ಮನೆಯನ್ನು ಕೊಟ್ಟು, ಸ್ವಂತ ಹಣವನ್ನು ಕೂಡ ಬಾಪುಗೌಡ ದರ್ಶನಾಪುರರವರು ತುಂಬಿ ಅವರನ್ನು ರಾಜಕೀಯಕ್ಕೆ ಕರೆದುಕೊಂಡು ಬಂದರು. ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿದ್ದರು. ಗುಲ್ಬರ್ಗಾದಲ್ಲಿ ಸೈಂಟ್ ಜೋಸೆಫ್ ಕಾನ್ವೆಂಟ್ ಶಿಕ್ಷಣ ಸಂಸ್ಥೆ ಬೆಳೆಯುವುದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು, ಅಲ್ಲಿ ಬಡವರು, ಹಿಂದುಳಿದವರು ಅವರಿಗೆ ಅತ್ಯಂತ ಗೌರವವನ್ನು ಕೊಡುತ್ತಿದ್ದರು. ಅವರು ಎಲ್ಲರಿಗೂ ಹೊಂದಿಕೊಂಡು, ಬಹಳಷ್ಟು ಉತ್ತಮವಾದಂತಹ ಕೆಲಸಗಳನ್ನು ಮಾಡಿದ್ದಾರೆ. ಶ್ರೀಯುತರು ನಮ್ಮೆಲ್ಲರಿಗೂ ಪ್ರೇರಣೆ ಕೂಡ ಆಗಿದ್ದರು. ಅವರು ಉಪ ಸಭಾಪತಿಯಾಗಿ, ಆಕಸ್ಮಿಕವಾಗಿ ಸಭಾಪತಿಯಾಗಿ ಈ ವಿಧಾನ ಪರಿಷತ್ತಿನ ಘನತೆ ಗೌರವವನ್ನು ಕಾಪಾಡುವಲ್ಲಿ ಯಶಸ್ವಿಯಾಗಿರುವಂತಹ ಮಹನೀಯರಾಗಿದ್ದಾರೆ ಎಂದು ಅವರ ಹೆಸರು ಹೇಳಿದರೆ, ತಪ್ಪಾಗಲಾರದು. ತಮ್ಮ ಹಾಗೆಯೇ ಇದ್ದಂತಹ ವಿಚಾರಗಳು, ಘನತೆ-ಗೌರವಗಳು ಕೂಡ ಶ್ರೀ ಡೇವಿಡ್ ಸಿಮೆಯೋನ್‌ರವರಲ್ಲಿಯೂ ಇತ್ತು. ಎ.ಐ.ಸಿ.ಸಿ., ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರು ವಿಶೇಷ ವಿಮಾನದಲ್ಲಿ ಬಂದು ನಮ್ಮ ಭಾಗದಲ್ಲಿ ನಡೆದ ಅವರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದರು. ಅವರು ಘನತೆ-ಗೌರವಗಳನ್ನು ಹೊಂದಿದ್ದ ಅವರು ಇನ್ನೂ ಇರಬೇಕಾಗಿತ್ತು. ಅವರು ಆಕಸ್ಮಿಕವಾಗಿ ನಿಧನರಾಗಿದ್ದಾರೆ. ನಮ್ಮ ಭಾಗದಲ್ಲಿ ಅವರು ಇನ್ನೂ ಇರಬೇಕಾಗಿತ್ತು. ಅವರು ಪ್ರಮಾಣಿಕ ರಾಜಕಾರಣಿ. ಅವರ ವಿಚಾರವನ್ನು ನೋಡಿದರೆ, ಶ್ರೀ ಡಿ. ದೇವರಾಜ ಅರಸ್‌ರವರು, ಕೊಲ್ಲೂರು ಮಲ್ಲಪ್ಪನವರಂತಹವರ ವಿಚಾರಧಾರೆಗಳನ್ನು ಅವರ ಮನಸ್ಸಿನಲ್ಲಿ ಇಟ್ಟುಕೊಂಡು ಅವರು ಕೆಲಸ ಮಾಡಿದರು.

ಡಾ॥ ಎನ್. ತಿಪ್ಪಣ್ಣನವರು ಅವರು ಕೂಡ ಶತಾಯುಷಿ. ನಮ್ಮ ಭೀಮಣ್ಣ ಖಂಡ್ರೆಯವರು, ಶಾಮನೂರು ಶಿವಶಂಕರಪ್ಪನವರು ಅಂತಹವರೊಡನೆ ಬೆರೆತು ಸಮಾಜ ಸೇವೆಗೆ ವೀರಶೈವ ಧರ್ಮವನ್ನು ಸ್ಥಾಪನೆ ಮಾಡಿ, ಸಮಾಜವನ್ನು ಒಗ್ಗಟ್ಟು ಮಾಡುವ ಸಂದರ್ಭದಲ್ಲಿ ಅತ್ಯಂತ ಪ್ರಮಾಣಿಕವಾದ ಕೆಲಸಗಳನ್ನು ಮಾಡಿದ್ದಾರೆ. ರಾಜಕೀಯದಲ್ಲಿ ಉತ್ತಮವಾದಂತಹ ಹೆಸರುಗಳನ್ನು ಗಳಿಸಿದ್ದಾರೆ. ಶ್ರೀಯುತರ ನಿಧನದಿಂದಾಗಿ ನಮಗೆಲ್ಲರಿಗೂ ದುಃಖವಾಗಿದೆ. ಡಾ॥ ಬಿ. ಸರೋಜಾದೇವಿಯವರು ಮತ್ತು ಇನ್ನಿತರ ಮಹನೀಯರು ನಿಧನರಾಗಿರುವುದರಿಂದ, ಅವರ ಕುಟುಂಬಗಳಿಗೆ ಈ ಒಂದು ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಮೃತರ ಗೌರವಾರ್ಥ ಅವರನ್ನು ನೆನೆಯುವಂತಹ ಅವಕಾಶವನ್ನು ಮಾನ್ಯ ಸಭಾಪತಿಯವರು ಮಾಡಿಕೊಟ್ಟಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ನಮಸ್ಕಾರಗಳು.

ಸಭಾಪತಿಯವರು:- ಈಗ ಮಂಡಿಸಿರುವ ಸಂತಾಪ ಸೂಚನೆಯ ಜೊತೆಗೆ ಆರ್.ಸಿ.ಬಿ. ವಿಜಯೋತ್ಸವದ ಕಾರ್ಯಕ್ರಮದಲ್ಲಿ ಕಾಲ್ತುಳಿತದಿಂದಾಗಿ ಮೃತಪಟ್ಟ ಹನ್ನೊಂದು ಜನರೆಲ್ಲರಿಗೂ ಈ ಸದನವು ಸಂತಾಪ ಸೂಚನೆಯನ್ನು ಸೂಚಿಸುತ್ತದೆ.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಶಾಸಕರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಸಹ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಸಭಾಪತಿಯವರು:- ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(602)11.8.2025/12.20/ಎಂ.ಎಂ-ಆರ್.ಎನ್

(ಮಧ್ಯಾಹ್ನ 12 ಗಂಟೆ 08 ನಿಮಿಷಕ್ಕೆ ಹತ್ತು ನಿಮಿಷಗಳ ಕಾಲಾವಧಿಗಾಗಿ ಮುಂದೂಡಿದ್ದ ಸದನವು ಪುನಃ ಮಧ್ಯಾಹ್ನ 12 ಗಂಟೆ 25 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದ್ದರು)

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಆಗಲೇ ನಾನು ಕೇಳಿದ್ದಕ್ಕೆ ತಾವು ಸಂತಾಪ ಸೂಚನೆಗಳು ಮುಗಿದ ಮೇಲೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ.

ಸಭಾಪತಿಯವರು:- ಒಂದು ನಿಮಿಷ, ವಿರೋಧ ಪಕ್ಷದ ನಾಯಕರಾದ ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರು ಒಂದು ನಿಲುವಳಿ ಸೂಚನೆ ಪ್ರಸ್ತಾವವನ್ನು (Adjournment Motion) ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

03. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

ವಿಷಯ:- ದಿನ್ನೂರು ಗ್ರಾಮದ ಹಿಂದುಳಿದ ಮತ್ತು ದಲಿತ ರೈತರ ಭೂಮಿಯನ್ನು ಅರಣ್ಯ ಭೂಮಿ ಎಂದು ಘೋಷಿಸಿರುವುದರಿಂದ ದಲಿತರು ಹಾಗೂ ತಳ ಸಮುದಾಯಕ್ಕೆ ಸೇರಿದ ರೈತರ ಜೀವನೋಪಾಯ ಅಪಾಯದಲ್ಲಿರುವ ಬಗ್ಗೆ.

\- - - -

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 59ನೇ ನಿಯಮದ ಮೇರೆಗೆ ಮುಂಬರುವ-ಪ್ರಸಕ್ತ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತಿದ್ದೇನೆ.

ಬೆಂಗಳೂರಿನ ಕಾಡುಗೋಡಿ ಪ್ಲಾಂಟೇಷನ್ ಪ್ರದೇಶದಲ್ಲಿರುವ ದಿನ್ನೂರು ಗ್ರಾಮದ ಹಿಂದುಳಿದ ಮತ್ತು ದಲಿತ ರೈತರು ಹಲವಾರು ದಶಕಗಳಿಂದ ವಾಸ ಮಾಡುತ್ತಿದ್ದ ಹಾಗೂ ಕೃಷಿ ನಡೆಸಿಕೊಂಡು ಬಂದ ಭೂಮಿಯನ್ನು ರಾಜ್ಯ ಸರ್ಕಾರವು ಏಕಾಏಕಿ ''ಅರಣ್ಯ ಭೂಮಿ'' ಎಂದು ಘೋಷಿಸಿ, ರೈತರನ್ನು ಒಕ್ಕಲೆಬ್ಬಿಸಿದೆ. ಈ ನಿರ್ಧಾರದಿಂದಾಗಿ ರೈತರು ತಮ್ಮ ಸ್ವಂತ ಹಕ್ಕಿನ ಭೂಮಿಯಿಂದ ಒತ್ತಾಯಪೂರ್ವಕವಾಗಿ ಹೊರಹಾಕಲ್ಪಟ್ಟಿದ್ದಾರೆ. ಭೂಮಿಯನ್ನು ಅರಣ್ಯ ಭೂಮಿ ಎಂದು ಗುರುತಿಸುವ ಮೊದಲು ರೈತರ ಅನುಮತಿ, ಪರಿಶೀಲನೆ ಹಾಗೂ ದಾಖಲಾತಿಗಳ ಪರಿಶೀಲನೆ ಮಾಡದೇ ನಿರ್ಧಾರ ಕೈಗೊಂಡಿರುವುದು ಕಾನೂನುಬಾಹಿರ. ಇದರಿಂದ ದಲಿತರು ಹಾಗೂ ತಳ ಸಮುದಾಯಕ್ಕೆ ಸೇರಿದ ರೈತರು ಜೀವನೋಪಾಯ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ. ಇದು ಸಂವಿಧಾನದಲ್ಲಿ ಭದ್ರಪಡಿಸಿದ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕೆ ವಿರುದ್ಧವಾಗಿದೆ ಮತ್ತು ಈ ವಿಷಯದಲ್ಲಿ ಅರಣ್ಯ ಇಲಾಖೆಯ ಡಿಸಿಎಫ್ ರವರು ತೆಗೆದುಕೊಂಡ ನಿರ್ಧಾರಗಳು ದಲಿತರ ಮೇಲೆ ದೌರ್ಜನ್ಯ ನಡೆಸಿದಂತಿದೆ. ಹಾಗೂ ಇದೇ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಇದು ಸರ್ಕಾರದ ದಲಿತ ವಿರೋಧಿ ನಡೆಯಾಗಿದೆ. ಆದಕಾರಣ ಸರ್ಕಾರದ ಈ ಕ್ರಮಗಳ ಕುರಿತು ಚರ್ಚಿಸಲು ದಿನಾಂಕ 11.8.2025ರಂದು ಅವಕಾಶ ನೀಡಬೇಕೆಂದು ಕೋರುತ್ತೇವೆ.

ಸಭಾಪತಿಯವರು:- ನಾನು ಇದನ್ನು ಮನಗಂಡಿದ್ದೇನೆ. ಪ್ರಶ್ನೋತ್ತರಗಳಾದ ನಂತರ ನಿಮಗೆ ತಿಳಿಸುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನಾನು ಒಂದೆರಡು ನಿಮಿಷ ಮಾತನಾಡುತ್ತೇನೆ. ಇದರ ವಿಚಾರ ಹೇಳುತ್ತೇನೆ. ನಾನು ಸಂಪೂರ್ಣವಾಗಿ ಪ್ರಸ್ತಾಪ ಮಾಡಿಲ್ಲ.

ಸಭಾಪತಿಯವರು:- ನೀವು ಕೇಳಿದ್ದೀರಿ;

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ತಾವು ಇದನ್ನೇನಾದರೂ ಬೇರೆ ನಿಯಮಕ್ಕೆ ಕನ್ವರ್ಟ್ ಮಾಡಿದರೆ ಚರ್ಚೆಯಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ತಾವು ಒಂದು ನಿಮಿಷ ಕೇಳಬೇಕು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಇದರಲ್ಲಿ 711 ಎಕರೆ ಪ್ರದೇಶ ಇದೆ. ಇದು ಗಂಭೀರವಾದ ಸಮಸ್ಯೆಯಾಗಿದೆ.

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ವಿಷಯದ ಗಂಭೀರತೆಯನ್ನು ತಿಳಿಸಿದ್ದೀರಿ. ಪದ್ಧತಿಯೇನೆಂದರೆ, ಪ್ರಶ್ನೋತ್ತರ ವೇಳೆಯ ನಂತರ ನಿಮಗೆ ಹೇಳುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇದು ನಿಲುವಳಿ ಸೂಚನೆಯಾಗಿಯೇ ಇರಬೇಕೆಂಬುದು ನನ್ನ ಮನವಿ.

ಸಭಾಪತಿಯವರು:– ಈಗ ಪ್ರಶ್ನೋತ್ತರಗಳು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇದು ಬೇರೆ ವಿಷಯ.

ಸಭಾಪತಿಯವರು:– ಒಂದು ಸಲ ಒಂದನ್ನೇ ಪ್ರಸ್ತಾಪ ಮಾಡಬೇಕು. ಬೇರೆಯದನ್ನು ಆಮೇಲೆ ಮಾತನಾಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನನ್ನ ಮೇಲೆ ಹಕ್ಕುಚ್ಯುತಿಯಾಗಿದೆ.

ಶ್ರೀ ಎಸ್.ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೇ, . . .

ಸಭಾಪತಿಯವರು:– ಬೇರೆ ವಿಚಾರವನ್ನು ಆಮೇಲೆ ಮಾತನಾಡಿ. ಎಲ್ಲರೂ ಎದ್ದುನಿಂತು ಈ ರೀತಿ ಮಾತನಾಡಿದರೆ ಏನು ಮಾಡೋಣ?

04. ಅಧಿವೇಶನ ಪ್ರಾರಂಭದ ದಿನ ಸದನದಲ್ಲಿ ವಂದೇ ಮಾತರಂ ಗೀತೆಯ ನಂತರ ನಾಡಗೀತೆಯನ್ನು ಸಹ ನುಡಿಸಬೇಕೆನ್ನುವ ಕುರಿತು

– – – –

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಾನು ಕಳೆದ ಎರಡು ಅಧಿವೇಶನಗಳ ಹಿಂದೆಯೇ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಾವು ಕೂಡ ಬಿ.ಎ.ಸಿ. ಯಲ್ಲಿದ್ದಿರಿ. ಸದನ ಪ್ರಾರಂಭವಾಗುವ ದಿನ ನಮ್ಮ 'ನಾಡಗೀತೆ'ಯನ್ನು ಸಹ ನುಡಿಸಬೇಕೆಂದು ಕೋರಿ ತಮಗೆ ಅರ್ಜಿ ಕೊಟ್ಟಿದ್ದೆವು. ಅದರ ಬಗ್ಗೆ ಚರ್ಚೆ ಕೂಡ ಆಗಿತ್ತು.

ಸಭಾಪತಿಯವರು:– ಇದನ್ನು ಬಿ.ಎ.ಸಿ. ಮೀಟಿಂಗ್‌ನಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡೋಣ.

ಶ್ರೀ ಎಸ್.ಎಲ್. ಭೋಜೇಗೌಡ:– ತಾವು ಮುಂದಿನ ಅಧಿವೇಶನದಲ್ಲಿ ಇದನ್ನು ಕಾರ್ಯಗತ ಮಾಡುತ್ತೇವೆಂದು ಕೂಡ ಹೇಳಿದ್ದಿರಿ. ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಎಲ್ಲಾ ಸಭೆ ಸಮಾರಂಭಗಳಲ್ಲಿ, ಶಾಲೆಗಳಲ್ಲಿ ನಾಡಗೀತೆಯನ್ನು ಹಾಡಿಸುವುದು; ಇದು ಸಂವಿಧಾನದ ಆಶಯ ಇರುವಂತಹ ನಾಡಗೀತೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಒಂದು ನಿಮಿಷ ಕೇಳಿ. ಇದನ್ನು ಬಿ.ಎ.ಸಿ. ಮೀಟಿಂಗ್‌ನಲ್ಲಿಟ್ಟು ತೀರ್ಮಾನ ಮಾಡಿ ಅಂತಿಮಗೊಳಿಸುತ್ತೇವೆ.

ಶ್ರೀ ಎಸ್.ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಬಿ.ಎ.ಸಿ. ಮೀಟಿಂಗ್ ಆಯಿತು, ಮುಂದಿನ ಅಧಿವೇಶನದಲ್ಲಿ ಮಾಡುತ್ತೇವೆಂದು ಹೇಳಿದ್ದಿರಿ. ಈಗಾಗಲೇ ಮೂರು ಅಧಿವೇಶನಗಳಾದವು. ದಯಮಾಡಿ ನಿಮಗೆ ಅಧಿಕಾರವುಂಟು. ತಾವು ಇದನ್ನು ಗಂಭೀರವಾಗಿ ತೆಗೆದುಕೊಂಡು ಅಧಿವೇಶನದ ಮೊದಲ ದಿನ ಸಭೆ ಪ್ರಾರಂಭವಾಗುವ ಮುಂಚೆ 'ವಂದೇ ಮಾತರಂ' ಗೀತೆಯನ್ನು ನುಡಿಸುವಂತೆ ನಾಡಗೀತೆಯನ್ನು ಸಹ ನುಡಿಸುವುದನ್ನು ಪ್ರಾರಂಭ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಎಲ್ಲರ ಅಭಿಪ್ರಾಯವೂ ಒಂದೇ ಆಗಿದೆಯೆಂದು ಭಾವಿಸುತ್ತೇನೆ.

ಸಭಾಪತಿಯವರು:– ಆಯಿತು. ಆ ವಿಚಾರದ ಬಗ್ಗೆ ಇದೇ Session ನಲ್ಲಿ ತೀರ್ಮಾನ ಮಾಡೋಣ.

(ಮುಂದು)

(603) 11.08.2025 (12.30) ಹೆಚ್‌ವಿ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಸಭಾಪತಿಯವರು:– ಈಗ ಪ್ರಶ್ನೋತ್ತರ ಅವಧಿ. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು ಕೆಳಮನೆಗೆ ಹೋಗಬೇಕಾಗಿರುವುದರಿಂದ ಅವರಿಗೆ ಸಂಬಂಧಪಟ್ಟ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:85 ನ್ನು ಮೊದಲಿಗೆ ತೆಗೆದುಕೊಳ್ಳಲಾಗುತ್ತಿದೆ.

05. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ:85

ಮಾಹೆಯಾನ ಪಡಿತರ, ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುತ್ತಿರುವ ಅಕ್ರಮ ಮತ್ತು ಬಿಪಿಎಲ್ ಕಾರ್ಡ್‌ಗಳ ಬಗ್ಗೆ.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ e-PoS ತಂತ್ರಾಂಶದಲ್ಲಿ ದೋಷ ಇರುವ ಪ್ರಯುಕ್ತ ರಾಜ್ಯದ ಸುಮಾರು 1.5 ಕೋಟಿ ಪಡಿತರ ಚೀಟಿ ಹೊಂದಿದವರು ಮಾಹೆಯಾನ ಪಡಿತರ ಪಡೆಯಲು ಕಷ್ಟವಾಗುತ್ತಿರುವುದು ನಿಜವೇ; ಇದ್ದಲ್ಲಿ, ಪದೇ ಪದೇ ಈ ತಂತ್ರಾಂಶದಲ್ಲಿ ದೋಷ ಕಂಡು ಬರುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ e-PoS ತಂತ್ರಾಂಶದಲ್ಲಿ ಯಾವುದೇ ದೋಷ ಇರುವುದಿಲ್ಲ ಹಾಗೂ ಪ್ರತಿ ಮಾಹೆ ಆಹಾರ ಧಾನ್ಯಗಳನ್ನು ಪಡಿತರ ಚೀಟಿದಾರರಿಗೆ ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲದೆ ಪಡಿತರವನ್ನು ವಿತರಣೆ ಮಾಡಲಾಗುತ್ತಿದೆ.
ಆ	ರಾಜ್ಯದಲ್ಲಿರುವ ಹಲವು ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ರಮವಾಗಿ ಸರಕುಗಳ ಮಾರ್ಗ ಬದಲಾವಣೆ, ಕಪ್ಪು ಮಾರುಕಟ್ಟೆಯಲ್ಲಿ ಸರಕುಗಳ ಮಾರಾಟ ಇನ್ನಿತರೇ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ರಮವಾಗಿ ಸರಕುಗಳ ಮಾರ್ಗ ಬದಲಾವಣೆ ಕುರಿತು ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಮುಂದುವೆರದು ಕಪ್ಪು ಮಾರುಕಟ್ಟೆಯಲ್ಲಿ ಸರಕುಗಳ ಮಾರಾಟ ಇನ್ನಿತರೇ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಪ್ರಕರಣಗಳು ದಾಖಲಾಗಿರುತ್ತವೆ.
ಇ	ಇದ್ದಲ್ಲಿ ಈ ಕುರಿತು ಕೈಗೊಂಡಿರುವ ಕ್ರಮಗಳೇನು;	ಕಪ್ಪು ಮಾರುಕಟ್ಟೆಯಲ್ಲಿ ಸರಕುಗಳ ಮಾರಾಟ ಇನ್ನಿತರೇ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಅಗತ್ಯ ವಸ್ತುಗಳ ಕಾಯ್ದೆ-1955 ರಡಿ 2024-25 ಮತ್ತು 2025-26 ನೇ ಸಾಲಿನಲ್ಲಿ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅನುಬಂಧ-1 ಮತ್ತು 02 ರಲ್ಲಿ ಒದಗಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ	ನೀತಿ ಆಯೋಗದ ಪ್ರಕಾರ ರಾಜ್ಯದಲ್ಲಿರುವ ಬಡವರ ಸಂಖ್ಯೆ ಎಷ್ಟು; ಕರ್ನಾಟಕದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಎಷ್ಟು; ಯಾವ ಕಾರಣಕ್ಕಾಗಿ ನೀತಿ ಆಯೋಗದ ಅಂಕಿ ಅಂಶಗಳು ಮತ್ತು ರಾಜ್ಯ ಬಿ.ಪಿ.ಎಲ್. ಜನಸಂಖ್ಯೆಯು ಹೊಂದಾಣಿಕೆಯಾಗದಿರಲು ಕಾರಣವೇನು; ಅನರ್ಹ ಬಿ.ಪಿ.ಎಲ್ ಕಾರ್ಡ್‌ಗಳು ಎಷ್ಟು ಇವೆ; ಅನರ್ಹ ಬಿ.ಪಿ.ಎಲ್ ಕಾರ್ಡ್‌ಗಳನ್ನು ರದ್ದುಪಡಿಸಲು ತೆಗೆದುಕೊಂಡ ಕ್ರಮವೇನು; ಅನರ್ಹ ಕಾರ್ಡ್‌ಗಳು ಇದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಳ್ಳದಿರಲು ಕಾರಣವೇನು?	ನೀತಿ ಆಯೋಗದ ವರದಿ ಪ್ರಕಾರ ಕರ್ನಾಟಕದಲ್ಲಿ 2021ನೇ ಸಾಲಿಗೆ ಅನ್ವಯವಾಗುವಂತೆ ಬಹು ಆಯಾಮದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಶೇ 7.58 ಇರುವುದಾಗಿ ತಿಳಿಸಿರುತ್ತದೆ. ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಆದ್ಯತಾ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿರುತ್ತದೆ. ವಿವರ / ಪಡಿತರ ಚೀಟಿ ಸಂಖ್ಯೆ / ಪಡಿತರ ಚೀಟಿ ಫಲಾನುಭವಿಗಳ ಸಂಖ್ಯೆ ಅಂತ್ಯೋದಯ ಅನ್ನ ಪಡಿತರ ಚೀಟಿ / 10,76,942 / 43,96,248 ಆದ್ಯತಾ ಪಡಿತರ ಚೀಟಿ / 1,17,31,508 / 4,09,75,963 ಆದ್ಯತೇತರ ಪಡಿತರ ಚೀಟಿ / 25,67,419 / 87,41,704 ಒಟ್ಟು / 1,53,65,869 / 5,41,13,915 ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017 ರಲ್ಲಿ ಈ ಕೆಳಕಂಡಂತೆ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ. ➢ ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. ➢ ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		➢ ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. ➢ ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು. ಮೇಲ್ಕಂಡ ಮಾನದಂಡಗಳ ಆಧಾರದ ಮೇಲೆ ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಯನ್ನು ವಿತರಿಸಲು ಕ್ರಮವಹಿಸಲಾಗಿರುತ್ತದೆ. ಆದರೆ ನೀತಿ ಆಯೋಗದ ಅಂಕಿ ಅಂಶಗಳು ರಾಜ್ಯ ಬಿಪಿಎಲ್ ಜನಸಂಖ್ಯೆಯು ಹೊಂದಾಣಿಕೆಯಾಗದಿರಲು ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿ ಪಡೆಯಲು ರೂಪಿಸಿರುವ ಮಾನದಂಡಗಳು ಹಾಗೂ ನೀತಿ ಆಯೋಗದವರು ರೂಪಿಸಿರುವ ಮಾನದಂಡಗಳು ಬೇರೆಯಾಗಿರುತ್ತದೆ. ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ನೀಡಲು ಹೊರಗಿಡುವ ಮಾನದಂಡಗಳನ್ನು ರೂಪಿಸಲಾಗಿರುತ್ತದೆ. ಆದರೆ ನೀತಿ ಆಯೋಗದಿಂದ ಬಹು ಆಯಾಮಿನ ಬಡತನ ರೇಖೆಯಲ್ಲಿರುವ ಜನರನ್ನು ಗುರುತಿಸಲು ಮಾನದಂಡಗಳನ್ನು ರೂಪಿಸಲಾಗಿರುತ್ತದೆ. ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯುತ್ತಿದ್ದು 2024 ರ ಜುಲೈ ಮಾಹೆಯಲ್ಲಿ ಆದ್ಯತಾ ಪಡಿತರ ಚೀಟಿ ಪಡೆಯಲು ನಿಗದಿಪಡಿಸಿರುವ ಮಾನದಂಡಗಳ ವಿರುದ್ಧವಾಗಿ ಪಡಿತರ ಚೀಟಿ ಪಡೆದ ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು, 1.20 ಲಕ್ಷಕ್ಕಿಂತ ಹೆಚ್ಚು ಇರುವ ಕುಟುಂಬಗಳು ಹಾಗೂ 6 ತಿಂಗಳಿಗಿಂತ ಹೆಚ್ಚು ಅವಧಿಗೆ ಪಡಿತರ ಪಡೆಯದೇ ಇರುವ ಒಟ್ಟು 3,62,254ಪಡಿತರ ಚೀಟಿದಾರರ ವಿವರಗಳನ್ನು ಕುಟುಂಬ ತಂತ್ರಾಂಶದಿಂದ ಪಡೆದು ಸದರಿ ಪಡಿತರ ಚೀಟಿಗಳನ್ನು ರದ್ದು/ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ: ಆನಾಸ 337 ಡಿಆರ್‌ಎ 2024, ದಿನಾಂಕ:22-11-2024ರ ಪತ್ರದಲ್ಲಿನ ನಿರ್ದೇಶನದನ್ವಯ ಐ.ಟಿ. ತೆರಿಗೆ ಪಾವತಿದಾರರು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರು ಸ್ಥಾಪಿಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳಲ್ಲಿ ಈ ಕೆಳಕಂಡಂತೆ ಶಂಕಾಸ್ಪದ (Suspect RC) ಪಡಿತರ ಚೀಟಿಗಳನ್ನು ಗುರುತಿಸಲಾಗಿರುತ್ತದೆ.

ಕ್ರ. ಸಂ	ವಿವರ	ಪಡಿತರ ಚೀಟಿಗಳ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
1	ಮೃತ ಸದಸ್ಯರು (Deceased Members)	1,446	1,452
2	ಅಂತರ ರಾಜ್ಯ ಪಡಿತರ ಚೀಟಿದಾರರ ಸಂಖ್ಯೆ (Duplicate RC Inter State)	57,864	73,859
3	ಅಂತರ್‌ರಾಜ್ಯ ಪಡಿತರ ಚೀಟಿದಾರರ ಸಂಖ್ಯೆ (Duplicate RC Intra State)	365	430
4	ಜಿ.ಎಸ್.ಟಿ ಒಟ್ಟು 25 ಲಕ್ಷ ವಹಿವಾಟು ಮೀರಿದವರು (GSTN Gross Turnover 25 Lacs)	2,684	2,695
5	1.20 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವವರು (Income Group Annual Income 1,20,000)	513,613	580,415
6	ಕಂಪನಿಗಳಲ್ಲಿ ಡೈರೆಕ್ಟರ್ ಆಗಿರುವವರು (MCA Individual as Director)	19,690	21,402
7	ಪಿಎಂ ಕಿಸಾನ್ ಲ್ಯಾಂಡ್ ಹೊಲ್ಡಿಂಗ್ 7.5 ಎಕರೆ (PM KISAN Land Holding 7.5 Acre)	33,456	34,710
8	06 ತಿಂಗಳಿಗಿಂತ ಹೆಚ್ಚಿನ ಅವಧಿಗೆ ಪಡಿತರ ಪಡೆಯದೇ ಇರುವವರು (Ration Not Collected for more than 6 months)	19,893	58,247
9	100 ವರ್ಷ ವಯೋಮಿತಿ ದಾಟಿರುವ ಪಡಿತರದಾರರು (RC Member Above 100 Years)	2,040	2,050
10	18 ವರ್ಷ ವಯಸ್ಸಿಗಿಂತ ಕೆಳಗಿರುವ ಏಕ ಸದಸ್ಯ ಪಡಿತರದಾರರು (Single Member Below 18 Years)	731	793
11	ಸ್ವಂತ ಉಪಯೋಗಕ್ಕಾಗಿ ಸ್ವಂತ ವಾಹನ ಹೊಂದಿರುವವರು (Vehicle Ownership value Owning)	119	153

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		12	ಇ-ಕೆವೈಸಿ ಮಾಡಿಸದೇ ಇರುವವರು (E-KYC pending as on 05.08.2025)	616,196	783,706
			ಒಟ್ಟು	12,68,097	15,59,912

ಸದರಿ ಪಡಿತರ ಚೀಟಿ/ ಫಲಾನುಭವಿಗಳನ್ನು ಜಿಲ್ಲಾ/ ತಾಲ್ಲೂಕು ಮಟ್ಟದಲ್ಲಿ ಆಹಾರ ನಿರೀಕ್ಷಕರ ಹಂತದಲ್ಲಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಇ-ಆನಾಸ 196 ಡಿಆರ್‌ಎ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-01

ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ವಶಪಡಿಸಿಕೊಂಡ ಅಗತ್ಯ ವಸ್ತುಗಳ ವಿವರ (ದಿ:01.04.2024 ರಿಂದ 31.03.2025ರ ವರೆಗೆ)


ದಾಳಿಮಾಡಲಾದ ಪ್ರಕರಣಗಳ ಸಂಖ್ಯೆ	ದಾಖಲಾದ ಎಫ್.ಐ.ಆರ್ ಪ್ರಕರಣಗಳ ಸಂಖ್ಯೆ	ಬಂಧನಕ್ಕೆ ಒಳಗಾದ ಆರೋಪಿಗಳ ಸಂಖ್ಯೆ	ವಶಪಡಿಸಿಕೊಂಡ ಆಹಾರ ಧಾನ್ಯಗಳ ವಿವರ													
			ಅಕ್ಕಿ		ಗೋಧಿ		ಸಕ್ಕರೆ		ರಾಗಿ		ಜೋಳ		ಬೆಳಕಾಳುಗಳು		ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ	
			ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)
508	402	505	12035.657	39755912	340.53	1201305	0	0	93.01	354511	511.95	1730595	221	1768000	13202.15	44810323

ವಶಪಡಿಸಿಕೊಂಡ ಪೆಟ್ರೋಲ್ / ಡಿಸೇಲ್/ಎಲ್ ಪಿ ಜಿ ವಿವರ									
ಪೆಟ್ರೋಲ್		ಡೀಸಲ್		ಎಲ್.ಪಿ.ಜಿ.		ಇತರೆ (ಎಲ್‌ಪಿಜಿ ರಿಫಿಲಿಂಗ್ ವಸ್ತುಗಳು)		ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ	
ಪ್ರಮಾಣ (ಲೀಟರ್)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಲೀಟರ್)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕೆಜಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಸಂಖ್ಯೆ)	ಮೌಲ್ಯ (ರೂಗಳಲ್ಲಿ)	ಪ್ರಮಾಣ	ಮೌಲ್ಯ (ರೂಗಳಲ್ಲಿ)
0	0	3282	297490	6183	9174017	42	39884	9507	9461391

ವಶಪಡಿಸಿಕೊಂಡ ವಾಹನಗಳ ವಿವರ				ಒಟ್ಟಾರೆ ಮೌಲ್ಯ
ವಾಹನ		ಒಟ್ಟು		
ಪ್ರಮಾಣ (ಸಂಖ್ಯೆ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಸಂಖ್ಯೆ)	ಮೌಲ್ಯ (ರೂಗಳಲ್ಲಿ)	
204	52938360	204	52938360	107210074

ಉಪ ನಿರ್ದೇಶಕರು (ನಾಸ&ಗ್ರಾಪ್ರೃ),
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"



ಅನುಬಂಧ-02

ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ವಶಪಡಿಸಿಕೊಂಡ ಅಗತ್ಯ ವಸ್ತುಗಳ ವಿವರ (ದಿ:01.04.2025 ರಿಂದ 30.06.2025ರ ವರೆಗೆ)

ದಾಳಿಮಾಡಲಾದ ಪ್ರಕರಣಗಳ ಸಂಖ್ಯೆ	ದಾಖಲಾದ ಎಫ್.ಐ.ಆರ್ ಪ್ರಕರಣಗಳ ಸಂಖ್ಯೆ	ಬಂಧನಕ್ಕೆ ಒಳಗಾದ ಆರೋಪಿಗಳ ಸಂಖ್ಯೆ	ವಶಪಡಿಸಿಕೊಂಡ ಆಹಾರ ಧಾನ್ಯಗಳ ವಿವರ													
			ಅಕ್ಕಿ		ಗೋಧಿ		ಸಕ್ಕರೆ		ರಾಗಿ		ಜೋಳ		ಬೆಳಕಾಳುಗಳು		ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ	
			ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕ್ವಿಂಟಾಲ್ ಗಳಲ್ಲಿ)	ಮೌಲ್ಯ (ರೂಗಳಲ್ಲಿ)
247	188	213	7924.27	17476396	200	720000	0	0	38.48	161464	0	0	0	0	8162.75	18357860

ವಶಪಡಿಸಿಕೊಂಡ ಪೆಟ್ರೋಲ್ / ಡಿಸೇಲ್/ಎಲ್ ಪಿ ಜಿ ಅಗತ್ಯ ವಸ್ತುಗಳ ವಿವರ									
ಪೆಟ್ರೋಲ್		ಡೀಸಲ್		ಎಲ್.ಪಿ.ಜಿ.		ಇತರ(ಎಲ್.ಪಿಜಿ ರಿಫಿಲಿಂಗ್ ವಸ್ತುಗಳು)		ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ	
ಪ್ರಮಾಣ (ಲೀಟರ್)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಲೀಟರ್)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಕೆಜಿ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಸಂಖ್ಯೆ)	ಮೌಲ್ಯ (ರೂಗಳಲ್ಲಿ)	ಪ್ರಮಾಣ	ಮೌಲ್ಯ (ರೂಗಳಲ್ಲಿ)
0	0	0	0	1648	2459871	219.25	226426	1867.25	2686297

ವಶಪಡಿಸಿಕೊಂಡ ವಾಹನಗಳ ವಿವರ				
ವಾಹನ		ಒಟ್ಟು		ಒಟ್ಟಾರೆ ಮೌಲ್ಯ
ಪ್ರಮಾಣ (ಸಂಖ್ಯೆ)	ಮೌಲ್ಯ (ರೂಗಳಲ್ಲಿ)	ಪ್ರಮಾಣ (ಸಂಖ್ಯೆ)	ಮೌಲ್ಯ (ರೂಗಳಲ್ಲಿ)	
109	28925300	109	28925300	47276978

ಉಪ ನಿರ್ದೇಶಕರು (ನಾಸ&ಗ್ರಾಪ್ರ),
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.

ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದಾರೆ. ಉತ್ತರದಲ್ಲಿ ಬಹಳಷ್ಟು ವಿಚಾರಗಳು ಒಪ್ಪುವಂತಹ ವಿಚಾರಗಳಾಗಿದ್ದರೂ ಸಹ ಇನ್ನೂ ಸ್ವಲ್ಪ ವಿವರವಾಗಿ ಉತ್ತರವನ್ನು ಪಡೆಯುವುದಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ದೇಶದಲ್ಲಿ ಬಡವರಿಗೆ ಅಕ್ಕಿ ಮತ್ತು ಆಹಾರ ಧಾನ್ಯಗಳನ್ನು ಒದಗಿಸಿಕೊಡಬೇಕೆನ್ನುವ ಸದುದ್ದೇಶದಿಂದ ಆಹಾರ ಸುರಕ್ಷತಾ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅದಕ್ಕೆ ಅನುಗುಣವಾಗಿ ಬಡವರಿಗೆ ಪಡಿತರ ಚೀಟಿಯ ಮೂಲಕ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. 2016ನೇ ಇಸವಿಗೂ ಮೊದಲು e-PoS ತಂತ್ರಾಂಶವನ್ನು ಬಳಕೆ ಮಾಡಿಕೊಳ್ಳಲಾಗುತ್ತಿತ್ತು. ಈ ತಂತ್ರಾಂಶವನ್ನು ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಸಮಸ್ಯೆಗಳುಂಟಾಗಿದೆ ಎನ್ನುವುದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. "ಬೆಂಗಳೂರು ಮಿರರ್" ಪತ್ರಿಕೆಯಲ್ಲಿ ಸಹ ದೊಡ್ಡ ಫೋಟೋಗಳನ್ನು ಪ್ರಕಟ ಮಾಡಿ, ತಂತ್ರಾಂಶದಲ್ಲಿ ಸಮಸ್ಯೆಯುಂಟಾಗಿರುವುದು ನಿಜ, ಸರ್ವರ್ ಡೌನ್ ಆಗಿ, ಜನರು ಕ್ಯೂನಲ್ಲಿ ನಿಂತಿರುವ ವಿಚಾರವನ್ನು ಪ್ರಕಟಿಸಿದ್ದರು. ನಾನು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಮಾನ್ಯ ಮಂತ್ರಿಗಳು "ಈಗ ಸಧ್ಯಕ್ಕೆ ಯಾವುದೇ ಸಮಸ್ಯೆಗಳಿಲ್ಲ" ಎನ್ನುವ ಉತ್ತರವನ್ನು ನೀಡಿದ್ದಾರೆ. ಪಡಿತರ ಚೀಟಿ ಎನ್ನುವುದು ಬಹಳ ಮುಖ್ಯವಾಗಿರುವ ವಿಚಾರವಾಗಿದೆ. ತಂತ್ರಾಂಶವನ್ನು ಬದಲಾವಣೆ ಮಾಡಿ, ಹೊಸ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂತ್ರಾಂಶವನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಬಹಳ ದೊಡ್ಡ ಸಮಸ್ಯೆಯುಂಟಾಗಿರುವುದು ಸತ್ಯ ಸಂಗತಿಯಾಗಿದೆ. About 1.5 crore people are in trouble because of server problems in the State of Karnataka. ನಾನು ಮುಂದುವರೆದು ಎರಡನೆಯ ಪ್ರಶ್ನೆಯನ್ನು ಸಹ ಕೇಳಿಬಿಡುತ್ತೇನೆ. ಅನಂತರ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಲಿ.

ಸಭಾಪತಿಯವರು:– ಮಾನ್ಯ ಎಂ.ನಾಗರಾಜುರವರೇ, ಭಾಷಣ ಮಾಡುವುದು ಬೇಡ, ನೇರವಾಗಿ ಪ್ರಶ್ನೆಗಳನ್ನು ಕೇಳಿ.

ಶ್ರೀ ಎಂ.ನಾಗರಾಜು:– ಸನ್ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತಿಲ್ಲ. ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಎಲ್ಲರಿಗೂ ಬಹಿರಂಗವಾಗಿ ತಿಳಿದಿರುವ ವಿಚಾರವೇನೆಂದರೆ. ಬಹಳಷ್ಟು ನ್ಯಾಯ ಬೆಲೆ ಅಂಗಡಿಗಳಲ್ಲಿ ಇವತ್ತಿಗೂ ಅವ್ಯವಹಾರಗಳು ನಡೆಯುತ್ತಿರುವುದು ನಿಜ ಸಂಗತಿಯಾಗಿದೆ. ಬಡವರ ಹೊಟ್ಟೆಯ ಮೇಲೆ ಹೊಡೆದು, ಕಡಿಮೆ ಪಡಿತರವನ್ನು ನೀಡಿ, ಅದನ್ನು ಹೋಟೆಲ್‌ಗಳಿಗೆ ಮಾರಾಟ ಮಾಡುತ್ತಿರುವುದನ್ನು ಕಣ್ಣಾರೆ ನೋಡಿದ್ದೇನೆ. ಇದು ರಿಪೋರ್ಟ್ ಆಗಿರಲಿ ಅಥವಾ ಆಗದೇ ಇರಲಿ ಇದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಇದಕ್ಕೆ ಕಡಿವಾಣ ಹಾಕಲಾಗಿದೆಯೇ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಬಹಳ ಮುಖ್ಯವಾಗಿರುವ ಪ್ರಶ್ನೆಯನ್ನು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತಿದ್ದೇನೆ. ಕೇಂದ್ರ ಸರ್ಕಾರದ ನೀತಿ ಆಯೋಗ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಶೇಕಡಾ 7.58 ಎಂದು ವರದಿ ಮಾಡಿದೆ. ಆದರೆ, ಶೇಕಡಾ ೨ರಷ್ಟು ನಕಲಿ ಪಡಿತರ ಚೀಟಿಗಳು ಕರ್ನಾಟಕ ರಾಜ್ಯದಲ್ಲಿವೆ ಎಂದು; ಅದನ್ನು ಸರಿಪಡಿಸಲು ಮಾನ್ಯ ಸಚಿವರು ಮುಂದಾದಾಗ, ಈ ರಾಜ್ಯದಲ್ಲಿ ದೊಡ್ಡ ಗಲಾಟೆಯೇ ಆಗಿರುತ್ತದೆ. ಅನಂತರ ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದನ್ನು ಮಾನ್ಯ ಸಚಿವರು ಸ್ಥಗಿತಗೊಳಿಸಿರುತ್ತಾರೆ.

ಇಲ್ಲಿ ಕೇಂದ್ರ ಸರ್ಕಾರದ ಆಯೋಗ ಮತ್ತು ರಾಜ್ಯ ಸರ್ಕಾರ ನೀಡಿರುವ ಅಂಕಿಅಂಶಗಳ ನಡುವಿನ ವ್ಯತ್ಯಾಸವನ್ನು ನೋಡಿದಾಗ, ನಮ್ಮ ರಾಜ್ಯದ ಬಡವರ .....

ಸಭಾಪತಿಯವರು:– ಮಾನ್ಯ ಎಂ.ನಾಗರಾಜುರವರೇ, ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳೇ ಉತ್ತರವನ್ನು ಹೇಳಿ.

ಶ್ರೀ ಎಂ.ನಾಗರಾಜು:– ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾಗಿರುವ ವಿಚಾರವಾಗಿರುವುದರಿಂದ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಒಂದೇ ಒಂದು ಸೆಕೆಂಡ್ ಅವಕಾಶವನ್ನು ನೀಡಬೇಕೆಂದು ಪೀಠಕ್ಕೆ ಮನವಿ ಮಾಡುತ್ತಿದ್ದೇನೆ.

ಸಭಾಪತಿಯವರು:– ಭಾಷಣ ಮಾಡಬಾರದೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ನಾಗರಾಜು:– ಸನ್ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತಿಲ್ಲ. ಇದು ರಾಜ್ಯದ ಬಡವರಿಗೆ ಸಂಬಂಧಪಟ್ಟ ವಿಚಾರವಾಗಿದೆ ಅದಕ್ಕಾಗಿ ನನ್ನ ಮಾತುಗಳನ್ನು ಮುಗಿಸಲು ಒಂದು ಸೆಕೆಂಡ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಕಾಶವನ್ನು ತಮ್ಮಲ್ಲಿ ಕೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಶೇಕಡಾ ೪೦ರಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆಯೆಂದು ರಾಜ್ಯ ಸರ್ಕಾರ ಹೇಳುತ್ತಿದೆ ಆದರೆ, ಕೇಂದ್ರ ಸರ್ಕಾರದ ಆಯೋಗ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಶೇಕಡಾ 7.58 ಎಂದು ಹೇಳಿದೆ ಇದರ ಬಗ್ಗೆ ಮಾನ್ಯ ಸಚಿವರು ವಿಸ್ತೃತವಾಗಿರುವ ಉತ್ತರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಹೆಚ್.ಮುನಿಯಪ್ಪ(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜುರವರು 3-4 ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ತಾಂತ್ರಿಕ ದೋಷ ಮೊದಲು ಇತ್ತು ಎನ್ನುವುದು ನಿಜ. ಅದನ್ನು ಸಂಪೂರ್ಣವಾಗಿ ಸರಿಪಡಿಸಲಾಗಿದೆ. ಈಗ PDS (Public Distribution System) ತಂತ್ರಾಂಶದಲ್ಲಿ ಯಾವುದೇ ರೀತಿಯ ತಾಂತ್ರಿಕ ದೋಷ ಇರುವುದಿಲ್ಲ. ಎರಡನೆಯದಾಗಿ, ಅಕ್ಕಿಯನ್ನು ಕಪ್ಪು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎನ್ನುವ ವಿಚಾರವನ್ನು ಮಾನ್ಯ ಸಚಿವರು ಪ್ರಸ್ತಾಪ ಮಾಡಿದ್ದಾರೆ. ಸ್ವಲ್ಪ ಮಟ್ಟಿಗೆ ಅಕ್ಕಿಯನ್ನು ಕಪ್ಪು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗಿದೆ, ಈ ನಿಟ್ಟಿನಲ್ಲಿ ಈಗಾಗಲೇ ಕ್ರಮ ವಹಿಸಲಾಗಿದೆ. 2023-24ನೇ ಸಾಲಿನಲ್ಲಿ ಸುಮಾರು 409 ಪ್ರಕರಣಗಳನ್ನು ದಾಖಲು ಮಾಡಿ, 20 ಕೋಟಿ ರೂಪಾಯಿಗಳಷ್ಟು ದಂಡವನ್ನು ವಿಧಿಸಲಾಗಿದೆ. 2024-25ನೇ ಸಾಲಿನಲ್ಲಿ 508 ಪ್ರಕರಣಗಳನ್ನು ದಾಖಲು ಮಾಡಿ, ಸುಮಾರು 10 ಕೋಟಿ ರೂಪಾಯಿಗಳಷ್ಟು ದಂಡವನ್ನು ವಸೂಲಿ ಮಾಡಲಾಗಿದೆ. ಈ ವರ್ಷದಲ್ಲಿ 247 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 4 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ದಂಡವನ್ನು ಸಂಗ್ರಹ ಮಾಡಲಾಗಿದೆ.

ಸಭಾಪತಿಯವರು:- ಮಾನ್ಯ ಸಚಿವರೇ, ಲಿಖಿತ ರೂಪದ ಉತ್ತರವನ್ನು ಓದುವುದು ಬೇಡ. ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಹೇಳಿ; ಮುಂದೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದನ್ನು ಹೇಳಿ.

ಶ್ರೀ ಕೆ.ಹೆಚ್.ಮುನಿಯಪ್ಪ:- ಸನ್ಮಾನ್ಯ ಸಭಾಪತಿಯವರೇ, ಬಡತನ ರೇಖೆಗಿಂತ ಕೆಳಗೆ ಇರುವವರ ಪಟ್ಟಿಯಲ್ಲಿ ಎ,ಪಿ.ಎಲ್., ವ್ಯಾಪ್ತಿಗೆ ಬರುವಂತಹವರು ಸಹ ಇದ್ದಾರೆ. ಇವರುಗಳನ್ನು ಬಿ.ಪಿ.ಎಲ್.,ನಿಂದ ಎ.ಪಿ.ಎಲ್.,ಗೆ ವರ್ಗಾವಣೆ ಮಾಡಲಾಗುತ್ತದೆಯೇ ಹೊರತು ಪಟ್ಟಿಯಿಂದ ತೆಗೆಯುವುದಿಲ್ಲ. ಈ ನಿಟ್ಟಿನಲ್ಲಿ ನಾನು ಒಂದು ಪ್ರಯತ್ನ ಮಾಡಿದ್ದೆ; ಆ ಪ್ರಯತ್ನದಲ್ಲಿ ಸ್ವಲ್ಪ ಗಡಿಬಿಡಿ ಆಗಿತ್ತು. ಈಗ ಪುನಃ ಆ ಪ್ರಯತ್ನವನ್ನು ಮುಂದುವರಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಬಿ.ಪಿ.ಎಲ್ ಕಾರ್ಡುಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ಸುಮಾರು 1 ಕೋಟಿ 28 ಲಕ್ಷ ಕಾರ್ಡ್‌ಗಳು ಅಂದರೆ, ಸುಮಾರು 4 ಕೋಟಿ 50 ಲಕ್ಷ ಜನರು ಇದರ ಫಲಾನುಭವಿಗಳಾಗಿದ್ದಾರೆ. ಆದ್ದರಿಂದ ಇದಕ್ಕೊಂದು ಪರಿಹಾರವನ್ನು ಕಂಡು ಹಿಡಿಯಲಾಗುತ್ತಿದೆ. ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣಗಳಲ್ಲಿ ಶೇಕಡಾ 50ಕ್ಕಿಂತ ಕಡಿಮೆ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಕೇರಳ ರಾಜ್ಯದಲ್ಲಿ ಇದೆ ಪ್ರಮಾಣ ಶೇಕಡಾ 45ರಷ್ಟಿದೆ. ಆದರೆ, ಪ್ರಗತಿಪರವಾಗಿ ಕರ್ನಾಟಕ ರಾಜ್ಯದಲ್ಲಿ ಶೇಕಡಾ 70 ರಿಂದ 75ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕಾಗಿದೆ. ವಿನಾಃ ಕಾರಣ ಸರ್ಕಾರ ನೀಡುತ್ತಿರುವ ಪಡಿತರವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನರ್ಹರು ಪಡೆದುಕೊಳ್ಳುತ್ತಿದ್ದಾರೆ. ಎ.ಪಿ.ಎಲ್.,ಗೆ ಅರ್ಹರಾದವರು ಬಿ.ಪಿ.ಎಲ್., ಕಾರ್ಡುದಾರರ ಪಟ್ಟಿಯಲ್ಲಿದ್ದಾರೆ. ಆದ್ದರಿಂದ ಯಾರು ಎ.ಪಿ.ಎಲ್. ಕಾರ್ಡುದಾರರು ಬಿ.ಪಿ.ಎಲ್. ಪಟ್ಟಿಯಲ್ಲಿದ್ದಾರೆ ಅವರನ್ನು ಶಿಫ್ಟ್ ಮಾಡುವ ಕೆಲಸವನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಇದಕ್ಕೆ ಎಲ್ಲ ಮಾನ್ಯ ಸದಸ್ಯರುಗಳ ಸಹಕಾರದ ಅವಶ್ಯಕತೆ ಇದೆ. ಇಲ್ಲದಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ನಾವು ಸುಮಾರು 15 ಲಕ್ಷ ಎ.ಪಿ.ಎಲ್., ಕಾರ್ಡುದಾರರು ಬಿ.ಪಿ.ಎಲ್., ಕಾರ್ಡುದಾರರ ಪಟ್ಟಿಯಲ್ಲಿರುವುದನ್ನು ಕಂಡು ಹಿಡಿದಿದ್ದೆವು. ಅಂದರೆ, ಸುಮಾರು 50 ರಿಂದ 60 ಲಕ್ಷ ಅನರ್ಹ ಕಾರ್ಡುದಾರರು ಬಿ.ಪಿ.ಎಲ್., ಪಟ್ಟಿಯಲ್ಲಿದ್ದಾರೆ. ಅವರನ್ನು ಆ ಪಟ್ಟಿಯಿಂದ ತೆಗೆಯುವಂತಹ ಪ್ರಯತ್ನವನ್ನು ಮಾಡಿದ್ದೆ. ಮತ್ತೊಮ್ಮೆ ನಾನು ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ. ಪ್ರಾಮಾಣಿಕವಾಗಿರುವ ಪ್ರಯತ್ನಗಳನ್ನು ಮಾಡಿದಂತಹ ಸಂದರ್ಭದಲ್ಲಿ ಅದನ್ನು ರಾಜಕೀಯವಾಗಿ ತೆಗೆದುಕೊಂಡು ಮಾತನಾಡಿದರೆ, ನಾನು ಈ ಕೆಲಸ ಮಾಡುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಾನು ಒಂದು ವರ್ಷಕ್ಕೂ ಮೊದಲೇ ಎಲ್ಲ ತಯಾರಿಗಳನ್ನು ಮಾಡಿಕೊಂಡಿದ್ದೆ, ಇದನ್ನು ಮಾಡುವುದರಿಂದ ಸರ್ಕಾರಕ್ಕೆ ಹಣ ಉಳಿಯುತ್ತದೆ; ಅಭಿವೃದ್ಧಿ ಕೆಲಸಗಳಿಗೆ ಹಣ ಹೋಗುತ್ತದೆ. ಇಲ್ಲದಿದ್ದರೆ ವಿನಾಃ ಕಾರಣ ಹಣ ಖರ್ಚಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಶ್ರೀ ಎಂ.ನಾಗರಾಜು:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತಹ ವಿಚಾರವನ್ನು ನಾನು ಒಪ್ಪುತ್ತೇನೆ. ಆದರೆ, ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರನ್ನು ತುಲನೆ ಮಾಡುವುದಕ್ಕೆ ಒಂದೇ ಮಾನದಂಡವನ್ನು ಅನುಸರಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ಮಾನದಂಡದ ಪ್ರಕಾರ ರಾಜ್ಯದಲ್ಲಿ ಕೇವಲ ಶೇಕಡಾ 7.58 ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದಾರೆ. ಕರ್ನಾಟಕ ರಾಜ್ಯದ ಮಾನದಂಡಗಳ ಪ್ರಕಾರ ಶೇಕಡಾ 80ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆಂದಾದರೆ, ಇದು ಸರಿಯಾಗಿರುವ ಅಂಕಿಅಂಶಗಳಾಗುವುದಿಲ್ಲ. ಈ ಕಾರಣಗಳಿಗಾಗಿ ನಾನು ಹೇಳುವುದೇನೆಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಂದೇ ಮಾನದಂಡವನ್ನು ಇಟ್ಟುಕೊಂಡು ನಿಜವಾದ ಬಡವರನ್ನು ಗುರುತಿಸಿ ಅರ್ಹ ವ್ಯಕ್ತಿಗಳಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡುವುದು ಮತ್ತು ಅನರ್ಹ ವ್ಯಕ್ತಿಗಳನ್ನು ಎ.ಪಿ.ಎಲ್.,ಗೆ ಶಿಫ್ಟ್ ಮಾಡುವಂತಹ ಕೆಲಸ ತ್ವರಿತವಾಗಿ ಆಗಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ.

ಶ್ರಿ ಕೆ.ಹೆಚ್.ಮುನಿಯಪ್ಪ:– ಸನ್ಮಾನ್ಯ ಸಭಾಪತಿಯವರೇ, ಬಡತನರೇಖೆಗಿಂತ ಕೆಳಗಿರುವವರನ್ನು ಗುರುತಿಸುವುದಕ್ಕೆ ಕೇಂದ್ರ ಸರ್ಕಾರ 12 ಮಾನದಂಡಗಳನ್ನು ನಿಗದಿಪಡಿಸಿದೆ. ರಾಜ್ಯ ಸರ್ಕಾರ 05 ಮಾನದಂಡಗಳನ್ನು ನಿಗದಿ ಮಾಡಿದೆ. ಅದರ ಆಧಾರದ ಮೇಲೆ ಬಿ.ಪಿ.ಎಲ್., ಕಾರ್ಡುಗಳನ್ನು ಹಂಚಿಕೆ ಮಾಡಿದಾಗ, ಅವುಗಳ ಸಂಖ್ಯೆ ಸ್ವಲ್ಪ ಮಟ್ಟಿಗೆ ಹೆಚ್ಚಾಗುತ್ತದೆ. ಇಡೀ ರಾಷ್ಟ್ರದಲ್ಲಿ ಬಡತನರೇಖೆಗಿಂತ ಕೆಳಗೆ ಇರುವವರ ಪ್ರಮಾಣ ಶೇಕಡಾ 11.5ರಷ್ಟಿದೆ ಎಂದು ವರದಿಯಾಗಿದೆ. ಆದರೆ, ಈ ರಾಷ್ಟ್ರದಲ್ಲಿ ಇನ್ನೂ ಶೇಕಡಾ 30–35ರಷ್ಟು ಕುಟುಂಬಗಳು ಬಡತನರೇಖೆಗಿಂತ ಕೆಳಗೆ ಇರುವುದು ನನಗೆ ಗೊತ್ತಿದೆ. ನಾನು ಲೋಕಸಭೆಯಲ್ಲಿ ಕಾರ್ಯನಿರ್ವಹಿಸಿರುವುದರಿಂದ ನನಗೆ ಅದೆಲ್ಲವೂ ತಿಳಿದಿದೆ. ಆದರೆ, ಕೇಂದ್ರ ಸರ್ಕಾರದವರು ವಿಧಿಸಿರುವ ಶೇಕಡಾ 12 ಮಾನದಂಡಗಳ ಪ್ರಕಾರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿದರೆ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಕಡಿಮೆ ಇದೆ. ಇದು ರಾಷ್ಟ್ರಮಟ್ಟದ ವಿಚಾರವಾಗಿದೆ. ರಾಜ್ಯದ ೦೮ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಬಿ.ಪಿ.ಎಲ್. ಕಾರ್ಡ್‌ಗಳನ್ನು ವಿತರಣೆ ಮಾಡಿದ್ದೇವೆ. ಇದರ ಪ್ರಮಾಣ ಹೆಚ್ಚಾಗಿದೆ, ಅದನ್ನು ಸರಿಪಡಿಸಲಾಗುತ್ತದೆ.

ಸಭಾಪತಿಯವರು:– ಮುಂದಿನ ಪ್ರಶ್ನೆ ಶ್ರೀ ರಾಮೋಜಿಗೌಡ, ಶ್ರೀ ಮಧುಮಾದೇಗೌಡ ಮತ್ತು ಶ್ರೀ ವಿವೇಕಾನಂದ ಇವರುಗಳು ಕೇಳಬೇಕು.

ಶ್ರೀ ಎಂ.ನಾಗರಾಜು:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವಂತೆ ಹೊಸ ತಂತ್ರಾಂಶ…..

ಸಭಾಪತಿಯವರು– ಶ್ರೀ ಎಂ.ನಾಗರಾಜುರವರು ಮಾತನಾಡಿರುವುದು ಮತ್ತು ಮಾನ್ಯ ಸಚಿವರು ನೀಡುವ ಉತ್ತರ ಯಾವುದನ್ನೂ ದಾಖಲಿಸಿಕೊಳ್ಳಬಾರದು. ಮುಂದಿನ ಪ್ರಶ್ನೆ ಶ್ರೀ ರಾಮೋಜಿಗೌಡರವರದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 133+164+144

ಶಾಲಾ-ಕಾಲೇಜುಗಳಲ್ಲಿ ಸ್ವಚ್ಛತಾ ಕಾರ್ಯಕ್ಕೆ ಹೊರಗುತ್ತಿಗೆ ನೀಡಿರುವ ಕುರಿತು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಹಾಗೂ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)</td><td>
<table>
<tr><th>ಕ್ರ. ಸಂ</th><th>ಶಾಲಾ/ ಕಾಲೇಜು</th><th>ಶಾಲಾ/ಕಾಲೇಜುಗಳ ಸಂಖ್ಯೆ</th><th>ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>01</td><td>ಸರ್ಕಾರಿ ಪ್ರಾಥಮಿಕ ಶಾಲೆ</td><td>41,279.00</td><td>30,28,689.00</td></tr>
<tr><td>02</td><td>ಸರ್ಕಾರಿ ಪ್ರೌಢ ಶಾಲೆ</td><td>4,871.00</td><td>10,45,836.00</td></tr>
<tr><td>03</td><td>ಸರ್ಕಾರಿ ಪದವಿ ಪೂರ್ವ ಕಾಲೇಜು</td><td>1,319.00</td><td>2,72,318.00</td></tr>
<tr><td></td><td>ಒಟ್ಟು</td><td>47,469.00</td><td>43,46,843.00</td></tr>
</table>
(ಜಿಲ್ಲಾವಾರು ಪಟ್ಟಿ ಅನುಬಂಧ-01 ಲಗತ್ತಿಸಿದೆ)
</td></tr>
<tr><td>ಆ)</td><td>ಈ ಶಾಲೆ ಮತ್ತು ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು ಕಾಯಂ ಸಿಬ್ಬಂದಿಯನ್ನು ನೇಮಿಸಲಾಗಿದೆಯೇ? ಇಲ್ಲದಿದ್ದಲ್ಲಿ, ಕಾರಣಗಳೇನು?</td><td>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸ್ವಚ್ಛತಾಗಾರರ ಹುದ್ದೆಗಳು ಮಂಜೂರಾಗಿರುವುದಿಲ್ಲ.

ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ವಹಣೆಗಾಗಿ ಅನುದಾನ ಮಂಜೂರಾಗುತ್ತಿದ್ದು, ಸದರಿ ಅನುದಾನದಲ್ಲಿ ಸ್ವಚ್ಛತೆಗಾಗಿ ಸಿಬ್ಬಂದಿಗಳನ್ನು ಸ್ಥಳೀಯವಾಗಿ ಶಾಲಾ ಮೇಲುಸ್ತುವಾರಿ ಸಮಿತಿ ವತಿಯಿಂದ ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯ ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಮತ್ತು ಸ್ವಚ್ಛತೆಯ ಕೆಲಸವನ್ನು ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸಲು ಖಾಯಂ ಗ್ರೂಪ್-ಡಿ ಗಳನ್ನು ನೇಮಿಸಲಾಗಿದೆ.

ಖಾಯಂ ಗ್ರೂಪ್-ಡಿ ಗಳಿಲ್ಲದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಮತ್ತು ಸ್ವಚ್ಛತೆಯ ಕೆಲಸವನ್ನು ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸಲು ಕಾಲೇಜು ಅಭಿವೃದ್ಧಿ ಸಮಿತಿಯ ವತಿಯಿಂದ ಗೌರವಧನ ಆಧಾರದ ಮೇಲೆ ಗ್ರೂಪ್-ಡಿ ಸಿಬ್ಬಂದಿಯ ಸೇವೆಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ)	ರಾಜ್ಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ವಹಣೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು: (ವಿವರ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ರಾಜ್ಯ ವಲಯ ಯೋಜನೆಯಡಿ ಶೌಚಾಲಯ ನಿರ್ವಹಣೆಗೆ ಕೆಳಕಂಡಂತೆ ನಿರ್ವಹಣಾ ಅನುದಾನ ಬಿಡುಗಡೆ ಮಾಡಲಾಗಿದೆ.

ಕ್ರ. ಸಂ	ವರ್ಷ	ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)
1	2022-23	**3,495.52**	**3,495.52**
2	2023-24	**12,033.00**	**7,122.00**
3	2024-25	**5,798.31**	**5,798.31**
4	2025-26	**5,329.00**	-
ಒಟ್ಟು		**26,655.83**	**16,415.83**

ಸರ್ಕಾರಿ ಶಾಲೆಗಳ ನಿರ್ವಹಣೆಗೆ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಶಾಲಾನುದಾನ ಕಾರ್ಯಕ್ರಮದಡಿ ಈ ಕೆಳಗಿನ ಘಟಕ ವೆಚ್ಚದಂತೆ (ವಾರ್ಷಿಕವಾಗಿ) ಶಾಲಾನುದಾನ ಬಿಡುಗಡೆಗೊಳಿಸಲಾಗುತ್ತಿದೆ.

ಕ್ರ. ಸಂ	ವಿದ್ಯಾರ್ಥಿಗಳ ಸಂಖ್ಯೆ	ಘಟಕ ವೆಚ್ಚ (ರೂ.ಗಳಲ್ಲಿ)	ಶಾಲೆಗಳ ಸಂಖ್ಯೆ	2024-25ನೇ ಸಾಲಿಗೆ ಬಿಡುಗಡೆ ಮಾಡಲಾದ ಶಾಲಾನುದಾನ (ರೂ. ಗಳಲ್ಲಿ)
1	1 ರಿಂದ 30 ವಿದ್ಯಾರ್ಥಿಗಳಿರುವ ಶಾಲೆಗಳು	10,000/-	16,589	16,22,86,000.00
2	31 ರಿಂದ 100 ವಿದ್ಯಾರ್ಥಿಗಳಿರುವ ಶಾಲೆಗಳು	25,000/-	15,880	39,69,20,000.00
3	101 ರಿಂದ 250 ವಿದ್ಯಾರ್ಥಿಗಳಿರುವ ಶಾಲೆಗಳು	50,000/-	10,229	50,99,70,000.00
4	251 ರಿಂದ 1000 ವಿದ್ಯಾರ್ಥಿಗಳಿರುವ ಶಾಲೆಗಳು	75,000/-	4,478	33,17,70,000.00
5	1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು	1,00,000/-	135	1,34,20,000.00
	ಒಟ್ಟು		47,311	1,41,43,14,000.00

ಅನುದಾನದ ಲಭ್ಯತೆಗನುಗುಣವಾಗಿ ಪ್ರತಿ ವರ್ಷ ಶಾಲಾನುದಾನ ಬಿಡುಗಡೆಗೊಳಿಸಲಾಗುವುದು. ಬಿಡುಗಡೆ ಮಾಡಲಾಗುವ ಶಾಲಾನುದಾನದಲ್ಲಿ ಶೇಕಡಾ 10% ರಷ್ಟು ಅನುದಾನವನ್ನು ಶಾಲಾ ಸ್ವಚ್ಛತೆಗೆ ಬಳಸಲು ನಿಗದಿಪಡಿಸಲಾಗಿದೆ.

ರಾಜ್ಯದಲ್ಲಿರುವ 308 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮಕ್ಕಳ ದಾಖಲಾತಿ ಸಂಖ್ಯೆ ಅನುಗುಣವಾಗಿ 5 ಲಕ್ಷದಿಂದ 9 ಲಕ್ಷಗಳವರಗೆ ಶಾಲಾ ನಿರ್ವಹಣಾ ಅನುದಾನ ಒದಗಿಸಲಾಗುತ್ತಿದ್ದು, ಸದರಿ ಅನುದಾನದಲ್ಲಿ ಶೌಚಾಲಯ ನಿರ್ವಹಣೆಗೆ ರೂ. 20,000/- ರಿಂದ ರೂ. 45,000/- ರವರೆಗೆ ಬಳಸಲು ಅವಕಾಶ ಕಲ್ಪಿಸಲಾಗಿದೆ. ವಿವರಗಳನ್ನು **ಅನುಬಂಧ 1(ಅ)**ರಲ್ಲಿ ಸಲ್ಲಿಸಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ಈ ಪೈಕಿ ಬಳಸಲು ಯೋಗ್ಯವಾಗಿರುವ, ದುರಸ್ತಿ ಆಗಬೇಕಿರುವ ಹಾಗೂ ನೀರಿನ ಸಂಪರ್ಕ ಇರುವ ಅಥವಾ ಇಲ್ಲದಿರುವ ಶೌಚಾಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು – ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು – ಸಂಖ್ಯೆಯ ವಿವರ ನೀಡುವುದು)	ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬಳಸಲು ಯೋಗ್ಯವಾಗಿರುವ, ದುರಸ್ತಿ ಆಗಬೇಕಿರುವ ಹಾಗೂ ನೀರಿನ ಸಂಪರ್ಕ ಇರುವ ಅಥವಾ ಇಲ್ಲದಿರುವ ಶೌಚಾಲಯಗಳ ಜಿಲ್ಲಾವಾರು ಅಂಕಿ ಅಂಶವನ್ನು **ಅನುಬಂಧ-02** ರಲ್ಲಿ ಲಗತ್ತಿಸಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಳಸಲು ಯೋಗ್ಯವಾಗಿರುವ, ದುರಸ್ತಿ ಆಗಬೇಕಿರುವ ಹಾಗೂ ನೀರಿನ ಸಂಪರ್ಕ ಇರುವ ಅಥವಾ ಇಲ್ಲದಿರುವ ಶೌಚಾಲಯಗಳ ಜಿಲ್ಲಾವಾರು ಕ್ರೂಢೀಕೃತ ಮಾಹಿತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ.
ಉ)	ಒಂದು ವೇಳೆ ಖಾಯಂ ಸ್ವಚ್ಛತಾ ಸಿಬ್ಬಂದಿ ಇಲ್ಲದಿದ್ದರೆ, ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ಹೊರಗುತ್ತಿಗೆ ಸಂಸ್ಥೆಗಳ ಮೂಲಕ ನಿರ್ವಹಿಸಲು ಅವಕಾಶ ಮತ್ತು ಅನುದಾನ ಒದಗಿಸುವ ಕುರಿತು ಸರ್ಕಾರದ ನಿಲುವೇನು?	ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಸ್ವಚ್ಛತಾಗಾರರ ಸೇವೆ ಪಡೆಯಲು ಹುದ್ದೆ ಮಂಜೂರಾತಿ ಇರುವುದಿಲ್ಲ. ಶಾಲಾ ನಿರ್ವಹಣೆಗೆ ಬಿಡುಗಡೆ ಮಾಡಲಾದ ಅನುದಾನ ಬಳಸಿಕೊಂಡು ಶಾಲಾ ಶೌಚಾಲಯ ಸ್ವಚ್ಛತೆ ಮತ್ತು ಇತರೇ ಸ್ವಚ್ಛತೆ ಕೈಗೊಳ್ಳಲು ಶಾಲಾ ಮುಖ್ಯಶಿಕ್ಷಕರಿಗೆ ಸೂಚಿಸಲಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು, ಖಾಯಂ ಸಿಬ್ಬಂದಿಗಳಿಲ್ಲದ ಕಾಲೇಜು ಅಭಿವೃದ್ಧಿ ಸಮಿತಿಯ ವತಿಯಿಂದ (CDC) ಗೌರವಧನ ಆಧಾರದ ಮೇಲೆ ಗ್ರೂಪ್-ಡಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ.
ಊ)	ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ ಕಾರಣದಿಂದ ಸರ್ಕಾರಿ ಶಾಲಾ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು, ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ ಕಾರಣದಿಂದ ಸರ್ಕಾರಿ ಶಾಲಾ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ. **<u>ಪ್ರಾಥಮಿಕ ಶಿಕ್ಷಣ</u>** ಬೆಂಗಳೂರು ವ್ಯಾಪ್ತಿಯ ಈ ಕೆಳಕಂಡ ಶಾಲೆಗಳಲ್ಲಿ ಮಕ್ಕಳನ್ನು ಶೌಚಾಲಯ ಕಾರ್ಯಕ್ಕೆ ಬಳಸಿಕೊಂಡಿರುವ ಆರೋಪದ ಕುರಿತು ಈ ಕೆಳಕಂಡ ಶಿಕ್ಷಕರ ವಿರುದ್ಧ ಉಪನಿರ್ದೇಶಕರು, ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಹಂತದಲ್ಲಿ ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ. 1. ಕೆ.ಪಿ.ಎಸ್. ಅತ್ತಿಗುಪ್ಪೆ ಪ್ರಾಥಮಿಕ ಶಾಲೆ, ಬೆಂ.ದ.ವಲಯ -3 ಈ ಶಾಲೆಯ ಮುಖ್ಯ ಶಿಕ್ಷಕರ ವಿರುದ್ಧ ದಿನಾಂಕ:05.05.2025ರಂದು ಅಮಾನತ್ತು ಮಾಡಿದ್ದು ಉಪನಿರ್ದೇಶಕರ ಹಂತದಲ್ಲಿ ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. 2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೇಗೂರು, ಬೆಂ.ದ.ವ-3 ಈ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಮತ್ತು ದೈಹಿಕ ಶಿಕ್ಷಕರನ್ನು ದಿನಾಂಕ: 22.03.2025ರಂದು ಅಮಾನತ್ತು ಮಾಡಿದ್ದು, ಉಪನಿರ್ದೇಶಕರ ಹಂತದಲ್ಲಿ ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಪ್ರೌಢ ಶಿಕ್ಷಣ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ ಕಾರಣದಿಂದ ಸರ್ಕಾರಿ ಶಾಲಾ ಶಿಕ್ಷಕರ ವಿರುದ್ಧ ಯಾವುದೇ ಪತ್ರ/ ಪ್ರಕರಣ ಸ್ವೀಕೃತವಾಗಿರುವುದಿಲ್ಲ. ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಬಳಸದಿರುವ ಬಗ್ಗೆ ಈಗಾಗಲೇ ದಿನಾಂಕ: 28.12.2023 ಮತ್ತು ದಿನಾಂಕ: 26.03.2025ರಂದು ಸುತ್ತೋಲೆಗಳನ್ನು ಹೊರಡಿಸಲಾಗಿದೆ. **(ಅನುಬಂಧ-4.)**
ಋ)	ಕರ್ನಾಟಕದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸುಧಾರಣೆಗಾಗಿ ಖಾಯಂ ಆಗಿರುವ ಶಾಸನಾತ್ಮಕ ಸ್ವಾಯತ್ತ ಆಯೋಗವನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?	ಈ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇಪಿ 200ಯೋಸಕ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Starred Question-164 Unstarred Question No. 164 (1)

ಅನುಬಂಧ-1

Annexure-01

2024-25 District level- PrimarySchool Enrollment (SATS-2024-25)

Sl no	*District*	*School Category*	*Total No of Enrollment*
1	2	3	4
1	BAGALKOT	PRIMARY	129566
2	BALLARI	PRIMARY	83684
3	BELAGAVI	PRIMARY	152043
4	BELAGAVI CHIKKODI	PRIMARY	174811
5	BENGALURU RURAL	PRIMARY	42329
6	BENGALURU U NORTH	PRIMARY	68904
7	BENGALURU U SOUTH	PRIMARY	107959
8	BIDAR	PRIMARY	85503
9	CHAMARAJANAGARA	PRIMARY	41278
10	CHIKKABALLAPURA	PRIMARY	48143
11	CHIKKAMANGALURU	PRIMARY	43392
12	CHITRADURGA	PRIMARY	93478
13	DAKSHINA KANNADA	PRIMARY	71262
14	DAVANAGERE	PRIMARY	71420
15	DHARWAD	PRIMARY	102517
16	GADAG	PRIMARY	69564
17	HASSAN	PRIMARY	57419
18	HAVERI	PRIMARY	110170
19	KALBURGI	PRIMARY	173178
20	KODAGU	PRIMARY	15828
21	KOLAR	PRIMARY	57751
22	KOPPAL	PRIMARY	129495
23	MANDYA	PRIMARY	52724
24	MYSURU	PRIMARY	96751
25	RAICHUR	PRIMARY	166650
26	RAMANAGARA	PRIMARY	38856
27	SHIVAMOGGA	PRIMARY	80120
28	TUMAKURU	PRIMARY	66168
29	TUMAKURU MADHUGIRI	PRIMARY	49507
30	UDUPI	PRIMARY	40452
31	UTTARA KANNADA	PRIMARY	36887
32	UTTARA KANNADA SIRSI	PRIMARY	52476
33	VIJAYANAGARA	PRIMARY	105641
34	VIJAYAPURA	PRIMARY	195633
35	YADAGIRI	PRIMARY	117130
TOTAL			**3028689**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1) (2)

Annexure-

2024-25 District level- High School Enrollment (SATS-2024-25)

Sl no	*District*	*School Category*	*Total No of Enrollment*
1	2	3	4
1	BAGALKOT	HIGH SCHOOL	58706
2	BALLARI	HIGH SCHOOL	44581
3	BELAGAVI	HIGH SCHOOL	35409
4	BELAGAVI CHIKKODI	HIGH SCHOOL	64443
5	BENGALURU RURAL	HIGH SCHOOL	12454
6	BENGALURU U NORTH	HIGH SCHOOL	21203
7	BENGALURU U SOUTH	HIGH SCHOOL	27424
8	BIDAR	HIGH SCHOOL	24618
9	CHAMARAJANAGARA	HIGH SCHOOL	13800
10	CHIKKABALLAPURA	HIGH SCHOOL	16539
11	CHIKKAMANGALURU	HIGH SCHOOL	14055
12	CHITRADURGA	HIGH SCHOOL	19866
13	DAKSHINA KANNADA	HIGH SCHOOL	25091
14	DAVANAGERE	HIGH SCHOOL	21910
15	DHARWAD	HIGH SCHOOL	28692
16	GADAG	HIGH SCHOOL	27277
17	HASSAN	HIGH SCHOOL	21798
18	HAVERI	HIGH SCHOOL	33100
19	KALBURGI	HIGH SCHOOL	61046
20	KODAGU	HIGH SCHOOL	4266
21	KOLAR	HIGH SCHOOL	18955
22	KOPPAL	HIGH SCHOOL	58506
23	MANDYA	HIGH SCHOOL	22248
24	MYSURU	HIGH SCHOOL	42471
25	RAICHUR	HIGH SCHOOL	83573
26	RAMANAGARA	HIGH SCHOOL	12865
27	SHIVAMOGGA	HIGH SCHOOL	28121
28	TUMAKURU	HIGH SCHOOL	17603
29	TUMAKURU MADHUGIRI	HIGH SCHOOL	13511
30	UDUPI	HIGH SCHOOL	17947
31	UTTARA KANNADA	HIGH SCHOOL	7754
32	UTTARA KANNADA SIRSI	HIGH SCHOOL	15840
33	VIJAYANAGARA	HIGH SCHOOL	37174
34	VIJAYAPURA	HIGH SCHOOL	48206
35	YADAGIRI	HIGH SCHOOL	44784
	TOTAL		**1045836**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3

Student Achievement Tracking System,Karnataka.

GOVERNMENT PU COLLEGE STRENGTH REPORT

Academic Year:2025-2026

Sr No	DISTRICTCODE	DISTRICTNAME	IPUC	IIPUC	TOTAL
1	AN	BENGALURU NORTH	3755	4681	8436
2	AS	BENGALURU SOUTH	3199	3556	6755
3	BB	BENGALURU RURAL	1483	1833	3316
4	BR	RAMNAGARA	2440	2630	5070
5	CC	BELLARY	8016	7436	15452
6	DC	CHIKKODI	4806	4801	9607
7	DD	BELAGAVI	5328	4479	9807
8	EB	BAGALKOTE	6575	6296	12871
9	EE	VIJAYAPUR	4280	5090	9370
10	FF	BIDAR	1226	1529	2755
11	GD	DAVANAGERE	3595	4230	7825
12	GG	CHITRADURGA	3841	4208	8049
13	HH	CHICKAMAGALUR	3810	3915	7725
14	JG	GADAG	3375	2739	6114
15	JH	HAVERI	3535	3537	7072
16	JJ	DHARWAD	2729	2455	5184
17	KK	KALBURGI	2793	4425	7218
18	KY	YADGIR	2402	3288	5690
19	LL	HASSAN	5065	4997	10062
20	MC	CHIKKABALLAPUR	1267	1431	2698
21	MM	KOLAR	3143	3269	6412
22	NC	CHAMARAJANAGAR	2643	2619	5262
23	NN	MYSURU	9506	10878	20384
24	PP	MANDYA	3219	3706	6925
25	QQ	UTTARA KANNADA	6301	6190	12491
26	RK	KOPPAL	5521	4933	10454
27	RR	RAICHUR	4026	3967	7993
28	SS	DAKSHIN KANNADA	6216	5741	11957
29	SU	UDUPI	4226	4337	8563
30	TT	SHIMOGA	7750	7897	15647
31	UU	TUMKUR	5736	7047	12783
32	VV	KODAGU	1161	1210	2371
		TOTAL	132968	139350	272318

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

DISTRICTWISE MANAGEMENTWISE GOVERNMENT PU COLLEGES COUNT		
Sl.No	District	Government Clg Count
1	BAGALKOTE	47
2	BALLARI	56
3	BELAGAVI	32
4	BENGALURU NORTH	18
5	BENGALURU RURAL	16
6	BENGALURU SOUTH	20
7	BIDAR	28
8	CHAMARAJANAGARA	28
9	CHIKKABALLAPURA	25
10	CHIKKAMAGALURU	39
11	CHIKKODI	33
12	CHITRADURGA	38
13	DAKSHINA KANNADA	55
14	DAVANAGERE	42
15	DHARWAD	31
16	GADAG	29
17	HASSAN	83
18	HAVERI	34
19	KALABURAGI	62
20	KODAGU	14
21	KOLAR	36
22	KOPPAL	50
23	MANDYA	71
24	MYSURU	80
25	RAICHUR	49
26	RAMANAGARA	35
27	SHIVAMOGGA	51
28	TUMAKURU	75
29	UDUPI	43
30	UTTARA KANNADA	37
31	VIJAYAPURA	36
32	YADGIRI	26
TOTAL		1319

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ - 1(ಅ)

2025 -26 ನೇ ಸಾಲಿನ 308 ಕೆ.ಪಿ.ಎಸ್. ಶಾಲೆಗಳಿಗೆ ಬಿಡುಗಡೆಯಾದ ವಾರ್ಷಿಕನಿರ್ವಹಣಾ ಅನುದಾನದಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು ಲೆಕ್ಕಶೀರ್ಷಿಕೆ: 2202-01-053-0-02-059,422,423ಒಟ್ಟು ರೂ.1949- ಲಕ್ಷಗಳು		0-500 Strenght 5.00 Lakhs	501-1000 Strenght 6.00 Lakhs	1001-1500 Strenght 7.00 Lakhs	1501+ Strenght 9.00 Lakhs
ಕ್ರ.ಸಂ	ಕಾರ್ಯಕ್ರಮದ ಹೆಸರು	ಅನುಷ್ಠಾನ ಗೊಳಿಸಬೇಕಾದ ಕಾರ್ಯಕ್ರಮದ ವಿವರ				
1	ಕೆ.ಪಿ.ಎಸ್ ಶಾಲೆಗಳು	1.ಶೌಚಾಲಯ ನಿರ್ವಹಣೆ	0.20	0.20	0.30	0.45
		2.ವಿಜ್ಞಾನ ಪ್ರಯೋಗಾಲಯ	0.20	0.20	0.30	0.45
		3.ಗ್ರಂಥಾಲಯ	0.20	0.20	0.30	0.45
		4.ಬೋಧನೋಪಕರಣಗಳು	0.20	0.20	0.30	0.40
		5.ಕ್ರೀಡಾ ಸಾಮಗ್ರಿಗಳು	0.15	0.15	0.30	0.45
		6.'ಇಂಟರ್ ನೆಟ್ ಸಂಪರ್ಕ	0.15	0.2	0.30	0.45
		7.ಸಿಸಿ ಟಿವಿಅಳವಡಿಕೆ	0.15	0.25	0.30	0.5
		8.ಗೋಡೆಯ ಚಿತ್ರ	0.10	0.15	0.20	0.45
		10.ವಿಜ್ಞಾನಕಲೆ/ ಚಿತ್ರಕಲೆ ಪ್ರದರ್ಶನಗಳು	0.15	0.25	0.30	0.40
		11.ಗಣಕಯಂತ್ರ/ಲ್ಯಾಪ್ ಟಾಪ್ ಗಳು ಮತ್ತು ಪ್ರಿಂಟರ್ ಖರೀದಿ	0.10	0.35	0.55	1.00
		12.ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿರುವ ಅನುದಾನದಲ್ಲಿ, ಪೂರ್ವ ಪ್ರಾಥಮಿಕ (ಯು.ಕೆ.ಜಿ) ಕೊಠಡಿ ಸಜ್ಜುಗೊಳಿಸುವುದು ಮತ್ತು ಅವಶ್ಯಕ ಸಾಧನಾ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸುವುದು ಹಾಗೂ ಈ ಮೊತ್ತದಲ್ಲಿ 1 ರಿಂದ 1000 ಮಕ್ಕಳ ಸಂಖ್ಯೆ ಇದ್ದಲ್ಲಿ ರೂ.10000/- ರ ಮಿತಿಯಲ್ಲಿ ಹಾಗೂ 1001 ಕ್ಕಿಂತ ಮೇಲ್ಪಟ್ಟು ಮಕ್ಕಳ ಸಂಖ್ಯೆ ಇದ್ದಲ್ಲಿ ರೂ.15000/- ಮಿತಿಯಲ್ಲಿ ಸ್ಥಳೀಯ ಚಿತ್ರಕಲಾ ಶಿಕ್ಷಕರನ್ನು ಬಳಸಿಕೊಂಡು ಕೊಠಡಿ ಅಲಂಕಾರ ಮಾಡುವುದು.	0.15	0.60	0.60	0.75
		ಒಟ್ಟು	1.75	2.75	3.75	5.75
		13ಪೂರ್ವ ಪ್ರಾಥಮಿಕ ತರಗತಿಗಳ ಅತಿಥಿ ಶಿಕ್ಷಕರಿಗೆ ಹಾಗೂ ಆಯಾಗಳಿಗೆ ವೇತನ : 1. ಪೂರ್ವ ಪ್ರಾಥಮಿಕ ತರಗತಿಗಳ ಇಬ್ಬರು ಶಿಕ್ಷಕಿಯರಿಗೆ ಮಾಸಿಕ ವೇತನ ರೂ.10,000/- ರಂತೆ 10 ತಿಂಗಳಿಗೆ ರೂ.2,00,000/-. 2. ಒಬ್ಬರು ಆಯಾ ಇದ್ದರೆ ಮಾಸಿಕ ವೇತನ ರೂ.6,250 ರಂತೆ 10 ತಿಂಗಳಿಗೆ ರೂ.62,500/- ಇಬ್ಬರು ಆಯಾಗಳು ಇದ್ದರೆ, ಮಾಸಿಕ ವೇತನ ರೂ6,250- ರಂತೆ 10 ತಿಂಗಳಿಗೆ ರೂ.1,25,000/- ಗಳ ವೆಚ್ಚವನ್ನು ಭರಿಸುವುದು.	3.25	3.25	3.25	3.25
		ಒಟ್ಟು	5.00	6.00	7.00	9.00

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-2.

Annexure-02

2024-25 District level-School Infrastructure Report (SATS 2024-25)

Sl no	District	No. of Schools Having Toilets	No of schools Having Facility			
			Boys Toilet	Boys Toilet Units	Girls Toilet	Girls Toilet Units
1	BAGALKOT	1424	1286	1703	1368	1957
2	BALLARI	704	664	1022	695	1189
3	BELAGAVI	1479	1379	1931	1455	2211
4	BELAGAVI CHIKKODI	1913	1772	2642	1835	3108
5	BENGALURU RURAL	1095	1077	1625	1090	1777
6	BENGALURU U NORTH	533	522	1357	529	1523
7	BENGALURU U SOUTH	927	919	2125	925	2454
8	BIDAR	1344	1227	1517	1284	1713
9	CHAMARAJANAGARA	803	733	1139	792	1298
10	CHIKKABALLAPURA	1489	1424	1866	1471	2142
11	CHIKKAMANGALURU	1372	1326	1570	1348	1724
12	CHITRADURGA	1732	1701	2000	1728	2109
13	DAKSHINA KANNADA	1062	1047	1985	1059	3014
14	DAVANAGERE	1193	1163	1418	1175	1551
15	DHARWAD	842	736	1148	799	1410
16	GADAG	692	617	864	647	962
17	HASSAN	2356	2150	2611	2324	2967
18	HAVERI	1278	1166	1510	1205	1652
19	KALBURGI	1982	1757	2354	1936	2703
20	KODAGU	408	404	741	407	897
21	KOLAR	1864	1784	2224	1833	2451
22	KOPPAL	1069	982	1328	1037	1651
23	MANDYA	1710	1654	2283	1688	2493
24	MYSURU	2063	2006	3007	2038	3379
25	RAICHUR	1600	1553	2362	1587	2591
26	RAMANAGARA	1242	1222	1685	1235	1830
27	SHIVAMOGGA	1949	1916	2433	1939	2673
28	TUMAKURU	2064	1990	2349	2033	2605
29	TUMAKURU MADHUGIRI	1313	1291	1526	1308	1686
30	UDUPI	664	661	1018	664	1351
31	UTTARA KANNADA	962	950	1157	957	1259
32	UTTARA KANNADA SIRSI	1162	1137	1425	1156	1589
33	VIJAYANAGARA	1041	964	1384	1027	1588
34	VIJAYAPURA	1932	1693	1987	1819	2223
35	YADAGIRI	1027	882	1142	1005	1425
	Total	**46290**	**43755**	**60438**	**45398**	**69155**

Deputy Director(Planning)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ - 3

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) ಮತ್ತು ಶ್ರೀ ಮಧು ಜಿ ಮಾದೇಗೌಡ (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) ಹಾಗೂ ಶ್ರೀ ಕೆ ವಿವೇಕಾನಂದ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಪ್ರಶ್ನೆ ಸಂಖ್ಯೆ:113+164+144 ಕ್ಕೆ ಅನುಬಂಧ

ಕ್ರ.ಸಂ	ಜಿಲ್ಲೆಯ ಹೆಸರು	ಬಳಸಲು ಯೋಗ್ಯವಾಗಿರುವ ಶೌಚಾಲಯಗಳ ಸಂಖ್ಯೆ	ದುರಸ್ತಿ ಆಗಬೇಕಿರುವ ಶೌಚಾಲಯಗಳ ಸಂಖ್ಯೆ	ನೀರಿನ ಸಂಪರ್ಕ ಇರುವ ಶೌಚಾಲಯಗಳ ಸಂಖ್ಯೆ	ಪೈಪ್ ಸಂಪರ್ಕ ಇಲ್ಲದೆ ಇತರೆ ಮೂಲದಿಂದ ನೀರನ್ನು ಬಳಸುವ ಶೌಚಾಲಯಗಳ ಸಂಖ್ಯೆ
1	ಬೆಂಗಳೂರು ಉತ್ತರ	146	40	175	3
2	ಬೆಂಗಳೂರು ದಕ್ಷಿಣ	179	25	173	3
3	ಬೆಂಗಳೂರು ಗ್ರಾಮಾಂತರ	50	18	58	4
4	ರಾಮನಗರ	30	0	30	0
5	ಬಳ್ಳಾರಿ	43	9	28	5
6	ವಿಜಯನಗರ	43	9	28	4
7	ಚಿಕ್ಕೋಡಿ	202	28	193	5
8	ಬೆಳಗಾವಿ	32	0	32	0
9	ಬಾಗಲಕೋಟೆ	38	12	34	4
10	ವಿಜಯಪುರ	64	27	52	3
11	ಬೀದರ್	59	8	53	3
12	ದಾವಣಗೆರೆ	80	2	78	2
13	ಚಿತ್ರದುರ್ಗ	69	19	64	5
14	ಚಿಕ್ಕಮಗಳೂರು	20	19	39	0
15	ಗದಗ	54	10	11	4
16	ಹಾವೇರಿ	56	25	56	0
17	ಧಾರವಾಡ	55	10	55	0
18	ಕಲಬುರ್ಗಿ	45	10	49	1
19	ಯಾದಗಿರಿ	60	7	60	0
20	ಹಾಸನ	94	47	94	0
21	ಚಿಕ್ಕಬಳ್ಳಾಪುರ	159	59	157	4
22	ಕೋಲಾರ	202	66	233	4
23	ಚಾಮರಾಜನಗರ	174	45	165	5
24	ಮೈಸೂರು	75	8	75	0
25	ಮಂಡ್ಯ	54	5	54	0
26	ಉತ್ತರ ಕನ್ನಡ	37	12	37	0
27	ಕೊಪ್ಪಳ	38	35	38	3
28	ರಾಯಚೂರು	53	7	38	4
29	ದಕ್ಷಿಣ ಕನ್ನಡ	55	0	0	0
30	ಉಡುಪಿ	43	0	43	0
31	ಶಿವಮೊಗ್ಗ	36	15	33	3
32	ತುಮಕೂರು	151	30	151	5
33	ಕೊಡಗು	105	31	115	6
	ಒಟ್ಟು	2601	638	2501	80

ಜಂಟಿ ನಿರ್ದೇಶಕರು
(ಮೂಲಭೂತ ಸೌಲಭ್ಯ ಶಾಖೆ)
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಷರಾ:

ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನೀರಿನ ಸಂಪರ್ಕವನ್ನು ಸ್ಥಳೀಯವಾಗಿ ಲಭ್ಯವಿರುವ ನಗರಸಭೆ/ ಪುರಸಭೆ ಸಂಪರ್ಕಯಿಂದ ಒದಗಿಸಿಕೊಳ್ಳಲಾಗುತ್ತಿದೆ. ಸದರಿ ವ್ಯವಸ್ಥೆಯಲ್ಲಿ ವ್ಯತ್ಯಯವಾದಲ್ಲಿ ಬೋರ್ ವೆಲ್/ ಟ್ಯಾಂಕರ್ ಗಳ ಮೂಲಕ ನೀರಿನ ಸಂಪರ್ಕ ಕಲ್ಪಿಸಿಕೊಳ್ಳಲು ಪ್ರಾಂಶುಪಾಲರು ಕ್ರಮವಹಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-4

6

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ:-ಎಡಿಎಂ2(4)ಶೌ.ನಿ/01/2023-24. ದಿನಾಂಕ: 28.12.2023.

-: ಸುತ್ತೋಲೆ:-

ವಿಷಯ:-ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಬಳಸದಿರುವ ಕುರಿತು ಸೂಚನೆಗಳು.

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯೋಸಿ/ಕುನಿಶೌಅಬಿ/07/2023-24 ದಿನಾಂಕ: 21.09.2023.

****

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಇತ್ತೀಚಿಗೆ ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಶೌಚಾಲಯಗಳನ್ನು ವಿದ್ಯಾರ್ಥಿಗಳಿಂದ ಸ್ವಚ್ಛತೆ ಮಾಡಿಸುತ್ತಿರುವ ಕುರಿತಾದ ಘಟನೆಗಳು ಸರ್ಕಾರದ ಮತ್ತು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ, ಸಹ ಪಠ್ಯ ಚಟುವಟಿಕೆಗಳಲ್ಲಿ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಶೌಚಾಲಯಗಳ ಸ್ವಚ್ಛತೆಯಂತಹ ಕಾರ್ಯಗಳಿಂದ ದೂರವಿರಿಸುವುದು ಅಧಿಕಾರಿಗಳ, ಮುಖ್ಯ ಶಿಕ್ಷಕರ, ಶಿಕ್ಷಕರ, ಸಿಬ್ಬಂದಿಗಳ ಕರ್ತವ್ಯವಾಗಿರುತ್ತದೆ. ಆದರೆ ಅವರುಗಳು ಈ ಹೊಣೆಗಾರಿಕೆಯನ್ನು ಮರೆತು ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಆಕ್ಷೇಪಣೀಯ ಮತ್ತು ಖಂಡನೀಯ. ಇಂತಹ ಘಟನೆಗಳನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಈ ಹಿನ್ನಲೆಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳ ಸ್ವಚ್ಛತೆಯನ್ನು ನಿರ್ವಹಿಸುವ ಕುರಿತು ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸಂಬಂಧಿಸಿದ ಎಲ್ಲರಿಗೂ ತಿಳಿಸಲಾಗಿದೆ.

1. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತಾ ಕಾರ್ಯ ಮತ್ತು ನಿರ್ವಹಣೆಯನ್ನು ಯಾವುದೇ ಕಾರಣಕ್ಕೂ, ಯಾವುದೇ ಸಂದರ್ಭದಲ್ಲಿಯೂ ಸಹ ವಿದ್ಯಾರ್ಥಿಗಳಿಂದ ಕೈಗೊಳ್ಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
2. ಉಲ್ಲೇಖಿತ ಸುತ್ತೋಲೆಯ ಅನುಸಾರ ಶಾಲಾ ನಿರ್ವಹಣಾ ಅನುದಾನವನ್ನು ಆಯಾ ಸರ್ಕಾರಿ ಶಾಲೆಗಳಿಗೆ ಪ್ರಸ್ತುತ ಸಾಲಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಪ್ರಥಮ ಪ್ರಾಶಸ್ತ್ಯದಲ್ಲಿ ಶೌಚಾಲಯಗಳ ಸ್ವಚ್ಛತಾ ಕಾರ್ಯಗಳಿಗೆ ಬಳಸಿಕೊಂಡು ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ) ಗಳ ಸಹಕಾರದೊಂದಿಗೆ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಶೌಚಾಲಯಗಳ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳತಕ್ಕದ್ದು.
3. ಒಂದು ವೇಳೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಸಿಬ್ಬಂದಿಗಳಾಗಲಿ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಗಾಗಿ ಬಳಸಿಕೊಂಡಲ್ಲಿ ಅಂತಹವರ ಮೇಲೆ ಇಲಾಖಾ ವತಿಯಿಂದ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಹಾಗೂ ಪ್ರಥಮ ವರ್ತಮಾನ ವರದಿ (FIR) ದಾಖಲಿಸಲಾಗುವುದು ಎಂದು ಎಚ್ಚರಿಸಲಾಗಿದೆ.
4. ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ)ಗಳು ವಿದ್ಯಾರ್ಥಿಗಳಿಗೆ ಈ ಕುರಿತು ಅರಿವು ಮೂಡಿಸತಕ್ಕದ್ದು ಹಾಗೂ ಯಾವುದೇ ವಿದ್ಯಾರ್ಥಿಗಳು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬಹುದಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಶಾಲೆಗಳಿಗೆ ಕಾಲ-ಕಾಲಕ್ಕೆ ತಿರುಗಿ ಭೇಟಿ ನೀಡಿ ಶಾಲೆಗಳಲ್ಲಿ ಸೌಲಭ್ಯ ಕಲ್ಪಿಸಲು ಮತ್ತು ಗುಣಮಟ್ಟ ಹೆಚ್ಚಿಸಲು ಕ್ರಮವಹಿಸಲು ಬಳಕೆಗೆ ಯೋಗ್ಯವಾದ ಶೌಚಾಲಯಗಳು ಇಲ್ಲದಿರುವುದರಿಂದ ವಿದ್ಯಾರ್ಥಿನಿಯರು ಶಾಲೆಗೆ ಬರಲು ಹಿಂಜರಿಯುತ್ತಿರುವ ಬಗ್ಗೆ ಶೌಚಾಲಯಗಳಿಗೆ ಬೀಗ ಹಾಕಿದ್ದರಿಂದ ವಿದ್ಯಾರ್ಥಿಗಳು ಅನಿವಾರ್ಯವಾಗಿ ಬಯಲನ್ನು ಉಪಯೋಗಿಸುತ್ತಿರುವ ಬಗ್ಗೆ ವಿದ್ಯಾರ್ಥಿಗಳನ್ನು ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುವಂತೆ ಶಾಲಾ ಮುಖ್ಯಾಧ್ಯಾಪಕರಿಗೆ ಸಲಹೆ ನೀಡಿ ಪರಿಶೀಲಿಸಿ ಖಚಿತಪಡಿಸಿಕೊಳ್ಳುವಂತೆ ಶಾಲಾ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

6. ಶಾಲೆಯ ಸಂದರ್ಶನದ ವೇಳೆಯಲ್ಲಿ ಒಂದು ವೇಳೆ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿರುವುದು ಗಮನಕ್ಕೆ ಬಂದಲ್ಲಿ, ಅಂತಹ ಶಾಲಾಮುಖ್ಯೋಪಾಧ್ಯಾಯರ ಮೇಲೆ ಶಿಸ್ತುಕ್ರಮ ಜರುಗಿಸಲು ಕ್ರಮವಹಿಸಲು ಅನುವಾಗುವಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರು (ಆಡಳಿತ)ರವರಿಗೆ ತಕ್ಷಣ ವರದಿ ಮಾಡಲು ಶಾಲಾ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತಿಳಿಸಿದೆ.

7. ಅದರಂತೆ ಇಂತಹ ಪ್ರಕರಣಗಳಲ್ಲಿ ತಕ್ಷಣವೇ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ)ರವರು ಮೇಲೆ ತಿಳಿಸಿರುವಂತೆ ಸಂಬಂಧಿಸಿದವರ ಮೇಲೆ ಪರಿಣಾಮಕಾರಿ ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಅಥವಾ ಸಲ್ಲಾ ಕ್ಷತೆಯ ದೋಷದಲ್ಲಿ ಮತ್ತು ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಅದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು(ಆಡಳಿತ) ರವರುಗಳೇ ನೇರ ಹೊಣೆಗಾರರನ್ನಾಗಿಸಿ ಇಲಾಖೆ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

8. ಇದೇ ರೀತಿ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿಯೂ ಸಹ ಇಂತಹ ಯಾವುದೇ ಪ್ರಕರಣಗಳು ಜರುಗದಂತೆ ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿಗಳು ಹಾಗೂ ಶಾಲಾ ಮುಖ್ಯಸ್ಥರು ಎಚ್ಚರಿಕೆ ವಹಿಸಲು ತಿಳಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಹಾಗೂ ಈ ಕುರಿತು ಸರ್ಕಾರದಿಂದ ಮತ್ತು ಇಲಾಖೆಯಿಂದ ಕಾಲ-ಕಾಲಕ್ಕೆ ಹೊರಡಿಸಲಾಗುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಲು ಹಾಗೂ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುವಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಎಚ್ಚರಿಕೆ ಕ್ರಮಗಳನ್ನು ವಹಿಸುವಂತೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮತ್ತು ಸಂಬಂಧಿಸಿದ ಎಲ್ಲಾ ಇಲಾಖಾಧಿಕಾರಿಗಳಿಗೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಬಿ.ಬಿ. ಕಾವೇರಿ., ಭಾ.ಆ.ಸೇ
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

ಇವರಿಗೆ,
1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು.
2. ಆಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕ ವೃಂದದ ಅಧಿಕಾರಿಗಳಿಗೆ / ಎಲ್ಲಾ ಜಿಲ್ಲಾ ಶಿಕ್ಷಣಾಧಿಕಾರಿಗಳಿಗೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-1
ಸಂಖ್ಯೆ: ಎಡಿಎಂ-2(4) ಶೌ.ನಿ/1/2024-25
ದಿನಾಂಕ: 26-03-2025

-: ಸುತ್ತೋಲೆ:-

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಬಳಸದಿರುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂಖ್ಯೆ: ಎಡಿಎಂ2(4)ಶೌ.ನಿ/01/2024-25 ದಿನಾಂಕ:28.12.2023

****

ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆಯನ್ನು ಕಡ್ಡಾಯವಾಗಿ ಮಾಡಿಸಬಾರದೆಂದು ಸಂಬಂಧಿಸಿದ ಶಾಲಾ ಶಿಕ್ಷಣ ಇಲಾಖಾಧಿಕಾರಿಗಳು ಮತ್ತು ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ ಈಗಾಗಲೇ ಉಲ್ಲೇಖಿತ ಸುತ್ತೋಲೆಯ ಮೂಲಕ ತಿಳಿಸಲಾಗಿದ್ದರೂ ಸಹ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುತ್ತಿರುವ ಬಗ್ಗೆ, ಇತ್ತೀಚೆಗೆ ಕೆಲವು ಪ್ರಕರಣಗಳು ಬೆಳಕಿಗೆ ಬಂದಿರುವುದನ್ನು ಇಲಾಖೆಯು ಗಮನಿಸಿದೆ.

ಸರ್ಕಾರದಿಂದ ಮತ್ತು ಇಲಾಖೆಯಿಂದ ಕಾಲ-ಕಾಲಕ್ಕೆ ಹೊರಡಿಸಲಾಗುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಚಾಚೂ ತಪ್ಪದೆ ಪಾಲಿಸುವಂತೆ ಸೂಚನೆಗಳನ್ನು ನೀಡಲಾಗುತ್ತಿದ್ದರೂ ಸಹ ಇಂತಹ ಸೂಚನೆಗಳನ್ನು ಉಲ್ಲಂಘಿಸುತ್ತಿರುವುದು ಗಂಭೀರವಾಗಿ ಪರಿಗಣಿಸಿ, ಆಕ್ಷೇಪಿಸಿದೆ.

ಈ ಹಿನ್ನೆಲೆಯಲ್ಲಿ ಮತ್ತೆ ಇಂತಹ ಘಟನೆಗಳು ಮರುಕಳಿಸಿದ್ದಲ್ಲಿ ಅಂತವರ ವಿರುದ್ಧ ಇಲಾಖಾ ವತಿಯಿಂದ ನಿಯಮಾನುಸಾರ ಕಠಿಣ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಅಲ್ಲದೆ ಪ್ರಥಮ ವರ್ತಮಾನ ವರದಿ (FIR) ದಾಖಲಿಸಲಾಗುವುದು ಮತ್ತು ಸಂಬಂಧಿಸಿದ ಶಾಲಾ ಶಿಕ್ಷಣ ಇಲಾಖಾಧಿಕಾರಿಗಳು ಮತ್ತು ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಮುಖ್ಯ ಶಿಕ್ಷಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು.

ಉಲ್ಲೇಖಿತ ಪತ್ರದಲ್ಲಿ ಶೌಚಾಲಯ ಸ್ವಚ್ಛತೆಯನ್ನು ನಿರ್ಹಿಸುವ ಕುರಿತು ತಿಳಿಸಿರುವ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮತ್ತೊಮ್ಮೆ ಎಚ್ಚರಿಸಲಾಗಿದೆ.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕ ವೃಂದದ ಅಧಿಕಾರಿಗಳಿಗೆ / ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ.
4. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಹ ನಿರ್ದೇಶಕರು (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
6. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರಿಗೆ.
7. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸಹ/ ಜಂಟಿ ನಿರ್ದೇಶಕ ವೃಂದದ ಅಧಿಕಾರಿಗಳಿಗೆ.
8. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ(ಸಿ.ಟಿ.ಇ)ಗಳ ಪ್ರಾಂಶುಪಾಲರು ಮತ್ತು ಪದನಿಮಿತ್ತ ಸಹನಿರ್ದೇಶಕರಿಗೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಾಮೋಜಿಗೌಡ((ಪದವೀಧರರ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಸ್ಪಷ್ಟವಾಗಿರುವ ಮಾಹಿತಿ ದೊರೆಯುತ್ತಿಲ್ಲ. ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು ಖಾಯಂ ಸಿಬ್ಬಂದಿಯನ್ನು ನೇಮಿಸಲಾಗಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು "ಯಾವುದೇ ಹುದ್ದೆಗಳು ಮಂಜೂರಾಗಿಲ್ಲ. ಮೇಲುಸ್ತುವಾರಿ ಸಮಿತಿಯವರೇ ಇವರುಗಳನ್ನು ನೇಮಕ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ" ಎನ್ನುವ ಲಿಖಿತ ರೂಪದ ಉತ್ತರವನ್ನು ನೀಡಿದ್ದಾರೆ. ಆದರೆ, "ಮೇಲುಸ್ತುವಾರಿ ಸಮಿತಿ ರಚನೆ ಮಾಡುವುದಕ್ಕೆ ಯಾರೂ ಸಿಗುತ್ತಿಲ್ಲ. ಯಾರನ್ನಾದರೂ ಏತಕ್ಕೋಸ್ಕರ ನೇಮಕ ಮಾಡಬಾರದು?" ಎನ್ನುವ ನನ್ನ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿಲ್ಲ. ಇನ್ನೂ "ಒಂದು ವೇಳೆ ಖಾಯಂ ಸ್ವಚ್ಛತಾ ಸಿಬ್ಬಂದಿ ಇಲ್ಲದಿದ್ದರೆ, ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ಹೊರಗುತ್ತಿಗೆ ಸಂಸ್ಥೆಗಳ ಮೂಲಕ ನಿರ್ವಹಿಸಲು ಅವಕಾಶ ಮತ್ತು ಅನುದಾನ ಒದಗಿಸುವ ಕುರಿತು ಸರ್ಕಾರದ ನಿಲುವೇನು?" ಎನ್ನುವ ನನ್ನ 5ನೇ ಪ್ರಶ್ನೆಗೆ ಮೊದಲನೆಯ ಪ್ರಶ್ನೆಗೆ ನೀಡಿರುವ ಉತ್ತರವನ್ನೇ ನೀಡಲಾಗಿದೆ ಹಾಗೂ "ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು ಗೌರವಧನದ ಆಧಾರದ ಮೇಲೆ ಗ್ರೂಪ್-ಡಿ ನೌಕರರನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ" ಎನ್ನುವ ಉತ್ತರವನ್ನು ನೀಡಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನದ ಪ್ರಮಾಣ ಹಿಂದೆ ನೀಡಲಾಗುತ್ತಿದ್ದ ಅನುದಾನಕ್ಕಿಂತ ಎರಡರಷ್ಟು ಹೆಚ್ಚಾಗಿದೆ ಇದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ.

(ಮುಂದು)

(604) 11.8.2025 12.40 ಪಿಕೆ:ವಿಕೆ

ಶ್ರೀ ರಾಮೋಜಿಗೌಡ(ಮುಂದು)

ಇದಕ್ಕೆ ಕೊಡುತ್ತಿರುವ ಅನುದಾನ ಎರಡು ಪಟ್ಟು ಹೆಚ್ಚಾಗಿದ್ದರೂ ಕೂಡ ಆ ಹಣ ನಮಗೆ ಸಾಕಾಗುತ್ತಿಲ್ಲ. ಈ ಶೌಚಾಲಯ ಸ್ವಚ್ಛತಾ ಕಾರ್ಯಕ್ಕೆ ಯಾರೂ ಸಿಗುತ್ತಿಲ್ಲ. ಈ ಕುರಿತು ಸರ್ಕಾರ ಏನು ಯೋಜನೆಗಳನ್ನು ಹಾಕಿಕೊಂಡಿದೆ? ಸ್ವಚ್ಛತಾ ಕಾರ್ಯವನ್ನು ಯಾರು ಮಾಡಬೇಕು? ಈ ಸ್ವಚ್ಛತಾ ಕಾರ್ಯವನ್ನು ಮಕ್ಕಳು ಮಾಡಬಾರದು; ಶಿಕ್ಷಕರು ಮಾಡಬಾರದು ಎಂದು ಹೇಳುತ್ತೀರಿ. ಹಾಗಾದರೆ ಯಾರು ಮಾಡಬೇಕು? ಸ್ವಚ್ಛತಾ ಕಾರ್ಯವನ್ನು ಮಾಡಲು ಯಾರೂ ಕೂಡ ಸಿಗುತ್ತಿಲ್ಲ. ನನ್ನ ಈ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟರೆ, ನಂತರ ನಾನು ನನ್ನ ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):- ಮಾನ್ಯ ಸಭಾಪತಿಗಳೆ, ಸಾಮಾನ್ಯವಾಗಿ, ಎಸ್‌ಡಿಎಂಸಿಯವರಿಗೆ ನಾವೇನು ಅನುದಾನ ಬಿಡುಗಡೆ ಮಾಡುತ್ತೇವೆಯೋ ಅದರಲ್ಲಿ ಶೇಕಡ 10ರಷ್ಟು ಹಣವನ್ನು ಶೌಚಾಲಯದ ಸ್ವಚ್ಛತೆಗೆ ಬಳಸಬೇಕಾಗುತ್ತದೆ. ಶೇಕಡ 10ರಷ್ಟು ಎಂದಿರುವುದನ್ನು ಶೇಕಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

೩೦ರಷ್ಟು ಎಂದು ಮಾಡುವುದರ ಬಗ್ಗೆ ನಮ್ಮ ಇಲಾಖೆಯಲ್ಲಿ ಚಿಂತನೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಶಾಲೆಗಳಲ್ಲಿ ಮಕ್ಕಳು ಅಥವಾ ಶಿಕ್ಷಕರು ಸ್ವಚ್ಛತೆ ಮಾಡುತ್ತಿರುವಂಥದ್ದು ಕೆಲವು ಮಾಧ್ಯಮಗಳಲ್ಲಿ ಬಂದುಬಿಡುತ್ತದೆ. ಯಾವುದೇ ಕಾರಣಕ್ಕೂ ಮಕ್ಕಳ ಕೈಯಲ್ಲಿ ಶೌಚಾಲಯವನ್ನು ಸ್ವಚ್ಛಗೊಳಿಸುವಂತಹ ಕೆಲಸವನ್ನು ಮಾಡಿಸಬಾರದು; ಅಂತಹ ಸಂಪ್ರದಾಯ ನಮ್ಮಲ್ಲಿ ಇಲ್ಲ ಎಂದು ಹೇಳಿದ್ದೇವೆ.

ಕಾಲೇಜುಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮಟ್ಟದಲ್ಲಿ ಅನುದಾನ ಹೆಚ್ಚಾಗಿ ಕೊಟ್ಟು, ಅವರೇ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಮಾಡಬೇಕು ಎನ್ನುವ ನಿಟ್ಟಿನಲ್ಲಿ ತೀರ್ಮಾನ ಮಾಡುತ್ತಿದ್ದೇವೆ. ಹಣ ಬಿಡುಗಡೆ ಮಾಡುವಂಥದ್ದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅಲ್ಲದೇ, ಅದರ ಜೊತೆ ನಾವು ನಮ್ಮ ಇಲಾಖೆಯ ವತಿಯಿಂದ ಹೆಚ್ಚು ಅನುದಾನ ಒದಗಿಸುವಂತಹ ವ್ಯವಸ್ಥೆ ಮಾಡಿ, ಶೇಕಡ 10ರಷ್ಟು ಎಂದಿರುವುದನ್ನು ಇನ್ನೂ ಹೆಚ್ಚಿಗೆ ಮಾಡಬೇಕಾಗುತ್ತದೆ. ಈ ಕಾರ್ಯಕ್ಕೆಂದೇ ಹುದ್ದೆಗಳನ್ನು ತುಂಬಿಕೊಳ್ಳುವ ಪ್ರಸ್ತಾವವನ್ನು ಆರ್ಥಿಕ ಇಲಾಖೆಗೆ ಕಳುಹಿಸಬೇಕು ಎನ್ನುವ ವಿಷಯ ನಮ್ಮ ಮುಂದೆ ಇಲ್ಲ. ಶೌಚಾಲಯ ನಿರ್ವಹಣೆ ಮಾಡುವ ಸಲುವಾಗಿ ಏನು ಶೇಕಡ 10 ಅನುದಾನ ಬಳಸಬೇಕು ಎಂದಿದೆಯೋ ಅದನ್ನು ಶೇಕಡ ೩೦ರ ಹಂತಕ್ಕೆ ತೆಗೆದುಕೊಂಡು ಹೋದಾಗ ಅದು ಒಂದು ಹಂತಕ್ಕೆ ಬರುತ್ತದೆ ಎನ್ನುವ ವಿಶ್ವಾಸ ನಮಗಿದೆ. ಈ ಕೆಲಸವನ್ನು ಮಾಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೀಗೆ ಮಾಡುವುದರಿಂದ ಶಿಕ್ಷಕರ ಹೊರೆ ಸ್ವಲ್ಪ ಕಡಿಮೆ ಆಗುತ್ತದೆ. ಆಗ ಅವರು ಬೇರೆ ಕೆಲಸಗಳನ್ನು ಅಥವಾ ಪಾಠ ಮಾಡುವ ಕೆಲಸದ ಕಡೆ ಹೆಚ್ಚು ಗಮನ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಮಧು ಜಿ.ಮಾದೇಗೌಡ:- ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಶೇಕಡ 10ರಷ್ಟು ಎಂದಿರುವುದನ್ನು ಶೇಕಡ 30 ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ವರ್ಷಕ್ಕೇನು ರೂ. 10,000 ಎಂದು ನಿಗದಿ ಮಾಡಿದ್ದಾರೋ ಅದರಲ್ಲಿ ಶೇಕಡ 10 ಎಂದರೆ ರೂ. 1,000 ಆಗುತ್ತದೆ. ಶೇಕಡ 20 ಎಂದು ಮಾಡಿದರೆ ವರ್ಷಕ್ಕೆ ರೂ. 2,000 ಆಗುತ್ತದೆ. ಆದರೆ, ಈ ಮೊತ್ತವನ್ನು ಶೇಕಡ 30ಕ್ಕೆ ಏರಿಸಿದರೂ ಸದರಿ ಕೆಲಸವನ್ನು ಮಾಡಲು ಯಾರೂ ಕೂಡ ಸಿಗುವುದಿಲ್ಲ. ಹಾಗಾಗಿ ನೀವು ಬೇಸ್ ಲೆವೆಲ್‌ನಲ್ಲಿ ಸರಿ ಮಾಡಬೇಕು. ಮತ್ತೆ, ಅನುದಾನದ ಲಭ್ಯತೆಗನುಗುಣವಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದೀರಿ.

ಶ್ರೀ ಎಸ್. ಮಧು ಬಂಗಾರಪ್ಪ:- ಮಾನ್ಯ ಸಭಾಪತಿಗಳೆ, ನಾವು ಈಗೇನು ಶೇಕಡ 10 ಅನುದಾನವನ್ನು ನಿಗದಿ ಮಾಡಿದ್ದೇವೆಯೋ ಅದನ್ನೇ ಸುಮಾರು ಶೇಕಡ 30 ರಷ್ಟು ಮಾಡಿದರೆ ಪರಿಸ್ಥಿತಿ ಸುಧಾರಣೆ ಆಗುತ್ತದೆ. ಇದರ ಜೊತೆ, 100 ಮಕ್ಕಳಿದ್ದರೆ ಎಷ್ಟು ಜಾಸ್ತಿ ಮಾಡಬೇಕು, 200 ಮಕ್ಕಳಿದ್ದರೆ ಎಷ್ಟು ಜಾಸ್ತಿ ಮಾಡಬೇಕು ಎಂಬ ಬಗ್ಗೆ ಗಮನ ಕೊಡುತ್ತೇವೆ.

ಶ್ರೀ ಮಧು ಜಿ.ಮಾದೇಗೌಡ:- ಈಗೇನು ಸ್ಲ್ಯಾಬ್‌ನಲ್ಲಿದೆಯೋ ಅದನ್ನೂ ಕೂಡ ಜಾಸ್ತಿ ಮಾಡಿ, ಅದರ ಜೊತೆ ತಾವು ಪರ್ಸೆಂಟೇಜನ್ನು ಜಾಸ್ತಿ ಮಾಡಿದರೆ ಅದರಿಂದ ಅನುಕೂಲವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್. ಮಧು ಬಂಗಾರಪ್ಪ:– ಅದನ್ನೂ ಕೂಡ ಜಾಸ್ತಿ ಮಾಡುತ್ತೇವೆ.

ಶ್ರೀ ಮಧು ಜಿ.ಮಾದೇಗೌಡ:– ಈಗಿರುವ ಸ್ಲ್ಯಾಬ್‌ಗೆ ಸಂಬಂಧಪಟ್ಟಂತೆ ಶೇಕಡವಾರು ಜಾಸ್ತಿ ಮಾಡಿದರೆ ಅದು ಏನೂ ಪ್ರಯೋಜನಕ್ಕೆ ಬರುವುದಿಲ್ಲ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಸಭಾಪತಿಗಳೆ, ನಮ್ಮ ಸರ್ಕಾರ ಬಂದಮೇಲೆ ಈ ಮುಂಚೆ ಇದ್ದುದನ್ನು ಡಬ್ಬಲ್ ಮಾಡಿದ್ದೇವೆ. ಆದರೆ ಅದೂ ಕೂಡ ಸಾಲುತ್ತಿಲ್ಲ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಈ ಮೊತ್ತವನ್ನು ಇನ್ನೂ ಕೂಡ ಜಾಸ್ತಿ ಮಾಡಬೇಕಿದೆ. ಕೆಲವು ಸಲ ಏನಾಗುತ್ತದೆ ಎಂದರೆ, 500 ಮಕ್ಕಳು ಇರುವ ಕಡೆ ಕೇವಲ ರೂ. 50,000 ಕೊಡುತ್ತೇವೆ. 25 ಮಕ್ಕಳು ಇರುವ ಕಡೆಯೂ ರೂ. 50,000 ಕೊಡುತ್ತೇವೆ. ಇಂತಹ ತಾರತಮ್ಯ ಆಗಬಾರದೆಂದೂ, ಇದನ್ನು ಸ್ಲ್ಯಾಬ್ ಸಿಸ್ಟಮ್‌ನ ಅನುಗುಣವಾಗಿ ಮಾಡಬೇಕೆಂದು ಇಲಾಖೆಯಲ್ಲಿ ಪ್ರಪೋಸಲ್ ಇದೆ. ಈ ಕುರಿತು ಒಂದು ತಿಂಗಳ ಒಳಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಮಧು ಜಿ.ಮಾದೇಗೌಡ:– ಮಾನ್ಯ ಸಭಾಪತಿಗಳೆ, ಇದರ ಜೊತೆಗೆ, ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಕ್ರಮ ಕೈಗೊಂಡರೆ ಅನುಕೂಲವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯ ಸ್ವಚ್ಛತೆಯ ಕೆಲಸವನ್ನು ಮಾಡಲು ಯಾರೂ ಸಿಗುತ್ತಿಲ್ಲ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಸಭಾಪತಿಗಳೆ, ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಸಿಬ್ಬಂದಿಗಳನ್ನು ತೆಗೆದುಕೊಳ್ಳಬೇಕು ಎನ್ನುವ ನಿಟ್ಟಿನಲ್ಲಿ ತೀರ್ಮಾನ ಮಾಡುವವರಿದ್ದೇವೆ. ಒಂದು ತಿಂಗಳ ಒಳಗೆ ಸ್ಲ್ಯಾಬ್ ಸಿಸ್ಟಮ್ ಅನುಸರಿಸಿ ಮಾಡುತ್ತೇವೆ. ಇದರಿಂದ ಕಾರ್ಯಭಾರವನ್ನು ಹಂಚಿದಂತಾಗಿ, ಈ ನಿಟ್ಟಿನಲ್ಲಿ ಕೆಲಸ ಮಾಡಬಹುದಾಗಿರುತ್ತದೆ.

ಶ್ರೀ ರಾಮೋಜಿಗೌಡ:– ಮಾನ್ಯ ಸಭಾಪತಿಗಳೆ, ಸರ್ಕಾರ ಅನುದಾನ ಕೊಡುವುದು ಮುಖ್ಯವಲ್ಲ. ಅಧಿಕಾರಿಗಳು ಏನು ಕಿರುಕುಳ ಕೊಡುತ್ತಾರೋ ಅದು ಬಹು ದೊಡ್ಡ ಸಮಸ್ಯೆಯಾಗಿದೆ. ಮಕ್ಕಳು ಸ್ವಚ್ಛತಾ ಕಾರ್ಯವನ್ನು ಮಾಡಬಾರದು ಎಂದು ಹೇಳುತ್ತಾರೆ. ಆದರೆ ಅಲ್ಲಿನ ಉಸ್ತುವಾರಿ ಸಮಿತಿಯಿಂದ ನೇಮಕ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ರಾಮನಗರದಲ್ಲಿ ಒಂದು ಘಟನೆಯಾಗಿದೆ. ಹಾಲು ಚೆಲ್ಲಿ ಹೋದುದನ್ನು ಒಂದು ಮಗು ಮತ್ತು ಒಬ್ಬ ಶಿಕ್ಷಕ ಕ್ಲೀನ್ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಬಿಇಓ ಅಲ್ಲಿಗೆ ಹೋಗಿ ಶಿಕ್ಷಕನನ್ನು ಸಸ್ಪೆಂಡ್ ಮಾಡುತ್ತಾರೆ. ಹಾಲು ಚೆಲ್ಲಿರುವುದನ್ನು ಯಾರು ಕ್ಲೀನ್ ಮಾಡಬೇಕು? 12.00 ಗಂಟೆಗೆ ಅಥವಾ 1.00 ಗಂಟೆಗೆ ಹಾಲು ಚೆಲ್ಲಿದರೆ ಆ ಸಮಯದಲ್ಲಿ ಯಾರು ಬಂದು ಕ್ಲೀನ್ ಮಾಡುತ್ತಾರೆ? ಇನ್ನೊಂದು ಘಟನೆ ಬಗ್ಗೆ ಹೇಳುವುದಾದರೆ, ಬೆಂಗಳೂರು ದಕ್ಷಿಣ ಭಾಗದ ಒಂದು ಶಾಲೆಯಲ್ಲಿ, ಒಂದು ಮಗು ಕೈಯಲ್ಲಿ ಪೊರಕೆ ಇಟ್ಟುಕೊಂಡಿರುವುದರ ಫೋಟೋ ಬಂದ ಹಿನ್ನಲೆಯಲ್ಲಿ ಒಬ್ಬ ಶಿಕ್ಷಕನನ್ನು ಸಸ್ಪೆಂಡ್ ಮಾಡಿದ್ದಾರೆ. ಬೇಗೂರಿನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಶಾಲೆಯಲ್ಲಿ, 2 ತಿಂಗಳಿನಲ್ಲಿ ನಿವೃತ್ತಿ ಹೊಂದುವಂತಹ ಒಬ್ಬ ಶಿಕ್ಷಕನನ್ನು ಸಸ್ಪೆಂಡ್ ಮಾಡಿ, ನಂತರ ಸಿ ವಲಯಕ್ಕೆ ಹಾಕಿದ್ದಾರೆ. ಈ ರೀತಿ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ. ಈಗ ನೀವು ಕೊಡಲು ಹೊರಟಿರುವ ಅನುದಾನ ಬೇಡ. ನೀವು ಸದರಿ ಕೆಲಸವನ್ನು ನಿರ್ವಹಣೆ ಮಾಡಲು ಯಾವುದಾದರೂ ಒಂದು ಏಜೆನ್ಸಿಗೆ ಕೊಡಿ. ಏಜೆನ್ಸಿಯವರು ಮೇಂಟೇನ್ ಮಾಡಿಕೊಂಡು ಹೋಗಲಿ. ಇಲ್ಲದಿದ್ದರೆ, ನೀವು ನಿಮ್ಮ ಅಧಿಕಾರಿಗಳಿಗೆ, ಈ ಕೆಲಸವನ್ನು ಒಂದು ಏಜೆನ್ಸಿಯವರಿಗೆ ಕೊಡುವವರೆಗೂ ಅಧಿಕಾರಿಗಳಿಗೆ ತೊಂದರೆ ಕೊಡುವಂಥದ್ದನ್ನು ಮಾಡಬಾರದು ಎಂದು ಸೂಚನೆ ಕೊಡಿ. ಒಬ್ಬ ಶಿಕ್ಷಕನನ್ನು ಸಸ್ಪೆಂಡ್ ಮಾಡಬೇಕಾದರೆ, ಒಂದು ಮಗುವಿನ ಕೈಯಲ್ಲಿ ಪೊರಕೆಯನ್ನು ಕೊಟ್ಟು, ಅದರ ಫೋಟೋ ತೆಗೆದರೆ ಅಲ್ಲಿನ ಶಿಕ್ಷಕನನ್ನು ಸಸ್ಪೆಂಡ್ ಮಾಡುವಂತಹ ಸ್ಥಿತಿ ಇದೆ. ಸಾಮಾಜಿಕ ಜಾಲತಾಣದಲ್ಲಿ ಬರುವುದನ್ನು ನೋಡಿ ಸಸ್ಪೆಂಡ್ ಮಾಡುವಂಥದ್ದು ಆಗುತ್ತಿದೆ. ನನ್ನ ಮತಕ್ಷೇತ್ರದಲ್ಲಿ ಕೇವಲ 6 ತಿಂಗಳ ಒಳಗೆ 3 ಶಿಕ್ಷಕರಿಗೆ ಈ ರೀತಿ ಮಾಡಿದ್ದಾರೆ. ಅಧಿಕಾರಿಗಳು ಈ ರೀತಿ ಶಿಕ್ಷಕರಿಗೆ ತೊಂದರೆ ಕೊಟ್ಟರೆ ಅವರು ಹೇಗೆ ಪಾಠ ಮಾಡುತ್ತಾರೆ?

ಸಭಾಪತಿಯವರು:– ಮಾನ್ಯ ಸಚಿವರೇ, ಈ ವಿಷಯವಾಗಿ ನಾನು ಕೂಡ ನಿಮಗೆ ಪತ್ರ ಬರೆದಿದ್ದೇನೆ. ಬಹಳ ಮಂದಿಗೆ ಇಂತಹ ಸಮಸ್ಯೆಯಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಯಾವುದೇ ರೀತಿ ತೊಂದರೆ ಆಗದ ಹಾಗೆ ಮತ್ತು ಶೌಚಾಲಯದ ಸ್ವಚ್ಛತೆಗಾಗಿ ಬೇರೆ ವ್ಯವಸ್ಥೆ ಮಾಡಬೇಕು.

ಶ್ರೀ ಎಸ್.ಮಧು ಬಂಗಾರಪ್ಪ:– ಮಾನ್ಯ ಸಭಾಪತಿಗಳೆ, ಎಲ್ಲಾ ಕಡೆ ನಾವು ಈಗಾಗಲೇ ಸ್ಟ್ಯಾಂಡರ್ಡ್ ಆಪರೇಟಿಂಗ್ ಸಿಸ್ಟಮ್ ಅನ್ನು ತಂದು, ಅದರ ಒಂದು ನಿರ್ದೇಶನವನ್ನು ಪಡೆದುಕೊಳ್ಳುವ ಕೆಲಸ ಮಾಡಬಯಸಿದ್ದೇವೆ. ಆದರೆ ಸಾಮಾಜಿಕ ಜಾಲತಾಣದಲ್ಲಿ ಇಂಥದ್ದು ಬಂದಾಗ ಇಲಾಖೆಯ ವತಿಯಿಂದ ಈ ನಿಟ್ಟಿನಲ್ಲಿ ಮೂವ್ ಮಾಡಬಾರದು ಎಂದು ಹೇಳಿದರೆ ತಪ್ಪಾಗುತ್ತದೆ. ಆ ಕುರಿತು ತನಿಖೆ ಮಾಡಿ ಅವರದು ಏನೂ ತಪ್ಪಿಲ್ಲ ಎಂದು ಗೊತ್ತಾದರೆ ಅಂಥವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಹೋಗುವುದಿಲ್ಲ. ಕೆಲವು ಸಲ, ಕ್ರಮ ಕೈಗೊಳ್ಳದೇ ಇದ್ದಾಗ ಅದಕ್ಕೆ ವಿರೋಧ ವ್ಯಕ್ತಪಡಿಸುವಂಥದ್ದು ಸಹಜವಾಗಿಯೇ ಇರುತ್ತದೆ. ಯಾರಿಗೋ ತೊಂದರೆ ಕೊಡಬೇಕು ಎನ್ನುವುದು ಇಲ್ಲಿನ ಉದ್ದೇಶವಲ್ಲ. ಪೆನ್ ಹಿಡಿಯುವಂತಹ ಕೈಯಲ್ಲಿ ಶಿಕ್ಷಕರು ಪೊರಕೆಯನ್ನು ಹಿಡಿಸುವಂತಹ ಸಂಪ್ರದಾಯ ನಮ್ಮಲ್ಲಿ ಇಲ್ಲ. ಒಂದು ಸ್ಟ್ಯಾಂಡರ್ಡ್ ಆಪರೇಟಿಂಗ್ ಸಿಸ್ಟಮ್ ಅನ್ನು ತಂದು ಆದಷ್ಟು ಬೇಗ ಈ ದಿಸೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಶೌಚಾಲಯ ಸ್ವಚ್ಛತೆಯ ಕಾರ್ಯದಿಂದ ಶಿಕ್ಷಕರನ್ನು ಮತ್ತು ಮಕ್ಕಳನ್ನು ದೂರ ಇಡುವಂತಹ ಕೆಲಸ ಮಾಡುತ್ತೇವೆ ಎನ್ನುವ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ವಿವೇಕಾನಂದ:– ಮಾನ್ಯ ಸಭಾಪತಿಗಳೆ, ಮಕ್ಕಳು ಶೌಚಾಲಯವನ್ನು ತೊಳೆಯುವಹಾಗಿಲ್ಲ ಎಂದು ಆದೇಶವಾಗಿದೆ. ಆದರೆ, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಮೈಸೂರು ಈ ನಾಲ್ಕು ಭಾಗಗಳಲ್ಲಿ ಶಿಕ್ಷಕರು,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೌಚಾಲಯವನ್ನು ನಾವೇ ತೊಳೆಯಬೇಕಾಗಿದೆ ಎಂದು ದೂರು ಕೊಡುತ್ತಿದ್ದಾರೆ. ಈಗೇನು ಕೊಡುವ ಅನುದಾನದಲ್ಲಿ ಶೇಕಡ 10 ರಷ್ಟು ಈ ಕಾರ್ಯಕ್ಕೆ ಬಳಸಿಕೊಳ್ಳಬೇಕೆಂದು ಹೇಳುತ್ತಾರೋ ಅದು ಸಾಕಾಗುವುದಿಲ್ಲ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿ ಮತ್ತು ಕಾರ್ಪೋರೇಷನ್ ಏನಿವೆ, ಅವು ಆಯಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಶನಿವಾರ ಮತ್ತು ಭಾನುವಾರ, 2-3 ಗಂಟೆಗಳ ಸಮಯದಲ್ಲಿ ಪೌರ ಕಾರ್ಮಿಕರಿಂದ ಸ್ವಚ್ಛತೆಯ ಕೆಲಸ ಮಾಡಿಸಬೇಕೆನ್ನುವ ಆದೇಶ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಮಧು ಬಂಗಾರಪ್ಪ:- ಮಾನ್ಯ ಸಭಾಪತಿಗಳೆ, ನಾನು ಸಂಬಂಧಪಟ್ಟ ಇಲಾಖೆಯ ಜೊತೆ ಮಾತನಾಡಿ ಆ ನಿಟ್ಟಿನಲ್ಲಿ ಅವರು ಅನುಕೂಲ ಮಾಡಿಕೊಡುವುದಾದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಕೆ.ವಿವೇಕಾನಂದ:- ಮಾನ್ಯ ಸಭಾಪತಿಗಳೆ, ಶ್ರೀರಂಗಪಟ್ಟಣ ತಾಲ್ಲೂಕಿನ ಒಂದು ಶಾಲಾ-ಕಾಲೇಜು ಪ್ರಾರಂಭವಾಗಿ 75 ವರ್ಷವಾಗಿದ್ದು, 350 ವಿದ್ಯಾರ್ಥಿಗಳಿದ್ದರೂ ಅಲ್ಲಿ ಒಂದೇ ಒಂದು ಶೌಚಾಲಯ ಇದೆ. ಮಾನ್ಯ ಸಚಿವರು ಅಲ್ಲಿಗೆ ಯಾರನ್ನು ಬೇಕಾದರೂ ಕಳುಹಿಸಿ ಪರಿಶೀಲನೆ ಮಾಡಿಸಬಹುದು.

ಸಭಾಪತಿಯವರು:- ಮಾನ್ಯ ಸದಸ್ಯರೇ, ನೀವು ಈ ಕುರಿತು ಮಾನ್ಯ ಸಚಿವರಿಗೆ ಒಂದು ಪತ್ರ ಕಳುಹಿಸಿ ಕೊಡಿ, ಅವರು ಸೂಕ್ತ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಎಸ್. ಮಧು ಬಂಗಾರಪ್ಪ:- ಮಾನ್ಯ ಸದಸ್ಯರು, ಸ್ಥಳೀಯ ಸಂಸ್ಥೆಗಳ ಮೂಲಕ ಸ್ವಚ್ಛತಾ ಕೆಲಸವನ್ನು ಮಾಡಿಸಬೇಕು ಎಂದು ಹೇಳಿದರು. ನಾನು ಸಂಬಂಧಪಟ್ಟ ಇಲಾಖೆಯ ಜೊತೆ ಮಾತನಾಡಿ, ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಇಲ್ಲವೇ ಎಂಬುದನ್ನು ನೋಡುತ್ತೇನೆ. ಮತ್ತೆ, ಮಾನ್ಯ ಸದಸ್ಯರು ಏನು ಒಂದೇ ಶೌಚಾಲಯ ಇರುವುದರ ಬಗ್ಗೆ ಪ್ರಸ್ತಾಪ ಮಾಡಿದರೋ ಅಲ್ಲಿ 2-3 ಅಥವಾ ಅವಶ್ಯಕತೆಗೆ ಅನುಗುಣವಾಗಿ ಶೌಚಾಲಯಗಳನ್ನು ಕಟ್ಟಿಸಿ ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

(ಮುಂದು)

(605) 11-8-2025 12.50 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಮಧುಬಂಗಾರಪ್ಪ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ಅಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಇನ್ನು ಬೇರೆ ಬೇರೆ ಇಲಾಖೆಗಳು ಬರುವುದರಿಂದ ಅವರ ಜೊತೆ ಮಾತುಕತೆ ಮಾಡಿಕೊಂಡು ಅನುಕೂಲ ಮಾಡಿಕೊಡುವುದಕ್ಕಾಗುತ್ತದೆಯೇ ಎಂಬುದನ್ನು ನಾನು ನೋಡುತ್ತೇನೆ. ಶೌಚಾಲಯ ಒಂದೇ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಎರಡು ಅಥವಾ ಮೂರು, ಅವರಿಗೆ ಎಷ್ಟು ಶೌಚಾಲಯಗಳು ಬೇಕು ಎಂದು ಹೇಳುತ್ತಾರೆಯೋ ಅಷ್ಟು ಶೌಚಾಲಯವನ್ನು ಕಟ್ಟಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ವಿವೇಕಾನಂದ:– ಮಾನ್ಯ ಸಭಾಪತಿಯವರೇ, ಕಳೆದ ವರ್ಷದ ಅಧಿವೇಶನದಲ್ಲಿ ರಾಯಪುರದ ಶಾಲೆಗಳಲ್ಲಿ ಕೊಠಡಿಗಳು, ಶೌಚಾಲಯಗಳು ಇಲ್ಲ ಎಂದು ನಾನು ಮನವಿ ಮಾಡಿಕೊಂಡಾಗ, ಮಾನ್ಯ ಸಚಿವರು ಮಾಡಿ ಕೊಡುತ್ತೇನೆ ಎಂದು ಹೇಳಿದ್ದರು. ಆದರೆ ಇದುವರೆವಿಗೂ ಅವುಗಳು ಆಗಿಲ್ಲ, ಈ ವರ್ಷ ಶಾಲೆಗಳು ಪ್ರಾರಂಭವಾಗಿವೆ. ಪ್ರೌಢಶಾಲೆಯಲ್ಲೇ ಪಿ.ಯು. ಕಾಲೇಜು ಕೂಡ ನಡೆಯುತ್ತಿದೆ. ನಾನು ಯಾವಾಗಲೂ ಒಂದೊಂದು ಪ್ರಶ್ನೆಯನ್ನು ಕೇಳುತ್ತೇನೆ. ನಾನು ಶಿಕ್ಷಕರಿಗೆ ಉತ್ತರವನ್ನು ಕೊಡುವುದಕ್ಕಾಗುತ್ತಿಲ್ಲ. ದಯಮಾಡಿ ಮಾನ್ಯ ಸಚಿವರು ಈ ಕೆಲಸವನ್ನು ಮಾಡಿ ಕೊಡಬೇಕು.

ಶ್ರೀ ಮಧುಬಂಗಾರಪ್ಪ:– ಮಾನ್ಯ ಸಭಾಪತಿಯವರೇ, ಮಾಡಿ ಕೊಡುತ್ತೇನೆ. ಕೊಠಡಿಗಳನ್ನು ನಿರ್ಮಾಣ ಮಾಡಿ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 21

ವೈದ್ಯಕೀಯ ಶಿಕ್ಷಣ ಕಾಲೇಜುಗಳ ಹುದ್ದೆಗಳ ಬಗ್ಗೆ.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರಕಾರಿ ವೈದ್ಯಕೀಯ ವಿಜ್ಞಾನ ಕಾಲೇಜುಗಳ ಸಂಖ್ಯೆ ಎಷ್ಟು; (ಮಾಹಿತಿ ಒದಗಿಸವುದು)	ರಾಜ್ಯದಲ್ಲಿ ಒಟ್ಟು 22 ಸರ್ಕಾರಿ ವೈದ್ಯಕೀಯ ವಿಜ್ಞಾನ ಕಾಲೇಜುಗಳಿವೆ. (ಜಿಲ್ಲಾವಾರು ಮಾಹಿತಿ ಅನುಬಂಧ-1ರಲ್ಲಿ ಲಗತ್ತಿಸಿದೆ.)
ಆ)	ಈ ಕಾಲೇಜುಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಎಷ್ಟು ಹುದ್ದೆಗಳು ಖಾಲಿ ಇವೆ;	ಸದರಿ ಕಾಲೇಜುಗಳಿಗೆ ಒಟ್ಟು 21860 ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 9413 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಹಾಗೂ ಒಟ್ಟು 12447 ಹುದ್ದೆಗಳು ಖಾಲಿ ಇವೆ. ಸದರಿ ಸರ್ಕಾರಿ ಕಾಲೇಜುಗಳಿಗೆ ಹೊಂದಿಕೊಂಡ ಆಸ್ಪತ್ರೆಗಳಿಗೆ ಒಟ್ಟು 5584 ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 2028 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಹಾಗೂ ಒಟ್ಟು 3556 ಹುದ್ದೆಗಳು ಖಾಲಿ ಇವೆ. (ಕಾಲೇಜುವಾರು ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ.)
ಇ)	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು;	ವೈದ್ಯಕೀಯ ಕಾಲೇಜುಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಭರ್ತಿಮಾಡಲು ದಿನಾಂಕ: 28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿರುವುದರಿಂದ ಯಾವುದೇ ಹುದ್ದೆಗಳನ್ನು ಭರ್ತಿಮಾಡಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಅಗತ್ಯತೆಗೆ ತಕ್ಕಂತೆ ಗುತ್ತಿಗೆ ಆಧಾರದ ಮೇಲೆ ಹಾಗೂ ಗ್ರೂಪ್ 'ಡಿ' ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಮುಂದುವರೆದು, ಸರ್ಕಾರಿ ಕಾಲೇಜುಗಳಿಗೆ ಹೊಂದಿಕೊಂಡ ಜಿಲ್ಲಾಸ್ಪತೆಯ ಹುದ್ದೆಗಳು ಆ.ಕು.ಕ. ಇಲಾಖೆಯ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬಲು ಕೋರಲಾಗಿರುತ್ತದೆ.
ಈ)	ಈ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಎಷ್ಟು ಹುದ್ದೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ;	ಸದರಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಒಟ್ಟು 806 ಹುದ್ದೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಸುಮಾರು 1 ರಿಂದ 34 ವರ್ಷಗಳವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ಸರ್ಕಾರಿ ಕಾಲೇಜುಗಳಿಗೆ ಹೊಂದಿಕೊಂಡ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಒಟ್ಟು 750 ಹುದ್ದೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಸುಮಾರು 1 ರಿಂದ 18 ವರ್ಷಗಳವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ (ಕಾಲೇಜುವಾರು ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ).
ಉ)	ಹೀಗೆ ಎರವಲು ಸೇವೆ ಮೇಲೆ ಕಾರ್ಯನಿರ್ವಹಿಸುತ್ತಿರುವವನ್ನು ಸರ್ಕಾರ ಹಿಂಪಡೆಯಲು ಉದ್ದೇಶಿಸಿದೆಯೇ; ಉದ್ದೇಶಿಸಿದ್ದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಕೆಲಸ ಕಾರ್ಯಗಳ ಮೇಲೆ ಪರಿಣಾಮ ಬೀರುವುದಿಲ್ಲವೇ ?	ವೈದ್ಯಕೀಯ ಕಾಲೇಜುಗಳಲ್ಲಿ ಸುಮಾರು 5 ವರ್ಷಕ್ಕೂ ಹೆಚ್ಚಿನ ಅವಧಿಗೆ ನಿಯೋಜನೆ ಸೇವೆ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ಆ.ಕು.ಕ. ಇಲಾಖೆಯು ವರ್ಗಾವಣೆ ಮೂಲಕ ಹಿಂಪಡೆದಿರುತ್ತದೆ. ಇದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ಸರ್ಕಾರಿ ಕಾಲೇಜುಗಳಲ್ಲಿ ಹಾಗೂ ಅದಕ್ಕೆ ಹೊಂದಿಕೊಂಡ ಆಸ್ಪತ್ರೆಗಳಲ್ಲಿನ ಕೆಲಸ ಕಾರ್ಯಗಳ ಮೇಲೆ ಪರಿಣಾಮ ಬೀರಲಿದ್ದು, ಪ್ರಸ್ತುತ ಸದರಿ ಖಾಲಿ ಹುದ್ದೆಗಳನ್ನು ಗುತ್ತಿಗೆ/ ಹೊರಗುತ್ತಿಗೆ ಆಧಾರದಲ್ಲಿ ತುಂಬಲಾಗುತ್ತಿದೆ ಹಾಗೂ ಆಕುಕ ಇಲಾಖೆಯ ಖಾಲಿ ಹುದ್ದೆಗಳಿಗೆ ನಿಯೋಜನೆ/ವರ್ಗಾವಣೆ ಮಾಡಲು ಆಕುಕ ಇಲಾಖೆಯನ್ನು ಕೋರಲಾಗಿರುತ್ತದೆ.

ಕಡತ ಸಂಖ್ಯೆ: ಎಂಇಡಿ 152 ಆರ್‌ಜಿಯು 2025

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-1

ಶ್ರೀ ಸಿ.ಎನ್.ಮಂಜೇಗೌಡ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2(21)ಕ್ಕೆ ಸಂಬಂಧಿಸಿದಂತೆ

ಕ್ರ.ಸಂ	ಸರ್ಕಾರಿ ವೈದ್ಯಕೀಯ ಕಾಲೇಜುಗಳು	ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರಿ ಆದೇಶದಂತೆ ಮಂಜೂರಾದ ಹುದ್ದೆಗಳ ವಿವರ			ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಿಗೆ ಸರ್ಕಾರಿ ಆದೇಶದಂತೆ (ಆ.ಕು.ಕ ಇಲಾಖೆಯಿಂದ) ಮಂಜೂರಾದ ಹುದ್ದೆಗಳ ವಿವರ			ಸರ್ಕಾರಿ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಎಷ್ಟು ಹುದ್ದೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ;		ಸರ್ಕಾರಿ ಕಾಲೇಜುಗಳಿಗೆ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಷ್ಟು ಹುದ್ದೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ;	
		ಮಂಜೂರಾದ ಹುದ್ದೆ	ಖಾಲಿ ಹುದ್ದೆ	ಭರ್ತಿ ಹುದ್ದೆ	ಮಂಜೂರಾದ ಹುದ್ದೆ	ಖಾಲಿ ಹುದ್ದೆ	ಭರ್ತಿ ಹುದ್ದೆ	ಒಟ್ಟು ಸಿಬ್ಬಂದಿಗಳ ಸಂಖ್ಯೆ	ವರ್ಷಗಳು	ಒಟ್ಟು ಸಿಬ್ಬಂದಿಗಳ ಸಂಖ್ಯೆ	ವರ್ಷಗಳು
1	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು	3704	2751	953	0	0	0	167	1 ವರ್ಷ ದಿಂದ 20 ವರ್ಷದ ವರಗೆ	0	0
2	ಮೈಸೂರು, ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು	2546	1859	687	0	0	0	144	2 TO 23	0	0
3	ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ	2621	1616	1005	0	0	0	54	1 ವರ್ಷ ದಿಂದ 34 ವರ್ಷದ ವರಗೆ	0	0
4	ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬಳ್ಳಾರಿ.	2085	1696	389	0	0	0	20	20	0	0
5	ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್	772	451	321	288	219	69	0	0	69	18 ವರ್ಷ ಮೇಲ ಟು
6	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು	862	115	747	283	137	146	0	0	0	0
7	ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ.	789	78	711	538	192	346	107	0	107	0
8	ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ.	1169	392	777	381	332	49	0	0	49	05 ವರ್ಷ ಮೇಲ ಟು
9	ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ	834	323	511	302	270	32	0	0	32	15 ವರ್ಷ ಮೇಲ ಟ್ಟು
10	ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ	739	387	352	245	217	28	28	0	28	0
11	ಚಾಮರಾಜನಗರ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಾಮರಾಜನಗರ	665	112	553	181	59	122	40	10		2 to 18 ವರ್ಷ ಮೇಲ ಟು
12	ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಡಗು	691	301	390	458	183	275	183	10		
13	ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ	820	170	650	868	648	220	0	0	220	11

ಕ್ರ.ಸಂ	ಸರ್ಕಾರಿ ವೈದ್ಯಕೀಯ ಕಾಲೇಜುಗಳು	ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರಿ ಆದೇಶದಂತೆ ಮಂಜೂರಾದ ಹುದ್ದೆಗಳ ವಿವರ			ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಿಗೆ ಸರ್ಕಾರಿ ಆದೇಶದಂತೆ (ಆ.ಕು.ಕ ಇಲಾಖೆಯಿಂದ) ಮಂಜೂರಾದ ಹುದ್ದೆಗಳ ವಿವರ			ಸರ್ಕಾರಿ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಎಷ್ಟು ಹುದ್ದೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ;		ಸರ್ಕಾರಿ ಕಾಲೇಜುಗಳಿಗೆ ಹೊಂದಿಕೊಂಡಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಷ್ಟು ಹುದ್ದೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ನೌಕರರು ಎರವಲು ಸೇವೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ;	
		ಮಂಜೂರಾದ ಹುದ್ದೆ	ಖಾಲಿ ಹುದ್ದೆ	ಭರ್ತಿ ಹುದ್ದೆ	ಮಂಜೂರಾದ ಹುದ್ದೆ	ಖಾಲಿ ಹುದ್ದೆ	ಭರ್ತಿ ಹುದ್ದೆ	ಒಟ್ಟು ಸಿಬ್ಬಂದಿಗಳ ಸಂಖ್ಯೆ	ವರ್ಷಗಳು	ಒಟ್ಟು ಸಿಬ್ಬಂದಿಗಳ ಸಂಖ್ಯೆ	ವರ್ಷಗಳು
14	ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ	666	126	540	81	34	47	Nil	Nil	47	ಕನಿಷ್ಠ 1 ವರ್ಷದಿಂದ 8 ವರ್ಷ ವರೆಗೆ
15	ಕ.ಹಜ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ	662	583	79	113	46	67	0	0	67	1 to 8
16	ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ	540	416	124	266	203	63	63	10	63	10
17	ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು	543	423	120	581	513	68	0	0	68	Below 5 years
18	ನಂದಿ ವೈದ್ಯಕೀಯ ಕಾಲೇಜು ಮತ್ತು ಸಂಶೋದನಾ ಸಂಸ್ಥೆ, ಚಿಕ್ಕಬಳ್ಳಾಪುರ	208	170	38	230	124	106	0	0	0	0
19	ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ	126	43	83	341	169	172	0	0	0	0
20	ಯಾದಗಿರಿ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	292	137	155	175	61	114	0	0	0	0
21	ಚಿಕ್ಕಮಗಳೂರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು	447	256	191	253	149	104	0	0	0	0
22	ಚಿತ್ರದುರ್ಗ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿತ್ರದುರ್ಗ	79	42	37	0	0	0	0	0	0	0
	ಒಟ್ಟು	21860	12447	9413	5584	3556	2028	806		750	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಮಂಜೂರಾದ ಹುದ್ದೆಗಳು ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಎಷ್ಟು ಹುದ್ದೆಗಳು ಖಾಲಿ ಇವೆ ಪ್ರಶ್ನೆ ಕೇಳಿದ್ದೇನೆ. ಒಟ್ಟು 21,860 ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 9,413 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಹಾಗೂ ಒಟ್ಟು 12,447 ಹುದ್ದೆಗಳು ಖಾಲಿ ಇವೆ. ಇನ್ನು 806 ಹುದ್ದೆಗಳನ್ನು ಎರವಲು ಸೇವೆ ಮೇಲೆ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಒಟ್ಟು 27,444 ಹುದ್ದೆಗಳಲ್ಲಿ 11,000 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನು ಸುಮಾರು 16,000 ಹುದ್ದೆಗಳು ಖಾಲಿ ಇವೆ. ಕೇಂದ್ರ ಸರ್ಕಾರದಿಂದ ನೂರಾರು ಕೋಟಿ ರೂಪಾಯಿಗಳ ಅನುದಾನ ಬರುತ್ತಿದೆ, ಆ ಅನುದಾನವನ್ನು ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಇದಕ್ಕೆ ಯಾವುದೇ ಹಣ ಕೊಡುತ್ತಿಲ್ಲ.

ಶ್ರೀ ಸಿ.ಎನ್.ಮಂಜೇಗೌಡ:- ಮಾನ್ಯ ಸಭಾಪತಿಯವರೇ, ಅಂಕಿಅಂಶಗಳ ಪ್ರಕಾರ ಸಿಗುತ್ತದೆ. ಈ ರಾಜ್ಯದಲ್ಲಿ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಅತಿ ಮುಖ್ಯವಾಗಿ ಬೇಕಾಗಿರುವಂಥದ್ದು. ಹುದ್ದೆಗಳು ಎಲ್ಲೆಲ್ಲಿ ಖಾಲಿ ಇವೆ ಎಂದು ತೆಗೆದುಕೊಂಡಾಗ ಈ ಎರಡು ಇಲಾಖೆಗಳಲ್ಲಿ, ಶಾಲಾ ಶಿಕ್ಷಣದಲ್ಲಿ 70,000 ಹುದ್ದೆಗಳು, ವೈದ್ಯಕೀಯ ಶಿಕ್ಷಣದಲ್ಲಿ 27,000 ಹುದ್ದೆಗಳು ಖಾಲಿ ಇವೆ. ಸುಮಾರು 2,000 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ. ಬಾಕಿ ಹುದ್ದೆಗಳು ಖಾಲಿ ಇವೆ. ಕಳೆದ ಅಧಿವೇಶನದಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದರು. ದಿನಾಂಕ 28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ.....

ಸಭಾಪತಿಯವರು:- ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಸಿ.ಎನ್.ಮಂಜೇಗೌಡ:- ಮಾನ್ಯ ಸಭಾಪತಿಯವರೇ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದರು. ಆದರೆ ಆ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಈ ರೀತಿಯಾದರೆ ಈ ಇಲಾಖೆಯಲ್ಲಿ ಆರೋಗ್ಯವನ್ನು ಕೊಡುವಂಥದ್ದು ಹೇಗೆ? ಇವತ್ತು ನಾವು ಎಲ್ಲಾ ಕಡೆ ನೋಡುತ್ತಿದ್ದೇವೆ, ನಗರಪಾಲಿಕೆಗಳಲ್ಲೂ ಇವತ್ತು ಆಸ್ಪತ್ರೆಗಳನ್ನು ಮಾಡಿದ್ದಾರೆ. ರಾಜ್ಯದಲ್ಲಿ ಒಟ್ಟು 22 ಸರ್ಕಾರಿ ವೈದ್ಯಕೀಯ ಕಾಲೇಜುಗಳಿವೆ. ಅದಕ್ಕೆ ಹೊಂದಿಕೊಂಡತೆ 11 ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಿವೆ. ಇಲ್ಲಿ ಬಹಳಷ್ಟು ಖಾಲಿ ಹುದ್ದೆಗಳು ಬಾಕಿ ಇವೆ. ಈ ಆಸ್ಪತ್ರೆಗಳಲ್ಲಿ ಶೇಕಡ 60 ರಷ್ಟು ಹುದ್ದೆಗಳು ಖಾಲಿ ಇವೆ. ಹೀಗಾದರೆ ಜನರಿಗೆ ಆರೋಗ್ಯ ಕೊಡುವುದಕ್ಕೆ ಹೇಗೆ ಸಾಧ್ಯ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಬಹಳ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡಿದ್ದೇನೆ. ವೈದ್ಯಕೀಯ ಕಾಲೇಜುಗಳಿಗೆ ಒಟ್ಟು 21,860 ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 9,413 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನು ಒಟ್ಟು 12,447 ಹುದ್ದೆಗಳು ಖಾಲಿ ಇವೆ. ಅದರಲ್ಲಿ ಬೋಧಕ, ಬೋಧಕೇತರ ಹುದ್ದೆಗಳೆಲ್ಲಾ ಬರುತ್ತವೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಈಗಾಗಲೇ ನಾವು ಅನೇಕ ಕಡೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಭರ್ತಿ ಮಾಡಿದ್ದೇವೆ. ಚಿತ್ರದುರ್ಗ, ಯಾದಗಿರಿ ಜಿಲ್ಲೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಆದರೆ, ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ internal reservation ಆಗುವವರೆಗೆ ನಾವು ಪರ್ಮನೆಂಟ್ ಹುದ್ದೆಯನ್ನು ಭರ್ತಿ ಮಾಡಬಾರದೆಂದು ನಿರ್ಬಂಧವಿರುವುದರಿಂದ ನಾವು ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕಾಯುತ್ತಿದ್ದೇವೆ. ಅದು ಇತ್ಯರ್ಥವಾದ ಮೇಲೆ ಖಂಡಿತವಾಗಿಯೂ ನಾವು ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಅಲ್ಲಯವರೆಗೆ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದಕ್ಕೆ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ನಾವು ಎಲ್ಲಾ ವೈದ್ಯಕೀಯ ಕಾಲೇಜುಗಳ ನಿರ್ದೇಶಕರಿಗೆ ನೀವು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಬಹುದೆಂದು ಬಹಳ ಸ್ಪಷ್ಟವಾಗಿ ನಾವು ನಿರ್ದೇಶನವನ್ನು ಕೊಟ್ಟಿದ್ದೇವೆ.

ಶ್ರೀ ಸಿ.ಎನ್.ಮಂಜೇಗೌಡ:- ಮಾನ್ಯ ಸಭಾಪತಿಯವರೇ, ಇಲ್ಲಿರುವಂತಹ ವಿಚಾರವೇನೆಂದರೆ, ಹುದ್ದೆಗಳು ಖಾಲಿ ಇವೆ ಎಂದು ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಿದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ಸಚಿವರು ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಈಗ ಒಂದು ವರ್ಷವಾಗಿದೆ. ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಮಿಳುನಾಡು ಮತ್ತು ಆಂಧ್ರದ ರಾಜ್ಯಗಳಲ್ಲಿ ಈ ಎರಡು ಇಲಾಖೆಗಳನ್ನು ಒಗ್ಗೂಡಿಸಿ ಅಲ್ಲಿರುವಂತಹ ತಂತ್ರಜ್ಞಾನವನ್ನು, ಅಲ್ಲಿರುವಂತಹ ವೈದ್ಯರುಗಳನ್ನು ಉಪಯೋಗಿಸಿಕೊಂಡು ಸಾರ್ವಜನಿಕರಿಗೆ ಇವತ್ತು ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ. ಈ ಎರಡು ಇಲಾಖೆಗಳ ಮಂತ್ರಿಗಳು ಮಾಡಬೇಕೆಂದು ನಾನು ಹೇಳುತ್ತಿಲ್ಲ. ಇವತ್ತು ಒಬ್ಬೊಬ್ಬರು ಸಚಿವರು 3-3 ಖಾತೆಗಳನ್ನು ಹೊಂದಿದ್ದಾರೆ. ನಮ್ಮ ಕಳಕಳಿ ಏನೆಂದರೆ, ಇವತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 120 ತಜ್ಞರು ಮತ್ತು ಸಾಮಾನ್ಯ ಕರ್ತವ್ಯಾಧಿಕಾರಿಗಳ 100 ಹುದ್ದೆಗಳು ಖಾಲಿ ಇವೆ. ಮಾನ್ಯ ಆರೋಗ್ಯ ಸಚಿವರು ಇಷ್ಟು ಹುದ್ದೆಗಳು ಖಾಲಿ ಇವೆ ಎಂದು ಒಪ್ಪಿಕೊಂಡಿದ್ದಾರೆ. ಈ ರೀತಿಯಾದರೆ ಬಡವರಿಗೆ ಚಿಕಿತ್ಸೆ ಕೊಡುವುದಕ್ಕೆ ಹೇಗೆ ಸಾಧ್ಯ ಎಂದು ನಾನು ಕೇಳಬಯಸುತ್ತಿದ್ದೇನೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಸಭಾಪತಿಯವರೇ, ಇದರಿಂದ ಯಾವುದೇ ಚಿಕಿತ್ಸಾ ವ್ಯವಸ್ಥೆಯಲ್ಲಿ ತೊಂದರೆಯಾಗಿಲ್ಲ. ಇಲ್ಲಿ most of the posts ಏನಿವೆ ಇವು ಬೋಧಕೇತರ ಹುದ್ದೆಗಳಾಗಿವೆ. ಅಂದರೆ, ವೈದ್ಯರ ಹುದ್ದೆಯಾಗಿರುವುದಿಲ್ಲ. ಹಾಗಾಗಿ ಈ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲಿ ಚಿಕಿತ್ಸೆ ಕೊಡುವುದರಲ್ಲಿ ಯಾವುದೇ ತೊಂದರೆಯಾಗಿಲ್ಲ. ಬಹಳಷ್ಟು ಹುದ್ದೆಗಳು ಗ್ರೂಪ್-ಸಿ, ಗ್ರೂಪ್-ಡಿ, ಈ ರೀತಿ ಬೇರೆ ಬೇರೆ ಹುದ್ದೆಗಳಾಗಿವೆ. ಈಗಾಗಲೇ ಸಾಕಷ್ಟು ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಿಯೂ ಕೂಡ ವೈದ್ಯಕೀಯ ಶಿಕ್ಷಣದಲ್ಲಿ ಮಕ್ಕಳಿಗೆ ಪಾಠ ಹೇಳುವುದಾಗಲಿ ಅಥವಾ ಆಸ್ಪತ್ರೆಗಳಿಗೆ ಬರತಕ್ಕಂಥ ರೋಗಿಗಳಿಗೆ ಚಿಕಿತ್ಸೆ ಕೊಡುವುದಕ್ಕಾಗಲಿ ಅದರಲ್ಲಿ ಅಂತಹ ಯಾವುದೇ ವ್ಯತ್ಯಾಸ ಆಗಿಲ್ಲ. ಆದರೆ, ಮಾನ್ಯ ಸದಸ್ಯರ ಕಳಕಳಿ ನಿಜ. ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಕಳೆ ಅಧಿವೇಶನದಲ್ಲಿ ಹೇಳಿದ್ದೇವೆ. ಆದರೆ ಈಗಾಗಲೇ ನಾನು ಹೇಳಿರುವುದನ್ನು ಮಾನ್ಯ ಸದಸ್ಯರು ಕೇಳಿಸಿಕೊಳ್ಳಲಿಲ್ಲವೆಂದು ಅಂದುಕೊಳ್ಳುತ್ತೇನೆ. ಈಗ ರಾಜ್ಯದಲ್ಲಿ ಒಳ ಮೀಸಲಾತಿ ಬಗ್ಗೆ ನಿರ್ಣಯವಾಗುವವರೆಗೆ ಯಾವುದೇ ಹುದ್ದೆ ನೇಮಕಾತಿ ಮಾಡಬಾರದೆಂದು ನಿರ್ಬಂಧವಿರುವುದರಿಂದ ನಾವು ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕಾಯುತ್ತಿದ್ದೇವೆ. ಅದಾದ ತಕ್ಷಣ ಖಂಡಿತವಾಗಿಯೂ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಎಲ್ಲಾ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 76

ಅಜೀಂ ಪ್ರೇಮ್‌ಜಿ ಫೌಂಡೇಶನ್ ವತಿಯಿಂದ ಮೊಟ್ಟೆ ನೀಡುವ ಕುರಿತು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಅಜೀಂ ಪ್ರೇಮ್ ಜಿ ಫೌಂಡೇಶನ್ ವತಿಯಿಂದ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಮೊಟ್ಟೆಯು ಸಮರ್ಪಕವಾಗಿ ಮಕ್ಕಳಿಗೆ ತಲುಪುತಿಲ್ಲ ಎಂಬುದರ ಕುರಿತು ಸರ್ಕಾರದ ನಿಲುವೇನು?	ರಾಜ್ಯ ಸರ್ಕಾರ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಶನ್, ಸಂಸ್ಥೆಯ ಒಡಂಬಡಿಕೆಯೊಂದಿಗೆ ವಾರದ 6 ದಿನಗಳಿಗೆ ಪೂರಕ ಪೌಷ್ಠಿಕ ಆಹಾರವಾಗಿ ಮೊಟ್ಟೆ/ಬಾಳೆಹಣ್ಣನ್ನು ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1-10ನೇ ತರಗತಿ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಪೂರೈಸಲಾಗುತ್ತಿದೆ.
ಆ)	ಅಜೀಂ ಪ್ರೇಮ್ ಜಿ ಫೌಂಡೇಶನ್ ವತಿಯಿಂದ 2025ರ ಮಾರ್ಚ್‌ವರೆಗೆ 762 ಶಾಲೆಗಳಿಗೆ ಭೇಟಿ ನೀಡಿದ್ದು, ಅದರಲ್ಲಿ 568 ಶಾಲೆಗಳು ಮೊಟ್ಟೆಯನ್ನು ಸಮರ್ಪಕವಾಗಿ ನೀಡದೆ ಇರುವ ಬಗ್ಗೆ ಸಲ್ಲಿಸಿರುವ ವರದಿಯ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;	ಅಜೀಂ ಪ್ರೇಮ್‌ಜಿ ಫೌಂಡೇಶನ್, ವತಿಯಿಂದ ಮಾರ್ಚ್-2025 ರವರೆಗೆ ಭೇಟಿ ಮಾಡಿದ 9000 ಶಾಲೆಗಳ ಪೈಕಿ 568 ಶಾಲೆಗಳಲ್ಲಿ ಮೊಟ್ಟೆಯನ್ನು ಸಮರ್ಪಕವಾಗಿ ವಿತರಿಸಿದೇ ಇರುವ ಬಗ್ಗೆ ವರದಿಯನ್ನು ಪಡೆಯಲಾಗಿದೆ. ಆ ಶಾಲೆಗಳ ಮುಖ್ಯ ಶಿಕ್ಷಕರಿಗೆ ದಿನಾಂಕ: 07.07.2025 ಹಾಗೂ 17.07.2025 ರಂದು ಜ್ಞಾಪನವನ್ನು ಜಾರಿಮಾಡಲಾಗಿದೆ. ಈ ಕುರಿತು ಜಿಲ್ಲೆಗಳಿಂದ ಮಾಹಿತಿ ಪಡೆಯಲಾಗಿ ಮೊಟ್ಟೆಯನ್ನು ಈ ಕೆಳಕಂಡ ಕಾರಣಗಳಿಂದ ಮಕ್ಕಳು ತಿನ್ನದೇ ಇರುವ ಬಗ್ಗೆ ತಿಳಿಸಿರುತ್ತಾರೆ. 1) ವಾಡಿಕೆ/ವೈಯಕ್ತಿಕ ಆಚರಣೆಯಿಂದಾಗಿ. 2) ಕೆಲವು ಪೋಷಕರು ಮೊಟ್ಟೆ ಪಡೆಯಲು ಒಪ್ಪಿಗೆ ನೀಡದಿರುವುದರಿಂದ. 3) ವಿದ್ಯಾರ್ಥಿಗಳು ವಾರದಲ್ಲಿ ಕೆಲವು ದಿನ ಮೊಟ್ಟೆ ಸೇವಿಸಲು ನಿರಾಕರಿಸುತ್ತಿರುವುದು. 4) ಕೆಲವು ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ವಾರದ ಕೆಲವು ದಿನಗಳಲ್ಲಿ ಮೊಟ್ಟೆಯನ್ನು ನೀಡದಂತೆ ಸಭಾ ನಡವಳಿ ಮಾಡಿಕೊಂಡಿರುವುದರಿಂದ. ಆದುದರಿಂದ ವಾರದ ಕೆಲವು ದಿನಗಳಲ್ಲಿ ಮೊಟ್ಟೆಯನ್ನು ಶಾಲೆಯಲ್ಲಿ ವಿತರಣೆ ಮಾಡಿರುವುದಿಲ್ಲ. ಮೊಟ್ಟೆಯ ಬದಲಾಗಿ ಈ ಶಾಲೆಗಳು ಬಾಳೆಹಣ್ಣನ್ನು ವಿತರಣೆ ಮಾಡಿರುವುದಾಗಿ ವರದಿ ಮಾಡಿರುತ್ತಾರೆ. ಪೋಷಕರ ಅಭಿಪ್ರಾಯ ಪಡೆದು ಮೊಟ್ಟೆ ಸೇವಿಸುವ ವಿದ್ಯಾರ್ಥಿಗೆ ಮೊಟ್ಟೆ ಹಾಗೂ ಬಾಳೆಹಣ್ಣು ಸೇವಿಸುವ ವಿದ್ಯಾರ್ಥಿಗೆ ಬಾಳೆಹಣ್ಣನ್ನು ವಿತರಿಸಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಈ ಕುರಿತು ಇಲಾಖೆಯಲ್ಲಿ ಪರಿಶೀಲಿಸಿ ಇಲಾಖೆಯಿಂದ ಜ್ಞಾಪನವನ್ನು ಹೊರಡಿಸಿ ಜಿಲ್ಲಾ /ತಾಲ್ಲೂಕು/ಶಾಲಾ ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಿ ಪೋಷಕರ ಒಪ್ಪಿಗೆಯಂತೆ ಪೂರಕ ಪೌಷ್ಠಿಕ ಆಹಾರ (ಮೊಟ್ಟೆ/ ಬಾಳೆಹಣ್ಣು)ವನ್ನು ವಿತರಿಸುವಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) **ಅನುಬಂಧ-1, ಅನುಬಂಧ-2.**
ಇ)	ಖಾಸಗಿ ಸಂಸ್ಥೆಯವರು ಮಕ್ಕಳಿಗೆ ನೀಡುತ್ತಿರುವ ಮೊಟ್ಟೆಯನ್ನು ಸಮರ್ಪಕವಾಗಿ ತಲುಪಿಸದಿರುವ ಸರಕಾರಿ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಮಕ್ಕಳಿಗೆ ನೀಡುತ್ತಿರುವ ಮೊಟ್ಟೆಯನ್ನು ಕೆಲವು ವೈಯಕ್ತಿಕ ಕಾರಣಗಳಿಂದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರ ನಡವಳಿ ಮತ್ತು ವಾರದಲ್ಲಿ ನಿಗದಿತ ದಿನಗಳಲ್ಲಿ ಮೊಟ್ಟೆ ಸೇವಿಸದೆ ಇರುವ ಬಗ್ಗೆ ಕಾರಣವನ್ನು ನೀಡಿರುತ್ತಾರೆ. • ಪೋಷಕರ ಒಪ್ಪಿಗೆಯನ್ನು ಪಡೆದು ಮೊಟ್ಟೆ ಸೇವಿಸುವ ವಿದ್ಯಾರ್ಥಿಗಳಿಗೆ ಮೊಟ್ಟೆ ನೀಡಲು ಹಾಗೂ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ವಿತರಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಕಛೇರಿಯಿಂದ ದಿನಾಂಕ: 07.07.2025 ಹಾಗೂ ದಿನಾಂಕ: 17.07.2025 ರಂದು ಜ್ಞಾಪನವನ್ನು ಹೊರಡಿಸಲಾಗಿದೆ. • ಅದರಂತೆ ಎಲ್ಲಾ ಶಾಲೆಗಳಲ್ಲಿ ಸಮರ್ಪಕವಾಗಿ ಪೂರಕ ಪೌಷ್ಠಿಕ ಆಹಾರ ವಿತರಣೆ ಮಾಡಲು ಕ್ರಮವಹಿಸಲಾಗಿದೆ. ಈ ಬಗ್ಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಹಾಗೂ ಇಲಾಖೆ ಅಧಿಕಾರಿಗಳು ಸೂಕ್ತ ಮೇಲ್ವಿಚಾರಣೆಯನ್ನು ಪ್ರಮಾಣಿತ ಕಾರ್ಯಾಚರಣೆಯ ವಿಧಾನಗಳ ಪ್ರಕಾರ ಕೈಗೊಳ್ಳುತ್ತಿದ್ದಾರೆ.

ಇಪಿ 94 ಎಂಎಂಎಸ್ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-1

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪಿಎಂ ಪೋಷಣ್, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ ಆರ್ ವೃತ್ತ, ಬೆಂಗಳೂರು - 01

ಸಂಖ್ಯೆ ಎಂಸಿ-ಪಿಎಂ ಪೋಷಣ್/APF-SNF/2025-26 ದಿನಾಂಕ:07.07.2025

ಛಾಪನ

ವಿಷಯ: 2024-25 ನೇ ಸಾಲಿನಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ನೀಡಿರುವ ಸುತ್ತೋಲೆಯಂತೆ ವಾರದ ಆರು ದಿನಗಳಂದು ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕ ಆಹಾರವನ್ನು ಸಮರ್ಪಕವಾಗಿ ವಿತರಿಸದೇ, ತಮ್ಮದೇ ಆದ ವಿಧಾನವನ್ನು ಅನುಸರಿಸಿರುವ ಶಾಲಾ ಎಸ್.ಡಿ.ಎಂ.ಸಿ.ರವರಿಗೆ ಸೂಕ್ತ ತಿಳುವಳಿಕೆ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ:ಎಂಸಿ/ಪಿಎಂ-ಪೋಷಣ್/APF-SNF/E-150/3746/2024-25, ದಿನಾಂಕ: 12.09.2024

2. ದಿನಾಂಕ, 16.06.2025ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಂತೆ,

.....

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿರುವಂತೆ, 2024-25ನೇ ಸಾಲಿನಿಂದ ಸೆಪ್ಟೆಂಬರ್ 2024ರಿಂದ ಉಲ್ಲೇಖಿತ (1) ಶಾಲಾ ಶಿಕ್ಷಣ ಇಲಾಖೆಯ ಸುತ್ತೋಲೆಯಂತೆ ಅನುಷ್ಠಾನಗೊಳಿಸಿರುವಂತೆ, ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1-10ನೇ ತರಗತಿ ವಿದ್ಯಾರ್ಥಿಗಳಿಗೆ ವಾರದ ಆರು ದಿನಗಳಂದು ಪೂರಕ ಪೌಷ್ಟಿಕ ಆಹಾರವಾಗಿ ಮೊಟ್ಟೆ, ಮೊಟ್ಟೆ ಸ್ವೀಕರಿಸದೇ ಇರುವ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ವಿತರಿಸಲಾಗುತ್ತಿದೆ.

ಆದರೆ, ರಾಜ್ಯದ ಕೆಲವು ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ರವರು ಸಭೆ ನಡೆಸಿ ವಿದ್ಯಾರ್ಥಿಗಳಿಗೆ ವಾರದಲ್ಲಿ ಮೂರು ದಿನಗಳು ಮೊಟ್ಟೆ, ಉಳಿದಂತೆ ಮೂರು ದಿನ ಬಾಳೆಹಣ್ಣು ವಿತರಣೆ ಮಾಡುವ ಬಗ್ಗೆ, ಇನ್ನೂ ಕೆಲವು ಶಾಲೆಗಳಲ್ಲಿ ಸೋಮವಾರ, ಶನಿವಾರದಂದು ಮೊಟ್ಟೆ ವಿತರಣೆ ಮಾಡದೇ ಬಾಳೆಹಣ್ಣು ವಿತರಣೆ ಮಾಡಲು ನಿರ್ಣಯಿಸಿರುವುದು ಪೋಷಕರ ಒಪ್ಪಿಗೆ ಪತ್ರ ಪಡೆದಿದ್ದಾಗ್ಯೂ ಸಹ ವಾರದ ಆರೂ ದಿನಗಳಂದು ಮೊಟ್ಟೆ ಸ್ವೀಕರಿಸುವ ವಿದ್ಯಾರ್ಥಿಗಳಿಗೆ ಮೊಟ್ಟೆ ವಿತರಿಸದೇ ಬಾಳೆಹಣ್ಣು ವಿತರಿಸುವ ಬಗ್ಗೆ ಏಕಪಕ್ಷೀಯವಾಗಿ ನಿರ್ಣಯಿಸಿರುವುದು, ಇತ್ಯಾದಿ ಕ್ರಮವಹಿಸಿ ಇಲಾಖೆಯ ಸೂಚನೆಗಳನ್ನು ಎಸ್.ಡಿ.ಎಂ.ಸಿ.ರವರು ಕೈಬಿಟ್ಟಿರುವುದು ಕಂಡುಬಂದಿರುತ್ತದೆ.

APF ಸಂಸ್ಥೆಯ ಪರಿಶೀಲನಾ ತಂಡದವರು ರಾಜ್ಯದಲ್ಲಿ ಅಕ್ಟೋಬರ್ 2024 ರಿಂದ ಮಾರ್ಚ್ 2025 ರವರೆಗೆ ಭೇಟಿ ನೀಡಿದ 762 ಶಾಲೆಗಳ ಪೈಕಿ, ಸುಮಾರು 568 ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ರವರು ಈ ರೀತಿಯ ಅಸಮರ್ಪಕವಾಗಿರುವ ತೀರ್ಮಾನಗಳನ್ನು ತೆಗೆದುಕೊಂಡು ಕ್ರಮವಹಿಸಿರುವುದು ಸದರಿ ಸಭೆಯಲ್ಲಿ ವರದಿ ನೀಡುವುದರ ಮೂಲಕ ಇಲಾಖೆಯ ಗಮನಕ್ಕೆ ತಂದಿದ್ದು, ಶಾಲೆಗಳ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಇದನ್ನು ಪರಿಶೀಲಿಸಲಾಗಿ, ಶಾಲೆಗಳಲ್ಲಿ ಹೀಗೆ ಎಸ್.ಡಿ.ಎಂ.ಸಿ.ರವರು ವಾರದಲ್ಲಿ 6 ದಿನಗಳಂದು ಪೂರಕ ಪೌಷ್ಟಿಕ ಆಹಾರವಾಗಿರುವ ಮೊಟ್ಟೆಯನ್ನು ಪೋಷಕರ ಒಪ್ಪಿಗೆ ಪತ್ರವಿದ್ದಾಗ್ಯೂ ಸಹ ವಿತರಿಸದೇ 2 ಇಲ್ಲವೇ 3 ದಿನಗಳಂದು ವಿತರಿಸುತ್ತಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

ಈ ರೀತಿಯಾದ ತೀರ್ಮಾನಗಳನ್ನು ಎಸ್.ಡಿ.ಎಂ.ಸಿ.ರವರು ಸ್ವಯಂ ಪ್ರೇರಿತರಾಗಿ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಇಲಾಖೆಯ ಕ್ಲಸ್ಟರ್ ಹಂತದ, ತಾಲ್ಲೂಕು ಹಂತದ ಹಾಗೂ ಜಿಲ್ಲಾ ಹಂತದ ಎಲ್ಲಾ ಸಂಬಂಧಪಟ್ಟ ಮೇಲ್ವಿಚಾರಣಾಧಿಕಾರಿಗಳು ಇಂತಹ ಪ್ರಕರಣಗಳನ್ನು ತಮ್ಮ ವ್ಯಾಪ್ತಿಯಲ್ಲಿ ಗಮನಿಸದೇ ಇರುವುದು ಹಾಗೂ ಇಂತಹ ತಪ್ಪು ಆಚರಣೆಗಳನ್ನು ಇದುವರೆವಿಗೂ ಸರಿಪಡಿಸದೇ ಇರುವುದು ಕರ್ತವ್ಯಲೋಪಕ್ಕೆ ಮತ್ತು ಕಾರ್ಯಕ್ರಮದ ಹಿತಾಸಕ್ತಿಯನ್ನು ಕಡೆಗಣಿಸಲು ಕಾರಣವಾಗುತ್ತದೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಪೌಷ್ಟಿಕ ಬೆಂಬಲದ ಕಾರ್ಯಕ್ರಮಕ್ಕೆ ತೀವ್ರ ಹಿನ್ನಡೆಯಾಗುತ್ತದೆ. ಇದು

Scanned with OKEN Scanner

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೀಗೆ ಮುಂಬರುವಲ್ಲಿ ಸಂಬಂಧಪಟ್ಟ ಮೇಲ್ವಿಚಾರಣಾಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ ನಿರ್ದೇಶನ ಕೈಗೊಳ್ಳಲಾಗುತ್ತದೆ.

ಇನ್ನು ಮುಂದೆ ಇಂತಹ ಲೋಪಗಳು ಆಗದಂತೆ ಅಗತ್ಯ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕೆಂದು, ಹಾಗೂ ಈ ಪತ್ರವನ್ನಾಧರಿಸಿ ಲಗತ್ತಿಸಿರುವ (568 ಶಾಲೆಗಳ ಪಟ್ಟಿ : ಅನುಬಂಧ-1) ಶಾಲೆಗಳಿಗೆ ಸಂಬಂಧಿಸಿದ ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಲಸ್ಟರ್ ಹಂತದ ಸಿ.ಆರ್.ಪಿ.ಗಳು, ತಾಲ್ಲೂಕು ಪಂಚಾಯತ್ ಪಿ.ಎಂ.ಪೋಷಣ್ ಸಹಾಯಕ ನಿರ್ದೇಶಕರು ಕೂಡಲೇ ತಂಡವನ್ನು ಭೇಟಿ ನೀಡಿ, ನವರಿ ಶಾಲೆಗಳಲ್ಲಿ ಬಿಸಿಯೂಟ ತಯಾರಿಸಲಾಗುತ್ತಿರುವ ಬಗ್ಗೆ ಸೂಕ್ತ ನಿರ್ಣಯಗಳನ್ನು ನರಿವಹಿಸಿ, ಇಲಾಖೆಯು ನೀಡಿರುವ ಮಾರ್ಗಸೂಚಿಯಂತೆ ವಾರದ ಆರು ದಿನಗಳಂದು ಮೊಟ್ಟೆಯನ್ನು ಸ್ವೀಕರಿಸುವ ವಿದ್ಯಾರ್ಥಿಗಳಿಗೆ ಮೊಟ್ಟೆಯನ್ನು ವಿತರಿಸುವ ಅಗತ್ಯ ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ

ಈ ಮೂಲಕ ನೀಡಿರುವ ಜ್ಞಾಪನ ಪತ್ರದ ಕುರಿತಾಗಿ ಜಿಲ್ಲಾವಾರು ಉಪನಿರ್ದೇಶಕರು (ಆಡಳಿತ) ರವರು ಅಗತ್ಯ ಕ್ರಮಗಳನ್ನು ಕೈಗೊಂಡು, ತಮ್ಮ ವ್ಯಾಪ್ತಿಯಲ್ಲಿರುವ ಸಂಬಂಧಿಸಿದ ಶಾಲೆಗಳಲ್ಲಿ ಇಲಾಖೆಯ ಮಾರ್ಗಸೂಚಿಯಂತೆ ಬಿಸಿಯೂಟ ಅನುಪಾಲನೆಯಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ರಾಜ್ಯ ಕಛೇರಿಗೆ ದಿನಾಂಕ 15/07/2025ರೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದೆ.

ನಿರ್ದೇಶಕರು,
ಪಿ ಎಂ ಪೋಷಣ್ ಶಕ್ತಿ ನಿರ್ಮಾಣ್,
ಬೆಂಗಳೂರು.

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ. ರವರ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಶಿಕ್ಷಣಾಧಿಕಾರಿಗಳು, ಪಿ.ಎಂ.ಪೋಷಣ್ (ಮಧ್ಯಾಹ್ನ ಉಪಾಹಾರ ಯೋಜನೆ), ಜಿಲ್ಲಾ ಪಂಚಾಯತ್ ರವರ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಸಂಬಂಧಪಟ್ಟ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರ ಅಗತ್ಯ ಕ್ರಮಕ್ಕಾಗಿ.
4. ಸಂಬಂಧಪಟ್ಟ ತಾಲ್ಲೂಕುಗಳ ಸಹಾಯಕ ನಿರ್ದೇಶಕರು, ಪಿಎಂ ಪೋಷಣ್ ಯೋಜನೆ, ತಾಲ್ಲೂಕು ಪಂಚಾಯತಿ ಕಛೇರಿ. ರವರ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:ಗೌರವಪೂರ್ವಕವಾಗಿ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
2. ರಾಜ್ಯದ ಧಾರವಾಡ ಮತ್ತು ಕಲಬುರಗಿ ವಿಭಾಗಗಳ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ.
3. ಅಜೀಂ ಪ್ರೇಮ್ ಜೀ ಫೌಂಡೇಶನ್ ಫಾರ್ ಡೆವೆಲಪ್ ಮೆಂಟ್, ಬೆಂಗಳೂರು ಸಂಸ್ಥೆಯ ಮುಖ್ಯಸ್ಥರಿಗೆ ಮಾಹಿತಿಗಾಗಿ

Scanned with OKEN Scanner

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

List of SDMCs who made resolutions against providing eggs on all six days of a week (Oct 2024-March 2025)

Sl No	District	Block	DISE Code	School	Date of visit
1	Chikkaballapura	Sidlaghatta	29291101501	GHPS and HS Doddathekahalli	17-01-2025
2	Chikkaballapura	Sidlaghatta	29291111101	GLPS Haradi	26-10-2024
3	Chikkaballapura	Chikkaballapura	29290321801	GLPS Shettivarahalli	04-11-2024
4	Chikkaballapura	Chintamani	29290400601	GHPS Alambagiri	07-11-2024
5	Bangalore_South	Anekal	29200421102	GLPS lakshmipura	25-02-2025
6	Davanagere	Jagalur	29140615301	GMHPS horakere	22-02-2025
7	Bangalore_South	Bangalore South 4	29200308915	GLPS Bande hosuru	27-02-2025
8	Davanagere	Honnali	29140500602	GLPS-HOSADEVERAHONNALI	18-02-2025
9	Shimoga	Gajanuru	29150517301	GHPS Hoashalli	29-03-2025
10	Chitradurga	Chitradurga	29130126602	GHPS BURJANAHATTI	22-03-2025
11	Chitradurga	Challakere	29130203801	GHPS Nelegethanahatti	21-10-2024
12	Chitradurga	Challakere	29130201701	GLPS Hirekerekaval	20-11-2024
13	Chitradurga	Challakere	29130208301	GLPS Karekatlahatti	04-12-2024
14	Chitradurga	Challakere	29130203701	GLPS Saravajjanahalli	20-12-2024
15	Chitradurga	Challakere	29130208310	GLPS Todlarahatti	23-12-2024
16	Chitradurga	Challakere	29130208307	GLPS varavinorahatti	09-01-2025
17	Chitradurga	Challakere	29130208303	GLPS pettammarahatti	25-01-2025
18	Ramanagar	Kanakapura	29320809301	GHPS Kallahalli	06-11-2024
19	Ramanagar	Channapatna	29320706602	GHS Kudluru	22-01-2025
20	Chikkaballapura	Gudibanda	29290605301	GLPS Kategaaranahalli	07-11-2024
21	Chikkaballapura	Gowribidanuru	29290516403	GHS Melya	04-03-2025
22	Chikkaballapura	Gowribidanuru	29290521301	GHPS Thippaganahalli	11-02-2025
23	Chikkaballapura	Chikkaballapura	29290322601	GLPS Sulthanpet	05-02-2025
24	Shimoga	Sagara	29150304103	GHPS SHUNTIKOPPA	05-11-2024
25	Shimoga	Hosanagara	29150212401	GHPS THRINIVE	25-11-2024
26	Shimoga	Sagara	29150320204	GHPS YEDAJIGALEMANE	27-11-2024
27	Shimoga	Sagara	29150305002	GHPS BARADAVALLI	04-12-2024
28	Shimoga	Sagara	29150323302	GHPS SANKANNA-SHYANABHOG	05-12-2024

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl No	District	Block	DISE Code	School	Date of visit
29	Shimoga	Hosanagara	29150206901	GHPS HEELAGODU	10-12-2024
30	Shimoga	Hosanagara	29150208701	GHPS NEVATOOR	24-12-2024
31	Shimoga	Soraba	29150619401	GHPS NADAHALLI	30-12-2024
32	Shimoga	Soraba	29150616602	GHS KADASURU	01-01-2025
33	Shimoga	Sagara	29150304203	GHPS KAGODU	07-01-2025
34	Shimoga	Sagara	29150304301	GHPS SHIRURU ALALLI	09-01-2025
35	Shimoga	Soraba	29150600904	GMHPS JADE	28-02-2025
36	Shimoga	Hosanagara	29150207401	GHPS HARTHALU,	29-03-2025
37	Shimoga	Soraba	29150626001	GHPS MALALAGADDE,	22-03-2025
38	Chitradurga	Holalakere	29130416910	GHPS H.D Pura	28-11-2024
39	Chitradurga	Hosadurga	29130511902	GHPS Singenahalli Bhovihatti	26-11-2024
40	Chitradurga	Hosdurga	29130526702	GHPS Bukkasagara	31-12-2024
41	Chitradurga	Holalakere	29130406401	GHPS Ramagiri	01-01-2025
42	Davanagere	Davanagere S	29140303703	GHS Hirethogaleri	01-01-2025
43	Shimoga	Sagara	29150311301	GLPS Gadekatte	01-01-2025
44	Shimoga	Bhadravathi	29150117304	SAV Kannada HPS New town Bhadravathi	26-12-2024
45	Shimoga	Bhadravathi	29150107204	GKHPS Aralihalli	13-01-2025
46	Davanagere	Honnali	29140500201	GHPS Masadi	03-02-2025
47	Shimoga	Bhadravathi	29150129801	GHPS D. B Halli	10-02-2025
48	Shimoga	Bhadravathi	29150107907	GHPS Yarehalli	11-02-2025
49	Shimoga	Bhadravathi	29150103601	GHPS Dasara Kallahalli	17-02-2025
50	RAICHUR	DEVADURGA	29060123001	GOVT.LOWER PRIMARY SCHOOL GAGAL	29-03-2025
51	RAICHUR	DEVADURGA	29060102001	GOVT.HIGHER PRIMARY SCHOOL BHOGIRAMANGUNDA	08-03-2025
52	RAICHUR	DEVADURGA	29060110416	GLPS JAMBANAYAK TANDA	01-03-2025
53	RAICHUR	RAICHUR	29060716509	METHODIST CO-EDN HIGH SCHOOL,RCR	23-01-2025
54	RAICHUR	RAICHUR	29060700501	GOVT.LOWER PRIMARY SCHOOL ARALAPPANAHUDA	09-01-2025
55	RAICHUR	DEVADURGA	29060109506	GOVT.LOWER PRIMARY SCHOOL MARKALWAR DODDI	07-12-2024
56	RAICHUR	DEVADURGA	29060111201	GOVT.HIGHER PRIMARY SCHOOL MALLAPUR	11-03-2025
57	RAICHUR	LINGASUGUR	29060504001	GOVT.HIGHER PRIMARY SCHOOL CHIKKA NAGANUR	01-01-2025

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl No	District	Block	DISE Code	School	Date of visit
58	RAICHUR	LINGASUGUR	29060516601	GOVT.LOWER PRIMARY SCHOOL TAVAGA	20-01-2025
59	RAICHUR	LINGASUGUR	29060515301	GHPS RODALABANDA-T	05-12-2024
60	RAICHUR	DEVADURGA	29060112101	GOVT.HIGHER PRIMARY SCHOOL MATHAPALLI	20-02-2025
61	RAICHUR	DEVADURGA	29060122306	GOVT.LOWER PRIMARY SCHOOL BUDEPPANA THANDA	22-02-2025
62	RAICHUR	MANVI	29060616101	GLPS DONAMARADI .B	11-11-2024
63	RAICHUR	SINDHANUR	29060817903	SHRI KANAKADAS HIGHER PRIMARY SCHOOL SUKALPET SINDHANUR	30-11-2024
64	RAICHUR	MANVI	29060609201	GHPS KORAVI	21-11-2024
65	RAICHUR	SINDHANUR	29060809501	GOVT.HIGHER PRIMARY SCHOOL MULLUR U	21-12-2024
66	RAICHUR	MANVI	29060613501	GOVT.HIGHER PRIMARY SCHOOL SEEKAL	09-01-2025
67	RAICHUR	SINDHANUR	29060810301	GOVT.HIGHER PRIMARY SCHOOL RAMATHANAL	13-01-2025
68	RAICHUR	SINDHANUR	29060819501	GOVT.HIGHER PRIMARY SCHOOL BANNIGANUR	15-02-2025
69	RAICHUR	SINDHANUR	29060811203	GHPS UPGRADE RMSA RH NO-4	27-03-2025
70	RAICHUR	RAICHUR	29060709001	GOVT.LOWER PRIMARY SCHOOL MANDALAGERA	29-01-2025
71	RAICHUR	MANVI	29060608401	GHPS GIRLS KALLUR	30-01-2025
72	RAICHUR	RAICHUR	29060706708	GOVT LOWER PRIMARY SCHOOL JANATHA COLONY KALMALA	05-02-2025
73	RAICHUR	RAICHUR	29060718108	LOWER PRIMARY SCHOOL SHARADA GIRLS SCHOOL	06-02-2025
74	RAICHUR	RAICHUR	29060712501	GOVT.HIGHER PRIMARY SCHOOL TUNGABHADRA	07-02-2025
75	RAICHUR	RAICHUR	29060704602	GOVT.HIGHER PRIMARY SCHOOL KRISHNAMURTHI COLONY GUN	27-01-2025
76	RAICHUR	RAICHUR	29060701301	GOVT.HIGHER PRIMARY SCHOOL BAPUR	28-01-2025
77	RAICHUR	RAICHUR	29060717001	GOVT.HIGHER PRIMARY SCHOOL HOSUR	12-02-2025
78	RAICHUR	MANVI	29060617002	GOVT.LOWER PRIMARY SCHOOL RAMALADINNI M	13-02-2025
79	RAICHUR	RAICHUR	29060715101	GOVT.LOWER PRIMARY SCHOOL PALAKAMADODDI	21-03-2025
80	RAICHUR	MANVI	29060612801	GOVT.LOWER PRIMARY SCHOOL RAJALADINNI	18-12-2024
81	RAICHUR	SINDHANUR	29060819301	GOVT.LOWER PRIMARY SCHOOL GHANTER HATTI	16-12-2024
82	RAICHUR	SINDHANUR	29060811101	GOVT.HIGHER PRIMARY SCHOOL SIDRAMPUR	27-02-2025
83	RAICHUR	MANVI	29060611001	GOVT.HIGHER PRIMARY SCHOOL MUSTUR	20-03-2025

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl No	District	Block	DISE Code	School	Date of visit
84	RAICHUR	MANVI	29060611704	GHS NAVALKAL	17-03-2025
85	RAICHUR	SINDHANUR	29060811501	GOVT.HIGHER PRIMARY SCHOOL SULTHANPUR	07-03-2025
86	KOPPAL	KOPPAL	29070309102	GHS INDARAGI	22-02-2025
87	KOPPAL	KUSTAGI	29070416201	GLPS UMALI RAMPUR	21-03-2025
88	Koppal	Koppal	29070304901	GOVT MODEL HIGHER PRIMARY SCHOOL GINIGERI	04-01-2025
89	KOPPAL	KUSTAGI	29070408002	GLPS KALAMALLI TANDA	14-03-2025
90	KOPPAL	KOPPAL	29070308401	GLPS HOSALINGAPUR	15-03-2025
91	KOPPAL	YELBURGA	29070914101	GLPS GUDNEPPANAMATA	02-01-2025
92	KOPPAL	GANGAVATHI	29070208404	GLPS DYAMAVVANAGUDI, KANAKAGIRI	08-01-2025
93	KOPPAL	GANGAVATHI	29070218501	GHPS MUJAVAR CAMP GANGAVATI	13-01-2025
94	KOPPAL	GANGAVATHI	29070203603	GOVERNMENT LOWER PRIMARY SCHOOL VINOBNAGAR CHIKKAJANTKAL	08-02-2025
95	KOPPAL	YELBURGA	29070913804	GLPS NO-2 YEREHANCHINAL	11-02-2025
96	KOPPAL	YELBURGA	29070914702	GLPS CHIKKOPPA TANDA	12-02-2025
97	KOPPAL	GANGAVATHI	29070204280	GLPS KAKKARAGOLA	04-03-2025
98	KOPPAL	GANGAVATHI	29070206801	GMHPS SCHOOL HOSAKERA	27-03-2025
99	KOPPAL	GANGAVATHI	29070201602	SRI RAJARAJESHWARI HIGHER PRIMARY SCHOOL BASAPATTANA	29-10-2024
100	BALLARI	SANDUR	29120701102	GHPS BOMMALAGUNDA	15-11-2024
101	BALLARI	SANDUR	29120701101	GHPS GOLLALINGAMMAN AHALLI	21-02-2025
102	BALLARI	BELLARY EAST	29120906701	GHPS P.D. HALLI	24-03-2025
103	VIJAYANAGARA	HAGARIBOMMANAHALLI	29120302003	GHPS HAGARI KYADGI HALLI	26-11-2024
104	VIJAYANAGARA	KUDLIGI	29120605404	GLPS SANNA GOLLARA HATTI	30-12-2024
105	VIJAYANAGARA	KUDLIGI	29120604201	GHPS KANNA NAYAKANA KATTE	03-01-2025
106	VIJAYANAGARA	KUDLIGI	29120607202	GLPS KAIVALYAPURA	11-01-2025
107	VIJAYANAGARA	HAGARIBOMMANAHALLI	29120304002	GLPS PILLOBANA HALLI	20-01-2025
108	VIJAYANAGARA	KUDLIGI	29120601901	GHPS GAJAPURA	31-01-2025

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl No	District	Block	DISE Code	School	Date of visit
109	VIJAYANAGARA	KUDLIGI	29120604102	GLPS KALLAHALLI G.HATTI	20-02-2025
110	VIJAYANAGARA	KUDLIGI	29120606301	GHPS NAGALAPURA	28-02-2025
111	VIJAYANAGARA	KUDLIGI	29120610702	GLPS G.G. HATTI	01-03-2025
112	VIJAYANAGARA	HOSPET	29120504009	LPS SRI C.C.S MARIYAMMANAHALLI	06-03-2025
113	VIJAYANAGARA	KUDLIGI	29120610402	GLPS AMBEDKARA NAGARA KUDLIGI	08-03-2025
114	VIJAYANAGARA	HAGARIBOMMANAHALLI	29120301906	GLPS NAGALAPURA THANDA	17-01-2025
115	VIJAYANAGARA	HARAPANAHALLI	29140705201	GLPS- KAREKANAHALLI	21-11-2024
116	VIJAYANAGARA	HARAPANAHALLI	29140703008	GHPS CHIKKA MEGALAGERE	18-12-2024
117	VIJAYANAGARA	HARAPANAHALLI	29140711701	GLPS- EESHAPURA	28-01-2025
118	VIJAYANAGARA	HARAPANAHALLI	29140708307	GHPS- U.BEVINAHALLI	29-01-2025
119	VIJAYANAGARA	HADAGALI	29120202505	GLPS EAST KALVI	08-02-2025
120	VIJAYANAGARA	HARAPANAHALLI	29140707604	GHPS -GOLLARAHATTI	27-02-2025
121	Vijayanagara	Hadagali	29120204009	GHS MIRAKORNAHALLI	05-02-2025
122	VIJAYANAGARA	HARAPANAHALLI	29140710501	GHPS ASHRAYA CAMP, HARIHARA ROAD	04-03-2025
123	VIJAYANAGARA	HARAPANAHALLI	29140703601	GHPS- K.KALLAHALLI	13-03-2025
124	Mysore	Hunsuru	29260406601	Government Higher Primary School Biligere,	20-02-2025
125	Mandya	Madduru	29220211201	Government Higher Primary School Menasagere,	10-03-2025
126	Mysore	Nanjangudu	29260906701	Government Higher Primary School Huskuru,	27-03-2025
127	Mysore	T.Narsipura	29261102201	GHPS Beedanahalli	12-03-2025
128	Mandya	Mandya	29220419102	Lakshmi Janardan High school	18-02-2025
129	Mysore	Mysore	29260801601	GHPS amanchvadi	01-02-2025
130	Mandya	Shrirangapatna	29220711602	GHPS main Ganjam Mandya	31-01-2025
131	Mysore	T.Narsipura	29261117310	TS Subbanna sarvajanika girls HS Talakadu	02-01-2025
132	Mysore	T.Narsipura	29261101404	Vidodaya PU college HS section	26-12-2024
133	chamaraja nagara	Gundlupete	29270206801	GHPS Kodahalli	23-10-2024
134	chamaraja nagara	yalandur	29271202701	GHPS ganiganuru	28-03-2025
135	chamaraja nagara	yalandur	29271201001	GHPS katnavadi,	16-11-2024

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl No	District	Block	DISE Code	School	Date of visit
136	chamaraja nagara	Gundlupete	29270203202	GHS Beemana beedu	31-12-2024
137	Mandya	Mandya north	29220803601	GHPS Made gowdana koppal	03-03-2025
138	Mandya	Pandavpura,	29220611301	GLPS Nyamanahally	04-01-2025
139	Mandya	Mandya South	29220416401	GHPS Thaggahally	12-12-2024
140	Mandya	Mandya South	29220405604	GLPS Channapana Doddi,	29-01-2025
141	Mysore	Hunsuru	29260414601	GHPS Attikuppe	31-12-2025
142	Mysore	Hunsuru	29260412201	GHPS Bettaduru	29-01-2025
143	Mandya	Maddur	29220208606	SIR M V HPS	29-03-2025
144	Mandya	K R Pet	29220135301	GHP BOYS SCHOOL	29-10-2024
145	Mandya	Maddur	29220215601	GHPS YARAGANA HALLY	22-11-2024
146	Mandya	K R Pet	29220106601	GHPS BYALADAKERE	09-01-2025
147	Mandya	Mandya north	29220806601	GHPS MELLENA HALLY	16-01-2025
148	Hassan	channarayapatna	29230508701	GHPS kabbalu	16-12-2024
149	Hassan	channarayapatna	29230534601	Jaya Prakash HPS hirisave	30-12-2024
150	Hassan	channarayapatna	29230503302	GHPS didaga	25-01-2025
151	Hassan	channarayapatna	29230532103	GHPS Jambur	03-02-2025
152	Hassan	channarayapatna	29230530502	GHPGS Nuggehally	01-02-2025
153	Hassan	belur	29230411949	Vishva High school belur	11-01-2025
154	Hassan	Holenesipur	29230606201	GHPS Bagivalu	31-01-2025
155	Mandya	kr pete	29220124401	GHPS murukanahally	13-02-2025
156	Mandya	kr pete	29220135302	GHPGHS hosa Holalu	14-02-2025
157	Mandya	kr pete	29220101701	GHPS Anegola	17-02-2025
158	Mandya	kr pete	29220131301	GHPS Yedehally	18-02-2025
159	Mandya	kr pete	29220132701	GHPS Ichanahally	19-02-2025
160	Mandya	kr pete	29220127804	Gagan V samsthe santhe bachahally	22-02-2025
161	Mandya	kr pete	29220101001	GHPS Alenahally	25-02-2025
162	Mandya	kr pete	29220126301	GHPS Poovanahally	28-02-2025
163	Hassan	Hassan	29230742412	Govt Urdu High school AVK	07-03-2025
164	Bidar	Basavakalyan	29050215206	Govt HPS Jogewadi	12-Mar-25

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl No	District	Block	DISE Code	School	Date of visit
165	Bidar	Basavakalyan	29050210501	Govt HPS Morkhandi	17-Feb-25
166	Bidar	Humnabad	29050501001	Govt HPS Jamalpur	17-Jan-25
167	Bidar	Basavakalyan	29050212602	Govt MPS Paratapur	22-Jan-25
ಈ)	ಸರ್ಕಾರಿ ಗುತ್ತಿಗೆಯ ಟೆಂಡರ್‌ಗಳಲ್ಲಿ ಭಾಗಿಯಾಗದಂತೆ ನಿಷೇಧಕ್ಕೆ ಗುರಿಯಾಗಿರುವ ಕಂಪನಿಗೆ ಸ್ಮಾರ್ಟ್ ಮೀಟರ್‌ನ ತಂತ್ರಾಂಶ ಮತ್ತು ಕಾರ್ಯನಿರ್ವಹಣಾ ವ್ಯವಸ್ಥೆ ಪೂರೈಕೆ ಮಾಡುವ ಹೊಣೆ ನೀಡಿರುವುದು ನಿಜವೇ; ನಿಷೇದಕ್ಕೆ ಒಳಗಾಗಿರುವ ಕಂಪನಿಯ ಜೊತೆ ವ್ಯವಹಾರ ನಡೆಸುವ ಕುರಿತಂತೆ ಕೆ.ಟಿ.ಪಿ.ಪಿ. ನಿಯಮ ಏನು;	ಸದರಿ ಟೆಂಡರ್ ನಲ್ಲಿ ಸ್ಮಾರ್ಟ್ ಮೀಟರ್ ಸೇವೆ ಒದಗಿಸಲು ಭಾಗವಹಿಸುವ ಬಿಡ್ ದಾರರು (Service Provider), ಸ್ಮಾರ್ಟ್ ಮೀಟರ್ನಿಂದ ಸಂವಹನವನ್ನು (Communication) ಕಂಟ್ರೋಲ್ ರೂಂಮ್ ಗೆ ಹಾಗೂ ಗ್ರಾಹಕರಿಗೆ ತಲುಪಿಸಲು AMI ಸಾಫ್ಟ್‌ವೇರ್ ಸೇವೆ ಒದಗಿಸಲು ಅರ್ಹ ಸಂಸ್ಥೆ ಜೊತೆ ಒಡಂಬಡಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಈ ಪ್ರಕರಣದಲ್ಲಿ L1 ಬಿಡ್ದುದಾರರಾದ M/s.ರಾಜಶ್ರೀ ಎಲೆಕ್ಟ್ರಿಕಲ್ಸ್ ಸಂಸ್ಥೆಯವರು ಸಾಫ್ಟ್‌ವೇರ್ ಸೇವೆಯನ್ನು ಪಡೆಯಲು, M/s.BCITS ಹಾಗೂ M/s Genus ಸಂಸ್ಥೆಯ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಸಲ್ಲಿಸಿದ್ದರು. ಟೆಂಡರ್ ಪರಿಶೀಲನೆ ನಂತರ, ಈ ಎರಡು ಸಂಸ್ಥೆಗಳಿಂದ ಸೇವೆ ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. M/s.ರಾಜಶ್ರೀ ಎಲೆಕ್ಟ್ರಿಕಲ್ಸ್ ಸಂಸ್ಥೆಯವರು, M/s.BCITS ಸಂಸ್ಥೆಯೊಂದಿಗೆ ದಿನಾಂಕ:22.01.2025 ರಂದು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. M/s.BCITS ಸಂಸ್ಥೆಯು, ದೇಶದ 11 ರಾಜ್ಯಗಳ 18 ವಿದ್ಯುತ್ ಸರಬರಾಜು ಸಂಸ್ಥೆಗಳಲ್ಲಿ AMI ಸಾಫ್ಟ್‌ವೇರ್ ಸೇವೆ ಒದಗಿಸುತ್ತಿರುತ್ತದೆ. ಸದರಿ ಸಂಸ್ಥೆಯನ್ನು ಪೂರ್ವಾಂಚಲ ವಿದ್ಯುತ್ ವಿತರಣ ನಿಗಮದಿಂದ ದಿನಾಂಕ 06.01.2023 ರಿಂದ ಎರಡು ವರ್ಷಗಳ ಅವಧಿಗೆ ಸದರಿ ಕಂಪನಿಯ ವ್ಯಾಪ್ತಿಯಲ್ಲಿ ಯಾವುದೇ ಟೆಂಡರ್ ನಲ್ಲಿ ಭಾಗವಹಿಸದಂತೆ (Barred from participation) ನಿರ್ಬಂಧ ಹೇರಲಾಗಿತ್ತು. ಸದರಿ ನಿರ್ಬಂಧದ ಅವಧಿಯು ದಿನಾಂಕ:05.01.2025 ಕ್ಕೆ ಮುಕ್ತಾಯಗೊಂಡಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		L1 ಬಿಡ್ದುದಾರರಾದ M/s.ರಾಜಶ್ರೀ ಎಲೆಕ್ಟ್ರಿಕಲ್ಸ್ ಸಂಸ್ಥೆಯವರು ರವರು M/s.BCITS ಸಂಸ್ಥೆಯೊಂದಿಗೆ ಸಾಫ್ಟ್ ವೇರ್ ಸೇವೆಯನ್ನು ಪಡೆಯಲು ದಿನಾಂಕ:22.01.2025 ರಂದು ಒಡಂಬಡಿಕೆ ಮಾಡಿಕೊಂಡಿದ್ದು; ಸದರಿ ಒಡಂಬಡಿಕೆಯನ್ನು ನಿರ್ಬಂಧದ ಅವಧಿ ಮುಕ್ತಾಯಗೊಂಡ ನಂತರ ಮಾಡಿಕೊಂಡಿರುವುದರಿಂದ ಯಾವುದೇ ನಿಯಮ ಉಲ್ಲಂಘನೆ ಆಗಿರುವುದಿಲ್ಲ. ಕೆ.ಟಿ.ಪಿ.ಪಿ ಕಾಯ್ದೆಯ ಸೆಕ್ಷನ್ 14A, ರಂತೆ ನಿಷೇಧಿತ ಕಂಪನಿಯೊಂದಿಗೆ ಟೆಂಡರ್ ವ್ಯವಹಾರ ನಡೆಸುವಂತಿಲ್ಲ. ಮುಂದುವರೆದು, ಸದರಿ ಒಡಂಬಡಿಕೆಯನ್ನು ನಿರ್ಬಂಧದ ಅವಧಿ ಮುಕ್ತಾಯಗೊಂಡ ನಂತರ L1 ಬಿಡ್ದುದಾರರಾದ M/s.ರಾಜಶ್ರೀ ಎಲೆಕ್ಟ್ರಿಕಲ್ಸ್ ಸಂಸ್ಥೆಯವರು ಮಾಡಿಕೊಂಡಿರುವುದರಿಂದ ಯಾವುದೇ ನಿಯಮ ಉಲ್ಲಂಘನೆ ಆಗಿರುವುದಿಲ್ಲ. ಬೆವಿಕಂಪನಿ ಮತ್ತು ಸಾಫ್ಟ್ವೇರ್ ಸೇವೆ ಒದಗಿಸುತ್ತಿರುವ M/s.BCITS ಸಂಸ್ಥೆಯೊಂದಿಗೆ ಯಾವುದೇ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ.
ಊ)	ಸ್ಮಾರ್ಟ್ ಮೀಟರ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನದಲ್ಲಿದೆಯೇ; ಗ್ರಾಹಕರಿಗೆ ಹೊರೆಯಾಗಿರುವ ಈ ಸ್ಮಾರ್ಟ್ ಮೀಟರ್ ಅಳವಡಿಕೆ ಉದ್ದೇಶವನ್ನು ಹಿಂದಕ್ಕೆ ಪಡೆಯುವ ಕುರಿತು ಸರ್ಕಾರದ ನಿಲುವೇನು?	ಸ್ಮಾರ್ಟ್ ಮೀಟರ್ ಅಳವಡಿಕೆ ಟೆಂಡರ್ ಅನ್ನು ನಿಯಮಾನುಸಾರ ಪಾರದರ್ಶಕವಾಗಿ ನಡೆಸಲಾಗಿದ್ದು, ಇದರಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿರುವುದಿಲ್ಲ. ಕೇವಲ ಹೊಸ ಹಾಗೂ ತಾತ್ಕಾಲಿಕ ಸಂಪರ್ಕ ಹೊಂದುವ ಗ್ರಾಹಕರಿಗೆ ಮಾತ್ರ ಕೆ.ಇ.ಆರ್.ಸಿ ನಿಯಾಮಾವಳಿಗಳಂತೆ, ಸ್ಮಾರ್ಟ್ ಮೀಟರ್ ಅಳವಡಿಸಲು ಟೆಂಡರ್ ಕರೆಯಲಾಗಿದ್ದು, ಇದು ನಿಯಮಾನುಸಾರ ಇರುವುದರಿಂದ, ಸ್ಮಾರ್ಟ್ ಮೀಟರ್ ಅಳವಡಿಕೆ ಉದ್ದೇಶವನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನು ರಾಜ್ಯಾದ್ಯಂತ ಇಂಧನ ಇಲಾಖೆ ಸ್ಮಾರ್ಟ್ ಮೀಟರ್ ಅಳವಡಿಕೆ ನಿಯಮ ಜಾರಿಗೆ ತಂದಿರುವ ಉದ್ದೇಶ ಏನು ಎಂದು ಪ್ರಶ್ನೆಯನ್ನು ಕೇಳಿದ್ದು, ಇದಕ್ಕೆ ಸರ್ಕಾರವು ಉತ್ತರ ನೀಡಿದೆ. ಸ್ಮಾರ್ಟ್ ಮೀಟರ್ ಅಳವಡಿಕೆ ಕುರಿತಂತೆ ರಾಜ್ಯ ಉಚ್ಚ ನ್ಯಾಯಾಲಯವು ವ್ಯಕ್ತಪಡಿಸಿರುವ ಅಭಿಪ್ರಾಯದಲ್ಲಿನ ಸೂಚನೆ ಏನು? ನ್ಯಾಯಾಲಯವು ತೆರೆದ ನ್ಯಾಯಾಲಯದಲ್ಲಿ, ಬೇರೆ ರಾಜ್ಯಗಳಲ್ಲಿರುವ ಸ್ಮಾರ್ಟ್ ಮೀಟರ್ ದರ ಹಾಗೂ ನಮ್ಮ ರಾಜ್ಯದಲ್ಲಿರುವ ಸ್ಮಾರ್ಟ್ ಮೀಟರ್ ದರ ಇವುಗಳ ನಡುವಿನ ವ್ಯತ್ಯಾಸವನ್ನು ಬಹಳ ಸ್ಪಷ್ಟವಾಗಿ ಎತ್ತಿ ತೋರಿಸಿದೆ. ಅಲ್ಲಿ ದರ ಕಡಿಮೆ ಹಾಗೂ ಇಲ್ಲಿ ದರ ಹೆಚ್ಚಿರಲು ಕಾರಣವೇನು ಎನ್ನುವ ಬಗ್ಗೆ ಪ್ರಶ್ನೆಯನ್ನು ನಾನು ಕೇಳಿದ್ದೆನು. ಬೇರೆ ರಾಜ್ಯಗಳಲ್ಲಿರುವ ದರಪಟ್ಟಿಯನ್ನು ಸರ್ಕಾರವು ತರಿಸಿಕೊಂಡಿದೇಯೇ? ಅಲ್ಲಿರುವ ಸ್ಮಾರ್ಟ್ ಮೀಟರ್‌ನ ದರಪಟ್ಟಿ ಏನು? ಸಿಂಗಲ್ ಫೇಸ್ ಮತ್ತು ತ್ರೀ ಫೇಸ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಮಾರ್ಟ್ ಮೀಟರ್‌ಗಳ ಮೊತ್ತವೆಷ್ಟು? L.T.C.T. (Low Tension Current Transformer) ಗೆ ಎಷ್ಟು ಮೊತ್ತ ಎಂಬುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಬೇರೆ ರಾಜ್ಯಗಳ ಸ್ಮಾರ್ಟ್ ಮೀಟರ್ ದರಕ್ಕೂ ಹಾಗೂ ನಮ್ಮ ರಾಜ್ಯದ ಸ್ಮಾರ್ಟ್ ಮೀಟರ್ ದರಕ್ಕೂ ಬಹಳಷ್ಟು ಅಗಾಧವಾದ ವ್ಯತ್ಯಾಸಗಳಿವೆ. ಇದು ಸುಮಾರು 200 – 240 ಪ್ರತಿಶತದಷ್ಟಿದೆ. ಇದರಿಂದ ಗ್ರಾಹಕರ ಸುಲಿಗೆಗೆ ನಾವೇ ಪರವಾನಿಗೆಯನ್ನು ಕೊಟ್ಟಂತೆ ಆಗಿಲ್ಲವೇ? ಈ ರೀತಿಯಾಗಿ ದರ ಪಟ್ಟಿಗಳಲ್ಲಿ ಇರುವ ವ್ಯತ್ಯಾಸಕ್ಕೆ ಕಾರಣವೇನು ಎಂಬ ಅಂಶಗಳ ಬಗ್ಗೆ ಸಚಿವರು ತಿಳಿಸಬೇಕೆಂದು ನಾನು ವಿನಂತಿಸುತ್ತೇನೆ. ನ್ಯಾಯಾಲಯವು ಉಲ್ಲೇಖಿಸಿರುವ ಅಂಶಗಳ ಆಧಾರದ ಮೇಲೆ, ಇಡೀ ಟೆಂಡರ್ ಪ್ರಕ್ರಿಯೆಗೆ ಸಂಬಂಧಪಟ್ಟಂತೆ, ಸರ್ಕಾರವು ತನ್ನ ನಿಲುವನ್ನು ಪರಾಮರ್ಶೆ ಮಾಡುತ್ತದೆಯೇ ಎಂಬ ಪ್ರಶ್ನೆಯನ್ನೂ ಸಹ ನಾನು ಕೇಳಬಯಸುತ್ತೇನೆ. ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಬ್ಲ್ಯಾಕ್ ಲಿಸ್ಟ್‌ಗೊಳಗಾದ ..., ಏಕೆಂದರೆ ಯಾವಾಗಲೂ ಟೆಂಡರ್ ಪ್ರಕ್ರಿಯೆಯಲ್ಲಿ ಮೊದಲು ಟೆಕ್ನಿಕಲ್ ಬಿಡ್ ಅನ್ನು ತೆರೆಯಲಾಗುತ್ತದೆ; ಆಮೇಲೆ ಫೈನಾನ್ಷಿಯಲ್ ಬಿಡ್ ಅನ್ನು ತೆರೆಯಲಾಗುತ್ತದೆ. ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಪಡೆದವರು ಮಾತ್ರವೇ .....

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ.

ಸಭಾಪತಿಯವರು:– ನೀವು ಹಾಗೆಲ್ಲಾ ಮಧ್ಯದಲ್ಲಿ ಎದ್ದುನಿಂತು ಹೇಳುವಂತಿಲ್ಲ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೆ, ನಾನು ನಿಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

ಸಭಾಪತಿಯವರು:– ನಾನು ಹೇಳುವುದನ್ನು ಕೇಳಿ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೆ, ಇದು sub judice ಆಗುತ್ತದೆ. ಏಕೆಂದರೆ, ಇವರು ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆಯೋ, ಅದಕ್ಕೆ ಸಂಬಂಧಿತ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಈ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಸಭಾಪತಿಯವರು:– ಶ್ರೀ ನಾಗರಾಜುರವರೇ, ನಾನು ಹೇಳುವುದನ್ನು ಕೇಳಿ.

ಶ್ರೀ ಟಿ.ಎ.ಶರವಣ:– ಮಾನ್ಯ ಸಭಾಪತಿಯವರೆ; ಶ್ರೀ ನಾಗರಾಜುರವರೇ, ಸರ್ಕಾರವು ಅದರ ಬಗ್ಗೆ ಹೇಳುತ್ತದೆ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೆ, ನಾನೂ ಸಹ ಸರ್ಕಾರದಲ್ಲಿ ಇರುವವನೇ ಆಗಿದ್ದೇನೆ.

ಸಭಾಪತಿಯವರು:– ನೀವು ಏತಕ್ಕಾಗಿ ಎದ್ದುನಿಂತಿದ್ದೀರಿ?

ಶ್ರೀ ಟಿ.ಎ.ಶರವಣ:– ಮಾನ್ಯ ಸಭಾಪತಿಯವರೆ, ಮಂತ್ರಿಗಳು ಸಮರ್ಥರಿದ್ದು, ಅವರೇ ಮಾತನಾಡುತ್ತಾರೆ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ಮಂತ್ರಿಗಳೇ ಉತ್ತರ ಕೊಡುತ್ತಾರೆ.

(ಗೊಂದಲ)

ಸಭಾಪತಿಯವರು:– ನಾನು ಬಹಳ ಗಂಭೀರವಾಗಿ ಹೇಳುತ್ತೇನೆ. ನಡು ನಡುವೆ ಎದ್ದು ಮಾತನಾಡುವಂತಿಲ್ಲ. ಶ್ರೀ ಭೋಜೇಗೌಡರೇ ನೀವು ಏಕೆ ಮಧ್ಯದಲ್ಲಿ ಮಾತನಾಡುತ್ತೀರಿ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ನೀವು interfere ಆಗಬೇಕಾಗುತ್ತದೆ.

ಸಭಾಪತಿಯವರು:– ಯಾರು ಪ್ರಶ್ನೆಯನ್ನು ಕೇಳುತ್ತಾರೆಯೋ, ಅವರಿಗೆ ಮಾತ್ರವೇ ನಾನು ಅವಕಾಶವನ್ನು ನೀಡುತ್ತೇನೆ. ಅದನ್ನು ಬಿಟ್ಟು ನಾನು ಬೇರೆಯವರಿಗೆ ಅವಕಾಶ ನೀಡುವುದಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ಮಂತ್ರಿಗಳು ಸಮರ್ಥರಿದ್ದಾರೆ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೆ, ಇದಕ್ಕೆ ಆಕ್ಷೇಪವಿಲ್ಲ. ಆದರೆ, ಈ ವಿಷಯಕ್ಕೆ ಸಂಬಂಧಿತ ಪ್ರಕರಣವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ಯಾವುದೇ ಸದಸ್ಯರು ಪ್ರಶ್ನೆಯನ್ನು ಕೇಳಿದಾಗ .....

(ಗೊಂದಲ)

ಸಭಾಪತಿಯವರು:– ನಾನೇನು ಮಾಡಬೇಕು? ಅವರೇ ತಿಳಿದುಕೊಳ್ಳಬೇಕು.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ಇದು ನಾಳೆ ನನಗೆ ಪುನರಾವರ್ತನೆಯಾಗಬಾರದು. ಇಲ್ಲಿ ಮಂತ್ರಿಗಳಿದ್ದಾರೆ; ಸರ್ಕಾರವಿದೆ. ಕಾನೂನು ಇದೆ. ಅವರು ಹೇಳಿದ್ದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

ಸಭಾಪತಿಯವರು:– ಅವರು ಬೇಕು ಬೇಕಾಗಿದ್ದನ್ನು ಮಾತನಾಡುವಂತಿಲ್ಲ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ಇಲ್ಲಿ ನಮ್ಮ ವಿನಂತಿ ಏನೆಂದರೆ, ತಾವು ಇದರಲ್ಲಿ interfere ಆಗಬೇಕು.

(ಗೊಂದಲ)

ಸಭಾಪತಿಯವರು:– ಶ್ರೀ ಭೋಜೇಗೌಡರೇ ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೆ, ಟೆಕ್ನಿಕಲ್...

ಸಭಾಪತಿಯವರು:– ಮಂತ್ರಿಗಳೇ ಉತ್ತರ ಹೇಳಿ.

(ಮುಂದು)

(607)11-08-2025/1-10/bkp-bns (ಸಭಾಪತಿಯವರ ಉಪಸ್ಥಿತಿ)

ಶ್ರೀ ಕೆ.ಜೆ. ಜಾರ್ಜ್(ಇಂಧನ ಸಚಿವರು):– ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಸದಸ್ಯರಾದ ಶ್ರೀಯುತ ಸಿ.ಟಿ.ರವಿಯವರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಈ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುವಂತಹ ಉದ್ದೇಶ ಏನು ಎನ್ನುವ ವಿಚಾರವನ್ನು ತಮ್ಮ ಮೂಲಕ ಸದನಕ್ಕೆ ಹೇಳಲಿಕ್ಕೆ ಬಯಸುತ್ತೇನೆ. R.D.S.S. (Revamped Distribution Sector Scheme) ಅನ್ನು ಕೇಂದ್ರ ಸರ್ಕಾರದವರು 2018 ರಲ್ಲಿ ಜಾರಿಗೆ ತರಬೇಕೆಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದಾಗ 2021 ರಲ್ಲಿ ಆ ಸ್ಕೀಂ ಅನ್ನು ಜಾರಿಗೊಳಿಸಲಾಯಿತು. ಈ ಸ್ಕೀಂ ಏನೆಂದರೆ, ನಮ್ಮ ESCOM ಗಳು ಏನಿವೆ, ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ನೀಡಬೇಕಾದರೆ ಸುಮಾರು 60% ರಷ್ಟು ಸಬ್ಸಿಡಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಅದಕ್ಕಾಗಿಯೇ ಸುಮಾರು 3 ಲಕ್ಷ ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ನಂತರ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಬೇಕಾದರೆ ಅದಕ್ಕೆ 15%... ಸ್ಮಾರ್ಟ್ ಮೀಟರ್ ಎಂದರೆ, ಅದು ಕೇವಲ ಸ್ಮಾರ್ಟ್ ಮೀಟರ್ ಆಗಿರುವುದಿಲ್ಲ. ಅದರಲ್ಲಿ ಸಾಫ್ಟ್‌ವೇರ್ ಇರುತ್ತದೆ. Two way communication ಇರಬೇಕಾಗುತ್ತದೆ. ಇದೆಲ್ಲವೂ ಸೇರಿಕೊಂಡು 15% ಕೊಡಲಿಕ್ಕೆ ಅವರು ಒಂದು ಒಳ್ಳೆಯ ಪ್ರೋಗ್ರಾಮ್ ಅನ್ನು ತಂದಿದ್ದರು. ಬಹುಶಃ ನಮ್ಮ ಕರ್ನಾಟಕ ರಾಜ್ಯದಲ್ಲಿ ಏನಾಗಿತ್ತು, ಅಂದಿನ ಸರ್ಕಾರ ಆರ್ಥಿಕ ಇಲಾಖೆಯವರಿಗೆ ಕೇಂದ್ರ ಸರ್ಕಾರದವರು ಒಂದು ಷರತ್ತನ್ನು ಹಾಕಿದರು. " ನೀವು ನಿಮ್ಮ ಸರ್ಕಾರದಿಂದ ಎಸ್ಕಾಂಗಳಿಗೆ ಏನಾದರೂ ಹಣ ಪಾವತಿ ಮಾಡಬೇಕಾಗಿರುವುದು ಬಾಕಿ ಇದ್ದರೆ, ಅದನ್ನು ಕ್ಲಿಯರ್ ಮಾಡಬೇಕೆಂದು ಹೇಳಿದರು. ಇಲ್ಲದಿದ್ದರೆ, ನಮ್ಮ ಕೇಂದ್ರ ಸರ್ಕಾರದಿಂದ ನಿಮಗೆ ಏನು ಗ್ರಾಂಟ್ ಮತ್ತು ಸಬ್ಸಿಡಿಯನ್ನು ಕೊಡುತ್ತೇವೆ, ಅದನ್ನು ಕಟ್ ಮಾಡಿ ನಾವು ಎಸ್ಕಾಂಗಳಿಗೆ ಕೊಡುತ್ತೇವೆಂದು ಹೇಳಿದರು. ಕೇಂದ್ರ ಸರ್ಕಾರದವರು ನಾವು ತೆಗೆದುಕೊಳ್ಳುತ್ತೇವೆಂದು ಹೇಳಲಿಲ್ಲ.

ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):- ಅದು ಯಾವ ವರ್ಷದಲ್ಲಿ ಹೇಳಿದ್ದು?

ಶ್ರೀ ಕೆ.ಜೆ. ಜಾರ್ಜ್(ಇಂಧನ ಸಚಿವರು):- ಇದು 2021 ರಲ್ಲಿ ಬಿಜೆಪಿ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಹೇಳಿರುವಂತಹದ್ದು. ಬಹುಶಃ ಅಂದು ಆರ್ಥಿಕ ಇಲಾಖೆಯವರು ಅದಕ್ಕೆ ಒಪ್ಪಲಿಲ್ಲ. ನೋಡಿ, ನಮಗೆ ಬರುವಂತಹ ದುಡ್ಡನ್ನು ಕಟ್ ಮಾಡಿ ಎಸ್ಕಾಂಗಳಿಗೆ ಕೊಡುವುದಾದರೆ ನಾವು ನಮ್ಮ ಬಜೆಟ್‌ನಲ್ಲಿ ಮಾಡಿಕೊಂಡಿದ್ದು, ಈ ರೀತಿಯಲ್ಲಿ ಮಾಡಿದರೆ ನಮಗೆ ತೊಂದರೆಯಾಗುತ್ತದೆ ಎನ್ನುವ ಕಾರಣದಿಂದ ಅವರು ಮಾಡಿರಲಿಕ್ಕಿಲ್ಲ. ಆದರೆ, ಅದರಿಂದ ನಮಗೆ ತೊಂದರೆ ಏನಾಗಿದೆ ಎಂದರೆ ಸುಮಾರು ಒಂದು ವರ್ಷಕ್ಕೆ ಕನಿಷ್ಟ ಪಕ್ಷ ಸುಮಾರು 10 ಸಾವಿರ ಕೋಟಿ ರೂಪಾಯಿಗಳ ಸಬ್ಸಿಡಿ ಕೇಂದ್ರ ಸರ್ಕಾರದಿಂದ ನಮಗೆ ಬರುತ್ತಿತ್ತು. ನಾನು ಹೇಳುವುದೇನೆಂದರೆ ನಮ್ಮ ರಾಜ್ಯ ಸರ್ಕಾರದಿಂದ ಎಸ್ಕಾಂಗಳಿಗೆ ಯಾವುದೇ ಬಾಕಿ ಇರುವುದಿಲ್ಲ. ನಮ್ಮ ಐ.ಪಿ. ಸೆಟ್‌ಗಳ ಸಬ್ಸಿಡಿ ಇರಬಹುದು ಅಥವಾ ಗೃಹ ಜ್ಯೋತಿ ಇರಬಹುದು, ಇದೆಲ್ಲವನ್ನು ನಾವು ಸರಿಯಾಗಿ ಎಲ್ಲಾ ಎಸ್ಕಾಂಗಳಿಗೆ ಕೊಡುತ್ತಿದ್ದೇವೆ. ಆದರೆ, ನಮಗೆ ತೊಂದರೆ ಏನಾಗಿದೆ ಎಂದು ಹೇಳಿದರೆ ಈ ನಮ್ಮ ಪಂಚಾಯತ್‌ಗಳಿಂದ ಸುಮಾರು 10 ಸಾವಿರ ಕೋಟಿ ರೂಪಾಯಿಗಳ ಬಾಕಿ ಇತ್ತು. ಅದು ಏನಾಗಿದೆ ಎಂದರೆ, ಮೊನ್ನೆ ಆರ್ಥಿಕ ಇಲಾಖೆಯವರೊಂದಿಗೆ ಈ ಬಗ್ಗೆ ಚರ್ಚೆ ಮಾಡಿ, ನಮ್ಮ ಇಲಾಖೆ ಅಂದರೆ Power Company of Karnataka Limited ನಿಂದ 5,000 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಇವತ್ತು ನಾವು ಎಸ್ಕಾಂಗಳಿಗೆ ಕೊಟ್ಟಿದ್ದೇವೆ. ಅಂದರೆ, ಪಂಚಾಯತಿಯವರು ಕೊಡಬೇಕಾದ ಬಾಕಿ ಹಣ 5,000 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿದೆ. ಆ ಹಣವನ್ನು ಯಾರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಾರೆಂದರೆ, ಪಂಚಾಯಿತ್ ರಾಜ್‌ಗೆ ಯಾವ ಹಣ ಬರುತ್ತದೆ, ಅದನ್ನು ಕಟ್ ಮಾಡಿ, ಆರ್ಥಿಕ ಇಲಾಖೆಯವರು ಆ ಸಾಲವನ್ನು ವಾಪಸ್ಸು ಕೊಡುತ್ತಾರೆ, ಜೊತೆಗೆ ಬಡ್ಡಿಯನ್ನು ಕೊಡುತ್ತಾರೆ. ಅದೇ ರೀತಿಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದಲೂ ಸುಮಾರು 2,000 ಕೋಟಿ ರೂಪಾಯಿಗಳು ಬರಬೇಕಾಗಿದೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ 322 ಕೋಟಿ ರೂಪಾಯಿಗಳು ಬರಬೇಕಾಗಿದೆ. Water Resources Department ನಿಂದ 1,361 ಕೋಟಿ ರೂಪಾಯಿಗಳು ಬರಬೇಕಾಗಿದೆ, ಸಣ್ಣ ನೀರಾವರಿ ಇಲಾಖೆಯಿಂದ 141 ಕೋಟಿ ರೂಪಾಯಿಗಳಿದ್ದು, ಅದು ಸ್ವಲ್ಪ ಕಡಿಮೆ ಇದೆ. ಈ ರೀತಿಯಲ್ಲಿ ಸುಮಾರು 9,000 ಕೋಟಿ ರೂಪಾಯಿಗಳು ನಮ್ಮ ಎಸ್ಕಾಂಗಳಿಗೆ ಬರಬೇಕಾಗಿದೆ.

ಶ್ರೀ ಸಿ.ಟಿ.ರವಿ:– ಸನ್ಮಾನ್ಯ ಸಭಾಪತಿಯವರೆ, ನಾನು ಕೇಳಿದ ಪ್ರಶ್ನೆಗೂ ಇವರು ಕೊಡುವಂತಹ ಉತ್ತರಕ್ಕೂ ಸಂಬಂಧವಿಲ್ಲ.

ಶ್ರೀ ಕೆ.ಜೆ. ಜಾರ್ಜ್:– ಇಲ್ಲ, ಸಂಬಂಧ ಇದೆ.

ಶ್ರೀ ಸಿ.ಟಿ.ರವಿ:– ಸನ್ಮಾನ್ಯ ಸಭಾಪತಿಯವರೆ, ನಾನು ಕೇಳುತ್ತಿರುವಂತಹ ಪ್ರಶ್ನೆ ಸ್ಮಾರ್ಟ್ ಮೀಟರ್ ಅಳವಡಿಕೆಯಲ್ಲಿ ಬೇರೆ ರಾಜ್ಯಗಳಿಗೂ ಕರ್ನಾಟಕಕ್ಕೂ ಇರುವಂತಹ ವ್ಯತ್ಯಾಸದ ಬಗ್ಗೆ ಕೇಳಿದ್ದೇನೆ. ಉದಾಹರಣೆಯನ್ನು ಕೊಡುತ್ತೇನೆ. ರಾಜಸ್ಥಾನದಲ್ಲಿ 7,516 ರೂಪಾಯಿಗಳು, including ten years rent collect ಮಾಡುವುದನ್ನು ಸೇರಿಸಿ ಇದೆ. ಬಿಹಾರದಲ್ಲಿ 6,006 ರೂಪಾಯಿಗಳು ಇದೆ. ಪಶ್ಚಿಮ ಬಂಗಾಳದಲ್ಲಿ 5,776 ರೂಪಾಯಿಗಳು ಸಿಂಗಲ್ ಫೇಸ್‌ಗೆ ಇದೆ. ಗುಜರಾತ್‌ನಲ್ಲಿ 7,347 ಇದೆ. ಕರ್ನಾಟಕದಲ್ಲಿ ಹತ್ತಿರ ಹತ್ತಿರ 20,396 ಇದೆ. ಅಂದರೆ, ಪ್ರತಿಶತ ಎಷ್ಟು ಹೆಚ್ಚು ಇದೆ.? 200 ಪ್ರತಿಶತ ಹೆಚ್ಚಳ. ಇದು ಏತಕ್ಕೆ? ಈ ವ್ಯತ್ಯಾಸ ಏತಕ್ಕೆ? ಸರ್ಕಾರ ದರೋಡೆ ಮಾಡಲಿಕ್ಕೆ ಲೈಸೆನ್ಸ್ ಕೊಟ್ಟಿದ್ದೀರಾ? ಇಲ್ಲ ಏನು ಸರ್ಕಾರ ಒಂದು ಪೈಸೆ ಸಹಿತ ಖರ್ಚು ಮಾಡುವುದಿಲ್ಲವೆಂದು ಹೇಳುತ್ತೀರಿ. ಗ್ರಾಹಕರ ದರೋಡೆಗೆ ಸರ್ಕಾರ ಲೈಸೆನ್ಸ್ ಕೊಟ್ಟಿದೆಯೇ? ಅಲ್ಲಿಗೂ ಇಲ್ಲಿಗೂ ವ್ಯತ್ಯಾಸ ಏನು? ಅಲ್ಲಿ ಸಾಮಾನ್ಯ ಮೀಟರ್ ಇದ್ದು, ಇಲ್ಲಿ ಚಿನ್ನದ ಮೀಟರ್ ಇದೆಯೇ? ಇಲ್ಲಿ ಯಾವ ಮೀಟರ್ ಹಾಕುತ್ತಾರೆ? ಅದೇ ಒಂದು ಕಂಪ್ಯೂಟರ್ ಚಿಪ್ ಹಾಕಲಾಗುತ್ತದೆ. ಸ್ಮಾರ್ಟ್ ಮೀಟರ್ ಎಂದರೆ ಬೇರೆ ಏನೂ ಇರುವುದಿಲ್ಲ. ಒಂದು ಕಂಪ್ಯೂಟರ್ ಚಿಪ್ ಇರುತ್ತದೆ.

ಶ್ರೀ ಕೆ.ಜೆ. ಜಾರ್ಜ್:– ಯಾರು, ಯಾವ ಸರ್ಕಾರವೂ ಸಹ ಯಾರಿಗೂ ದರೋಡೆ ಮಾಡಲಿಕ್ಕೆ ....

(ಗೊಂದಲ)

ಶ್ರೀ ಸಿ.ಟಿ.ರವಿ:– ಸನ್ಮಾನ್ಯ ಸಭಾಪತಿಯವರೆ, ಇದು ಹಗಲು ದರೋಡೆ.

ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):– ಇವರು ದರೋಡೆ ಎಂದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ಎಸ್ ಬೋಸ್‌ರಾಜು(ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಅವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ.

(ಗೊಂದಲ)

ಸಭಾಪತಿಯವರು:- ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ನೋಡಿ, ಮಾನ್ಯ ಸದಸ್ಯರು ಏನು ಕೇಳುತ್ತಿದ್ದಾರೆಂದರೆ, ಬೇರೆ ರಾಜ್ಯದಲ್ಲಿ ಇಷ್ಟು ದರ ಕಡಿಮೆ ಇದೆ, ಇಲ್ಲಿನ ದರ ಜಾಸ್ತಿ ಇದೆ, ಇದಕ್ಕೆ ಕಾರಣ ಏನು ಎಂದು ಕೇಳಿದ್ದಾರೆ. ಕಾರಣ ಹೇಳಿಬಿಡಿ.

ಶ್ರೀ ಬಸನಗೌಡ ಬಾದರ್ಲಿ(ವಿಧಾನಸಭಾ ಕ್ಷೇತ್ರ):-ಮಾನ್ಯ ಸಭಾಪತಿಯವರೆ, ದರೋಡೆ ಎನ್ನುವಂತಹ ಶಬ್ದವನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಹೇಳಿ.

(ಗೊಂದಲ)

ಸಭಾಪತಿಯವರು:- ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ:- ಸನ್ಮಾನ್ಯ ಸಭಾಪತಿಯವರೆ, ಇದು ದರೋಡೆ. ಇದು ದರೋಡೆ ಅಲ್ಲದೇ ಮತ್ತೇನು? ಇದು ಹಗಲು ದರೋಡೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ ಎದ್ದು ನಿಂತು ಮಾತನಾಡಿದರು)

ಸಭಾಪತಿಯವರು:- ನೋಡಿ, ಈ ರೀತಿಯೇ ನೀವು ಮುಂದುವರಿದರೆ ಸದನವನ್ನು ಮುಂದೂಡುತ್ತೇನೆ. ನೀವುಗಳು ಏನು ಹುಡುಗಾಟ ಮಾಡುತ್ತಿದ್ದೀರಿ? ಎಲ್ಲರೂ ಎದ್ದು ನಿಂತುಕೊಂಡು ಏತಕ್ಕೆ ಮಾತನಾಡುತ್ತೀರಿ? ನಾನು ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ, ಯಾರು ಪ್ರಶ್ನೆಯನ್ನು ಕೇಳುತ್ತಾರೆ, ಅವರೇ ಮಾತನಾಡಬೇಕು, ಅದನ್ನು ಬಿಟ್ಟು ಬೇರೆಯವರು ಎದ್ದು ನಿಂತು ಮಾತನಾಡಬಾರದು. ಒಂದೊಂದು ಬಾರಿ ವಿಷಯ ಗಂಭೀರವಾಗಿದ್ದಾಗ ತಾವುಗಳು ಕೈ ಎತ್ತಿದರೆ ನಾನು ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಸಭಾಪತಿಯವರೆ, R.D.S.S. ಸ್ಕೀಂ ನಮಗೆ ಬಂದಿದ್ದರೆ, ಶ್ರೀಯುತ ಸಿ.ಟಿ.ರವಿಯವರು ಕೇಳಿದಂತಹ ಪ್ರಶ್ನೆ ಸರಿಯಾಗಿರುತ್ತಿತ್ತು. ನಾವು ಹೇಳುತ್ತಿರುವುದು ಏನೆಂದರೆ, R.D.S.S. ಸ್ಕೀಂ ನಮಗೆ ಏತಕ್ಕೆ ಬರಲಿಲ್ಲ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಅದನ್ನು ಕೇಳಲಿಕ್ಕೆ ತಮಗೆ ಸ್ವಲ್ಪ ಸಮಾಧಾನ ಇರಬೇಕು. ಆದ್ದರಿಂದ, ಬೇರೆ ರಾಜ್ಯಗಳಲ್ಲಿ....

Mr. CHAIRMAN:- Is the matter pending before the Court?

ಶ್ರೀ ಕೆ.ಜೆ. ಜಾರ್ಜ್:- ನಾನು ಆ ವಿಚಾರವನ್ನು ಸಹ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಈ ವಿಚಾರವಾಗಿ ಕೋರ್ಟಿಗೆ ಹೋಗಿ ಪ್ರಶ್ನೆ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಕೋರ್ಟ್‌ನಲ್ಲಿ ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರವಾಗಿ ಕೋರ್ಟ್‌ನಿಂದ ಯಾವುದೇ ಆದೇಶದ ಪ್ರತಿಗಳು ಇಲ್ಲಿಗೆ ಬರಲಿಲ್ಲ. ಕೋರ್ಟ್‌ನವರು ಈ ವಿಚಾರವನ್ನು ಪೆಂಡಿಂಗ್‌ನಲ್ಲಿ ಇಟ್ಟಿದ್ದಾರೆ. ಈ 19ನೇ ತಾರೀಖು ಕೋರ್ಟ್‌ನಿಂದ ತೀರ್ಪು ಬರುತ್ತದೆ. ಅದು ಬಂದ ಮೇಲೆ ವಿಚಾರ ಗೊತ್ತಾಗುತ್ತದೆಯೇ ಹೊರತು, ಅದನ್ನು ಬಿಟ್ಟು ಯಾರೋ ಒಬ್ಬರು ಲಾಯರ್ ಬಂದು ಹೇಳಿದರು ಎಂದರೆ ಅದನ್ನು ನಾವು ಒಪ್ಪಲಿಕ್ಕೆ ಆಗುವುದಿಲ್ಲ. ಕೋರ್ಟ್‌ನಿಂದ ಆದೇಶ ಬಂದರೆ ಮತ್ತು ನೀವು ಹೇಳಿದ ಅಂಶ ಅದರಲ್ಲಿ ಇದ್ದರೆ ಅದಕ್ಕೆ ನಾವು ಗೌರವವನ್ನು ಕೊಟ್ಟು, ಅದನ್ನು ಪಾಲನೆ ಮಾಡುವಂತಹ ಕೆಲಸ ನಮಗೆ ಬಿಟ್ಟ ವಿಚಾರವಾಗಿದ್ದು, ನಾವು ಮಾಡಿಯೇ ಮಾಡುತ್ತೇವೆ.

ಸಭಾಪತಿಯವರು:– ಈ ವಿಚಾರ ಕೋರ್ಟ್‌ನಲ್ಲಿರುವುದರಿಂದ ನೀವು ಏತಕ್ಕೆ ಉತ್ತರ ಕೊಡುತ್ತೀರಿ?

ಶ್ರೀ ಕೆ.ಜೆ. ಜಾರ್ಜ್:– ಕೋರ್ಟ್‌ನಿಂದ ಬಂದ ಮೇಲೆ ಉತ್ತರ ಹೇಳುತ್ತೇನೆ.

Mr. CHAIRMAN:– When the matter is pending before the Court, I cannot take this.

(ಗೊಂದಲ)

ಶ್ರೀ ಸಿ.ಟಿ.ರವಿ:– ಸನ್ಮಾನ್ಯ ಸಭಾಪತಿಯವರೆ, ಖಾಸಗಿ ಕೇಸ್ ಅನ್ನು ದಾಖಲು ಮಾಡಲಾಗಿದೆ. ಅದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೆ, ನೋಡಿ, ಕೋರ್ಟ್‌ನಲ್ಲಿ ಕೇಸ್ ಇದೆ. ಆ ಕೇಸ್ ಬೇರೆನೇ ಇದೆ. ಈಗ ಏನು ವ್ಯತ್ಯಾಸ ಇದೆ ಅದರ ಬಗ್ಗೆ ಮಾನ್ಯ ಸಚಿವರು ಹೇಳಲಿ. Price difference ಏತಕ್ಕೆ?

(ಗೊಂದಲ)

ಸಭಾಪತಿಯವರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ವಿಚಾರವನ್ನು ಬೇರೆ ರೂಪದಲ್ಲಿ ಕೊಡಿ, ಆಗ ನಾನು ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್:–(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮಾನ್ಯ ಸಭಾಪತಿಯವರೇ, ದಯಮಾಡಿ ಈ ಪ್ರಶ್ನೆಗೆ ಉತ್ತರವನ್ನು ಕೊಡಿಸಿ.

(ಮುಂದು.)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(608) 11.08.2025 01.20 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಸಿ.ಟಿ.ರವಿ:- ಮಾನ್ಯ ಸಭಾಪತಿಯವರೆ, ನಾನು ರಾಜ್ಯದ ಜನರ ಪರವಾಗಿ ಪ್ರಶ್ನೆಯನ್ನು ಕೇಳಿದ್ದೇನೆ.

(ಗೊಂದಲ)

ಸಭಾಪತಿಯವರು:- ಮಾನ್ಯ ರವಿಯವರೆ, ಈ ವಿಷಯವನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ, ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಸಭಾಪತಿಯವರು:- ಪ್ರಶ್ನೆ ಕೇಳಿರುವವರು ಅವರು, ಉತ್ತರ ಹೇಳುವವರು ಸಚಿವರು. ನೀವೇಕೆ ಕಸಿವಿಸಿ ಮಾಡುತ್ತೀರಿ?

(ಗೊಂದಲ)

ಸಭಾಪತಿಯವರು:- ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲು ಬೇರೆ ರೂಪದಲ್ಲಿ ತಂದರೆ ಅವಕಾಶವನ್ನು ಕೊಡಲಾಗುವುದು. ಅರ್ಧ ಗಂಟೆ ಕಾಲಾವಧಿ ಚರ್ಚೆಯಡಿಯಲ್ಲಿ ಅವಕಾಶವನ್ನು ನೀಡುತ್ತೇನೆ.

(ಗೊಂದಲ)

ಶ್ರೀ ಸಿ.ಟಿ.ರವಿ:- ನೀವು ಈಗ ೩೩ ಲಕ್ಷ ಜನ ಗ್ರಾಹಕರ ರಕ್ಷಣೆಗೆ ಬರಬೇಕು.

(ಗೊಂದಲ)

ಸಭಾಪತಿಯವರು:- ನಿಮಗೆ ಕನ್ನಡ ತಿಳಿಯುತ್ತದೆಯೋ ಇಲ್ಲವೋ. ನಾನು ಆಗಲೇ ಹೇಳಿದ್ದೇನೆ. ಅರ್ಧ ತಾಸಿನ ಚರ್ಚೆಗೆ ಅವಕಾಶ ಕೋರಿ ಪತ್ರವನ್ನು ಕೊಡಿ. ನಾನು ಅದಕ್ಕೆ ಸಮಯವನ್ನು ನಿಗದಿ ಪಡಿಸಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ:- ಆಗಲಿ, ಮಾನ್ಯ ಸಭಾಪತಿಯವರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ 94

ಏಪ್ರಿಲ್, 2025ರ ಎಸ್.ಎಸ್.ಎಲ್.ಸಿ.ಯಲ್ಲಿ ವಿಷಯವಾರು ಶೇಕಡ 60 ಕ್ಕಿಂತ ಕಡಿಮೆ ಫಲಿತಾಂಶ ಪಡೆದ ವಿಷಯ ಶಿಕ್ಷಕರ ಮೇಲೆ ಕ್ರಮ ಕೈಗೊಳ್ಳುವ ಕುರಿತು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಶೇ. 60% ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ವಿಷಯ ಶಿಕ್ಷಕರಿಗೆ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವಂತೆ ಮತ್ತು ನಿರಂತರ 3 ವರ್ಷ ಶೇ. 60% ಕ್ಕಿಂತ ಕಡಿಮೆ ಫಲಿತಾಂಶ ನೀಡಿದಂತಹ ವಿಷಯ ಶಿಕ್ಷಕರ ವೇತನ ಅನುದಾನ ತಡೆ ಹಿಡಿಯುವ ಮುಂತಾದ ಕ್ರಮಗಳನ್ನು ಜರುಗಿಸಲು ನಿರ್ದೇಶಕರು ಪ್ರೌಢ ಶಿಕ್ಷಣ ಇವರು ಎಲ್ಲಾ ಉಪನಿರ್ದೇಶಕರಿಗೆ ನಿರ್ದೇಶನ ನೀಡಿರುವುದು ನಿಜವೇ?	ರಾಜ್ಯದ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿನ ಶಿಕ್ಷಕರ ಹುದ್ದೆಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017 ದಿನಾಂಕ: 06.03.2019 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ. 1. ಈಗಾಗಲೇ ಅನುದಾನಕ್ಕೆ ಒಳಪಟ್ಟಿರುವ ಶಾಲೆಯ ವಿಷಯವಾರು ಫಲಿತಾಂಶವನ್ನು ಪರಿಗಣಿಸಿ ಶೇ.60 ಕ್ಕಿಂತ ಕಡಿಮೆ ಫಲಿತಾಂಶವನ್ನು ಪಡೆದಿರುವ ವಿಷಯ ಶಿಕ್ಷಕರನ್ನು ಗುರುತಿಸಿ ಅಂತಹವರ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. 2. ಅನುದಾನಪ ಡೆಯುತ್ತಿರುವ ವಿಷಯ ಶಿಕ್ಷಕರು ನಿರಂತರ ಮೂರು ವರ್ಷಗಳಲ್ಲಿ ಶೇ.60 ಕ್ಕಿಂತ ಕಡಿಮೆ ಫಲಿತಾಂಶ ನೀಡಿದಲ್ಲಿ ಅಂತಹ ವಿಷಯ ಶಿಕ್ಷಕರ ವೇತನಾನುದಾನವನ್ನು ತಡೆಹಿಡಿಯುವುದು. 3. ಒಂದು ಅನುದಾನಿತ ಪ್ರೌಢಶಾಲೆಯು ಸತತ ಐದು ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಲ್ಲಿ ಐದುವರ್ಷಗಳು ನಿರಂತರವಾಗಿ ಕನಿಷ್ಟ ಶೇ. 50 ವಿದ್ಯಾರ್ಥಿಗಳು ಉತ್ತೀರ್ಣರಾಗದಿದ್ದಲ್ಲಿ ಶಾಲೆಗೆ ನೀಡಲಾಗುತ್ತಿರುವ ವೇತನಾನುದಾನವನ್ನು ತಡೆಹಿಡಿಯುವುದು. 4. ಖಾಲಿ ಹುದ್ದೆಗೆ ಎದುರಾದ ಅನುದಾನಕ್ಕೆ ಒಳಪಡುವ ವಿಷಯ ಶಿಕ್ಷಕರ ಸಂಬಂಧಪಟ್ಟ ವಿಷಯದಲ್ಲಿ ಶೇ. 60ಕ್ಕಿಂತ ಕಡಿಮೆ ಫಲಿತಾಂಶ ಬಂದಲ್ಲಿ ಅವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. ನಿರಂತರವಾಗಿ ಮೂರು ವರ್ಷಗಳು ವಿಫಲವಾದಲ್ಲಿ ಅವರ ವೇತನಾನುದಾನವನ್ನು ಹಿಂಪಡೆಯುವುದು. ಸದರಿ ಆದೇಶದಂತೆ 2024-25ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶವನ್ನು ಪರಿಶೀಲಿಸಿ ಸಂಬಂಧ ಪಟ್ಟ ಶಾಲೆಗಳನ್ನು ಮತ್ತು ಶಿಕ್ಷಕರುಗಳನ್ನು ಗುರುತಿಸಿ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಸುಧಾರಣೆ ಹಾಗೂ ಫಲಿತಾಂಶ ಸುಧಾರಣೆ ಕೈಗೊಳ್ಳುವ ನಿಟ್ಟಿನಲ್ಲಿ ಅವರ ನಿರ್ದಿಷ್ಟ ಪಾತ್ರವಿದ್ದಲ್ಲಿ ಆಯುಕ್ತರ ಹಂತದಿಂದ ಕ್ರಮವಹಿಸಲು ತಿಳಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ತದನಂತರ ಆಯಕ್ತರು, ಶಾಲಾ ಶಿಕ್ಷಣ ಇಲಾಖೆ ದಿನಾಂಕ:30/05/2025, ದಿನಾಂಕ:02/06/2025 ಹಾಗೂ ದಿನಾಂಕ:05/06/2025 ರ ಪತ್ರಗಳಲ್ಲಿನ ಅಂಶಗಳ ಕುರಿತು ಮೊದಲನೇ ಹಂತದಲ್ಲಿ ಸದರಿ ಶಾಲೆಗಳು ಮತ್ತು ಶಿಕ್ಷಕರುಗಳು ನೀಡಿದ ವಿವರಣೆಗಳನ್ನು ಮಾತ್ರ ಕ್ರೋಢೀಕರಿಸಿ ವರದಿ ಸಲ್ಲಿಸಲು ತಿಳಿಸಲಾಗಿದೆ. ಹಾಗೂ ವರದಿ ಸ್ವೀಕೃತವಾದ ನಂತರ ನೀಡುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.
ಆ)	ಶೇ. 60% ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ವಿಷಯ ಶಿಕ್ಷಕರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿದೆಯೇ;	ಶೇಕಡ 60 ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಆಯಾ ವಿಷಯ ಶಿಕ್ಷಕರುಗಳ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017 ದಿನಾಂಕ: 06.03.2019 ರನ್ವಯ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ತಿಳಿಸಲಾಗಿದೆ.
ಇ)	ವಿಷಯವಾರು ಫಲಿತಾಂಶ ಶೇ. 60% ಕಡಿಮೆ ಆಗಿರಬಾರದು ಎಂಬ ನಿಯಮವನ್ನು ಕೇವಲ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಅನ್ವಯಿಸಲಾಗಿದೆಯೇ; (ವಿವರಣೆನೀಡುವುದು).	ವಿಷಯವಾರು ಫಲಿತಾಂಶ ಶೇ.60% ಕ್ಕಿಂತ ಕಡಿಮೆ ಆಗಿರಬಾರದು ಎಂಬ ನಿಯಮವು ಖಾಸಗಿ ಅನುದಾನಿತ ಶಾಲೆಗಳಿಗೆ ಅನ್ವಯಿಸಿರುವಂತೆ ಸರ್ಕಾರಿ ಶಾಲೆಗಳಿಗೂ ಅನ್ವಯಿಸಲಾಗಿರುತ್ತದೆ. ಸರ್ಕಾರಿ ಶಾಲೆಗಳಲ್ಲಿ ಶೇಕಡಾ 60% ಕ್ಕಿಂತ ಫಲಿತಾಂಶ ಕಡಿಮೆ ಬಂದಿರುವ ಶಾಲೆಗಳು, ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರುಗಳ ಕುರಿತು ಕ್ರಮವಹಿಸಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಹಂತದಲ್ಲಿ ಕಾರಣ ಕೇಳಿ ನೋಟೀಸ್ ನೀಡಲಾಗಿರುತ್ತದೆ.
ಈ)	ಪ್ರತೀ ವಿಷಯದಲ್ಲಿ ಶೇ. 60% ಫಲಿತಾಂಶ ಆಗಿರಬೇಕು ಎಂಬ ನಿರ್ಧಾರವನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ; (ಮಾಹಿತಿ ನೀಡುವುದು)	ಪ್ರತಿ ವಿಷಯದಲ್ಲಿ ಶೇ.60% ಫಲಿತಾಂಶ ಇರಬೇಕು ಎಂಬುದನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017 ದಿನಾಂಕ:06.03.2019 ರಲ್ಲಿ ನಿರ್ದಿಷ್ಟ ಪಡಿಸಲಾಗಿದೆ. ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿಒದಗಿಸಿದೆ.
ಉ)	ವಿಷಯವಾರು ಮತ್ತು ಒಟ್ಟಾರೆ ರಾಜ್ಯ ಮಟ್ಟದ ಫಲಿತಾಂಶ ಕುಸಿಯಲು ಮೂಲ ಕಾರಣಗಳೇನು; ಈ ಬಗ್ಗೆ ಸರ್ಕಾರವು ಅಧಿಕಾರಿಗಳ ಮಟ್ಟದಲ್ಲಿ ಮತ್ತು ಶಿಕ್ಷಣ ತಜ್ಞರ ಜೊತೆ ಚರ್ಚೆ ಹಾಗೂ ಚಿಂತನ ಮಾಡಿ ಸುಧಾರಣೆ ಮಾಡಲು ಮಾರ್ಗೋಪಾಯಗಳನ್ನು ಕಂಡು ಹಿಡಿದಿದೆಯೇ (ವಿವರಣೆ ನೀಡುವುದು)?	2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗೆ ಸುತ್ತೋಲೆ ಸಂಖ್ಯೆ: ಇಪಿ 272 ಎಸ್‌ಎಲ್‌ಬಿ 2024 ದಿನಾಂಕ: 29.08.2024 ರಲ್ಲಿ 20 ಅಂಶಗಳ ಸೂಚನೆಗಳನ್ನು ನೀಡಿ ಅವುಗಳನ್ನು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ತಿಳಿಸಲಾಗಿರುತ್ತದೆ. ಅದರಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ನಡೆಸಿರುತ್ತಾರೆ. 2024 ರ ನವಂಬರ್ ಮಾಹೆಯಿಂದ ಮೇಲಿಂದ ಮೇಲೆ ಉಪ ನಿರ್ದೇಶಕರು(ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ರವರೊಂದಿಗೆ ಎಸ್.ಎಸ್.ಎಲ್.ಸಿ ಗುಣಮಟ್ಟದ ಫಲಿತಾಂಶಕ್ಕೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಮೇಲಿನ ಅಂಶಗಳಂತೆ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶವನ್ನು ಸುಧಾರಣೆಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ಒಟ್ಟಾರೆ ಫಲಿತಾಂಶ ಈ ಕೆಳಗಿನಂತೆ ಬಂದಿರುತ್ತದೆ.

ಶಾಲೆಯ ವಿಧ	ಶೇಕಡವಾರು ಫಲಿತಾಂಶ
ಸರ್ಕಾರಿ	62.7%
ಖಾಸಗಿ ಅನುದಾನಿತ	58.97%

2023-24ನೇ ಸಾಲಿನ ಹಾಗೂ 2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪ್ರಥಮ ಪರೀಕ್ಷೆಗಳ ತುಲನಾತ್ಮಕ ತಖ್ತೆ:

2023-2024 ನೇ ಸಾಲಿನಲ್ಲಿ ಪ್ರಪ್ರಥಮ ಬಾರಿಗೆ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿಗಳ ಮೂಲಕ ವೆಬ್ ಕ್ಯಾಸ್ಟಿಂಗ್ ಮಾಡುವ ಹೊಸ ಪದ್ಧತಿಯನ್ನು ಪರಿಚಯಿಸಲಾಗಿತ್ತು. ಪರೀಕ್ಷಾ ಕೊಠಡಿಗಳ ದೃಶ್ಯಾವಳಿಗಳನ್ನು ಮೇಲ್ವಿಚಾರಣೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿತ್ತು. ಈ ನಾವೀನ್ಯ ಕ್ರಮವು ವಿನೂತನವಾಗಿದ್ದು, ಪರೀಕ್ಷೆಯ ಸಮಗ್ರತೆಯನ್ನು ಪುನರ್ ಸ್ಥಾಪಿಸಲು ಸಹಾಯಕವಾಗಿದೆ. ಈ ಮೂಲಕ ಪರೀಕ್ಷಾ ಅಕ್ರಮಗಳನ್ನು ಆಶ್ರಯಿಸದೆ ಪರೀಕ್ಷೆಗಳನ್ನು ಬರೆಯುವ ಅಭ್ಯಾಸವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಸಫಲವಾಗಿದ್ದು, ಈ ಕ್ರಮವನ್ನು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರನ್ನೊಳಗೊಂಡಂತೆ ಎಲ್ಲಾ ಭಾಗೀದಾರರು ಸ್ವಾಗತಿಸಿದ್ದಾರೆ.

ಆದರೆ, ಒಟ್ಟಾರೆ ಫಲಿತಾಂಶ ಕಳೆದ ವರ್ಷಕ್ಕಿಂತ (2022-23) ಶೇ. 30 ರಷ್ಟು ಕಡಿಮೆಯಾಗಿತ್ತು. ಮೊದಲ ಬಾರಿಗೆ ವೆಬ್ ಕ್ಯಾಸ್ಟಿಂಗ್ ವಿಧಾನವನ್ನು ಪರಿಚಯಿಸಿದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 20% ಗ್ರೇಸ್ ಅಂಕಗಳನ್ನು ನೀಡಲು ಸರ್ಕಾರ ನಿರ್ಧರಿಸಿತ್ತು. ಹಾಗೂ ಮುಂಬರುವ ವರ್ಷದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ನೂತನ ವ್ಯವಸ್ಥೆಗೆ ಉತ್ತಮವಾಗಿ ಹೊಂದಿಕೊಳ್ಳುವುದರಿಂದ ಕೃಪಾಂಕ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ನಿರ್ಧರಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಒಂದು ಬಾರಿಯ ಕ್ರಮವಾಗಿ, 2024ರ ಎಲ್ಲಾ 3 ಎಸ್ಎಸ್ಎಲ್ಸಿ ಪರೀಕ್ಷೆಗಳಿಗೆ ಎಲ್ಲಾ ವಿಷಯಗಳಲ್ಲಿ ನೀಡುವ ಕೃಪಾಂಕಗಳನ್ನು ಆಕರ್ಷಿಸಲು ಪಡೆಯಬೇಕಾದ ಅರ್ಹ ಅಂಕಗಳನ್ನು ಶೇ. 35 ರಿಂದ ಶೇ. 25ಕ್ಕೆ ಇಳಿಸಲಾಗಿದೆ ಮತ್ತು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಪಾಂಕದ ಪ್ರಮಾಣವನ್ನು ಶೇ. 10 ರಿಂದ ಶೇ. 20ಕ್ಕೆ ಹೆಚ್ಚಿಸಲಾಗಿತ್ತು.

ಈ ಕ್ರಮದ ನಂತರ ಒಟ್ಟಾರೆ ಫಲಿತಾಂಶವು ಈ ಕೆಳಗಿನ ಕೋಷ್ಟಕದಂತಿರುತ್ತದೆ.

2023-24 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ 20% ಗ್ರೇಸ್ ಅಂಕಗಳನ್ನೊಳಗೊಂಡಂತೆ

2024 SSLC EXAM 1 RESULT STATISTICS (CCERF, 20% GRACE PASSED)			
GOVT	AIDED	UN-AIDED	TOTAL
72.58 %	72.34 %	86.57 %	77.03 %

2023-24 ನೇ ಸಾಲಿನಲ್ಲಿಯೂ ಕೇವಲ ಶೇಕಡ 10% ಕೃಪಾಂಕ ನೀಡಿದ್ದಲ್ಲಿ ಫಲಿತಾಂಶ ಈ ಕೆಳಗಿನಂತೆ ಇರುತ್ತಿತ್ತು. ಇದನ್ನು 2024-25ನೇ ಸಾಲಿನ ಫಲಿತಾಂಶಕ್ಕೆ ಹೋಲಿಸಿದಲ್ಲಿ ಈ ಕೆಳಗಿನ ಹೆಚ್ಚಳವನ್ನು ಕಾಣಬಹುದು.

2023-24 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ (10 % ಗ್ರೇಸ್ ಅಂಕಗಳಂತೆ)

2023-24 SSLC EXAM 1 RESULT STATISTICS (CCERF, 10% GRACE PASSED)				
YEAR	GOVT	AIDED	UN-AIDED	TOTAL
2023-24	53.3 %	52.67 %	72.9 %	59.45 %

2024-25 ನೇ ಸಾಲಿನ ಪರೀಕ್ಷೆ-1 ರ ಫಲಿತಾಂಶ (ಪ್ರತಿ ವರ್ಷ ನೀಡಲಾದ 10% ಗ್ರೇಸ್ ಅಂಕಗಳಂತೆ)

2024-25 ನೇ ಸಾಲಿನ ಪರೀಕ್ಷೆ-1 ಫಲಿತಾಂಶ (10% ಗ್ರೇಸ್ ಅಂಕಗಳಂತೆ)				
SSLC 2025 SCHOOL MANAGEMENT TYPE WISE RESULT [REGULAR FRESHER]				
YEAR	GOVT	AIDED	UN-AIDED	ALL
2024-25	62.7 %	58.97 %	75.59 %	66.14 %

2023-24 (10% ಗ್ರೇಸ್) ಮತ್ತು 2024-25 ನೇ ಸಾಲಿನ (10% ಗ್ರೆಸ್) ಫಲಿತಾಂಶದಲ್ಲಿ ವ್ಯತ್ಯಾಸ

SSLC 2024 & 2025 EXAM 1 SCHOOL MANAGEMENT TYPE WISE RESULT DIFFERENCE [REGULAR FRESHER, 10% grace]				
YEAR	GOVT	AIDED	UN-AIDED	TOTAL
2023-24	53.30%	52.67%	72.90%	59.45%
2024-25	62.70%	58.97%	75.59%	66.14%
DIFFERENCE	9.4	6.3	2.69	6.69

ಈ ಮೇಲಿನಂತೆ 2023-24 ನೇ ಸಾಲಿನ ಪರೀಕ್ಷೆ-1 (10% ಗ್ರೇಸ್)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಿಂತ 2024-25 ನೇ ಸಾಲಿನ ಪರೀಕ್ಷೆ-1 (10% ಗ್ರೇಸ್) ಫಲಿತಾಂಶದಲ್ಲಿ ಒಟ್ಟಾರೆ 6.69% ಹೆಚ್ಚಳ ಆಗಿರುವುದು ಕಂಡು ಬರುತ್ತಿದೆ.

2024-25ನೇ ಸಾಲಿನ 3 ಪರೀಕ್ಷೆಗಳ ಒಟ್ಟಾರೆ ಫಲಿತಾಂಶ

2024-25 ನೇ ಸಾಲಿನ 3 ಪರೀಕ್ಷೆಗಳ ಒಟ್ಟಾರೆ ಫಲಿತಾಂಶ (10% ಗ್ರೇಸ್)				
SSLC 2025 SCHOOL MANAGEMENT TYPE WISE RESULT [REGULAR FRESHER]				
Exam	GOVT	AIDED	UN-AIDED	ALL
EXAM-1	62.7	58.97	75.59	66.14
EXAM-2	36.65	19.75	32	30.39
EXAM-3	19.33	20.53	25.75	21.18
OVERALL	77.06%	74.87%	87.37%	79.97%

2025-26 ನೇ ಸಾಲಿನಲ್ಲಿ SSLC ಫಲಿತಾಂಶ ಸುಧಾರಣೆಗೆ ಕೈಗೊಳ್ಳಲಾಗುವ ಕ್ರಮಗಳು:

- ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 215 ಎಸ್‌ಎಲ್‌ಬಿ 2025 ದಿನಾಂಕ: 01.07.2025 ರಲ್ಲಿ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯ ಫಲಿತಾಂಶ ವೃದ್ಧಿಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು 29 ಅಂಶಗಳ ಸೂಚನೆ ಜಾರಿಯಲ್ಲಿದ್ದು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

- 2024-25ನೇ ಸಾಲಿನಲ್ಲಿ ಪ್ರಕಟವಾಗಿರುವ ಫಲಿತಾಂಶವನ್ನು ಪರೀಕ್ಷಾ ಮಂಡಳಿ ಮತ್ತು ಡಿ.ಎಸ್.ಇ.ಆರ್.ಟಿ.ಯಿಂದ ವಿಶ್ಲೇಷಿಸಿ ಒಟ್ಟಾರೆಯಾಗಿ ಯಾವ ವಿಷಯದಲ್ಲಿ ಮತ್ತು ಆ ವಿಷಯಗಳ ಯಾವ ನಿರ್ದಿಷ್ಟ ಕಲಿಕಾಂಶಗಳಲ್ಲಿ ಕಡಿಮೆ ಸಾಧನೆ ಆಗಿದೆ ಎಂಬುದನ್ನು ಕಂಡು ಹಿಡಿದು, ಆ ನಿರ್ದಿಷ್ಟ ಕಲಿಕಾಂಶಗಳ ಬೋಧನೆ / ಕಲಿಕೆಗಳ ಕುರಿತು ಅವಶ್ಯ ಕ್ರಮವಹಿಸಲಾಗುವುದು.

- ಪ್ರಸ್ತುತ ವರ್ಷ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಸುತ್ತೋಲೆ ಸಂಖ್ಯೆ:E—59908 DSERT/EVG/ಪಾ.ಅ.ಮೌ(LBA)/2025-26 ದಿನಾಂಕ: 16.7.2025 ರಲ್ಲಿ ಶಾಲೆಗಳಲ್ಲಿ ಡಿ.ಎಸ್.ಇ.ಆರ್.ಟಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ವತಿಯಿಂದ ಅಧ್ಯಾಯ ಆಧಾರಿತ ಮೌಲ್ಯಾಂಕನ (Lesson Based Assessment) ಕೈಗೊಳ್ಳಲಾಗುವುದು. ಇದರಿಂದ ಯಾವುದೇ ವಿದ್ಯಾರ್ಥಿಗಳು ಆಯಾ ಪಾಠದಲ್ಲಿನ ಕಲಿಕಾಂಶಗಳನ್ನು ಪಡೆದುಕೊಳ್ಳದೇ ಇದ್ದಲ್ಲಿ, ಆ ಕಲಿಕಾಂಶಗಳನ್ನು ಅದೇ ಸಂದರ್ಭದಲ್ಲಿ ಕಲಿಯಲು ಶಿಕ್ಷಕರು ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡು ಮುಂದೆ ಸಾಗಲು ತಿಳಿಸಲಾಗುವುದು. • ಸೇತುಬಂಧ ಮೌಲ್ಯಮಾಪನ ಆಧಾರದ ಮೇಲೆ ಗುರುತಿಸಲ್ಪಟ್ಟ ವಿದ್ಯಾರ್ಥಿಗಳಿಗೆ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ. • ಕ್ಲಿಷ್ಟ ಪರಿಕಲ್ಪನೆಗಳನ್ನು ಗುರುತಿಸಿ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸಲು ಶಾಲೆಯ ಅವಧಿಯ ಮೊದಲು ಮತ್ತು ಶಾಲಾ ಅವಧಿಯ ನಂತರ ಶಾಲೆಯಲ್ಲಿಯೇ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. • ಆಯಾ ತರಗತಿ ನಿರ್ದಿಷ್ಟ ಕಲಿಕಾ ಫಲಗಳನ್ನು ವಿದ್ಯಾರ್ಥಿಗಳು ಸಾಧಿಸುವಂತಾಗಲು ಒಂದನೇ ತರಗತಿಯಿಂದಲೇ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. • ಫಲಿತಾಂಶವನ್ನು ಉತ್ತಮಪಡಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಿಕ್ಷಕರಿಗೆ ಶಾಲಾ ದಿನಗಳನ್ನು ಹೊರತು ಪಡಿಸಿ ಪುನಶ್ಚೇತನಾ ತರಬೇತಿಗಳನ್ನು ಆಯೋಜಿಸಲಾಗುವುದು. • ಗುಣಮಟ್ಟದ ಫಲಿತಾಂಶ ಪಡೆಯಲು ವಿವಿಧ ಹಂತಗಳಲ್ಲಿ ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಿ ಕ್ರಮ ವಹಿಸಲಾಗುವುದು..

ಶ್ರೀ ಎಸ್.ವ್ಹಿ.ಸಂಕನೂರ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ಪ್ರೌಢ ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಸುತ್ತೋಲೆಯ ಪ್ರಕಾರ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಕಡಿಮೆ ಅಂಕಗಳನ್ನು ತೆಗೆದುಕೊಂಡರೆ ಶಿಕ್ಷಕರಿಗೆ ಹಾಗೂ ಶಾಲಾ ಆಡಳಿತ ಮಂಡಳಿಗೆ ಯಾವ ರೀತಿಯ ಶಿಕ್ಷೆಯನ್ನು ವಿಧಿಸಲಾಗುತ್ತದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆನು. ಅವರು ಉತ್ತರದಲ್ಲಿ ಈ ರೀತಿಯಾಗಿ ತಿಳಿಸಿರುತ್ತಾರೆ. ಯಾವುದೇ ಒಂದು ವಿಷಯದಲ್ಲಿ ಶೇ.೬೦ಕ್ಕಿಂತ ಕಡಿಮೆಯಾದರೆ ಆ ಶಿಕ್ಷಕರ

increment ಅನ್ನು ತಕ್ಷಣದಿಂದ ನಿಲ್ಲಿಸುತ್ತೇವೆ. ಮೂರು ವರ್ಷದವರೆಗೆ ಶೇ.೬೦ಕ್ಕಿಂತ ಕಡಿಮೆಯಾದರೆ ಆ ವಿಷಯಕ್ಕೆ ಸರ್ಕಾರದಿಂದ ನೀಡಲಾಗುವ ಅನುದಾನವನ್ನು ನಿಲ್ಲಿಸುತ್ತೇವೆ. ಅದೇ ರೀತಿಯಾಗಿ 5 ವರ್ಷ ಶೇ.೬೦ಕ್ಕಿಂತ ಕಡಿಮೆಯಾದರೆ ಆ ಶಾಲೆಯ ಅನುದಾನವನ್ನು ಸಂಪೂರ್ಣವಾಗಿ ನಿಲ್ಲಿಸಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಮುಂದುವರೆದು, ಇದು ನಮ್ಮ ಸರ್ಕಾರ ಮಾಡಿರುವುದಲ್ಲ, 2019ರಲ್ಲಿ 6 ವರ್ಷಗಳ ಹಿಂದೆಯೇ ಇದನ್ನು ಮಾಡಲಾಗಿದೆ ಎಂದು ಹೇಳುತ್ತಾರೆ. ಯಾವುದೇ ಸರ್ಕಾರ ಮಾಡಿದ್ದರೂ ಇಲ್ಲಿರುವ ಲೋಪದೋಷಗಳನ್ನು ತಿದ್ದುವುದು ಬಹಳ ಅವಶ್ಯವಿದೆ. ಹಾಗಾಗಿ ಮಾನ್ಯ ಸಚಿವರಲ್ಲಿ ನಾನು 4 ಉಪ ಪ್ರಶ್ನೆಗಳನ್ನು ಕೇಳಬಯಸುತ್ತೇನೆ.

ಮೊದಲನೆಯದಾಗಿ, ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಕಡಿಮೆ ಅಂಕ ತೆಗೆದುಕೊಂಡರೆ ನೇರವಾಗಿ ಶಿಕ್ಷಕರನ್ನೇಕೆ ಹೊಣೆಗಾರರನ್ನಾಗಿಸಲಾಗುತ್ತದೆ? ಅವರ ಮೇಲೆ ಜವಾಬ್ದಾರಿಯನ್ನು ಏಕೆ ನಿಗದಿ ಪಡಿಸಲಾಗುತ್ತದೆ? ಹಾಗಾದರೆ ಇಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿ ಹಾಗೂ ಪಾಲಕರ ಜವಾಬ್ದಾರಿ ಏನೂ ಇಲ್ಲವೆ? ಇವೆಲ್ಲವನ್ನೂ ಬಿಟ್ಟು ಸರಿಯಾಗಿ ಪಾಠ ಕಲಿಸುತ್ತಿಲ್ಲ ಎಂದು ನೇರವಾಗಿ ಶಿಕ್ಷಕರ ಮೇಲೆ ಆಪಾದನೆ ಮಾಡುವುದೇ? ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ನೀತಿ ಇರುವುದೇನು? ಪರೀಕ್ಷೆಯಲ್ಲಿ ಯಾರೂ ಅನುತ್ತೀರ್ಣರೇ ಇಲ್ಲ. ನಮ್ಮಲ್ಲಿರುವ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ 1ನೇ ತರಗತಿಯಿಂದ 9ನೇ ತರಗತಿಯವರೆಗೆ ಅನುತ್ತೀರ್ಣ ಎನ್ನುವುದೇ ಇಲ್ಲ. ಪಾಲಕರು ಬಂದು ನನ್ನ ಮಗುವಿಗೆ ಏನೂ ಸರಿಯಾಗಿ ಓದಲು ಬರೆಯಲು ಬರುತ್ತಿಲ್ಲ, 5ನೇ ತರಗತಿಯನ್ನು ಮತ್ತೊಮ್ಮೆ ಓದಲಿ ಎಂದು ಹೇಳಿದರೆ, ಅದು ಕಾಯಿದೆ ಇಲ್ಲ, ಎಲ್ಲಾ ಉತ್ತೀರ್ಣನಾಗಿದ್ದಾನೆ ಎಂದು ಹೇಳುತ್ತಾರೆ.

ಸಭಾಪತಿಯವರು:– ಶಾಲೆಗೆ ಬಾರದಿದ್ದರೂ ಅವನು ಉತ್ತೀರ್ಣನಾಗುತ್ತಾನೆ.

ಶ್ರೀ ಎಸ್. ವಿ. ಸಂಕನೂರ:– ಮಾನ್ಯ ಸಭಾಪತಿಯವರೆ, ಒಬ್ಬ ವಿದ್ಯಾರ್ಥಿ 1ನೇ ತರಗತಿಯಿಂದ 9ನೇ ತರಗತಿಯವರೆಗೆ ಪಾಸ್, ಪಾಸ್, ಪಾಸ್... ಅವರು ಎಸ್.ಎಸ್.ಎಲ್.ಸಿ.ಯಲ್ಲಿ ಪರೀಕ್ಷೆಯನ್ನು ಮೊದಲನೆಯ ಬಾರಿಗೆ ಎದುರಿಸುತ್ತಾರೆ. ಈ ರೀತಿಯ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರ ಎಸ್.ಎಸ್.ಎಲ್.ಸಿ.ಯಲ್ಲಿ ಅಂಕವನ್ನು ಹೇಗೆ ನಿಗದಿ ಪಡಿಸುತ್ತದೆ? Benchmark ಆಗಿ ಶೇ.೬೦ ಅನ್ನು ಹೇಗೆ fix ಮಾಡಲಾಗಿದೆ? ಇದಕ್ಕೆ ಕಾರಣ ಏನು? ಅರ್ಥವಾಗುತ್ತಿಲ್ಲ. ಶೇ.೬೦ಕ್ಕಿಂತಲೂ ಕಡಿಮೆ ಫಲಿತಾಂಶ ಇದ್ದಲ್ಲಿ ಶಿಕ್ಷಕರಿಗೆ ಶಿಕ್ಷೆ ಕೊಡುವುದು ಸರಿಯಾದುದಲ್ಲ. ಪ್ರಸ್ತುತ 1 ರಿಂದ 9ನೇ ತರಗತಿಯವರೆಗಿನ ಪರೀಕ್ಷೆ ಇಲ್ಲದೆ ಇರುವ ನೀತಿಯನ್ನು ಬದಲಾವಣೆ ಮಾಡಲಾಗುತ್ತದೆಯೇ? ಇದು ಬಹಳ ಅವಶ್ಯಕವಿದೆ. ಕೇಂದ್ರ ಸರ್ಕಾರವು ಶಿಕ್ಷಣದ ಗುಣಮಟ್ಟ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಿ ಸಿ.ಬಿ.ಎಸ್.ಇ. ಪಠ್ಯಕ್ರಮದಲ್ಲಿ 5ನೇ ತರಗತಿಗೆ, 8ನೇ ತರಗತಿಗೆ ಪರೀಕ್ಷೆ ಮಾಡಬೇಕೆಂದು ಹೊಸ ನೀತಿಯೊಂದನ್ನು ತಂದಿದ್ದಾರೆ. ಆ ನೀತಿಯನ್ನು ಇಲ್ಲಿಯೂ ಅಳವಡಿಸಿಕೊಳ್ಳಲಾಗುವುದೇ? ಗುಣಮಟ್ಟ ಸುಧಾರಿಸಬೇಕಾದರೆ ಇಲ್ಲಿಯೂ ಸಹ ಆ ನೀತಿಯನ್ನು ಅಳವಡಿಸಿಕೊಳ್ಳುವಿರಾ ಎಂಬುದು ನನ್ನ ಮೊದಲನೆಯ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ 10 ವರ್ಷಗಳಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೊಟ್ಟಿರುವುದಿಲ್ಲ. Concerned subject teachers ಇಲ್ಲ. ಹೀಗಿರುವಾಗ ಒಳ್ಳೆಯ ಫಲಿತಾಂಶವನ್ನಾಗಲೀ, ಶೇ.60ಕ್ಕಿಂತ ಹೆಚ್ಚಿನ ಫಲಿತಾಂಶವಾಗಲೀ ಹೇಗೆ ನಿರೀಕ್ಷಿಸಲು ಸಾಧ್ಯ? ಇಡೀ ಶಾಲೆಯ ಅನುದಾನವನ್ನು ನಿಲ್ಲಿಸುವುದಾಗಿ ಹೇಳಿದ್ದು...

ಸಭಾಪತಿಯವರು:– ಮಾನ್ಯ ಸಚಿವರೆ, ಉತ್ತರ ಹೇಳಿ; ಮಾನ್ಯ ಸಂಕನೂರ ಅವರೆ, ನೀವು ಆಮೇಲೆ ಪ್ರಶ್ನೆ ಕೇಳಿ.

ಶ್ರೀ ಎಸ್.ವಿ.ಸಂಕನೂರ:– ಮಾನ್ಯ ಸಭಾಪತಿಯವರೆ, ಇದರ ವಿಷಯ ಬಹಳ ಇದೆ.

ಸಭಾಪತಿಯವರು:– ಹಾಗಾದರೆ ಇದನ್ನು ಬೇರೆ ರೂಪದಲ್ಲಿ ಕಳುಹಿಸಿ.

ಶ್ರೀ ಎಸ್. ವಿ. ಸಂಕನೂರ:– ಮಾನ್ಯ ಸಭಾಪತಿಯವರೆ, ಕಳುಹಿಸಿಕೊಡುತ್ತೇನೆ. ಏಕೆಂದರೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು ಹಾಗೂ ಈ ಆದೇಶವನ್ನು ಹಿಂಪಡೆಯಬೇಕು.

ಸಭಾಪತಿಯವರು:– ಅವರು ಉತ್ತರ ಕೊಡಲಿ.

ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):– ಮಾನ್ಯ ಸಭಾಪತಿಯವರೆ, 2019ರಲ್ಲಿ ಏಕೆ ಈ ಕಾನೂನನ್ನು ತರಲಾಗಿದೆ ಎಂಬುದು ನನಗೆ ಗೊತ್ತಿಲ್ಲ.

ಸಭಾಪತಿಯವರು:– ನಿಮಗೆ ಗೊತ್ತಿಲ್ಲ ಎಂದರೆ ಇನ್ಯಾರಿಗೆ ಗೊತ್ತಿರುತ್ತದೆ?

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಸಭಾಪತಿಯವರೆ, 2019ರಲ್ಲಿ ಈ ಕಾನೂನನ್ನು ಮಾಡಲಾಯಿತು. ಅದಾದ ನಂತರ teachers' recruitment ಮಾಡಲಿಲ್ಲ. Teachers' recruitment ಮಾಡಿಲ್ಲವಾದ್ದರಿಂದ ಸ್ವಾಭಾವಿಕವಾಗಿ ಫಲಿತಾಂಶದಲ್ಲಿ ಕುಸಿತವಾಗುತ್ತದೆ.

ಸಭಾಪತಿಯವರು:– ಸರ್ಕಾರದ ತಪ್ಪು ಇದೆ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಸಭಾಪತಿಯವರೆ, ನನ್ನದಲ್ಲ. Teachers' recruitment ಬಗ್ಗೆ ನ್ಯಾ॥ ನಾಗಮೋಹನ್ ದಾಸ್ ಅವರು ವರದಿಯನ್ನು ಕೊಟ್ಟಿದ್ದಾರೆ. ನಾನು ಈ ಸದನದಲ್ಲಿ ಕಳೆದ ಬಾರಿಯೂ ಹೇಳಿದ್ದೆನು. 2020ರವರೆಗೆ ಎಲ್ಲಾ ಅನುದಾನಿತ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದರ ಜೊತೆಗೆ ನಾನು ಆರ್ಥಿಕ ಇಲಾಖೆಗೂ ಕಳುಹಿಸಿದ್ದೇನೆ. ಉಳಿದ 5 ವರ್ಷಗಳನ್ನೂ ಸೇರಿಸಿ ಮಾಡಿದರೆ ಗುಣಮಟ್ಟ ಸುಧಾರಣೆಯಾಗುತ್ತದೆ. ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿಸದಿದ್ದರೆ ತೊಂದರೆಯಾಗುತ್ತದೆ. ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿದರೆ ಮಾತ್ರ ಗುಣಮಟ್ಟದ ಸುಧಾರಣೆ ಸಾಧ್ಯ ಎಂಬುದು ನಮಗೆ ತಿಳಿದಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಂಕನೂರ ಅವರೆ, ನೀವು ಮಾಡಿರುವಂಥ ಕಾನೂನನ್ನು ಸಡಿಲಗೊಳಿಸಿ, ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಬೇಡಿ ಎಂದು ಇಲಾಖೆಗೆ ಮನವಿ ಮಾಡಿದ್ದೇನೆ. ಇಲಾಖೆಯಲ್ಲಿ ನಾವು ಚರ್ಚೆಯನ್ನೂ ಮಾಡಿದ್ದೇವೆ. ಆದಷ್ಟು ಬೇಗ ಕಾನೂನು ರೀತ್ಯಾ ಅದನ್ನು withdraw ಮಾಡಲಾಗುವುದು. ಏಕೆಂದರೆ responsibility ಯನ್ನು ...

ಸಭಾಪತಿಯವರು:– ಮಾನ್ಯ ಸಚಿವರೆ, ನೀವು ಇಲಾಖೆಗೆ ಮನವಿ ಮಾಡಬಾರದು. ನಿರ್ದೇಶನ ಕೊಡಬೇಕು.

ಶ್ರೀ ಎಸ್. ಮಧು ಬಂಗಾರಪ್ಪ:– ಮನವಿಯಲ್ಲ, ಇಲಾಖೆಯಲ್ಲಿ ಚರ್ಚೆ ಮಾಡಿ ಯಾರಿಗೂ ತೊಂದರೆಯಾಗದ ರೀತಿಯಲ್ಲಿ, ಶಿಕ್ಷಕರಿಗೆ ತೊಂದರೆಯಾಗದ ರೀತಿಯಲ್ಲಿ ನಾವು ಮಾಡುತ್ತೇವೆ. ಈಗ ನಾವು teachers' recruitment ಬಗ್ಗೆ concentrate ಮಾಡಬೇಕಾಗಿದ್ದು, ಅದನ್ನು ಬಹಳ urgent ಆಗಿ ಮಾಡುತ್ತಿದ್ದೇವೆ. ನ್ಯಾ॥ ನಾಗಮೋಹನ್‌ದಾಸ್ ಅವರದ್ದು Internal Reservation ಆದ ತಕ್ಷಣ ಬಹಳ ಫಾಸ್ಟ್ ಆಗಿ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಸ್. ವಿ. ಸಂಕನೂರ:– ಈಗ ಸಹಶಿಕ್ಷಕರ ಮೇಲೆ, ಆಡಳಿತ ಮಂಡಳಿಯ ಮೇಲೆ ತೆಗೆದುಕೊಳ್ಳಲಾಗಿರುವ action ಅನ್ನು withdraw ಮಾಡಿರುವುದಿಲ್ಲ. ಶಿಕ್ಷಕರು ನೀಡಿರುವ ಉತ್ತರವನ್ನು ಸಂಗ್ರಹ ಮಾಡಿ ಇಲ್ಲಿಗೆ ಅಂದರೆ ಪ್ರಧಾನ ಕಾರ್ಯದರ್ಶಿಯವರ ಬಳಿ ಕಳುಹಿಸಿ ಕೊಡಿ. ಮುಂದೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಂದರೆ ಅವರ ಮೇಲೆ ತೂಗುಗತ್ತಿ ನೇತಾಡುತ್ತಲೇ ಇರುತ್ತದೆ. ನೀವು ಹೇಳಿದ್ದನ್ನು ನಾವು ಒಪ್ಪುತ್ತೇವೆ. ದಯವಿಟ್ಟು ತಾವು ಇದನ್ನು withdraw ಮಾಡಿಬಿಡಿ.

ಮಾನ್ಯ ಸಚಿವರೆ, ಇದರಲ್ಲಿ ಸಾಕಷ್ಟು ಲೋಪ-ದೋಷಗಳಿವೆ. ಯಾವುದೇ ಒಬ್ಬ ಶಿಕ್ಷಕನಿಗೆ increment ಅನ್ನು ನಿಲ್ಲಿಸಬೇಕಾದರೆ ಅಥವಾ ಶಾಲೆಯ ಅನುದಾನವನ್ನು ನಿಲ್ಲಿಸಬೇಕಾದರೆ ಮುಂಚಿತವಾಗಿ ಎಚ್ಚರಿಕೆ ನೋಟಿಸ್ ನೀಡಬೇಕು. ಅವುಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕೊಡಬೇಕು.

ಸಭಾಪತಿಯವರು:– ನಾನು ಒಂದು ಸಲಹೆಯನ್ನು ಕೊಡಲೇ?

ಶ್ರೀ ಎಸ್.ವಿ.ಸಂಕನೂರ:– ಹೇಳಿ ಮಾನ್ಯ ಸಭಾಪತಿಯವರೆ..

ಸಭಾಪತಿಯವರು:– ಮಾನ್ಯ ಸಚಿವರೆ, ನನಗೆ ತಿಳಿದಿರುವ ಮಟ್ಟಿಗೆ ಇದು ಒಂದು ಗಂಭೀರವಾದ ಸಮಸ್ಯೆ. ಇವತ್ತು ಅಥವಾ ನಾಳೆ ತಾವು ಒಂದು ಸಭೆಯನ್ನು ಕರೆಯಿತಿ. ನಾನೂ ಬರುತ್ತೇನೆ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಸಭಾಪತಿಯವರೆ, ತಾವು ಅನುಮತಿ ಕೊಟ್ಟರೆ ನಾಳೆದ್ದು ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿಯೇ ಮಾಡುತ್ತೇನೆ.

ಸಭಾಪತಿಯವರು:– ಮಾನ್ಯ ಪುಟ್ಟಣ್ಣ ಅವರ ಪ್ರಶ್ನೆಯ ವಿಷಯವನ್ನು ಇದರಲ್ಲಿ ಸೇರಿಸಿಕೊಳ್ಳಿ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೆ, 10ನೇ ಪ್ರಶ್ನೆ ನನ್ನದಾಗಿದ್ದು, ಅದನ್ನೂ ಇದರ ಜೊತೆಯಲ್ಲಿ ತೆಗೆದುಕೊಂಡರೆ ನಾನೂ ಎರಡು ನಿಮಿಷಗಳ ಕಾಲ ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಬೇಡ, ನೀವು ಆ ಸಭೆಯಲ್ಲಿಯೇ ಮಾತನಾಡಿ.

ಶ್ರೀ ಎಸ್. ಎಲ್. ಭೋಜೇಗೌಡ:– ಮಾನ್ಯ ಸಭಾಪತಿಯವರೆ, Breakfast meeting ಇದೆ.

ಸಭಾಪತಿಯವರು:– ಮುಂದಿನ ಪ್ರಶ್ನೆ ಮಾನ್ಯ ಶರಣಗೌಡ ಬಯ್ಯಾಪುರ ಅವರದ್ದು.

ಶ್ರೀ ಎಸ್. ವಿ. ಸಂಕನೂರ:– ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.. ನಾನು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. 2023-24, 2024-25ನೇ ಶೈಕ್ಷಣಿಕ ವರ್ಷಗಳ ಫಲಿತಾಂಶವು ಸಾಕಷ್ಟು improve ಆಗಿದ್ದು, ಅದಕ್ಕಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ.

ಶ್ರೀ ಎಸ್. ಮಧು ಬಂಗಾರಪ್ಪ:– ಮಾನ್ಯ ಸಂಕನೂರ ಅವರೆ, ಹೇಳುವುದನ್ನು ಸ್ವಲ್ಪ ಜೋರಾಗಿ ಹೇಳಿ.

ಮಾನ್ಯ ಸಭಾಪತಿಯವರೆ, ಯಾವಾಗಲೂ ಬಾವಿಗೆ ಬರುತ್ತೇವೆ ಎಂದು ಹೇಳುವವರು ಏನೋ ಹೇಳುತ್ತಿದ್ದಾರೆ. ತಾವು ಯಾವಾಗಲೂ ಕಡತದಿಂದ ತೆಗೆಯುತ್ತೀರಿ. ಆದರೆ ಇದನ್ನು ಸ್ವಲ್ಪ headlines ನಲ್ಲಿ ಹಾಕಲಿಕ್ಕೆ ಹೇಳಿ. ಹಾಗಾದರೆ, ನಾವು ಪರೀಕ್ಷೆಯಲ್ಲಿ ಪಾಸ್ ಆಗಿದ್ದೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(609) 11-08-2025 (1.30) ಕೆಜಿ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ 19

ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಮಂಜೂರು ಮಾಡುವ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	8(19)
ಸದಸ್ಯರ ಹೆಸರು	:	ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	11.08.2025
ಉತ್ತರಿಸುವವರು	:	ಮಾನ್ಯ ಉನ್ನತ ಶಿಕ್ಷಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆ, ಲಿಂಗಸಗೂರು ಪಟ್ಟಣದ ಪದವಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸಗೂರು ಈ ಕಾಲೇಜಿನಲ್ಲಿ, 2025-26ನೇ ಸಾಲಿನಿಂದ ಹೊಸದಾಗಿ ಎಂ.ಎ (ಕನ್ನಡ), ಎಂ.ಎ (ಇತಿಹಾಸ), ಎಂ.ಎ (ಅರ್ಥಶಾಸ್ತ್ರ), ಎಂ.ಎ (ರಾಜ್ಯಶಾಸ್ತ್ರ), ಎಂ.ಎ(ಇಂಗ್ಲೀಷ್), ಎಂ.ಕಾಂ, ಎಂ.ಎಸ್ಸಿ (ಗಣಿತಶಾಸ್ತ್ರ) ಹಾಗೂ ಎಂ.ಎಸ್ಸಿ (ಗಣಕವಿಜ್ಞಾನ) ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಸ್ವೀಕೃತಗೊಂಡಿರುತ್ತದೆ.
ಆ)	ಹಾಗಿದ್ದಲ್ಲಿ, ಯಾವ ಯಾವ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ;	ಪ್ರಸ್ತುತ ಇರುವಂತಹ ಪದವಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ತೆರೆಯಲು ಸಂಶೋಧನೆಗೆ ಸಂಬಂಧಪಟ್ಟಂತಹ ಸಂಪನ್ಮೂಲಗಳು, ಪ್ರಯೋಗಾಲಯ, Research Activities, Industrial visitsಗಳಿಗೆ ಬೇಕಾಗುವಂತಹ ಸಮರ್ಪಕ ಸೌಲಭ್ಯಗಳ ಕೊರತೆ ಇರುವುದನ್ನು ಮನಗಂಡು ಹಾಗೂ ಪ್ರಸ್ತುತ ಇರುವ ಪದವಿ ಕೋರ್ಸ್‌ಗಳನ್ನೆ ಬಲಪಡಿಸಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ದೃಷ್ಟಿಯಿಂದ ಪದವಿ ಕೋರ್ಸ್‌ಗಳಿಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆದ 5 (ಐದು) ವರ್ಷಗಳಿಂದ ಯಾವುದೇ ಪದವಿ ಕಾಲೇಜುಗಳಿಗೆ ಹೊಸದಾಗಿ ಸ್ನಾತಕೋತ್ತರ ಕೋರ್ಸ್‌ಗಳನ್ನು ತೆರೆಯಲು ಅನುಮತಿ ನೀಡಿರುವುದಿಲ್ಲ.
ಇ)	ಇಲ್ಲದಿದ್ದಲ್ಲಿ, ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಇರುವ ತೊಡಕುಗಳೇನು? (ವಿವರಿಸುವುದು)	

ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಲಿಂಗಸಗೂರು ಪಟ್ಟಣದಲ್ಲಿ ಸುಮಾರು 14 ಡಿಗ್ರಿ ಕಾಲೇಜುಗಳು ಇವೆ. ಇಲ್ಲಿಗೆ ಸ್ನಾತಕೋತ್ತರ ಪದವಿಯ ಕಾಲೇಜು ಬಹಳ ಅತ್ಯವಶ್ಯಕವಾಗಿದೆ. ಇಲ್ಲಿ ಹಿಂದುಳಿದ ಜನಾಂಗ, ಎಸ್‌ಸಿ ಮತ್ತು ಎಸ್‌ಟಿ ಜನಾಂಗದವರು ಹೆಚ್ಚಿಗೆ ಇದ್ದಾರೆ. ಹಾಗಾಗಿ, ಇಲ್ಲಿ ಈಗಾಗಲೇ ಸ್ನಾತಕೋತ್ತರ ಪದವಿ ಕಾಲೇಜಿಗಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

13 ರಿಂದ 14 ಎಕರೆ ಜಾಗವನ್ನು ಮೀಸಲಿಡಲಾಗಿದೆ. ಆದ್ದರಿಂದ, ಇಲ್ಲಿಗೆ ಸ್ನಾತಕೋತ್ತರ ಪದವಿ ಕಾಲೇಜನ್ನು ಕೊಟ್ಟರೆ, ಬಹಳಷ್ಟು ಅನುಕೂಲವಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಲಂಗಸಗೂರು ಪಟ್ಟಣದಲ್ಲಿ ಸುಮಾರು 14 ಪ್ರಥಮ ದರ್ಜೆ ಡಿಗ್ರಿ ಕಾಲೇಜುಗಳಿದ್ದು, ಇಲ್ಲಿಗೆ ಒಂದು ಸ್ನಾತಕೋತ್ತರ ಪದವಿ ಕಾಲೇಜನ್ನು ಕೊಡಬೇಕೆಂದು ಕೇಳಿದ್ದಾರೆ. ಕಳೆದ 5 ವರ್ಷಗಳಿಂದ ಪ್ರಥಮ ದರ್ಜೆ ಡಿಗ್ರಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಾರಂಭ ಮಾಡುವುದಕ್ಕೆ ನಿರ್ಬಂಧವನ್ನು ಹಾಕಿಕೊಂಡಿದ್ದೇವೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಏಕೆಂದರೆ, ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾಗಿದೆ. ಅಲ್ಲದೇ, ಮೂಲಭೂತ ಸೌಲಭ್ಯ, ಲೈಬ್ರರಿಗೆ ಸಂಬಂಧಪಟ್ಟಿರಬಹುದು ಮತ್ತು ಬಹಳ ಮುಖ್ಯವಾಗಿ qualified faculty ಗಳು ಇಲ್ಲದಿರುವುದರಿಂದ ಈಗ ಅಲ್ಲಿ ಇರುವಂತಹ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಾರಂಭ ಮಾಡುವುದಕ್ಕೆ ಸಧ್ಯಕ್ಕೆ ಆ ಒಂದು ಸಂದರ್ಭ ಒದಗಿ ಬರುವುದಿಲ್ಲ. ಅಲ್ಲಿಯೇ ಹತ್ತಿರದಲ್ಲಿ ಸುಮಾರು 28 ಕೀಲೋಮೀಟರ್‌ಗಳಲ್ಲಿರುವ ಸಿಂಧನೂರಿನಲ್ಲಿ ಒಂದು Post Graduate Centre ಇದೆ. ಅದೇರೀತಿ ಮಸ್ಕಿಯಲ್ಲಿ ಸುಮಾರು 28.6 ಕೀಲೋಮೀಟರ್‌ಗಳಲ್ಲಿ ಒಂದು Post Graduate Centre ಇದೆ. ಈ ಎರಡು ಕಡೆಗೆ ವಿದ್ಯಾರ್ಥಿಗಳು ಹೋಗಬೇಕಾಗುತ್ತದೆ. ಏಕೆಂದರೆ, ಈಗ ಗುಣಮಟ್ಟ ಬಹಳ ಮುಖ್ಯವಾಗಿರುತ್ತದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿರುತ್ತದೆ. ಸ್ನಾತಕೋತ್ತರ ಪದವಿಯನ್ನು ಪಡೆಯುವಂತಹದ್ದು ಒಂದು ಭಾಗವಾದರೆ, ಅದರ ಗುಣಮಟ್ಟದ ಶಿಕ್ಷಣವನ್ನು ಕೊಡುವಂತಹದ್ದು ಬಹಳ ಮುಖ್ಯವಾಗಿದೆ. ಈ ಕಾರಣದಿಂದ ಸಧ್ಯಕ್ಕೆ ಸರ್ಕಾರದಲ್ಲಿ ಡಿಗ್ರಿ ಕಾಲೇಜುಗಳಲ್ಲಿ Post Graduate Centre ಅನ್ನು ಕೊಡುತ್ತಿಲ್ಲ. ಆದರೆ, ಮಾನ್ಯ ಸದಸ್ಯರಿಗೆ ನಾನು ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ರಾಯಚೂರು ವಿಶ್ವವಿದ್ಯಾನಿಲಯದಲ್ಲಿ ಒಂದು Post Graduate Centre ಇದೆ. ಮಾನ್ಯ ಸದಸ್ಯರು ಅಲ್ಲಿ ಸುಮಾರು 13 ರಿಂದ 14 ಎಕರೆ ಜಾಗ ಇದೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ನಾನು ಮಾನ್ಯ ಸದಸ್ಯರ ಜೊತೆಗೆ ಪ್ರಸ್ತಾಪ ಮಾಡುತ್ತೇನೆ. ಅವರಲ್ಲಿರುವ ಅಂತರಿಕ ಸಂಪನ್ಮೂಲಗಳಲ್ಲಿ ಮಾನ್ಯ ಸದಸ್ಯರಿಗೆ ಮಾಡುವುದಕ್ಕೆ ಅವಕಾಶ ಇದ್ದರೆ, ನಾನು ಅವರ ಜೊತೆಗೆ ಮಾತನಾಡುತ್ತೇನೆ. ಮಾನ್ಯ ಸದಸ್ಯರು ಕೂಡ ಅಲ್ಲಿನ ಪ್ರಸ್ತಾವನೆಯನ್ನು ಕೊಡಲಿ ಎನ್ನುವಂತಹದ್ದನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಶರಣಗೌಡ ಬಯ್ಯಾಪುರ:- ಮಾನ್ಯ ಸಭಾಪತಿಯವರೇ, ಒಂದು ಸೆಕೆಂಡ್.,

ಸಭಾಪತಿಯವರು:- ಮಾನ್ಯ ಸದಸ್ಯರೇ, ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

ಶ್ರೀ ಶರಣಗೌಡ ಬಯ್ಯಾಪುರ:- ಮಾನ್ಯ ಸಭಾಪತಿಯವರೇ, ಈಗ ಸರ್ಕಾರಿ ಕಾಲೇಜುಗಳಲ್ಲಿ ತೊಂದರೆ ಇದೆ. ಅನುದಾನದ ತೊಂದರೆ ಇದೆ. ಸರ್ಕಾರ ಖಾಸಗಿ ಕಾಲೇಜುಗಳನ್ನು ಕೊಟ್ಟಿದೆ. ಅಲ್ಲಿ ಯಾರು monitoring ಮಾಡುತ್ತಾರೆ? ಅಲ್ಲಿ ಯಾರು ಪಾಠ ಮಾಡುತ್ತಾರೆ? S.S.L.C. exams ಗೆ ಎಲ್ಲಾ ಕಡೆ web cameras ಹಾಕುತ್ತಾರೆ. ಆದರೆ, PG Centres ಗಳಿಗೆ web cameras ಹಾಕಿ ಪರೀಕ್ಷೆ ನಡೆಸುವುದಿಲ್ಲ. ಯಾರೋ ಬಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಕ್ಕೆ ಒಂದು admission ಅನ್ನು ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಪರೀಕ್ಷೆ ಬರೆಯುತ್ತಾರೆ. ಈ ರೀತಿ ನಡೆಸಿಕೊಂಡು ಹೋಗುತ್ತಾರೆ. ಇದಕ್ಕಿಂತ ನಮ್ಮ ಸರ್ಕಾರಿ ಕಾಲೇಜುಗಳು ಉತ್ತಮವಾಗಿವೆ. ನಮ್ಮಲ್ಲಿ private colleges ಗೆ B.Sc. (Bachelor of Science), M.A. (Master of Arts) and MSW (Master of Social Work) courses ಗಳಿಗೆ ಅನುಮತಿ ಕೊಟ್ಟಿದ್ದಾರೆ. ಆ ಕಾಲೇಜುಗಳಲ್ಲಿ ಎರಡು ಕೊಠಡಿಗಳು, ಇಲ್ಲವೇ ನಾಲ್ಕು ಕೊಠಡಿಗಳು ಇರುತ್ತವೆ. ಇದರಲ್ಲಿಯೇ 20 course ಗಳು ನಡೆಯುತ್ತಿವೆ. ಈ ರೀತಿಯಾದರೆ, ಇದನ್ನು ಯಾರು monitoring ಮಾಡುತ್ತಾರೆ? ಯಾರು ಕ್ರಮತೆಗೆದುಕೊಳ್ಳುತ್ತಾರೆ? ಇದರ ಬಗ್ಗೆಯೂ ಸಹ ಮಾನ್ಯ ಸಚಿವರು ಹೇಳಬೇಕು.

ಡಾ॥ ಎಂ.ಸಿ.ಸುಧಾಕರ್:- ಮಾನ್ಯ ಸಭಾಪತಿಯವರೇ, ಈಗ ರಾಯಚೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯೊಳಗೆ ಹಲವಾರು ದೂರುಗಳು ನಮಗೆ ಬಂದಿವೆ. ಈಗ ಖಾಸಗಿ ಪದವಿ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳು ಇಲ್ಲ ಎನ್ನುವಂತಹದ್ದು ಮತ್ತು ಪ್ರವೇಶಾತಿ ಬಗ್ಗೆಯೂ ಸಹ ಅಲ್ಲಿ ಸ್ವಲ್ಪ ಗೊಂದಲಗಳು ಇವೆ. ಅಲ್ಲಿ G.E.R. (Gross Enrolment Ratio) ಸಹ ಬಹಳ ಕಡಿಮೆಯಾಗುತ್ತಿದೆ. ಈಗಾಗಲೇ ಕುಲಸಚಿವರ ವಿಚಾರ ಬಂದಾಗ ಬಹಳಷ್ಟು ಗೊಂದಲಗಳು ಏರ್ಪಟ್ಟಿತ್ತು. ಆದರೂ ಸಹ ಈಗ ಮಾನ್ಯ ಸದಸ್ಯರು ಹೇಳಿದಂತೆ, ಆ ಭಾಗದಲ್ಲಿ ಸ್ವಲ್ಪ ದೂರುಗಳು ಬರುತ್ತಿವೆ. ನಾನು ಆ ವಿಶ್ವವಿದ್ಯಾನಿಲಯದವರಿಗೆ ಈ ರೀತಿ ಅಕ್ರಮವಾಗುವಂತಹದ್ದಕ್ಕೆ ಯಾವುದಕ್ಕೂ ಸಹ ಅವಕಾಶ ಆಗಬಾರದು ಎಂದು ಕಟ್ಟುನಿಟ್ಟಾದ ಸೂಚನೆಗಳನ್ನು ಬಹಳ ಸ್ಪಷ್ಟವಾಗಿ ಕೊಡುತ್ತೇನೆ.

ಶ್ರೀ ಶರಣಗೌಡ ಬಯ್ಯಾಪುರ:- ಮಾನ್ಯ ಸಭಾಪತಿಯವರೇ, 3-4 ವರ್ಷಗಳು ಆದರೂ ಸಹ marks card ಗಳು ಬರುತ್ತಿಲ್ಲ. PUC (Pre-University Course) ಮುಗಿದರೂ ಸಹ marks card ಗಳು ಕೊಡುತ್ತಿಲ್ಲ.

ಸಭಾಪತಿಯವರು:- ಮಾನ್ಯ ಸದಸ್ಯರೇ, ಸಾಕುಬಿಡಿ. ಎಷ್ಟು ಕೇಳುತ್ತೀರಿ? ಮಾನ್ಯ ಸಚಿವರೇ, ಅದನ್ನು ಸರಿಪಡಿಸಿ. Question hour ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆ ಹತ್ತು ನಿಮಿಷ ಆಗಿದೆ. ಈ ಪ್ರಶ್ನೆಯಾದ ನಂತರ ನಾನು ಎಲ್ಲಾ ಪ್ರಶ್ನೆಗಳನ್ನು close ಮಾಡುತ್ತೇನೆ. ಎಲ್ಲರೂ ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತೀರಿ. ಹಾಗಾಗಿ, ಟೈಮ್ ಆಗುತ್ತಿದೆ. ಈಗಾಗಲೇ ಒಂದು ಗಂಟೆ ಹತ್ತು ನಿಮಿಷ ಆಗಿದೆ. ಈ ಪ್ರಶ್ನೆಯಾದ ಮೇಲೆ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ 63 + 5
ಕಾಡಾನೆಗಳ ಹಾವಳಿಯ ಕುರಿತು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಆನೆ ದಾಳಿಯಿಂದ ಎಷ್ಟು ಜನ ರೈತರು/ ಸಾರ್ವಜನಿಕರು ಸಾವನ್ನಪ್ಪಿದ್ದಾರೆ: (ಜಿಲ್ಲಾವಾರು ಸಂಪೂರ್ಣವಾಗಿ ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆನೆ ದಾಳಿಯಿಂದ ಮೃತಪಟ್ಟಿರುವ ರೈತರು/ ಸಾರ್ವಜನಿಕರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ.</td></tr>
<tr><td>(ಆ)</td><td>ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಎಷ್ಟು ಜನ ಆನೆ ದಾಳಿಯಿಂದ ಸಾವನ್ನಪ್ಪಿದ್ದಾರೆ: ಆನೆ ದಾಳಿಯಿಂದ ಸಾವುಂಟಾದ ಎಷ್ಟು ಕುಟುಂಬಗಳಿಗೆ ಮತ್ತು ಎಷ್ಟು ಮೊತ್ತದ ಪರಿಹಾರವನ್ನು ಒದಗಿಸಲಾಗಿದೆ: (ವಿವರವನ್ನು ಒದಗಿಸುವುದು)</td><td>ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ದಾಳಿಯಿಂದ 04 ಜನರು ಮೃತಪಟ್ಟಿರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಆನೆ ದಾಳಿಯಿಂದ ಸಾವನ್ನಪ್ಪಿರುವ ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಆನೆ ದಾಳಿಯಿಂದ ಮೃತಪಟ್ಟವರ ಕುಟುಂಬದ ವಾರಸುದಾರರಿಗೆ ನೀಡಲಾದ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

<table>
<tr><th>ಕ್ರ ಸಂ</th><th>ವರ್ಷ</th><th>ಮೃತಪಟ್ಟವರ ಹೆಸರು & ವಿಳಾಸ</th><th>ಪಾವತಿಸಿರುವ ಪರಿಹಾರಧನ (ಲಕ್ಷಗಳಲ್ಲಿ</th><th>ಮೃತರ ಕುಟುಂಬಸ್ಥರಿಗೆ ಪಾವತಿಸಿದ ಮಾಸಾಶನದ ವಿವರ (ರೂ.ಗಳಲ್ಲಿ)</th></tr>
<tr><td>1</td><td rowspan="3">2022-23</td><td>ಶ್ರೀ ತಿಮ್ಮಪ್ಪ ಬಿನ್ ಪೋಡಿಯಾ, ಜನತಾ ಕಾಲೊನಿ ಶಿರಾಡಿ ಗ್ರಾಮ, ಕಡಬ ತಾಲೂಕು</td><td>15.00</td><td>1,20,133/-</td></tr>
<tr><td>2</td><td>ಕುಃ ರಂಜಿತಾ ನೈಲ ನಿವಾಸಿ, ರೆಂಜಿಲಾಡಿ ಗ್ರಾಮ, ಕಡಬ ತಾಲೂಕು</td><td>15.00</td><td>1,13,333/-</td></tr>
<tr><td>3</td><td>ಶ್ರೀ ರಮೇಶ್ ರೈ, ರೆಂಜಿಲಾಡಿ ಗ್ರಾಮ, ಕಡಬ ತಾಲೂಕು</td><td>-</td><td>-</td></tr>
<tr><td>4</td><td>2023-24</td><td>ಶ್ರೀ ಚೋಮ, ಬಿನ್. ಓಡಿ ಮುಗೇರ, ಗೇರ್ತಿಲ ಮನೆ, ಐತ್ತೂರು ಗ್ರಾಮ, ಕಡಬ ತಾಲೂಕು</td><td>15.00</td><td>79,200/-</td></tr>
<tr><td>5</td><td>2024-25</td><td>-</td><td>-</td><td>-</td></tr>
</table>
</td></tr>
</table>

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>2022-23ನೇ ಸಾಲಿನಲ್ಲಿ ಮಾನವ ಸಾವಿಗೆ ಸಂಬಂಧಪಟ್ಟ 03 ಪ್ರಕರಣಗಳಲ್ಲಿ 02 ಪ್ರಕರಣಗಳಿಗೆ ಮಾತ್ರ ಪರಿಹಾರ ಧನ ಪಾವತಿಸಲಾಗಿದ್ದು, ಶ್ರೀ ರಮೇಶ್ ರೈ, ಬಿನ್. ತಿಮ್ಮಣ್ಣ ರೈ ಇವರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದು, ಸದರಿಯವರು ಅವಿವಾಹಿತರಾಗಿರುತ್ತಾರೆ ಅವರ ತಂದೆ ತಾಯಿಗಳು ಮೃತ ಪಟ್ಟಿರುವುದರಿಂದ ಮೃತರಿಗೆ ಸಂಬಂಧಪಟ್ಟ ರಕ್ತ ಸಂಬಂಧಿಗಳು ಯಾರು ಇಲ್ಲವೆಂದು ತಹಶೀಲ್ದಾರ್, ಕಡಬ ಇವರು ವರದಿಸಿರುವುದರಿಂದ ಪರಿಹಾರಧನವನ್ನು ಪಾವತಿಸಿರುವುದಿಲ್ಲ.

2025-26ನೇ ಸಾಲಿನಲ್ಲಿ ಕಾಡಾನೆ ದಾಳಿಯಿಂದ 02 ಜನರು ಮೃತಪಟ್ಟಿರುತ್ತಾರೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ 01 ಪ್ರಕರಣದಲ್ಲಿ ಮೃತಪಟ್ಟ ಶ್ರೀಮತಿ ಸೆಲ್ಲಮ್ಮ, ಕೋಂ. ತಿಲಗಂ, ಕೆಯ್ಯೂರು ಮೆನ, ಕೊಳ್ತಿಗೆ ಗ್ರಾಮ, ಪುತ್ತೂರು ತಾಲೂಕು ಇವರ ಕುಟುಂಬದ ವಾರಸುದಾರರಿಗೆ ರೂ.20.00 ಲಕ್ಷ ಪರಿಹಾರಧನ ಪಾವತಿಸಲಾಗಿರುತ್ತದೆ ಹಾಗು ಇನ್ನೊಂದು ಪ್ರಕರಣವಾದ ಶ್ರೀ ಬಾಲಕೃಷ್ಣ ಶೆಟ್ಟಿ ಇವರ ಮರಣೋತ್ತರ ಪರೀಕ್ಷೆ, ಪೊಲೀಸ್ ವರದಿ ಮತ್ತು ಕಂದಾಯ ದಾಖಲೆಗಳು ನಿರೀಕ್ಷೆಯಲ್ಲಿದ್ದು, ಸ್ವೀಕೃತಿಯಾದ ಕೂಡಲೇ ಪರಿಹಾರ ಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಇ)</td><td>ಆನೆ ದಾಳಿಯಿಂದ ನಿರಂತರ ಕೃಷಿ, ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಆನೆಗಳಿಂದ ಹಾನಿಗೆ ಒಳಗಾದ ಕೃಷಿಕರಿಗೆ ಎಷ್ಟು ಪರಿಹಾರವನ್ನು ಒದಗಿಸಲಾಗಿದೆ: (ಸಂಪೂರ್ಣ ವಿವರವನ್ನು ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಆನೆ ದಾಳಿಯಿಂದ ಹಾನಿಯಾದ ಬೆಳೆಗಳಿಗೆ ನೀಡಲಾದ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ಪರಿಹಾರ ನೀಡಿದ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2022-23</td><td>250</td><td>45,75,971/-</td></tr>
<tr><td>2</td><td>2023-24</td><td>270</td><td>72,09,578/-</td></tr>
<tr><td>3</td><td>2024-25</td><td>397</td><td>1,00,81,667/-</td></tr>
</table>
2025-26ನೇ ಸಾಲಿನಲ್ಲಿ 113 ಪ್ರಕರಣಗಳಿಗೆ ರೂ.32,85,362/- ಗಳನ್ನು ಪರಿಹಾರ ಪಾವತಿಸಲಾಗಿರುತ್ತದೆ.</td></tr>
<tr><td>ಈ)</td><td>ಯಾವ ಕಾಲಮಿತಿಯೊಳಗೆ, ಕಾಡಾನೆಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಲಾಗುವುದು: ಹಾಗೂ ಕೃಷಿಕರು ತಮ್ಮ ತೋಟಗಳಲ್ಲಿ ಬೆಳೆಯುತ್ತಿರುವ ಬೆಳೆಗಳ ಕೃಷಿ ಉತ್ಪತ್ತಿಗಳು ಅವರಿಗೆ ಪೂರ್ಣ ಪ್ರಮಾಣದಲ್ಲಿ ಸಿಗುವಂತೆ ಮಾಡಲು ಯಾವಾಗ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು:</td><td>ಕಾಡಾನೆಗಳು ಅರಣ್ಯದಿಂದ ಗ್ರಾಮಗಳಿಗೆ ಪ್ರವೇಶಿಸುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
1. ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ಶೇ.50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.
2. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.
3. ಆನೆ ನಿರೋಧಕ ಕಂದಕ ನಿರ್ಮಿಸಲಾಗಿದೆ, ಹಳ್ಳ, ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತು ಸೋಲಾರ್ ಟೆಂಟಿಕಲ್ ಬೇಲಿಯ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ. ಸಂ.	ಪ್ರಶ್ನೆ	ಉತ್ತರ
		4. ಆನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕವನ್ನು ಅಳವಡಿಸಲಾಗುತ್ತಿದೆ. 5. ಇಲಾಖಾ ಸಿಬ್ಬಂದಿಗಳಿಂದ ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆಯು ಗ್ರಾಮಗಳಿಗೆ ದಾಳಿ ಮಾಡಿದಾಗ ಮರಳಿ ಅರಣ್ಯಕ್ಕೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. 6. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿ / ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮಕೈಗೊಳ್ಳಲಾಗಿದೆ.
ಊ)	ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ನಿಯಂತ್ರಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ದೂರ ಆನೆ ಕಂದಕ ಮತ್ತು ಸೋಲಾರ್ ಬೇಲಿಗಳನ್ನು ನಿರ್ಮಿಸಲಾಗಿದೆ; ಮುಂದಿನ ದಿನಗಳಲ್ಲಿ ಸದರಿ ಜಿಲ್ಲೆಗಳಲ್ಲಿ ಈ ನಿಟ್ಟಿನಲ್ಲಿ ಏನು ಕ್ರಿಯಾ ಯೋಜನೆ ರೂಪಿಸಲಾಗಿದೆ: (ಸಂಪೂರ್ಣ ವಿವರ ನೀಡುವುದು)	ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 05 ವರ್ಷಗಳಲ್ಲಿ ನಿರ್ಮಾಣ ಮಾಡಲಾಗಿರುವ ಆನೆ ಕಂದಕ, ಸೋಲಾರ್ ಬೇಲಿಗಳ ವಿವರ ಈ ಕೆಳಕಂಡಂತಿದೆ. ಕ್ರ. ಸಂ | ವರ್ಷ | ಆನೆ ನಿರೋಧಕ ಕಂದಕ (ಕಿ.ಮೀ ಗಳಲ್ಲಿ) | ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್‌ಗಳನ್ನು ಅಳವಡಿಸುವುದು (ಆರ್.ಎಂ.ಟಿ ಗಳಲ್ಲಿ) | ಸೋಲಾರ್ ಫೆನ್ಸಿಂಗ್ (ಕಿ.ಮೀಗಳಲ್ಲಿ) | ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ (ಕಿ.ಮೀಗಳಲ್ಲಿ) 1 | 2 | 3 | 4 | 5 | 6 1 | 2020-21 | 9.27 | 105.55 | 0.87 | - 2 | 2021-22 | 6.63 | 297.90 | - | - 3 | 2022-23 | 23.55 | 800.00 | 10.60 | 10.00 4 | 2023-24 | 9.50 | 344.07 | 3.52 | 9.00 5 | 2024-25 | 5.18 | 137.70 | 7.60 | 8.18 | ಒಟ್ಟು | **54.13** | **1,685.22** | **22.59** | **27.18** 2025-26ನೇ ಸಾಲಿನಲ್ಲಿ 1.50 ಕಿ.ಮೀ ಆನೆ ನಿರೋಧಕ ಕಂದಕ, 39 ಸಂಖ್ಯೆಯ ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್ ಹಾಗು 9.00 ಕಿ.ಮೀ ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಮುಂದುವರಿದು, ಮಾನವ – ಆನೆ ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ 117.20 ಕಿ.ಮೀ ಆನೆತಡೆ ಕಂದಕ, 2630 ಸಂಖ್ಯೆಯ ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್‌ಗಳನ್ನು 71.44 ಕಿ.ಮೀ ಸೋಲಾರ್ ತಂತಿ ಬೇಲಿ ಹಾಗೂ 73.50 ಕಿ.ಮೀ ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ ಕಾಮಗಾರಿ ಕೈಗೊಳ್ಳುವ ಪ್ರಸ್ತಾವನೆಯಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನ ಲಭ್ಯತೆ ಅನುಸಾರ ಕಾಮಗಾರಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ. ಸಂ.	ಪ್ರಶ್ನೆ	ಉತ್ತರ
ಊ)	ರಾಜ್ಯದ ಬೇರೆ ಜಿಲ್ಲೆಗಳಲ್ಲಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಕ್ಷಿಸಲು ಕಾಡಾನೆ ದಾಳಿಯಿಂದ ರಕ್ಷಿಸಲು ತುರ್ತು ಸಹಾಯವಾಣಿ. ಸ್ಪಂದನ ಪಡೆ ಹಾಗೂ ಕಾಡಾನೆಗಳನ್ನು ಸೆರೆಹಿಡಿದು ಪಳಗಿಸುವ ಆನೆ ಶಿಬಿರವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು?	• ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ **"ಆನೆ ಎಲ್ಲಿ"** ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ. **ಸದರಿ ತಂತ್ರಜ್ಞಾನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.** • ರಾಜ್ಯದಲ್ಲಿ ಮಾನವ- ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ, ಸಕ್ರೆಬೈಲು ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ ಪಶು ವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಗಳನ್ನೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದ ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-1

ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆನೆ ದಾಳಿಯಿಂದ ರೈತರು ಮತ್ತು ಸಾರ್ವಜನಿಕರು ಸಾವನ್ನಪ್ಪಿರುವ ಜಿಲ್ಲಾವಾರು ವಿವರ

ಕ್ರ.ಸ	ಜಿಲ್ಲೆ	ವರ್ಷ			
		2022-23	2023-24	2024-25	2025-26
1	ಕೊಡಗು	6	11	7	3
2	ಚಾಮರಾಜನಗರ	7	12	4	2
3	ಬೆಂಗಳೂರು/ನಗರ/ ಗ್ರಾಮಾಂತರ/ ಬನ್ನೇರುಘಟ್ಟ	5	3	2	-
4	ರಾಮನಗರ	1	7	2	-
5	ಕೋಲಾರ	1	-	4	-
6	ಹಾಸನ	4	4	6	2
7	ತುಮಕೂರು	-	-	-	
8	ಮೈಸೂರು	1	3	4	1
9	ಮಂಡ್ಯ	-	1	-	
10	ಚಿಕ್ಕಮಗಳೂರು	3	5	5	2
12	ಶಿವಮೊಗ್ಗ	1	1	2	1
13	ದಕ್ಷಿಣ ಕನ್ನಡ	3	1	-	2
Total		32	48	36	13

ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆಗಳ.,

ಸಭಾಪತಿಯವರು:– ಮಾನ್ಯ ಸದಸ್ಯರೇ, ತಾವು ನೇರವಾಗಿ ಪ್ರಶ್ನೆಗೆ ಉತ್ತರವನ್ನು ಕೇಳಬೇಕು.

ಶ್ರೀ ಕಿಶೋರ್ ಕುಮಾರ್ ಪುತ್ತೂರು:– ಮಾನ್ಯ ಸಭಾಪತಿಯವರೇ, ಇದು ಜನರ ಸಮಸ್ಯೆಯಾಗಿದೆ. ತಾವು ಈ ರೀತಿ ಹೇಳಿದರೆ, ನಾನು ಯಾವ ರೀತಿ ಕೇಳಲಿ.

ಸಭಾಪತಿಯವರು:– ಮಾನ್ಯ ಸದಸ್ಯರೇ, ಹೌದು, ಟೈಮ್ ಆಗುತ್ತಿದೆ. ನಾನು ಏನು ಮಾಡಲಿ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕಿಶೋರ್ ಕುಮಾರ್ ಪುತ್ತೂರು:- ಮಾನ್ಯ ಸಭಾಪತಿಯವರೇ, ಈಗಾಗಲೇ ಅಲ್ಲಿ ವರುಣನ ಆರ್ಭಟದಿಂದ, ಕೊಳೆರೋಗದಿಂದ ಸಂಪೂರ್ಣವಾಗಿ ಕೃಷಿ ಹಾಳಾಗಿದೆ. ಇದರ ಜೊತೆಗೆ ಅಲ್ಲಿ ಆನೆ ದಾಳಿಯ ಭಯದಿಂದ ಕೃಷಿಕರು ಮನೆಯಿಂದ ಹೊರಗಡೆ ಬರುವ ಪರಿಸ್ಥಿತಿಯಲ್ಲಿ ಇಲ್ಲ. ಮಾನ್ಯ ಸಚಿವರು ನಮ್ಮ ಕಡೆಯ ಭಾಗಕ್ಕೆ ಬರುವುದೆ ಅಪರೂಪ. ಇತ್ತೀಚೆಗೆ ಹೆಚ್ಚಿಗೆ ಪ್ರಾಣಹಾನಿಯಾಗಿದೆ. ರೈತರ ಬೆಳೆ ನಾಶವಾಗಿದೆ. ಇದಕ್ಕೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ. ಅಲ್ಲಿನ ಜನರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಬದುಕುತ್ತಿದ್ದಾರೆ. ಅದಕ್ಕಾಗಿ ಈ ಬಗ್ಗೆ ಸರ್ಕಾರ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಸುಳ್ಯಾ, ಪೂತ್ತರು, ಕಡಬ.,

ಸಭಾಪತಿಯವರು:- ಮಾನ್ಯ ಸದಸ್ಯರೇ, ಸಾಕುಬಿಡಿ. ತಾವು ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಕೆ.ಪ್ರತಾಪಸಿಂಹ ನಾಯಕ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:- ಮಾನ್ಯ ಸಭಾಪತಿಯವರೇ, ನಾನು ವಾತಾವರಣ ಸ್ವಲ್ಪ ತಿಳಿಯಾಗಲಿ ಎಂದು ಹೇಳಿದ್ದೇನೆ. ನನಗೆ ಯಾರೋ ಒಬ್ಬರು ನಿನ್ನ ಹೆಸರಿನಲ್ಲಿ ಸಿಂಹ ಉಂಟು, ಆದರೆ, ತಾವು ಆನೆ ಬಗ್ಗೆ ಪ್ರಶ್ನೆ ಕೇಳಿದ್ದೀರಿ ಎಂದು ತಮಾಷೆ ಮಾಡಿದರು. ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರುರವರು ಹೇಳಿದಂತೆ, ಈಗ ನಮ್ಮ ಭಾಗದಲ್ಲಿ ಅದು ತಮಾಷೆಯ ಪ್ರಶ್ನೆಯಾಗಿ ಉಳಿಯಲಿಲ್ಲ. ಜೀವ ಭಯದ ಒಂದು ವಾತಾವರಣ ನಮ್ಮ ಜಿಲ್ಲೆಯಲ್ಲಿ ಕಾಡಾನೆಗಳ ಕಾರಣಕ್ಕಾಗಿ ಆಗುತ್ತಿದೆ. ಕೃಷಿ ಬೆಳೆ ನಾಶವಾಯಿತು, ಒಂಟಿಸಲಗ ಬಂತು ಎಂದು ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಸುದ್ದಿ ಬರುತ್ತದೆ. ಈ ರೀತಿಯ ಜೀವ ಭಯದಲ್ಲಿ ಬದುಕುವಂತಹ ಪರಿಸ್ಥಿತಿ ಬಂದಿದೆ. ಮಾನ್ಯ ಸಚಿವರು ನನ್ನ (ಉ) ಪ್ರಶ್ನೆಗೆ ನೀಡಿರುವಂತಹ ಉತ್ತರದಲ್ಲಿ ಮುಂದುವರೆದು, "ಮಾನವ- ಅನೆ ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ 117.20 ಕಿ.ಮೀ ಆನೆತಡೆ ಕಂದಕ, 2,630 ಸಂಖ್ಯೆಯ ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್‌ಗಳನ್ನು 71.44 ಕಿ.ಮೀ ಸೋಲಾರ್ ತಂತಿ ಬೆಲಿ ಹಾಗೂ 73.50 ಕಿ.ಮೀ ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ ಕಾಮಗಾರಿ ಕೈಗೊಳ್ಳುವ ಪ್ರಸ್ತಾವನೆಯಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನ ಲಭ್ಯತೆ ಅನುಸಾರ ಕಾಮಗಾರಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ" ಎಂದು ತಿಳಿಸಿದ್ದಾರೆ.

ಸಭಾಪತಿಯವರು:- ಮಾನ್ಯ ಸದಸ್ಯರೇ, ತಾವು ಉತ್ತರವನ್ನು ಓದಬೇಡಿ. ಅದನ್ನು ಮಾನ್ಯ ಸಚಿವರು ಹೇಳುತ್ತಾರೆ.

ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:- ಮಾನ್ಯ ಸಭಾಪತಿಯವರೇ, ನಾನು ಓದುವುದಿಲ್ಲ. ಆದರೆ, ಇಷ್ಟು ದೊಡ್ಡ ಗಾತ್ರದಲ್ಲಿ ಅಗತ್ಯ ಇದೆ ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. 2025-26ನೇ ಸಾಲಿನಲ್ಲಿ 1.50 ಕಿ.ಮೀ ಆನೆ ನಿರೋಧಕ ಕಂದಕ ಬಗ್ಗೆ ಹೇಳಿದ್ದಾರೆ. ಪ್ರಸ್ತಾವನೆಯಲ್ಲಿ ಇಷ್ಟು ದೊಡ್ಡ ಸಂಗತಿಗಳು ಇವೆ. ಹಾಗಾದರೆ, ಈ ಸಮಸ್ಯೆಗೆ ಪರಿಹಾರ ಆಗಬೇಕೆಂದರೆ, ಇನ್ನೂ 10 - 15 ವರ್ಷಗಳ ಕಾರ್ಯಯೋಜನೆ ಬೇಕಾಗಬಹುದು. ಇದರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಮಾನ್ಯ ಸಚಿವರು ವಿಶೇಷ ಗಮನಕೊಟ್ಟು ಜನರಿಗೆ ವಿಶ್ವಾಸ ಮೂಡಿಸಬೇಕು. ಈಗಾಗಲೇ ಅಲ್ಲಿ 2 ಪ್ರಾಣಗಳು ಹೋಗಿವೆ.

ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಒಂದು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಮತ್ತು ಇಲಾಖೆ ಬಹಳ ಗಂಭೀರತೆಯಿಂದ ತೆಗೆದುಕೊಂಡಿದೆ. ಮಾನವ-ಪ್ರಾಣಿ ಸಂಘರ್ಷ ಇವತ್ತಿನಿಂದ ಅಲ್ಲ, ಅನಾದಿ ಕಾಲದಿಂದಲೂ ಇದೆ. ಈ ಹಿಂದೆ ಅರಣ್ಯ ಪ್ರದೇಶ ಪ್ರತಿಶತ 60-70 ಇತ್ತು. ಈಗ 20 ಪ್ರತಿಶತ ಅರಣ್ಯ ಪ್ರದೇಶ ಇದೆ. ಈಗ ಅರಣ್ಯ ಕ್ಷೀಣಿಸುತ್ತಿದೆ. ವನ್ಯಜೀವಿ ಸಂರಕ್ಷಣೆ ಕಾಯ್ದೆ ಬಂದ ಮೇಲೆ, ವನ್ಯ ಜೀವಿಗಳ ಸಂಖ್ಯೆ ಜಾಸ್ತಿಯಾಗಿದೆ. ನಮ್ಮ ರಾಜ್ಯದಲ್ಲಿ 2022 ನೇ ಸಾಲಿನಲ್ಲಿ ಆನೆಗಳ ಗಣತಿ ಮಾಡಿದಂತಹ ಸಂದರ್ಭದಲ್ಲಿ 6,395 ಆನೆಗಳು ಇವೆ ಎನ್ನುವುದು ತಿಳಿದು ಬಂದಿದೆ. Karnataka is ranked number one in India for elephant population. ಹುಲಿಗಳಲ್ಲಿ 2ನೇ ಸ್ಥಾನದಲ್ಲಿದ್ದೇವೆ. ನಮ್ಮ ರಾಜ್ಯದಲ್ಲಿ 563 ಹುಲಿಗಳು ಇವೆ. ಸುಮಾರು ವರ್ಷಗಳಿಂದ ಪ್ರತಿ ವರ್ಷ ಸುಮಾರು 50 ರಿಂದ 65 ಮಾನವ-ಪ್ರಾಣಿ ಸಂಘರ್ಷದಲ್ಲಿ ಮೃತ ಪಡುತ್ತಿದ್ದಾರೆ. ಎಲ್ಲಕ್ಕಿಂತ ಹೆಚ್ಚಿನ ಒಂದು ದುರ್ಘಟನೆಗಳು ಆನೆ ತುಳಿತದಿಂದ ಆಗುತ್ತಿದೆ. ಇದೆಲ್ಲವನ್ನು ತಡೆಹಿಡಿಯಬೇಕೆಂದು ಹಾಗೂ ಈ ಸಮಸ್ಯೆಗ್ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಹೇಳಿ ಶಾಶ್ವತವಾಗಿ ನಮ್ಮ ರಾಜ್ಯದಲ್ಲಿ ಮಾತ್ರ railway barricade ಅನ್ನು ಅಳವಡಿಸುವಂತಹ ಕಾರ್ಯ ನಡೆಯುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೂ ಪೂರ್ವದಲ್ಲಿಯೇ 312 ಕಿ.ಮೀ. railway barricade ಅನ್ನು ಮಾಡಲಾಗಿದೆ. ಈಗ ಸುಮಾರು 116 ಕಿ.ಮೀ. railway barricade ನ ಅಳವಡಿಕೆಯು complete ಆಗಿದೆ. ಇನ್ನೂ 200 ಕಿ.ಮೀ. railway barricade ಮಾಡುವುದಕ್ಕೆ ಮಾನ್ಯ ಸಿ.ಎಂ.ರವರು ಮಂಜೂರಾತಿಯನ್ನು ಕೊಟ್ಟಿದ್ದಾರೆ. ಈ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪ್ರಾರಂಭ ಮಾಡುತ್ತಿದ್ದೇವೆ. ಈ 200 ಕಿ.ಮೀ ಗಳನ್ನು ಮಾಡಿದ ಮೇಲೆ, ಇದು ಮುಗಿಯಿತು ಎಂದಲ್ಲ, 200 + ಇನ್ನೂ ಬೇಡಿಕೆ 300 ಕಿ.ಮೀ ಇದೆ. ಒಂದು ಕಿ.ಮೀ. railway barricade ಮಾಡುವುದಕ್ಕೆ ಹಿಂದೆ 1.50 ಕೋಟಿ ರೂಪಾಯಿಗಳು ಖರ್ಚು ಆಗುತ್ತಿತ್ತು. ಈಗ ಅದೇ ಒಂದು ಕಿ.ಮೀ ಮಾಡುವುದಕ್ಕೆ ಸುಮಾರು 1.75 ಕೋಟಿ ರೂಪಾಯಿಗಳು ಬೇಕಾಗಿದೆ. ನಾನು ಆರ್ಥಿಕ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇನೆ.

ಮಾನವನ ಜೀವ ಅತ್ಯಮೂಲ್ಯವಾಗಿದೆ. ಆ ಜೀವವನ್ನು ಸಂರಕ್ಷಣೆ ಮಾಡುವುದಕ್ಕೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ, ಅವುಗಳನ್ನು ಮಾಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಅವರ ಒಪ್ಪಿಗೆಯನ್ನು ತಾತ್ವಿಕವಾಗಿ ಕೊಟ್ಟಿದ್ದಾರೆ. ಬರುವಂತಹ ದಿನಮಾನಗಳಲ್ಲಿ ಅವಶ್ಯ ಇರುವಷ್ಟು railway barricade ಗಳನ್ನು ನಿರ್ಮಾಣ ಮಾಡಿ ಆದಷ್ಟುಮಟ್ಟಿಗೆ ಮಾನವ-ಪ್ರಾಣಿ ಸಂಘರ್ಷವನ್ನು ತಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಯಲ್ಲಿ ಕಂದಕ ನಿರ್ಮಾಣ ಮಾಡುವಂತಹದ್ದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಮಂಗಳೂರಿನಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2 ಸಾವುಗಳು ಆಗಿವೆ. ಇದು ಅತ್ಯಂತ ದುರಷ್ಟಕರವಾದಂತಹ ನೋವಿನ ಒಂದು ಸಂಗತಿಯಾಗಿದೆ. ಈಗ ಅದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅಲ್ಲಿಯೂ ಸಹ ನಾವು ಸುಮಾರು ಕಡೆಗಳಲ್ಲಿ ಆನೆ ಕಂದಕಗಳನ್ನು ನಿರ್ಮಾಣ ಮಾಡಿದ್ದೇವೆ.

(ಮುಂದು)

(610) 11-08-2025/1.40/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

ಶ್ರೀ ಈಶ್ವರ ಬಿ. ಖಂಡ್ರೆ (ಮುಂದು):-

ಇವತ್ತು ಅದನ್ನು ಕಡಿಮೆ ಮಾಡುವ ದೃಷ್ಟಿಯಿಂದ, ಅಲ್ಲಿ ಸುಮಾರು ಕಡೆಗಳಲ್ಲಿ ಆನೆ ಕಂದಕಗಳನ್ನು ನಿರ್ಮಾಣ ಮಾಡಿದ್ದೇವೆ. ಮತ್ತೆ ಅದರ ನಿರ್ವಹಣೆಯನ್ನು ಸಹ ಮಾಡುತ್ತಿದ್ದೇವೆ. ಅಲ್ಲಿ tentacle fencing ಮಾಡಿದ್ದೇವೆ. ಇಲ್ಲಿಯವರೆಗೆ ಸುಮಾರು 1,700 ಕಿಲೋಮೀಟರ್ ಆನೆ ಕಂದಕಗಳನ್ನು ನಿರ್ಮಾಣ ಮಾಡಿದ್ದೇವೆ. ಇವತ್ತು ಸುಮಾರು 1,300 ಕಿಲೋಮೀಟರ್ tentacle fencing ಮಾಡಿದ್ದೇವೆ. ಇನ್ನು ಈ ವರ್ಷ ಬೇಡಿಕೆಗೆ ಅನುಗುಣವಾಗಿ ಏಕೆಂದರೆ ಕಳೆದ ವರ್ಷ ಮಂಗಳೂರಿನಲ್ಲಿ ಈ ರೀತಿಯ ಸಮಸ್ಯೆ ಇರಲಿಲ್ಲ. ಈಗ ಏನಾಗಿದೆ ಎಂದರೆ, ಈಗ ಆನೆ ಮತ್ತು ಕಾಡಿಗೆ ವ್ಯತ್ಯಾಸವಿಲ್ಲದಂತಾಗಿದೆ. ಇವತ್ತು ಸುಮಾರು ವರ್ಷಗಳಿಂದ ಕೆಲವೊಂದು ಆನೆಗಳು ಕಾಡಿನಿಂದ ಹೊರಗಡೆಯೇ ಇವೆ. ಈಗ ಕೊಡಗು ಜಿಲ್ಲೆಯಲ್ಲಿ 114 ಆನೆಗಳಿವೆ. ನಾನು ಮೊನ್ನೆಯ ದಿವಸ ಅಲ್ಲಿಗೆ ಭೇಟಿ ನೀಡಿ, review ಮಾಡಿದ್ದೇನೆ. ಕೊಡಗು ಜಿಲ್ಲೆಯಲ್ಲಿ 114 ಆನೆಗಳು ಅರಣ್ಯದ ಹೊರಗಡೆಯೇ ಇವೆ. ಅಂದರೆ, ಅವುಗಳು ಕಾಫಿ ಎಸ್ಟೇಟ್‌ಗಳಲ್ಲಿವೆ. ಅವುಗಳು ಅಲ್ಲಿಯೇ ಇರುತ್ತವೆ, ಅಲ್ಲಿಯೇ ಹುಟ್ಟುತ್ತವೆ, ಅಲ್ಲಿಯೇ ಬೆಳೆಯುತ್ತವೆ. ಈ ರೀತಿ ಅದೇ ರೀತಿಯಲ್ಲಿ ನಡೆಯುತ್ತಿದೆ. ಅದೇ ರೀತಿ ಹಾಸನ ಜಿಲ್ಲೆಯಲ್ಲೂ ಸಹ ಇದೆ. ಇವತ್ತು ಹಾಸನ ಜಿಲ್ಲೆಯಲ್ಲಿ ಆನೆಗಳ ಸಮಸ್ಯೆ ಜಾಸ್ತಿಯಾಗಿದೆ. ಹಾಸನ ಜಿಲ್ಲೆಯಲ್ಲಿ ಸುಮಾರು 40 ರಿಂದ 60 ಆನೆಗಳು ಕಾಡಿನ ಹೊರಗಡೆ ಇವೆ. ಈ ಆನೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸುತ್ತಿರುತ್ತವೆ. ಮತ್ತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಹದಿನೈದು ದಿವಸಗಳಿಂದ ಆನೆಗಳ ಹಾವಳಿ ಪ್ರಾರಂಭವಾಗಿದೆ.

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅಲ್ಲಿ ನಾಲ್ಕು ತಿಂಗಳಿನಲ್ಲಿ ಸುಮಾರು ಐದು ಸಾವುಗಳು ಆಗಿವೆ.

ಶ್ರೀ ಈಶ್ವರ ಬಿ. ಖಂಡ್ರೆ:- ಮಾನ್ಯ ಸಭಾಪತಿಯವರೇ, ಹೌದು ಅಲ್ಲಿ ಸಾವು ಆಗಿದೆ. ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ಆನೆಯಿಂದ 13 ಸಾವುಗಳು ಆಗಿವೆ. ಅದೇ ರೀತಿಯಲ್ಲಿ ಬೇರೆ ಬೇರೆ ಪ್ರಾಣಿಗಳ ದಾಳಿಯಿಂದ ಇಲ್ಲಿಯವರೆಗೆ 1,019 ಸಾವುಗಳು ಆಗಿವೆ. ಕಳೆದ ವರ್ಷ 47 ಸಾವು ಆಗಿತ್ತು. ಅದಕ್ಕಿಂತ ಮುಂಚಿತವಾಗಿ 65 ಸಾವು ಆಗಿತ್ತು. ಕಾಡಿನಲ್ಲಿ ಆನೆಗಳಿಗೆ ಬೇಕಾಗುವಂತಹ ಆಹಾರವಾದ ಬಿದಿರು ಬೆಳಸುವಂಥದ್ದು,...

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಅಲ್ಲಿಗೆ ಮಾನ್ಯ ಸದಸ್ಯರ ಏನು ಬೇಡಿಕೆ ಇದೆ, ಆ ಬೇಡಿಕೆಗೆ ಅನುಗುಣವಾಗಿ ಕಂದಕವನ್ನು ನಿರ್ಮಾಣ ಮಾಡುವಂಥದ್ದು ಇರಬಹುದು ಅಥವಾ tentacle fencing ಹಾಕುವಂಥದ್ದು ಇರಬಹುದು. ಈ ಒಂದು ಆನೆ ದಾಳಿ, ಮಾನವ ಮತ್ತು ಪ್ರಾಣಿ ಸಂಘರ್ಷ ಕಡಿಮೆ ಮಾಡುವುದಕ್ಕೆ ಮಾನ್ಯ ಸದಸ್ಯರು ಏನು ಸಲಹೆ ನೀಡುತ್ತಾರೆ, ಅದನ್ನು ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ, ಅದನ್ನು ಕಾರ್ಯಗತ ಮಾಡುವಂತಹ ಕೆಲಸವನ್ನು ಮಾಡುತ್ತೇನೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಸಭಾಪತಿಯವರು:– ಇದನ್ನು ಮಾಡುವುದಕ್ಕೆ ನಿಮ್ಮ ಉತ್ತರವೇನು?

(ಗೊಂದಲ)

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ನೇರವಾಗಿ ನಮ್ಮ ಪ್ರಶ್ನೆ ಇರತಕ್ಕಂಥದ್ದು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಇದರ ಪ್ರಮಾಣ ಅಗಾಧವಾಗಿ ದೊಡ್ಡದಾಗಿದೆ. ಇಲ್ಲಿಯವರೆಗೆ ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್‌ರವರು ಮಾತನಾಡಿದ್ದೇವೆ.

ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ,..

ಸಭಾಪತಿಯವರು:– ಶ್ರೀ ಕಿಶೋರ್ ಕುಮಾರ್ ಪುತ್ತೂರ್ ರವರೆ, ಈಗ ತಾವು ಕುಳಿತುಕೊಳ್ಳಿ. ಒಬ್ಬ ಸದಸ್ಯರು ಮಾತನಾಡುವಾಗ ಈ ರೀತಿ ನಿಂತುಕೊಳ್ಳಬಾರದು.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ನಾವು ಅದೇ ಉತ್ತರವನ್ನು ಅಪೇಕ್ಷೆಪಡುವುದಿಲ್ಲ. ಅಲ್ಲಿ ಆನೆಯ ದಾರಿ ಎಂದು ಇತ್ತು. ಅದು ಇಂತಿಷ್ಟು ಪ್ರದೇಶದಲ್ಲಿ ಮಾತ್ರ ಓಡಾಡುತ್ತಾ ಇತ್ತು. ಈಗ ಅದು ಅಲ್ಲಿಗೆ ಸೀಮಿತವಾಗಿಲ್ಲ. ಈಗ ಆನೆಗಳು ಪೇಟೆಯವರೆಗೂ ಬರುವುದಕ್ಕೆ ಪ್ರಾರಂಭವಾಗಿದೆ ಎಂದು ಹೇಳಿದರೆ, ಅಲ್ಲಿ ಏನೋ ಒಂದು ವ್ಯತ್ಯಾಸ ಆಗಿದೆ ಎನ್ನುವಂಥದ್ದು. ಅದಕ್ಕೆ ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಡುವಂಥದ್ದು ಏನೆಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮದ ದೃಷ್ಟಿಯಲ್ಲಿ ಆನೆಯ ಶಿಬಿರವನ್ನು ಮಾಡಿದ್ದಾರೆ. ಅದನ್ನು ಸಾಕಷ್ಟು ಜನರು ನೋಡುತ್ತಿದ್ದಾರೆ. ಅದೇ ರೀತಿ ಸುಬ್ರಹ್ಮಣ್ಯ ಪಕ್ಕದಲ್ಲಿ ಏನಾದರೂ ಆ ರೀತಿಯ ಶಿಬಿರವನ್ನು ಮಾಡಿದರೆ ಅನುಕೂಲವಾಗುತ್ತದೆ.

ಸಭಾಪತಿಯವರು:– ಶ್ರೀ ಪ್ರತಾಪ್ ಸಿಂಹ ನಾಯಕ್ ರವರೆ, ಮಾನ್ಯ ಸಚಿವರು ಉತ್ತರ ಹೇಳಲಿ. ಅದು ಸಾಕು ಬಿಡಿ. ಈಗ ಒಂದು ಗಂಟೆ ಹದಿನೈದು ನಿಮಿಷವಾಗಿದೆ. ಈ ರೀತಿಯಾದರೆ ನಾನು ಸದನವನ್ನು ಹೇಗೆ ನಡೆಸುವುದು? ತಾವು ಇದನ್ನು ತಿಳಿದುಕೊಳ್ಳಬೇಕು.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ಆಯಿತು. ಸಮಸ್ಯೆ ಇರುವುದರಿಂದ ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ನೀವೂ ತಿಳಿದುಕೊಳ್ಳುವುದಿಲ್ಲ, ಅವರೂ ತಿಳಿದುಕೊಳ್ಳುವುದಿಲ್ಲ. ಈಗ ನೀವು ಭಾಷಣ ಮಾಡುವುದು ಬೇಡ. ತಮ್ಮ ಪ್ರಶ್ನೆ ಏನೆಂದು ಕೇಳಿ.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳುತ್ತಿದ್ದೇನೆ. ಮತ್ತೆ ನಾನು ಒಂದು ಸಲಹೆ ನೀಡುತ್ತಿದ್ದೇನೆ. ಅಂದರೆ, ಶಿಬಿರ ಮಾಡುವುದರ ಬಗ್ಗೆ ಮಾನ್ಯ ಸಚಿವರು ಆಲೋಚನೆ ಮಾಡುತ್ತಾರೆಯೇ ಎಂದು.

ಸಭಾಪತಿಯವರು:– ಮಾನ್ಯ ಸಚಿವರೆ, ಅದರ ಬಗ್ಗೆ ತಾವು ತೀರ್ಮಾನ ಮಾಡಿ.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ಪರಿಹಾರವನ್ನು ಜಾಸ್ತಿ ಮಾಡುತ್ತಾರೆ. ಆದರೆ, ಕೇರಳ ರಾಜ್ಯಕ್ಕೆ ಜಾಸ್ತಿ ಕೊಡುತ್ತಾರೆ. ನಮಗೂ ಸಹ ಜಾಸ್ತಿ ಕೊಡುತ್ತಾರೆ. ಮತ್ತೆ ಬೆಳೆ ಪರಿಹಾರ, ನಮ್ಮ ಕಡೆಗಳಲ್ಲಿ ದೀರ್ಘಾವಧಿಯ ಬೆಳೆಗಳಾದ ಅಡಕೆ ಮತ್ತು ತೆಂಗು ಇದೆ.

ಸಭಾಪತಿಯವರು:– ಮಾನ್ಯ ಸದಸ್ಯರೆ, ತಾವು ಮತ್ತೆ ಮತ್ತೆ ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:– ಮಾನ್ಯ ಸಭಾಪತಿಯವರೇ, ಆ ಬೆಳೆಗಳಿಗೆ ಹೆಚ್ಚಿನ ಪರಿಹಾರ ನೀಡಲಿ ಎಂದು ಕೇಳುತ್ತಿದ್ದೇನೆ.

ಶ್ರೀ ಈಶ್ವರ ಬಿ. ಖಂಡ್ರೆ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇರಳ ರಾಜ್ಯಕ್ಕೆ ಪರಿಹಾರ ಕೊಟ್ಟಿದ್ದಾರೆಂದು ಟ್ವೀಟ್ ಮಾಡಿ ಹೇಳಿದ್ದಾರೆ. ಆದರೆ, ಅರಣ್ಯ ಇಲಾಖೆಯ ವತಿಯಿಂದ ಹಾಗೂ ನಮ್ಮ ಸರ್ಕಾರದ ವತಿಯಿಂದ ಒಂದು ನಯಾ ಪೈಸೆಯನ್ನು ಸಹ ಕೇರಳ ರಾಜ್ಯಕ್ಕೆ ಕೊಟ್ಟಿಲ್ಲ. ಈಗಾಗಲೇ ಈ ವರ್ಷದ ಆಯವ್ಯಯದಲ್ಲಿ ರೂ.15 ಲಕ್ಷ ಇದ್ದಂತಹ ಪರಿಹಾರದ ಮೊತ್ತವನ್ನು ರೂ.20 ಲಕ್ಷಗಳಿಗೆ ಹೆಚ್ಚಿಗೆ ಮಾಡಿದ್ದೇವೆ.

ಸಭಾಪತಿಯವರು:– ಮಾನ್ಯ ಸಚಿವರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳಿಬಿಡಿ.

ಶ್ರೀ ಈಶ್ವರ ಬಿ. ಖಂಡ್ರೆ:– ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಉತ್ತರ ನೀಡುತ್ತಿದ್ದೇನೆ. ಅವರು ಹೆಚ್ಚಿಗೆ ಪರಿಹಾರ ನೀಡಿ ಎಂದು ಹೇಳಿದ್ದರು. ಅದಕ್ಕೆ ರೂ.20 ಲಕ್ಷ ರೂಪಾಯಿಗಳನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದೇನೆ.

ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಪ್ರಾಣಕ್ಕೆ ಬೆಲೆ ಕಟ್ಟುವುದಕ್ಕೆ ಆಗುತ್ತದೆಯೇ? ಈಗ ರೂ.15 ಲಕ್ಷದಿಂದ ರೂ.20 ಲಕ್ಷ ಎಂದರೆ ಅದಕ್ಕೆ ಅರ್ಥ ಇದೆಯೇ? ಅಲ್ಲಿ ಪ್ರಾಣಹಾನಿಯಾಗದಂತೆ ಮಾಡಬೇಕು. ಅವರು ಬೆಳೆ ಹಾನಿಗೆ ಕೇವಲ ರೂ.15,000/- ಗಳನ್ನು ನೀಡಿದ್ದಾರೆ.

(ಗೊಂದಲ)

ಶ್ರೀ ಈಶ್ವರ ಬಿ. ಖಂಡ್ರೆ:– ಮಾನ್ಯ ಸಭಾಪತಿಯವರೇ, ಈಗ ಜೀವಕ್ಕೆ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ.

(ಗೊಂದಲ)

ಸಭಾಪತಿಯವರು:– ಮಾನ್ಯ ಸಚಿವರು ಉತ್ತರ ಹೇಳಲಿ ಬಿಡಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಬಿ. ಖಂಡ್ರೆ:- ಮಾನ್ಯ ಸಭಾಪತಿಯವರೇ, ಶಿವಮೊಗ್ಗದಲ್ಲಿ ಇರುವ ರೀತಿ ನಮ್ಮಲ್ಲಿ ೪ ರಿಂದ ೨ ಶಿಬಿರಗಳಿವೆ. ಒಂದು ಶಿಬಿರದಲ್ಲಿ ೪, ೧೦ ಮತ್ತು ೨೦ ಆನೆಗಳನ್ನು ಇಡುವುದಕ್ಕೆ ಮಾತ್ರ ಸಾಧ್ಯವಿದೆ. ಇವತ್ತು ಆನೆಗಳನ್ನು ಸೆರೆ ಹಿಡಿಯುವಂಥದ್ದಕ್ಕೆ ಬಹಳ ದೊಡ್ಡ ರೀತಿಯ ಯೋಜನೆ ಮಾಡಬೇಕಾಗುತ್ತದೆ. ಅದು ಒಂದು ಅಪಾಯಕಾರಿಯಾದಂತಹ ಯೋಜನೆಯಾಗಿದೆ. ಆದರೂ ಸಹ ಎಲ್ಲಿ ಪುಂಡಾನೆಗಳು ಇರುತ್ತವೆ ಅವುಗಳನ್ನು ಸೆರೆ ಹಿಡಿದು, ಅವುಗಳನ್ನು ಶಿಬಿರಗಳಿಗೆ ಕಳುಹಿಸಿ tame ಮಾಡುವಂಥದ್ದು. ಆ ಒಂದು ಯೋಜನೆಯನ್ನು ಮಾಡುವುದಕ್ಕೆ ಪ್ರಸ್ತಾವನೆಯನ್ನು ನೀಡಿದರೆ, ಅದನ್ನು ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳಿಗೆ ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ.139

ಅನುದಾನಿತ ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಮಾಹಿತಿ ಬಗ್ಗೆ

ಕ್ರ.ಸಂ	ಪ್ರಶ್ನೆ	ವಿವರ
ಅ)	ರಾಜ್ಯ ಅನುದಾನಿತ ಪ್ರೌಢ ಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆಯಿಂದ ಜನವರಿ 2016 ರಿಂದ ಮಾರ್ಚ್ 2024 ರವರೆಗೆ ಖಾಲಿ ಆಗಿರುವ ಒಟ್ಟು ಖಾಲಿ ಹುದ್ದೆಗಳೆಷ್ಟು; (ವಿವರ ನೀಡುವುದು)	ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ:01.01.2016 ರಿಂದ 31.01.2024 ವರೆಗೆ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳ ಸಂಖ್ಯೆ: 8070. ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಬೋಧಕ ಹುದ್ದೆಗಳಲ್ಲಿ ಖಾಲಿಯಾದ ಹುದ್ದೆಗಳ ಸಂಖ್ಯೆ: 2030 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.)
ಆ)	ಸದರಿ ಖಾಲಿ ಹುದ್ದೆಗಳನ್ನು ತುಂಬಲು ಯಾವ ಕಾಲಮಿತಿಯಲ್ಲಿ ಅನುಮತಿ ನೀಡಲಾಗುತ್ತದೆ.	ಸರ್ಕಾರದ ಆದೇಶ ಸಂಖ್ಯೆ: ಇಪಿ 396 ಎಸ್ಇಎಸ್ 2021 ದಿನಾಂಕ: 07.08.2024 ರಲ್ಲಿ 01.01.2016 ರಿಂದ 31.12.2020 ರವರೆಗೆ ರಾಜ್ಯದ ಅನುದಾನಿತ ಪ್ರೌಢಶಾಲೆ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಲಾಗಿದೆ. ನೇಮಕಾತಿಯನ್ನು ಅನ್-ಲೈನ್ ಮುಖಾಂತರ ಮಾತ್ರ ಭರ್ತಿ ಮಾಡಿಕೊಳ್ಳಲು ತಿಳಿಸಲಾಗಿದ್ದು, ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಪ್ರಕ್ರಿಯೆ ಜಾರಿಯಲ್ಲಿ ಇರುತ್ತದೆ. ಪದವಿಪೂರ್ವ ಶಿಕ್ಷಕರಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಲಾಗುತ್ತಿದ್ದು, ಸರ್ಕಾರವು ವಿಧಿಸುವ ಮಾನದಂಡನೆಯನ್ನು ಪೂರೈಸುವ ಕಾಲೇಜುಗಳಿಂದ ಪ್ರಸ್ತಾವನೆಯನ್ನು ಪಡೆಯಲಾಗುವುದು. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಅಸುಇ 388 ಸೆನೆನಿ 2024 ದಿನಾಂಕ: 25.11.2024 ರಲ್ಲಿ ರಾಜ್ಯದ ಸಿವಿಲ್ ಸೇವೆಗಳಲ್ಲಿನ ನೇಮಕಾತಿಗಳಲ್ಲಿ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅಧಿಸೂಚನೆಗಳನ್ನು ಹೊರಡಿಸುವಂತಿಲ್ಲ ಎಂದು ಸೂಚಿಸಲಾಗಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ನೇಮಕಾತಿಯನ್ನು ತಡೆಹಿಡಿಯಲಾಗಿದೆ.
ಇ)	2015 ಕ್ಕೂ ಮುನ್ನ ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಈಗಾಗಲೇ ಅನುಮತಿ ನೀಡಿ ವೇತನಾನುದಾನಕ್ಕೊಳಪಟ್ಟಿರು	ಅನುದಾನಿತ ಪ್ರೌಢ ಶಾಲೆಗಲಲ್ಲಿ 2015 ಕ್ಕಿಂತ ಪೂರ್ವದಲ್ಲಿ ಸಹಾಯಾನುದಾನಕ್ಕೆ ಒಳಪಡಿಸಿರುವ / ಬಾಕಿ ಇರುವ ಬೋಧಕ ಹುದ್ದೆಗಳ ವಿವರ ಈ ಕೆಳಕಂಡಂತೆ ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ಹುದ್ದೆಗಳಷ್ಟು; ಇಲಾಖಾ ಅನುಮತಿ ನೀಡಿ ಇದುವರೆವಿಗೆ ವೇತನಾನುದಾನಕ್ಕೆ ಒಳಪಡಿಸದೆ ಇರುವ ಹುದ್ದೆಗಳಷ್ಟು;	ಆಯುಕ್ತಾಲಯ / ಸರ್ಕಾರದಿಂದ ಅನುಮತಿ ನೀಡಿರುವ ಹುದ್ದೆಗಳು / ಶಾಲಾ ಆಡಳಿತ ಮಂಡಳಿಯಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ವೇತನಾನುದಾನಕ್ಕೆ ಒಳಪಡಿಸಿರುವ ಹುದ್ದೆಗಳು / ಶಾಲಾ ಆಡಳಿತ ಮಂಡಳಿಗಳಿಂದ ವೇತಾನುದಾನಕ್ಕೆ ಸಲ್ಲಿಕೆಯಾಗದೆ ಇರುವ ಹುದ್ದೆಗಳು ಬೆಂಗಳೂರು ಮೈಸೂರು: 2127 / 1360 / 767 ಧಾರವಾಡ: 1141 / 858 / 283 ಕಲಬುರಗಿ: 365 / 338 / 27 **ಒಟ್ಟು: 3633 / 2556 / 1077** 2015 ಕ್ಕೂ ಮುನ್ನ ಪದವಿಪೂರ್ವ ಕಾಲೇಜುಗಳ ಬೋಧಕ ಹುದ್ದೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ವಿವಿಧ ಆದೇಶಗಳಲ್ಲಿ ಒಟ್ಟು 1030 ಬೋಧಕ ಹುದ್ದೆಗಳನ ಭರ್ತಿ ಮಾಡಲು ಸರ್ಕಾರದಿಂದ ಅವಕಾಶ ಕಲ್ಪಿಸಲಾಗಿದೆ. ಈ ಪೈಕಿ 413 ಹುದೆಗಳನ್ನು ವೇತಾನುದಾನಕ್ಕೆ ಒಳಪಡಿಸಲಾಗಿದೆ. 71 ಹುದ್ದೆಗಳಿಗೆ ಸಂಬಂಧಿಸಿದಂತೆ ಕಾರ್ಯಭಾರ ಕೊರತೆ, ದಾಖಲಾತಿ ಕೊರತೆ ಹಾಗೂ ಇನ್ನಿತರ ಕಾರಣಗಳಿಂದ ವೇತಾನುದಾನಕ್ಕೆ ಒಳಪಡಿಸಲು ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ.
ಈ)	ಡಿಸೆಂಬರ್ 2015 ರವರೆಗೆ ನಿವೃತ್ತಿ, ಮರಣ, ರಾಜೀನಾಮೆಯಿಂದ ಖಾಲಿ ಆಗಿರುವ ಎಲ್ಲಾ ಹುದ್ದೆಗಳನ್ನು ತುಂಬಲು ಯಾವಾಗ ಅನುಮತಿ ನೀಡಲಾಗುತ್ತದೆ?	ಸರ್ಕಾರದ ಆದೇಶ ಸಂಖ್ಯೆ ಇಡಿ 14 ಎಸ್‌ಇಎಸ್ 2017 ದಿನಾಂಕ: 25.09.2018 ರಲ್ಲಿ ದಿನಾಂಕ: 31.12.2015 ರ ಪೂರ್ವದಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ಖಾಲಿಯಾದ ಸಹಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಈ ಮೇಲಿನಂತೆ ಶಾಲಾ ಆಡಳಿತ ಮಂಡಳಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅನುಮತಿ ನೀಡಲಾಗಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಅಸುಇ 388 ಸೆನೆನಿ 2024 ದಿನಾಂಕ: 25.11.2024 ರಲ್ಲಿ ರಾಜ್ಯದ ಸಿವಿಲ್ ಸೇವೆಗಳಲ್ಲಿನ ನೇಮಕಾತಿಗಳಲ್ಲಿ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಅಧಿಸೂಚನೆಗಳನ್ನು ಹೊರಡಿಸುವಂತಿಲ್ಲ ಎಂದು ಸೂಚಿಸಲಾಗಿದೆ. ಸದರಿ ಆದೇಶವನ್ನು ತೆರವುಗೊಳಿಸಿದ ನಂತರ ಅನುದಾನಿತ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ 2016 ರಿಂದ ಮಾರ್ಚ್2024ರವರೆಗೆ ಖಾಲಿ ಇರುವ ಬೋಧಕ ಹುದ್ದೆಗಳ ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆ	ಖಾಲಿ ಹುದ್ದೆ ಮಾಹಿತಿ
1	ಬೆಂಗಳೂರು ಉತ್ತರ	240
2	ಬೆಂಗಳೂರು ದಕ್ಷಿಣ	390
3	ಬೆಂಗಳೂರು ಗ್ರಾಮಾಂತರ	131
4	ಕೋಲಾರ	208
5	ರಾಮನಗರ	134
6	ಚಿಕ್ಕಬಳ್ಳಾಪುರ	92
7	ದಾವಣಗೆರೆ	302
8	ಚಿತ್ರದುರ್ಗ	502
9	ಮಧುಗಿರಿ	268
10	ತುಮಕೂರು	526
11	ಶಿವಮೊಗ್ಗ	214
12	ಮೈಸೂರು	327
13	ಮಂಡ್ಯ	183
14	ಹಾಸನ	288
15	ಚಾಮರಾಜನಗರ	318
16	ಉಡುಪಿ	250
17	ದಕ್ಷಿಣ ಕನ್ನಡ	212
18	ಚಿಕ್ಕಮಗಳೂರು	249
19	ಮಡಿಕೇರಿ	60
20	ಬಾಗಲಕೋಟೆ	275
21	ಬೆಳಗಾವಿ	550
22	ಚಿಕ್ಕೋಡಿ	435
23	ಧಾರವಾಡ	194
24	ಗದಗ	157
25	ಹಾವೇರಿ	286
26	ಕಾರವಾರ	106
27	ಶಿರಸಿ	95
28	ವಿಜಯಪುರ	344
29	ಬಳ್ಳಾರಿ	57
30	ಬೀದರ	247
31	ರಾಯಚೂರು	51
32	ಕೊಪ್ಪಳ	39
33	ಕಲಬುರ್ಗಿ	183
34	ಯಾದಗಿರಿ	15
35	ವಿಜಯನಗರ	142
	ಒಟ್ಟು	8070

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-ಎ-10(139)

ಜನವರಿ 2016 ರಿಂದ ಮಾರ್ಚ್ 2024 ರವರೆಗೆ ಅನುದಾನಿತ ಪಿಯು ಕಾಲೇಜುಗಳಲ್ಲಿ ಜಿಲ್ಲೆವಾರು ಖಾಲಿ ಹುದ್ದೆಗಳು

ಕ್ರ.ಸಂ	ಜಿಲ್ಲೆ	ಒಟ್ಟು ಖಾಲಿ ಹುದ್ದೆಗಳು
1	ಬೆಂಗಳೂರು ಉತ್ತರ	102
2	ಬೆಂಗಳೂರು ದಕ್ಷಿಣ	96
3	ಬೆಂಗಳೂರು ಗ್ರಾಮಾಂತರ	14
4	ರಾಮನಗರ	30
5	ಬಳ್ಳಾರಿ	30
6	ಚಿಕ್ಕೋಡಿ	28
7	ಬೆಳಗಾವಿ	87
8	ಬಾಗಲಕೋಟೆ	48
9	ವಿಜಯಪುರ	70
10	ಬಿದರ್	157
11	ದಾವಣಗೆರೆ	93
12	ಚಿತ್ರದುರ್ಗ	72
13	ಚಿಕ್ಕಮಗಳೂರು	30
14	ಗದಗ	85
15	ಹಾವೇರಿ	86
16	ಧಾರವಾಡ	93
17	ಕಲಬುರ್ಗಿ	76
18	ಯಾದಗಿರಿ	10
19	ಹಾಸನ	49
20	ಚಿಕ್ಕಬಳ್ಳಾಪುರ	20
21	ಕೋಲಾರ	21
22	ಚಾಮರಾಜನಗರ	14
23	ಮೈಸೂರು	78
24	ಮಂಡ್ಯ	52
25	ಉತ್ತರ ಕನ್ನಡ	44
26	ಕೊಪ್ಪಳ	22
27	ರಾಯಚೂರು	24
28	ಮಂಗಳೂರು	75
29	ಉಡುಪಿ	39
30	ಶಿವಮೊಗ್ಗ	88
31	ತುಮಕೂರು	281
32	ಕೊಡಗು	16
	ಒಟ್ಟು	2030

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ಶಿಕ್ಷಣ ಸಚಿವರೆ, ತಾವು ಒಂದು ಸಭೆ ಕರೆಯುತ್ತೇನೆಂದು ನನಗೆ ತಿಳಿಸಿದ್ದೀರಿ. ಅದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರ ಪ್ರಶ್ನೆಯನ್ನು ಸಹ ಸೇರಿಸಿಕೊಳ್ಳಿ. ತಾವು ಯಾವಾಗ ಸಭೆಯನ್ನು ಕರೆಯುತ್ತೀರಿ?

ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):– ಮಾನ್ಯ ಸಭಾಪತಿಯವರೇ, 13ನೇ ತಾರೀಖಿನ ಬೆಳಗ್ಗೆ ತಾವು ಕೂಡ ಬಂದರೆ ಎಲ್ಲರೂ ಸಹ ಕುಳಿತುಕೊಂಡು ಮಾತನಾಡಬಹುದು.

ಸಭಾಪತಿಯವರು:– ಮಾನ್ಯ ಪುಟ್ಟಣ್ಣನವರೆ, ಇದನ್ನು ಅದರಲ್ಲಿ ಸೇರಿಸಿಬಿಡಿ. 13ನೇ ತಾರೀಖಿನ ಬೆಳಗ್ಗೆ ಮೀಟಿಂಗ್ ಇರುತ್ತದೆ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಆಯಿತು.

ಸಭಾಪತಿಯವರು:– ಈಗ ಮಾನ್ಯ ಅಬ್ದುಲ್ ಜಬ್ಬಾರ್‌ರವರು ಪ್ರಶ್ನೆ ಕೇಳುವುದು.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳುತ್ತೇನೆ.

ಸಭಾಪತಿಯವರು:– ಮಾನ್ಯ ಪುಟ್ಟಣ್ಣನವರೆ, ಇದನ್ನು ಅದರಲ್ಲಿ ಸೇರಿಸಿಬಿಡುತ್ತೇನೆ. ಮತ್ತೆ ಇದರ ಬಗ್ಗೆ ಏಕೆ ಪ್ರಶ್ನೆ ಕೇಳುತ್ತೀರಿ?

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ನಾನು ಅವರನ್ನು ಕೇಳಬೇಕು. ತಾವು ಆಗ ಮಾತನಾಡಬೇಡಿ ಎಂದು ಹೇಳಿದಿರಿ. ಈಗ straightway ಅವರು ಹೇಳುತ್ತಾರೆಂದು, ಬೇರೆಯವರಿಗೆ ಮಾತನಾಡಲು ಅವಕಾಶ ನೀಡುತ್ತೀರಿ. ಆದರೆ, ನನ್ನನ್ನು ಮಾತ್ರ ಏಕೆ ತಡೆಯುತ್ತೀರಿ? ನನಗೆ ಮಾತ್ರ ಮಾತನಾಡಬೇಡಿ ಎಂದು ಹೇಳುತ್ತೀರಿ. ಇದು ನನಗೆ ಅರ್ಥವೇ ಆಗುತ್ತಿಲ್ಲ. ತಮಗೆ ನನ್ನ ಮೇಲೆ ಏನು ದ್ವೇಷವಿದೆ? ತಾವು ಇಂತಹವುದೆಂದು ಹೇಳಿ.

ಸಭಾಪತಿಯವರು:– ಆಯಿತು, ಈಗ ತಾವು ಮಾತನಾಡಿ. ತಾವು ಸುಮ್ಮನೆ ಮಾತನಾಡುತ್ತೀರಿ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ನಾನು ಸುಮ್ಮನೆ ಮಾತನಾಡುವುದಿಲ್ಲ. ನಾನು ನೇರವಾಗಿ ಕೇಳಿಬಿಡುತ್ತೇನೆ.

(ಗೊಂದಲ)

ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗಿದೆ ಎಂದರೆ, 2015ರ ಹಿಂದೆ ಏನು ಅನುಮತಿಯನ್ನು ನೀಡಿದ್ದರು, ಅದರಲ್ಲಿ ಇನ್ನೂ ಕೂಡ 1,077 ಹುದ್ದೆಗಳನ್ನು ತುಂಬಬೇಕು. 2015ರ ಡಿಸೆಂಬರ್ ನಂತರ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 8,070 ಹುದ್ದೆಗಳು ಖಾಲಿ ಇವೆ. ಅಂದರೆ, ಒಟ್ಟು 9,147 ಹುದ್ದೆಗಳನ್ನು ಇನ್ನು ತುಂಬುವುದಕ್ಕೆ ಬಾಕಿ ಇದೆ. ಡಿಸೆಂಬರ್ 2015ರ ಹಿಂದೆ ಏನು ಹುದ್ದೆಗಳು ಖಾಲಿಯಾಗಿದ್ದವು, ಆ ಹುದ್ದೆಗಳನ್ನು ಈ ಕೂಡಲೇ ತುಂಬುವುದಕ್ಕೆ ಅವಕಾಶವನ್ನು ಕೊಡಬೇಕು. ಮತ್ತೆ ಈಗ ಏನು creamy layer ಬಂದು ನಿಂತಿದೆ, ಅದು ಸರಿಯಾದ ನಂತರ ತುಂಬುತ್ತೇವೆಂದು ಹೇಳಿದ್ದಾರೆ. ಅದು ಕೂಡ ಈ ಕೂಡಲೇ ಆಗಬೇಕು. ಮತ್ತೊಂದು ಏನಾಗಿದೆ ಎಂದರೆ, ಈ ಹುದ್ದೆಗಳನ್ನು ತುಂಬಿಕೊಂಡು ಅದರ approval ಆಗುವುದಕ್ಕೆ ಅದು secretariat ಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬೇಕೆಂದು ಒಂದು ಆದೇಶ ಮಾಡಿದ್ದಾರೆ. ದಯಮಾಡಿ ಇದನ್ನು cut down ಮಾಡಿ, ಅದು ಆಯುಕ್ತರ ಹಂತದಲ್ಲಿಯೇ ಅನುಮೋದನೆಯಾಗಬೇಕು. ಅದಕ್ಕೆ ಅಲ್ಲಿಯೇ permission ಕೊಡಬೇಕು, ಅಲ್ಲಿಯೇ ತುಂಬಬೇಕು. ಇಲ್ಲಿಯವರೆಗೂ ಸಹ ಅದೇ ರೀತಿ ಇತ್ತು. ಈಗ ಎಷ್ಟು cut down ಮಾಡುವುದಕ್ಕೆ ಸಾಧ್ಯ cut down ಮಾಡಲಿ. ಇಲ್ಲವಾದರೆ, ಚರ್ಮವನ್ನೇ ಸುಲಿದುಬಿಡುತ್ತಾರೆ. ಸರ್ಕಾರದ ವತಿಯಿಂದ ಎಲ್ಲವನ್ನು ಸಹ ಮಾಡುತ್ತಾರೆ. ಮಧ್ಯದಲ್ಲಿ ಎಲ್ಲವೂ ಹುಟ್ಟಿಕೊಂಡು ಯಾರೋ, ಏನೋ ಮಾಡಿ, ಇದರಿಂದ ಎಲ್ಲವೂ ಸಹ ಅನ್ಯಾಯವಾಗುತ್ತಿದೆ. ಅದಕ್ಕೆ ದಯವಿಟ್ಟು ಅದನ್ನು ಅಲ್ಲಿಯೇ ಮಾಡಬೇಕು. ಇದರಿಂದ ಏನಾಗುತ್ತಿದೆ ಎಂದರೆ, ಇಷ್ಟು ಹುದ್ದೆಗಳು ಖಾಲಿಯಿವೆ. 2019ರಲ್ಲಿಯೇ ಈ ಅನುದಾನವನ್ನು ಹಿಂತೆಗೆದುಕೊಳ್ಳಬೇಕು ಮತ್ತೆ increment ಅನ್ನು cut ಮಾಡಬೇಕೆಂದು ಮಾಡಿದ್ದರು. ಅದರ effect ಅನ್ನು ಈಗ ಮಾಡಿದ್ದಾರೆ. ದಯವಿಟ್ಟು ಇಷ್ಟು ಹುದ್ದೆಗಳು ಖಾಲಿ ಇದ್ದರೂ ಕೂಡ ಮಾನ್ಯ ಸದಸ್ಯರಾದ ಶ್ರೀ ಸಂಕನೂರರವರು ಹೇಳಿದ ಹಾಗೆ ಎಲ್ಲೂ ಕೂಡ humps ಇಲ್ಲ. ಆದರೆ, ಎಸ್.ಎಸ್.ಎಲ್.ಸಿ.ಗೆ ಮಾತ್ರ humps ಹಾಕಿ, ಅದನ್ನು ಇಟ್ಟುಕೊಂಡು increment cut ಮಾಡುವುದು ಮತ್ತೆ ವೇತನವನ್ನು ನಿಲ್ಲಿಸುವಂಥದ್ದು ಸರಿಯಲ್ಲ. ದಯಮಾಡಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಕೂಡಲೇ ಇವತ್ತೇ ಮಾನ್ಯ ಸಚಿವರು announce ಮಾಡಬೇಕು. ಅಂದರೆ, ಈಗಾಗಲೇ ತಡೆಹಿಡಿದಿರುವಂತಹ ಕೆಲಸವನ್ನು ನಾವು ಸೂಚನೆ ನೀಡುವವರೆಗೆ ಮಾಡಬೇಡಿ, ಅದರ ವರದಿಯನ್ನು ಕಳುಹಿಸಿ ಎಂದು ಹೇಳಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ. ಆದರೆ, ಅಷ್ಟು ಸಾಲದು, ದಯಮಾಡಿ ಅದನ್ನು withdraw ಮಾಡುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಇದನ್ನು ಮನವಿ ಅಥವಾ ಒತ್ತಾಯವೆಂದುಕೊಳ್ಳಲಿ. ದಯವಿಟ್ಟು ಈ ಕೂಡಲೇ ಅದನ್ನು withdraw ಮಾಡಬೇಕು. ಏನು increment cut ಮಾಡುವುದನ್ನು withdraw ಮಾಡುವುದಕ್ಕೆ ಈ ಕೂಡಲೇ ಆದೇಶ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಮಧು ಬಂಗಾರಪ್ಪ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು Commissioner level ನಲ್ಲಿ ಏನು request ಮಾಡಿದ್ದಾರೆ, ಅದನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ. ಮತ್ತೆ ನಾಡಿದ್ದು as it is ಯಾವುದೇ ಕಾರಣಕ್ಕೂ ಯಾರ ಮೇಲೂ action ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅದನ್ನು ನಿಲ್ಲಿಸುವುದಕ್ಕೆ ಹೇಳುವಂಥದ್ದು ಒಂದು ಭಾಗವಾದರೆ, ನಾಡಿದ್ದು ತಮ್ಮಗಳ ಜೊತೆ ಕುಳಿತುಕೊಂಡು ಮಾತನಾಡಿ, ಅದನ್ನು stop ಮಾಡುವಂತಹ ವ್ಯವಸ್ಥೆಯನ್ನು ತಮ್ಮ ಸಮ್ಮುಖದಲ್ಲಿ ಮಾಡುತ್ತೇನೆ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(611) 11.08.2025 01.50 LL-MD (ಸಭಾಪತಿಯವರ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ: 20

ರಾಜ್ಯದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಕುರಿತು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಎರಡು ವರ್ಷಗಳಲ್ಲಿ ರಾಜ್ಯದ್ಯಂತ ಹೊಸದಾಗಿ ಎಷ್ಟು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ:(ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ಒದಗಿಸುವುದು)</td><td>2023-24 ಮತ್ತು 2024-25ನೇ ಶೈಕ್ಷಣಿಕವರ್ಷಗಳಲ್ಲಿ ಪ್ರಾರಂಭಿಸಲಾದ ಪದವಿ ಪೂರ್ವ ಕಾಲೇಜುಗಳವಿವರ :-
<table>
<tr><th>ವರ್ಷ</th><th>ಸರ್ಕಾರಿ ಪದವಿ ಪೂರ್ವ ಕಾಲೇಜುಗಳು</th><th>ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ</th></tr>
<tr><td>2023-24</td><td>03</td><td>102</td></tr>
<tr><td>2024-25</td><td>77</td><td>157</td></tr>
<tr><td>ಒಟ್ಟು</td><td>80</td><td>259</td></tr>
</table>
(ಅನುಬಂಧ-01 ರನ್ನು ಲಗತ್ತಿಸಿದೆ)</td></tr>
<tr><td>ಆ</td><td>ಪದವಿ ಪೂರ್ವ ಕಾಲೇಜಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳು ಯಾವುವು:</td><td><u>ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ:-</u>
1. ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮಾನದಂಡಗಳನ್ನು ರೂಪಿಸಲಾಗಿದ್ದು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅಥವಾ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ, ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಯಾವುದೇ ನಿಖರವಾದ ಮಾನದಂಡಗಳು ರಚನೆಯಾಗಿರುವುದಿಲ್ಲ.
2. ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿನ ಶೈಕ್ಷಣಿಕ ವಾತಾವರಣವನ್ನು ಉತ್ತಮ ಪಡಿಸುವ ಉದ್ದೇಶದಿಂದ ಪ್ರತಿ 10-20 ಕೀಮಿಗಳಿಗೆ ಒಂದರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಲಾಗುತ್ತಿದೆ.
3. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅಥವಾ ಪ್ರೌಢ ಶಾಲೆಗಳನ್ನು ಉನ್ನತೀಕರಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಫೀಡೀಂಗ್ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹಾಗೂ ಪ್ರೌಢ ಶಾಲೆಗಳನ್ನು ಉನ್ನತೀಕರಿಸಲು ನಿರ್ಧರಿಸಿರುವ ಪ್ರೌಢಶಾಲೆಯಲ್ಲಿ ಮೂಲಭೂತ ಸೌಲಭ್ಯಗಳು ಇರುವುದನ್ನು ಪರಿಗಣಿಸಲಾಗುತ್ತಿದೆ.</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4. ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಪ್ರದೇಶಗಳ ಜನಸಂಖ್ಯೆ ಮತ್ತು ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವನ್ನು ಗಮನಿಸಿ ಸ್ಥಳೀಯ ಜನ ಪ್ರತಿನಿಧಿಗಳು ಮತ್ತು ಗಣ್ಯವ್ಯಕ್ತಿಗಳ ಕೋರಿಕೆ ಮೇರೆಗೆ ಬೇಡಿಕೆ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ.

ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕೆಲವು ಸ್ಥಳಗಳಲ್ಲಿ ಈಗಾಗಲೇ ಖಾಸಗಿ ಪದವಿ ಪೂರ್ವ ಕಾಲೇಜುಗಳಿದ್ದರೂ ಸಹ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿದೆ.

<u>ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ:-</u>

ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಆಡಳಿತ, ಶೈಕ್ಷಣಿಕ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) ನಿಯಮ 2006 ರ ನಿಯಮ 4 ರಂತೆ ಈ ಕೆಳಕಂಡ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಆಧಾರದ ಮೇಲೆ ಮಂಜೂರಾತಿ ನೀಡಲಾಗುತ್ತದೆ.

1. ಸರ್ಕಾರದ ಆದೇಶ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ 08-03-2018ರಂತೆ ನಿಗದಿಪಡಿಸಿದ ಅಗತ್ಯ ನಿವೇಶನ.
2. ನಿಗದಿತ ಅಳತೆಯ ತರಗತಿ ಕೊಠಡಿಗಳು.
3. ನಿಗದಿತ ಅಳತೆಯ ಪ್ರಯೋಗಾಲಯಗಳು,
4. ಕ್ರೀಡಾ ಕೊಠಡಿ, ನಿರೀಕ್ಷಣಾ ಕೊಠಡಿ.
5. ಪ್ರಾಂಶುಪಾಲರ, ಉಪನ್ಯಾಸಕರ, ಕಚೇರಿ ಕೊಠಡಿ.
6. ಆಟದ ಮೈದಾನ,
7. ವ್ಯಾಜ್ಯ ಇಲ್ಲದ ದೃಢೀಕರಣ.
8. ಅಡಿಟ್ ವರದಿ.
9. ಕಟ್ಟಡ ಸುರಕ್ಷತೆ ದೃಢೀಕರಣ,
10. ಅಗ್ನಿ ಸುರಕ್ಷತೆ ಸಲಹಾ ಮತ್ತು ಸಮಾಪನಾ ಪ್ರಮಾಣ ಪತ್ರ.
11. ನಿಗದಿತ ಮೊತ್ತದ ಸಾಲ್ವೆನ್ಸಿ,
12. ನಿಗದಿತ ಮೊತ್ತದ ಸ್ಥಿರನಿಧಿಠೇವಣಿ,
13. ನೋಂದಣಿ ಶುಲ್ಕ.
14. ಮಳೆನೀರುಕೊಯ್ಲು ಅಳವಡಿಸಿದ ದೃಢೀಕರಣ.
15. ಕಟ್ಟಡದ ಕಂದಾಯ ಪಾವತಿ ವಿವರ.
16. ಅನುಮೋದಿತ ಕಟ್ಟಡದ ನಕಾಶೆ, ಕಟ್ಟಡದ ಸ್ವಾಧೀನ ಪತ್ರ.
17. ನಿವೇಶನದ ಭೂಪರಿವರ್ತನೆ.
18. ನೈರ್ಮಲ್ಯ ದೃಢೀಕರಣ.
19. ಸ್ವಂತ ನಿವೇಶನವಿಲ್ಲದಿದ್ದಲ್ಲಿ 30 ವರ್ಷಗಳ ಅವಧಿ ನಿವೇಶನದ ನೋಂದಾಯಿತ ಲೀಸ್‌ಡೀಡ್.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ)	ದಾವಣಗೆರೆ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಪದವಿ ಪೂರ್ವ ಕಾಲೇಜುಗಳಿಲ್ಲದೇ ಮಕ್ಕಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ. 2024-25 ನೇ ಸಾಲಿನಲ್ಲಿ ಒಂದು ಖಾಸಗಿ ಪದವಿ ಪೂರ್ವ ಕಾಲೇಜು ಪ್ರಾರಂಭವಾಗಿರುತ್ತದೆ. ಹಾಗೂ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ದಾವಣಗೆರೆ ನಗರದ ಎಸ್ ಎಸ್ ಎಂ ನಗರದ ಸರ್ಕಾರಿ ಶಾಲೆ ಸ್ಥಳಾಂತರಿಸಲು ಇಲಾಖೆಯ ಹಂತದಲ್ಲಿ ಪರಿಶೀಲಿಸಲಾಗುತ್ತಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
ಈ)	ಬಂದಿದ್ದಲ್ಲಿ, ಸದರಿ ಮಕ್ಕಳ ವಿದ್ಯಾಭ್ಯಾಸಕ್ಕೆ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತದೆ:(ಸಂಪೂರ್ಣ ಮಾಹಿತಿ ಒದಗಿಸುವುದು)	
ಉ)	ದಾವಣಗೆರೆ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಪದವಿ ಪೂರ್ವ ಕಾಲೇಜುಗಳನ್ನು ಉನ್ನತೀಕರಿಸಿ ಮೇಲ್ದರ್ಜೆಗೇರಿಸಲು ಸರ್ಕಾರ ಚಿಂತಿಸುವುದೇ?	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ 01 ಪ್ರಶ್ನೆ ಸಂಖ್ಯೆ:- 11(20)

ಶ್ರೀ ಕೆ.ಅಬ್ದುಲ್ ಜಬ್ಬಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆಗೆ **ಅನುಬಂಧ 01.**

ಕ್ರ.ಸ	ಜಿಲ್ಲೆಯ ಹೆಸರು	ಜಿಲ್ಲಾ ಸಂಕೇತ	ಸರ್ಕಾರಿ ಪದವಿ ಪೂರ್ವ ಕಾಲೇಜು		ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜು	
			2023-24	2024-25	2023-24	2024-25
1	ಬೆಂಗಳೂರು ಉತ್ತರ	AN	-	-	10	19
2	ಬೆಂಗಳೂರು ದಕ್ಷಿಣ	AS	-	-	18	17
3	ಬೆಂಗಳೂರು ಗ್ರಾಮಾಂತರ	BB	-	-	04	05
4	ರಾಮನಗರ	BR	-	02	03	03
5	ಬಳ್ಳಾರಿ	CC	-	08	05	05
6	ಚಿಕ್ಕೋಡಿ	DC	-	02	06	10
7	ಬೆಳಗಾವಿ	DD	-	02	02	03
8	ಬಾಗಲಕೋಟೆ	EB	-	06	02	03
9	ವಿಜಯಪುರ	EE	-	05	11	11
10	ಬೀದರ	FF	-	04	04	05
11	ದಾವಣಗೆರೆ	GD	-	-	03	05
12	ಚಿತ್ರದುರ್ಗ	GG	-	02	0	02
13	ಚಿಕ್ಕಮಗಳೂರು	HH	-	-	01	02
14	ಗದಗ	JG	-	02	00	01
15	ಹಾವೇರಿ	JH	-	-	02	02
16	ಧಾರವಾಡ	JJ	-	02	03	07
17	ಕಲಬುರಗಿ	KK	-	07	06	07
18	ಯಾದಗಿರಿ	KY	-	03	00	04
19	ಹಾಸನ	LL	-	01	01	05
20	ಚಿಕ್ಕಬಳ್ಳಾಪುರ	MC	-	04	02	01
21	ಕೋಲಾರ	MM	-	02	00	04
22	ಚಾಮರಾಜನಗರ	NC	-	04	00	00
23	ಮೈಸೂರು	NN	-	06	05	08
24	ಮಂಡ್ಯ	PP	-	02	01	02
25	ಉತ್ತರ ಕನ್ನಡ	QQ	-	-	01	03
26	ಕೊಪ್ಪಳ	RK	03	06	01	01
27	ರಾಯಚೂರು	RR	-	05	02	04
28	ದಕ್ಷಿಣ ಕನ್ನಡ	SS	-	01	02	06
29	ಉಡುಪಿ	SU	-	-	02	02
30	ಶಿವಮೊಗ್ಗ	TT	-	-	03	04
31	ತುಮಕೂರು	UU	-	01	02	05
32	ಕೊಡಗು	VV	-	-	00	01
TOTAL			03	77	102	157

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ನಮ್ಮ ಜಿಲ್ಲೆಯಲ್ಲಿ ಬಹಳ ಕಡೆ ಹಳ್ಳಿಗಳಿಂದ ದೂರದಲ್ಲಿ ಹೈಸ್ಕೂಲ್‌ಗಳು ಇವೆ. ಆದರೆ, ಬಹಳ ದೂರ ಕಾಲೇಜುಗಳಿಗೆ ಹೋಗುವುದಕ್ಕೆ ಪೋಷಕರು ತಮ್ಮ ಮಕ್ಕಳನ್ನು ಕಳುಹಿಸುವುದಿಲ್ಲ. ಇದರಿಂದಾಗಿ, ಆ ಹಂತದಲ್ಲಿಯೇ ಅವರ ವಿದ್ಯಾಭ್ಯಾಸ ಕಡಿತಗೊಳ್ಳುತ್ತದೆ. ಹಾಗಾಗಿ, ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರತಿ 10-20 ಕಿಲೋಮೀಟರ್ ಒಳಗಡೆ ಒಂದರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಲಾಗುತ್ತದೆಯೆಂದು ತಮ್ಮ ಉತ್ತರದಲ್ಲಿ ನೀಡಿರುತ್ತಾರೆ. ಅದನ್ನು ಯಾವಾಗ ಕೊಡುತ್ತಾರೆಂಬ ಮಾಹಿತಿ ನೀಡಬೇಕು. ಎರಡನೆಯದಾಗಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲು ಯಾವುದೇ ನಿಖರವಾದ ಮಾನದಂಡಗಳು ರಚನೆಯಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಆದರೆ, ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ 19 ಅಂಶಗಳನ್ನು ಹಾಕಿರುತ್ತಾರೆ. ಅಂದರೆ, ಇಷ್ಟು ಮಾನದಂಡಗಳು ಇದ್ದರೆ ಮಾತ್ರ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಿರುತ್ತದೆ. ಆದರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಏತಕ್ಕೆ ಅನ್ವಯಿಸುವುದಿಲ್ಲ ಎನ್ನುವುದು ನನ್ನ ಉಪಪ್ರಶ್ನೆಯಾಗಿದೆ. ಮೂರನೆಯದಾಗಿ, ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಎಸ್.ಎಸ್.ಎಂ. ನಗರದಲ್ಲಿ ಸುಮಾರು 3-4 ಎಕರೆ ಜಮೀನಿನಲ್ಲಿ ಒಂದು ಕಾಂಪೌಂಡ್‌ನಲ್ಲಿ ಕನ್ನಡ ಮತ್ತು ಉರ್ದು ಭಾಷೆಗಳ ಶಾಲೆಗಳು ಇರುವುದರಿಂದ ಅಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ತೆರೆಯಬೇಕೆಂದು ನಾವು ವಿನಂತಿ ಮಾಡಿದ್ದು, ಅದನ್ನು ಪರಿಶೀಲಿಸುತ್ತಿದ್ದೇವೆ ಎಂದು ಉತ್ತರ ನೀಡಿರುತ್ತಾರೆ. ಆದರೆ, ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆಂಬ ಬಗ್ಗೆ ಮಾಹಿತಿ ನೀಡಬೇಕು. ಜೊತೆಗೆ, ಸದರಿ ಶಾಲೆಗಳಲ್ಲಿ ಎಲ್ಲಾ ಕೊಠಡಿಗಳು ಬಹಳ ಹಳೆಯ ಕೊಠಡಿಗಳಾಗಿರುವುದರಿಂದ, ಸುಮಾರು 6 ರಿಂದ 8 ಕೊಠಡಿಗಳ ಕೊರತೆ ಇದೆ. ಹಾಗಾಗಿ, ಅವುಗಳನ್ನು ನೀಡಬೇಕೆಂದು ನಾವು ವಿನಂತಿ ಮಾಡಿರುತ್ತೇವೆ. ಆದುದರಿಂದ, ಸದರಿ ಕೊಠಡಿಗಳನ್ನು ಆದಷ್ಟು ಬೇಗ ನಿರ್ಮಾಣ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಏಕೆಂದರೆ, ಮಳೆಗಾಲದಲ್ಲಿ ಮಕ್ಕಳು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಇದರ ಜೊತೆಗೆ, ಎಲ್ಲಾ ಸರ್ಕಾರಿ ಶಾಲೆ-ಕಾಲೇಜುಗಳಲ್ಲಿ ಪೀಠೋಪಕರಣಗಳು ಬಹಳ ಕಡಿಮೆ ಇವೆ. ಅನೇಕ ಪ್ರೈಮರಿ ಶಾಲೆಗಳಲ್ಲಿ ಮಕ್ಕಳು ಕೆಳಗಡೆ ಕುಳಿತು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹಾಗಾಗಿ, ದಯಮಾಡಿ ಪ್ರಥಮ ಆದ್ಯತೆ ನೀಡಿ, ಶಾಲಾ ಮಕ್ಕಳಿಗೆ ಕುಳಿತುಕೊಳ್ಳಲು ಅನುವಾಗುವಂತೆ ಪೀಠೋಪಕರಣಗಳನ್ನು ಒದಗಿಸಬೇಕು. ಇತ್ತೀಚೆಗೆ ಸರ್ಕಾರಿ ಶಾಲೆಗಳು ಏತಕ್ಕೆ ಬಂದ್ ಆಗುತ್ತಿವೆ ಎಂದರೆ, ಸರ್ಕಾರಿ ಶಾಲೆಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲವೆಂದು ಹಾಗೂ ಶಿಕ್ಷಕರ ಕೊರತೆ ಇದೆಯೆಂದು ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುವುದಕ್ಕೆ ಹಿಂದೆ-ಮುಂದೆ ನೋಡುತ್ತಿದ್ದಾರೆ. ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ, ನಾನು ಎರಡು-ಮೂರು ಪ್ರಶ್ನೆಗಳನ್ನು ಕೇಳಿರುತ್ತೇನೆ. ಹಾಗಾಗಿ, ಆ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ನೀಡಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ಏನು ಪ್ರಶ್ನೆ ಕೇಳಿದ್ದಾರೆ, ಅದನ್ನು ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ. ಈ ದಿನ ಬೆಳಗ್ಗೆ ಕೂಡ ಅವರ ಜೊತೆ ಮಾತನಾಡುವಾಗ ಅದನ್ನು ಹೇಳಿರುತ್ತೇನೆ. ಅದರ ಜೊತೆಗೆ, ಪಿಯುಸಿ ಕಾಲೇಜು ಮತ್ತು ಹೈಸ್ಕೂಲ್‌ಗಳಿಗೆ ನಮ್ಮ ರಾಜ್ಯದಲ್ಲಿ ಬಹಳಷ್ಟು ಬೇಡಿಕೆ ಇರುತ್ತವೆ. ಹಾಗಾಗಿ ನನಗೆ ಅನ್ನಿಸುವುದೇನೆಂದರೆ, ಪ್ರಸ್ತುತ ನಾವು ಇಡೀ ರಾಜ್ಯದಲ್ಲಿ ಕೆಪಿಎಸ್ ಶಾಲೆಗಳನ್ನು ಪ್ರಾರಂಭ ಮಾಡುವುದರಿಂದ ಆಟೋಮ್ಯಾಟಿಕ್ ಆಗಿ ಪಿಯುಸಿ ಬರತಕ್ಕಂತಹ ವ್ಯವಸ್ಥೆ ಆಗುತ್ತದೆ. ನಾವು ನೇರವಾಗಿ ೨೦ standalone colleges ನ್ನು ಸ್ಥಾಪನೆ ಮಾಡುವುದಕ್ಕೆ ಈಗಾಗಲೇ ಅನುಮತಿ ಸಿಕ್ಕಿರುತ್ತದೆ. ಅದರ ಜೊತೆಗೆ, ಯಾವ್ಯಾವ ಶಾಲಾ-ಕಾಲೇಜುಗಳಿಗೆ ಬೇಡಿಕೆ ಇದೆ, ಅವುಗಳನ್ನು ಕೆಪಿಎಸ್ ಶಾಲೆಗಳ ಜೊತೆ ಮರ್ಜ್ ಮಾಡತಕ್ಕಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಅದರಿಂದಾಗಿ, ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೇ, ಅದನ್ನು ಆದಷ್ಟು ಬೇಗನೆ ಮಾಡಿಕೊಡುತ್ತೇವೆಂದು ಭರವಸೆ ನೀಡುತ್ತೇನೆ. ಮಾನ್ಯ ಸದಸ್ಯರು ಎಸ್‌ಎಸ್‌ಎಂ ದಾವಣಗೆರೆ ವಿಚಾರವಾಗಿ ಏನು ಪ್ರಶ್ನೆ ಕೇಳಿದ್ದಾರೆ, ಅದನ್ನು ಆದಷ್ಟು ಬೇಗ ಮಂಜೂರು ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 142

ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಕುರಿತು

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ ಕಾರ್ಯದ ಅನಿವಾರ್ಯತೆ ಇದೆಯೇ; ಇದ್ದಲ್ಲಿ, ಅನಿವಾರ್ಯತೆಗೆ ಕಾರಣಗಳನ್ನು ನೀಡುವುದು;	ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ (Central Electricity Authority) ದಿನಾಂಕ: 23.12.2019 ರ ಅಧಿಸೂಚನೆಯಲ್ಲಿ "ಎಲ್ಲಾ ಹೊಸ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ನಿರ್ದೇಶಿಸಲಾಗಿದೆ. ನಂತರ ಭಾರತ ಸರ್ಕಾರದ ಇಂಧನ ಸಚಿವಾಲಯದ ದಿನಾಂಕ:23.05.2022 ರ ಆದೇಶದಲ್ಲಿ ರೈತರ ಕೃಷಿ ಪಂಪ್ ಸೆಟ್ ಗಳನ್ನು ಹೊರತು ಪಡಿಸಿ ಎಲ್ಲಾ ಗ್ರಾಹಕರ ವಿದ್ಯುತ್ ಸ್ವಾವರಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ನಿರ್ದೇಶಿಸಲಾಗಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ, KERC ಸಂಸ್ಥೆಯು ಒಂದು ಸ್ವಾಯಸ್ವ ಸಂಸ್ಥೆಯಾಗಿದ್ದು Conditions of Supply (CoS) ಹಾಗೂ ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ರಚಿಸುವ ಅಧಿಕಾರ ಹೊಂದಿರುತ್ತದೆ. ಕೇಂದ್ರ ಸರ್ಕಾರ ಹಾಗೂ ಕೇಂದ್ರ ವಿದ್ಯುತ್ ಪ್ರಾಧಿಕಾರವು ಮೇಲಿನ ಅಧಿಸೂಚನೆ ಹಾಗೂ ಆದೇಶಗಳ ಅನ್ವಯ ದಿನಾಂಕ 06.02.2024 ಹಾಗೂ ದಿನಾಂಕ 06.03.2024 ರಂದು KERC ಯು ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ನಿಯಾಮಾವಳಿಗಳನ್ನು ಜಾರಿಗೆ ತರಲಾಗಿರುತ್ತದೆ. ಈ ನಿಯಮಾವಳಿಗಳಂತೆ, ರಾಜ್ಯದಲ್ಲಿ ಎಲ್ಲಾ ಹೊಸ ಗ್ರಾಹಕರು (Permanent Connections) ಹಾಗೂ ಎಲ್ಲಾ ಹೊಸ ತಾತ್ಕಾಲಿಕ ಗ್ರಾಹಕರು (Temporary Connections) ಕಡ್ಡಾಯವಾಗಿ ಸ್ಮಾರ್ಟ್ ಮೀಟರ್ ಅಳವಡಿಸುವುದು ಅನಿವಾರ್ಯತೆ ಇರುತ್ತದೆ.
ಆ)	ಇಲ್ಲಿಯವರೆಗೆ ಒಟ್ಟು ಎಷ್ಟು ಸ್ಮಾರ್ಟ್ ಮೀಟರ್‌ಗಳನ್ನು ಇಲಾಖೆ ವತಿಯಿಂದ ಖರೀದಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಇಲ್ಲಿಯವರಗೆ ಸ್ಮಾರ್ಟ್ ಮೀಟರ್‌ಗಳನ್ನು ಇಲಾಖೆ ವತಿಯಿಂದ ಖರೀದಿಸಿರುವುದಿಲ್ಲ. ಆದರೆ ಕೆ.ಇ.ಆರ್.ಸಿ. ನಿರ್ದೇಶನದಂತೆ ಕರ್ನಾಟಕದಲ್ಲಿ ಸ್ಮಾರ್ಟ್ ಮೀಟರ್‌ಗಳನ್ನು ಗ್ರಾಹಕರೇ ಖರೀದಿಸಬೇಕಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ)	ಸ್ಮಾರ್ಟ್ ಮೀಟರ್‌ಗಳನ್ನು ಗ್ರಾಹಕರಿಗೆ ಯಾವ ದರದಲ್ಲಿ ಅಳವಡಿಸಲಾಗಿದೆ; (ಮಾಹಿತಿಯನ್ನು ಒದಗಿಸುವುದು)	ಬೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ನೀಡಿರುವ ಗುತ್ತಿಗೆ ಆದೇಶದ ಅನ್ವಯ ನಿಗದಿಪಡಿಸಿರುವ ದರಗಳು ಈ ಕೆಳಕಂಡಂತಿವೆ:

ಕ್ರ. ಸಂ	ವಿವರಣೆ	ದರ (ಜಿ.ಎಸ್.ಟಿ ಹೊರತು ಪಡಿಸಿ) ರೂ. ಗಳಲ್ಲಿ	ದರ (ಜಿ.ಎಸ್.ಟಿ @18% ಸೇರಿಸಿ ರೂ. ಗಳಲ್ಲಿ	ಒಟ್ಟು ಮೊತ್ತ ರೂ. ಗಳಲ್ಲಿ
		(ಗ್ರಾಹಕರು ಪಾವತಿಸಬೇಕು)		
1	ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್ ದರ	4068	4800	4998/-
	ಪಾಲಿಕಾರ್ಬೋನೆಟ್ ಬಾಕ್ಸ್ ದರ	167.8	198	
2	ತ್ರೀ ಫೇಸ್ ಸ್ಮಾರ್ಟ್ ಮೀಟರ್ ದರ	7203	8500	8880/-
	ಪಾಲಿಕಾರ್ಬೋನೆಟ್ ಬಾಕ್ಸ್ ದರ	322.03	380	
3	ತ್ರೀ ಫೇಸ್ ಸಿ.ಟಿ ಆಪರೇಟೆಡ್ ಸ್ಮಾರ್ಟ್ ಮೀಟರ್ ದರ	9237	10900	28080/-
	ಪಾಲಿಕಾರ್ಬೋನೆಟ್ ಬಾಕ್ಸ್ ದರ	3475	4101	
	ಸಿ.ಟಿ (4 ಸಂಖ್ಯೆ)	11085	13080	

ಮೇಲಿನ ದರದಂತೆ ಗ್ರಾಹಕರು outlets ಗಳಿಂದ ಮೀಟರ್ ಖರೀದಿಸಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಮೆಸ್ಕಾಂ, ಹೆಸ್ಕಾಂ ಹಾಗೂ ಜೆಸ್ಕಾಂ ವ್ಯಾಪ್ತಿಯಲ್ಲಿ ಸ್ಮಾರ್ಟ್ ಮೀಟರ್‌ಗಳ ದರಗಳು ಇನ್ನೂ ಅಂತಿಮಗೊಳಿಸಿರುವುದಿಲ್ಲ.

ಈ)	ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಸರ್ಕಾರಿ ಕಛೇರಿಗಳಲ್ಲಿ ಸ್ಮಾರ್ಟ್ ಮೀಟರ್‌ಗಳಾಗಿ ಪರಿವರ್ತಿಸಿ ಆಸ್ತಿ ತೆರಿಗೆ ಮೇಲೆ ವಿಧಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಸ್ಮಾರ್ಟ್ ಮೀಟರ್ ಅಳವಡಿಕೆಗಾಗಿ ಯಾವುದೇ ತೆರಿಗೆ ವಿಧಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ)	ಆರ್.ಡಿ.ಎಸ್.ಎಸ್. ಪ್ರಸ್ತಾವನೆ ಸಮಿತಿಯ ಕ್ರಿಯಾ ಯೋಜನೆ ಮತ್ತು ಡಿ.ಪಿ.ಎ.ಆರ್.ನ ಸಂಪೂರ್ಣ ಮಾಹಿತಿ ನೀಡುವುದು?	ಆರ್.ಡಿ.ಎಸ್.ಎಸ್ ಯೋಜನೆಯ ಮಾರ್ಗಸೂಚಿಯಂತೆ, ಕ್ರಿಯಾ ಯೋಜನೆ ಮತ್ತು ಯೋಜನಾ ವರದಿಯನ್ನು ದಿನಾಂಕ: 23.12.2021 ರಂದು ನಡೆದ ರಾಜ್ಯ ಮಟ್ಟದ ವಿತರಣಾ ಸುಧಾರಣಾ ಸಮಿತಿ (ಎಸ್.ಎಲ್.ಡಿ.ಆರ್.ಸಿ) ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದ್ದು, ಸಮಿತಿಯು ಕ್ರಿಯಾ ಯೋಜನೆ ಮತ್ತು ಯೋಜನಾ ವರದಿಯನ್ನು ಅಂಗೀಕರಿಸಿ, ಸಚಿವ ಸಂಪುಟದ ಅನುಮೋದನೆಗಾಗಿ ಸಲ್ಲಿಸಲು ಶಿಫಾರಸ್ಸು ಮಾಡಿದೆ. ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಸದರಿ ಪ್ರಸ್ತಾವನೆಗಳ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು ಈ ಕೆಳಕಂಡಂತಿವೆ:

ಕ್ರ. ಸಂ	ಕಾಮಗಾರಿ	ಮೊತ್ತ (ರೂ ಕೋಟಿಗಳಲ್ಲಿ)				
		ಬೆಸ್ಕಾಂ	ಮೆಸ್ಕಾಂ	ಸೆಸ್ಕ್	ಹೆಸ್ಕಾಂ	ಜೆಸ್ಕಾಂ
1	ಸ್ಮಾರ್ಟ್ ಮೀಟರಿಂಗ್	4977.00	1539.23	2199.32	1213.30	2337.44
2	ವಿತರಣಾ ನಷ್ಟ ಕಡಿಮೆಗೊಳಿಸುವ ಕಾಮಗಾರಿಗಳು (Los reduction works)	3209.00	741.43	778.48	1522.60	2864.57
3	ಆಧುನೀಕರಣ ಮತ್ತು ಜಾಲ ಬಲವರ್ಧನೆ ಕಾಮಗಾರಿಗಳು (Modernizatio and System Augmentation Works)		732.53	801.26	1204.51	3057.21
	ಒಟ್ಟು	8186.00	3013.19	3779.06	3940.41	8259.22

ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗಳಿಗೂ, ಮಾನ್ಯ ಸಿ.ಟಿ. ರವಿಯವರು ಕೇಳಿರುವಂತಹ ಪ್ರಶ್ನೆಗಳಿಗೆ ವ್ಯತ್ಯಾಸ ಇದೆ. ಮಾನ್ಯ ಸಚಿವರು ಎರಡೂ ವಿಷಯಗಳು ಒಂದೇ ಎಂದು ಹೇಳಬಹುದು. ಆದರೆ ನಾನು ಕೇಳಿರುವುದೇನೆಂದರೆ, ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಬೇಕೆಂದು ಇಲಾಖೆಯಿಂದ ಕಡ್ಡಾಯ ಮಾಡಿ ಆದೇಶ ಮಾಡಿದ್ದೀರಾ? ಒಂದು ವೇಳೆ ಆದೇಶ ಮಾಡಿದ್ದರೆ, ಅದರ ಪ್ರತಿಯನ್ನು ನನಗೆ ಒದಗಿಸಿ. ಎರಡನೆಯದಾಗಿ, ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ ದಿನಾಂಕ: 23.12.2019ರ ನಂತರ ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ಭಾರತ ಸರ್ಕಾರದ ಆದೇಶ ಇದೆಯೆಂದು ಹೇಳಿರುತ್ತಾರೆ. ಅದರ ಪ್ರಕಾರ ಸ್ಮಾರ್ಟ್ ಮೀಟರ್ ಅನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಸೂಚನೆ ನೀಡಿದ ನಂತರ ಹಾಗೂ ಕೇಂದ್ರ ಸರ್ಕಾರ ಸೂಚನೆ ನೀಡಿದ ನಂತರ ಇಡೀ ದೇಶಾದ್ಯಂತ ಒಂದೇ ರೀತಿಯ ದರ ಎಲ್ಲಾ ಕಡೆ ಇರಬೇಕಾಗಿತ್ತು. ಅದು ನಮ್ಮ ರಾಜ್ಯಕ್ಕೆ ಮಾತ್ರ ಅನ್ವಯಿಸುವುದಿಲ್ಲವೇ ಎಂಬ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕು. ಆರ್‌ಡಿಎಸ್‌ಎಸ್ ಯೋಜನೆ ಬಗ್ಗೆ ಕೂಡ ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ಅದರಂತೆ, ಆರ್‌ಡಿಎಸ್‌ಎಸ್ ಯೋಜನೆಯಂತೆ ಸ್ಮಾರ್ಟ್ ಮೀಟರ್‌ಗೆ ಎಷ್ಟು ಶುಲ್ಕ ವಿಧಿಸಬೇಕೆಂದು ಮಾನ್ಯ ಸಚಿವರು ಹೇಳಿರುತ್ತಾರೆ. ಅದರ ಬಗ್ಗೆ ಕೂಡ ಮಾಹಿತಿ ನೀಡಬೇಕು ಮತ್ತು ಶುಲ್ಕದ ಮೊತ್ತ ಏನಿದೆ, ಅದನ್ನು ಯಾವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನದಂಡದ ಆಧಾರದ ಮೇರೆಗೆ ವಿಧಿಸಬೇಕೆಂದು ಹೇಳಿರುತ್ತಾರೆ. ಅದರ ಬಗ್ಗೆ ಕೂಡ ಮಾಹಿತಿ ನೀಡಬೇಕು. ಅಲ್ಲದೇ, ಆರ್‌ಡಿಎಸ್‌ಎಸ್ ಪ್ರಸ್ತಾವನೆ ಸಮಿತಿ ಏನು ಸಲಹೆ ಸೂಚನೆಯನ್ನು ಕೊಟ್ಟಿದ್ದಾರೆ, ಅದನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಲಿ ನಂತರ ನಾನು ಮಾತನಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಇಂಧನ ಸಚಿವರು):– ಮಾನ್ಯ ಸಭಾಪತಿಯವರೇ, ಇದೇ ಪ್ರಶ್ನೆಯನ್ನು ಮಾನ್ಯ ಸಿ.ಟಿ. ರವಿಯವರು ಕೇಳಿರುತ್ತಾರೆ. ನಾನು ನೇರವಾಗಿ ಹೇಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಆರ್‌ಡಿಎಸ್‌ಎಸ್ ಪದ್ಧತಿ ಜಾರಿಗೆ ಬರಲಿಲ್ಲ. ಅದರ ವಿವರಣೆಯನ್ನು ನಾನು ಕೊಡುತ್ತೇನೆ.

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಹಾಗಾದರೆ ಈ ಬಗ್ಗೆ ಆದೇಶ ಮಾಡಿಲ್ಲವೇ?

ಸಭಾಪತಿಯವರು:– ಅವರು ಉತ್ತರ ನೀಡಲಿ ಬಿಡಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಸಭಾಪತಿಯವರೇ, ಆರ್‌ಡಿಎಸ್‌ಎಸ್ ಬೇರೆ ಮತ್ತು ನಾವು ಆದೇಶ ಮಾಡಿರುವುದು ಬೇರೆ. ನಮಗೆ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದಿಂದ ಮತ್ತು KERC (Karnataka Electricity Regulatory Commission) ಯಿಂದ ಆದೇಶ ಕೊಟ್ಟಿದ್ದಾರೆ. ಹೊಸ ಕನೆಕ್ಷನ್‌ಗಳಿಗೆ ಮತ್ತು ತಾತ್ಕಾಲಿಕ ಕನೆಕ್ಷನ್‌ಗಳಿಗೆ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಬೇಕೆಂದು ಆದೇಶ ಕೊಟ್ಟಿದ್ದಾರೆ. ಅದರ ಪ್ರಕಾರವಾಗಿ ಪ್ರಕ್ರಿಯೆ ಮಾಡಿ, ನಾವು ಮಾಹಿತಿ ನೀಡಿರುತ್ತೇವೆ. ಆದರೆ, ಈ ವಿಷಯ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ. ಮಾನ್ಯ ಸಿ.ಟಿ. ರವಿಯವರು ಏನು ಹೇಳಿದ್ದಾರೆ, ಆ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ನಾನು ಇದಕ್ಕೆಲ್ಲಾ ಉತ್ತರ ನೀಡುತ್ತೇನೆ.

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಈ ವಿಷಯ ಕೋರ್ಟ್‌ನಲ್ಲಿರಲಿ. ಆದರೆ, ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಮೊದಲು ಉತ್ತರ ನೀಡಲಿ. ಕೋರ್ಟ್‌ನಲ್ಲಿ ಕೂಡ ಏನು ಹೇಳಿದ್ದಾರೆ ಎನ್ನುವುದನ್ನು ಸಹ ನಾನು ಹೇಳುತ್ತೇನೆ. ಅದೇನೆಂದರೆ, ಶ್ರೀಮತಿ ಜಯಲಕ್ಷ್ಮೀ ಎನ್ನುವ ಒಬ್ಬ ಗ್ರಾಹಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಒಂದು Public Interest Litigation ದಾಖಲಿಸಿರುತ್ತಾರೆ. ಅಲ್ಲಿ ನ್ಯಾಯಮೂರ್ತಿ ನಾಗಪ್ರಸನ್ನರವರ ಬೆಂಚ್ ಜನಸಾಮಾನ್ಯರ ಮೇಲೆ ದುಬಾರಿ ದರದಲ್ಲಿ ಸುಲಿಗೆ ಮಾಡಬೇಡಿ ಎಂದಿರುವುದಲ್ಲದೇ, ಸ್ಮಾರ್ಟ್ ಮೀಟರ್ ಅನ್ನು ಕಡ್ಡಾಯ ಮಾಡಿರುವುದಕ್ಕೆ ಸಹ ಆತಂಕ ವ್ಯಕ್ತಪಡಿಸಿರುತ್ತಾರೆ.

(ಗೊಂದಲ)

ಸಭಾಪತಿಯವರು:– ಮಾನ್ಯ ಶರವಣರವರೇ ಒಂದು ನಿಮಿಷ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಮಾನ್ಯ ಸಿ.ಟಿ.ರವಿಯವರು ಕೇಳಿದ್ದಂತಹ ಪ್ರಶ್ನೆಗೆ ಉತ್ತರ ನೀಡಿರುತ್ತೇನೆ. ಅದೇನೆಂದರೆ, ಮಾನ್ಯ ಉಚ್ಚ ನ್ಯಾಯಾಲಯದಿಂದ ಇದುವರೆವಿಗೂ ಕೂಡ ನಮಗೆ ಯಾವುದೇ ಆದೇಶ ಬಂದಿರುವುದಿಲ್ಲ. ಮಾನ್ಯ ನ್ಯಾಯಾಲಯವು ಜಡ್ಜ್‌ಮೆಂಟ್ ಅನ್ನು ರಿಸರ್ವ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ ಇಟ್ಟಿರುತ್ತದೆ. ಸದರಿ ಜಡ್ಜ್‌ಮೆಂಟ್ ಬಂದ ನಂತರ, ಅದರಲ್ಲಿ ಏನಿದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಮಾತನಾಡಲಿ.

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಸಭಾಪತಿಯವರೇ, ಆದರೆ ಅದು open court ನಲ್ಲಿ comments ಆಗಿರುತ್ತದೆ.

(ಗೊಂದಲ)

ಸಭಾಪತಿಯವರು:– ಮಾನ್ಯ ರವಿಯವರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಗ್ರಾಹಕರನ್ನು ಸುಲಿಗೆ ಮಾಡಬೇಡಿ ಎಂದು ಮಾನ್ಯ ನ್ಯಾಯಾಲಯ ಹೇಳಿರುತ್ತದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಸಭಾಪತಿಯವರೇ, ಮಾನ್ಯ ನ್ಯಾಯಾಲಯದಿಂದ ಜಡ್ಜ್‌ಮೆಂಟ್ ಬರುವ ತನಕ,...

(ಗೊಂದಲ)

ಸಭಾಪತಿಯವರು:– ಮಾನ್ಯ ಸಚಿವರು ಮಾತನಾಡಿರುವುದು ಬಿಟ್ಟು, ಬೇರೆ ಯಾವುದೂ ಕಡತಕ್ಕೆ ಹೋಗಬಾರದು. ನಡುನಡುವೆ ಮಾತನಾಡಿರುವುದು ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಮಂತ್ರಿಗಳು ಮಾತನಾಡಿರುವುದನ್ನು ಮಾತ್ರ ಕಡತದಲ್ಲಿ ದಾಖಲಿಸಬೇಕು.

(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡೆವಳಿಯನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಸಭಾಪತಿಯವರೇ, ಮಾನ್ಯ ನ್ಯಾಯಾಲಯದಿಂದ ತೀರ್ಪು ಬಂದ ನಂತರ ಅದರ ಮೇಲೆ ಚರ್ಚೆ ಮಾಡೋಣ.

(ಗೊಂದಲ)

ಸಭಾಪತಿಯವರು:– ಒಂದೇ ವಿಷಯಕ್ಕೆ ಎರಡು ರೀತಿ ತೀರ್ಮಾನ ಕೊಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಏನು ಅರ್ಧ ಗಂಟೆ ಕಾಲಾವಧಿ ಚರ್ಚೆ ಎಂದು ಏನು ಹೇಳಿರುತ್ತೇನೆ, ಅದೇ ರೀತಿ ಈ ವಿಷಯವನ್ನು ಸಹ ಅದರಲ್ಲಿ ಸೇರಿಸಿರುತ್ತೇನೆ. ಅದರಂತೆ, ನಂತರ ಈ ವಿಷಯ ಚರ್ಚೆ ಮಾಡೋಣ.

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಆಯಿತು ಚರ್ಚೆ ಮಾಡೋಣ. ಆದರೆ, ಜನಸಾಮಾನ್ಯರ ಮೇಲೆ ದೌರ್ಜನ್ಯ ಆಗುತ್ತಿದೆ. ಹಾಗಾಗಿ, ಈ ವಿಷಯದ ಬಗ್ಗೆ ಒಂದು ಸದನ ಸಮಿತಿ ರಚನೆ ಮಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಆಯಿತು, ಸಾಕು. ಮುಂದಿನ ಪ್ರಶ್ನೆ ಶ್ರೀ ತಿಪ್ಪಣ್ಣ ಕಮಕನೂರರವರದ್ದು. ಮಾನ್ಯ ತಿಪ್ಪಣ್ಣನವರೇ, ತಮ್ಮ ಪ್ರಶ್ನೆ ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿರುತ್ತದೆ

ಶ್ರೀ ಟಿ.ಎ. ಶರವಣ:– ಮಾನ್ಯ ಸಭಾಪತಿಯವರೇ, ಯಾವುದೋ ಒಬ್ಬ ಕಾಂಟ್ರಾಕ್ಟರ್‌ಗೋಸ್ಕರ ಸರ್ಕಾರ ಇಷ್ಟೊಂದು ಒತ್ತು ಕೊಡುವುದು ಏತಕ್ಕೆ?

ಸಭಾಪತಿಯವರು:– ಇದು ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಶರವಣರವರೇ, ದಯಮಾಡಿ ಕುಳಿತುಕೊಳ್ಳಿ. ತಾವು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡೆವಳಯನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 135
ಫೈರ್ ಸೇಫ್ಟಿ ಪರ್ಮಿಷನ್ ವಿನಾಯಿತಿ ನೀಡುವ ಬಗ್ಗೆ.

ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	135
ಮಾನ್ಯ ಸದಸ್ಯರ ಹೆಸರು	ಡಾ.ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	11/08/2025
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

*****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು. ಸಮುದಾಯದ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಗಳೆಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 2161 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 365 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 205 ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ 147 ತಾಲ್ಲೂಕು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 12 ಜಿಲ್ಲಾ ಆಸ್ಪತ್ರೆಗಳು ಹಾಗೂ ಬೆಂಗಳೂರು ನಗರದಲ್ಲಿ 3 ಪ್ರಮುಖ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
ಆ)	ರಾಜ್ಯದಲ್ಲಿರುವ ಖಾಸಗಿ ಆಸ್ಪತ್ರೆಗಳು ಎಷ್ಟು: (ಜಿಲ್ಲಾವಾರು ವಿವರ ನೀಡುವುದು).	ರಾಜ್ಯದಲ್ಲಿ ಈವರೆಗೆ ಕೆಪಿಎಂಇ ಕಾಯ್ಯೆಯಡಿ ಆನ್‌ಲೈನ್ ಮುಖಾಂತರ ನೋಂದಣಿಗೊಂಡಿರುವ ಖಾಸಗಿ ಆಸ್ಪತ್ರೆಗಳ ಸಂಖ್ಯೆ: 5,850 ಖಾಸಗಿ ಆಸ್ಪತ್ರೆಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ.
ಇ)	ನ್ಯಾಷನಲ್ ಬಿಲ್ಡಿಂಗ್ ಕೋಡ್ ಪ್ರಕಾರ ಎಲ್ಲಾ ಕಟ್ಟಡಗಳಿಗೆ ಫೈರ್ ಸೇಫ್ಟಿ ನಿಯಮ ಒಂದೆ ಇರುತ್ತದೆಯಾ ಅಥವಾ ಸರ್ಕಾರಿ ಆಸ್ಪತ್ರೆಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಬೇರೆ ಬೇರೆ ಮಾನದಂಡ ಇದೆಯಾ:	ನ್ಯಾಷನಲ್ ಬಿಲ್ಡಿಂಗ್ ಕೋಡ್ (NBC) ಪ್ರಕಾರ ಸರ್ಕಾರಿ ಆಸ್ಪತ್ರೆಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಒಂದೇ ಫೈರ್ ಸೇಫ್ಟಿ ನಿಯಮವಿರುತ್ತದೆ. ಯಾವುದೇ ಬೇರೆ ಬೇರೆ ಮಾನದಂಡ ಇರುವುದಿಲ್ಲ.
ಈ)	ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳು (ಸರ್ಕಾರಿ ಮತ್ತು ಖಾಸಗಿ) ಫೈರ್ ಸೇಫ್ಟಿ ಪರ್ಮಿಷನ್‌ಗೆ ಇರುವ ಮಾನದಂಡಗಳನ್ನು ಪೂರ್ಣಗೊಳಿಸಿವೆಯೆ:	ರಾಜ್ಯದಲ್ಲಿನ ಒಟ್ಟು 2,878 ಸರ್ಕಾರಿ ಆಸ್ಪತ್ರೆಗಳಲ್ಲಿ 14 ಸರ್ಕಾರಿ ಆಸ್ಪತ್ರೆಗಳು ಹಾಗೂ 5,850 ಖಾಸಗಿ ಆಸ್ಪತ್ರೆಗಳಲ್ಲಿ 315 ಖಾಸಗಿ ಆಸ್ಪತ್ರೆಗಳು ಫೈರ್ ಸೇಫ್ಟಿ ಪರ್ಮಿಷನ್‌ಗೆ ಇರುವ ಮಾನದಂಡಗಳನ್ನು ಪೂರ್ಣಗೊಳಿಸಿವೆ.
ಉ)	ಯಾವ ಯಾವ ಆಸ್ಪತ್ರೆಗಳಲ್ಲಿ ಕಳೆದ 20 ವರ್ಷಗಳಲ್ಲಿ ಅಗ್ನಿ ಅವಘಡಗಳು ಸಂಭವಿಸಿವೆ? (ಜಿಲ್ಲಾವಾರು ಮಾಹಿತಿ ನೀಡುವುದು)	ಕಳೆದ 20 ವರ್ಷದಲ್ಲಿ 3 ಖಾಸಗಿ ಆಸ್ಪತ್ರೆಗಳಲ್ಲಿ ಅಗ್ನಿ ಅವಘಡಗಳು ಸಂಭವಿಸಿರುತ್ತವೆ. ವಿವರಗಳು ಈ ಕೆಳಕಂಡಂತಿದೆ. • ದಿನಾಂಕ:19.09.2024 ರಂದು ಎಮ್. ಎಸ್ ರಾಮಯ್ಯ ಆಸ್ಪತ್ರೆ ಬೆಂಗಳೂರು ನಗರ. • ದಿನಾಂಕ: 23.09.2024 ರಂದು Dhanvantari Ayurveda Hospital, ಉಡುಪಿ ಜಿಲ್ಲೆ. • ದಿನಾಂಕ: 01.11.2024 ರಂದು ಸ್ಪಂದನ ಆಸ್ಪತ್ರೆ, ಚಿಕ್ಕಮಗಳೂರು. ಕಳೆದ 20 ವರ್ಷದಲ್ಲಿ 5 ಸರ್ಕಾರಿ ಆಸ್ಪತ್ರೆಗಳಲ್ಲಿ ಅಗ್ನಿ ಅವಘಡಗಳು ಸಂಭವಿಸಿರುತ್ತವೆ. ವಿವರಗಳು ಈ ಕೆಳಕಂಡಂತಿದೆ. 1. ದಿ: 02.3.2023 ರಂದು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ (ನವಜಾತ ಶಿಶುಗಳ ಆರೈಕೆ ಘಟಕ) ತಾಯಿ ಮತ್ತು ಮಕ್ಕಳ ವಿಭಾಗದಲ್ಲಿ. 2. ದಿ:13.12.2024 ರಂದು ದಾವಣಗೆರೆ ಜಿಲ್ಲೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಎಸ್ ಎನ್ ಸಿ ಯು ವಿಭಾಗದಲ್ಲಿ. 3. ದಿ: 06.01.2022 ರಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕು ಆಸ್ಪತ್ರೆ. 4. ದಿ: 03.5.2018 ರಂದು ತುಮಕೂರು ಜಿಲ್ಲಾ ಆಸ್ಪತ್ರೆಯ ನವಜಾತ ಶಿಶು ವಿಭಾಗದಲ್ಲಿ. 5. ದಿ: 14.4.2024 ರಂದು ಶಿವಮೊಗ್ಗ ಜಿಲ್ಲೆಯ ಮೆಗ್ಗಾನ್ ಬೋಧನಾ ಆಸ್ಪತ್ರೆಯ ನವಜಾತ ಶಿಶು ವಿಭಾಗದಲ್ಲಿ
ಊ	ಬರ ಪೀಡಿತ ಜಿಲ್ಲೆಗಳಲ್ಲಿ ಒಂದು ಲಕ್ಷ ಲೀಟರ್ ನೀರನ್ನು ಫೈರ್ ಸೇಫ್ಟಿಗಾಗಿ ಕಾಯ್ದಿರಿಸುವುದು ಸರಿಯೇ:	Table of 07 of para-04 of The National Building Code (NBC) ಪ್ರಕಾರ ಕಟ್ಟಡದ ಎತ್ತರಕ್ಕೆ ಅನುಗುಣವಾಗಿ ನೀರಿನ ಶೇಖರಣೆ ಬಗ್ಗೆ ನಮೂದಿಸಲಾಗಿದ್ದು, ಅದರಂತೆ ಕಡ್ಡಾಯವಾಗಿ ನೀರಿನ ಶೇಖರಣೆ ಮಾಡಬೇಕಾಗಿರುತ್ತದೆ. ಅಲ್ಲದೇ ಜನರ ಪ್ರಾಣ ರಕ್ಷಣೆ ಮಾಡುವುದು ಪ್ರಮುಖವಾಗಿರುತ್ತದೆ
ಋ	ರಾಜ್ಯದ ಖಾಸಗಿ ಸಣ್ಣ ಆಸ್ಪತ್ರೆಗಳು ಮತ್ತು ದೊಡ್ಡ ಆಸ್ಪತ್ರೆಗಳಿಗೆ ಫೈರ್ ಸೇಫ್ಟಿ ಪರ್ಮಿಷನ್‌ಗೆ ಒಂದೇ ಶುಲ್ಕ ವಿಧಿಸುತ್ತಿರುವುದು ಸಮಂಜಸವೆ?	ಆದೇಶ ಸಂಖ್ಯೆ:ಹೆಚ್‌ಡಿ 334 ಎಸ್‌ಎಫ್‌ಬಿ 2023 ದಿ:30.03.2024 ಹಾಗೂ ದಿನಾಂಕ:15.07.2024 ರಲ್ಲಿ ಕಟ್ಟಡಗಳ ಎತ್ತರಕ್ಕನುಗುಣವಾಗಿ ವಿಧಿಸಿರುವಂತೆ ಸರ್ಕಾರಿ ಶುಲ್ಕವನ್ನು ಪಾವತಿಸಿಕೊಂಡು ಅಗ್ನಿ ಸಲಹಾ ಪ್ರಮಾಣ ಪತ್ರ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದೆ.

ಆಕುಕ 83 ಎಸ್‌ಎಂಎಂ 2025

ದಿನೇಶ್ ಗುಂಡೂರಾವ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚುಕ್ಕೆ ಗುರುತು ಪ್ರಶ್ನೆ ಸಂಖ್ಯೆ:- 135 (14)ಕ್ಕೆ ಅನುಬಂಧ-1

ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗಳ ವಿವರ

ಕ್ರ.ಸಂ	ಜಿಲ್ಲೆ	ತಾಲ್ಲೂಕು ಆಸ್ಪತ್ರೆ	ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರ	ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ
1	ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ)	3	5	36
2	ಬೆಂಗಳೂರು ಗ್ರಾಂ	4	2	48
3	ರಾಮನಗರ	3	4	62
4	ಚಿತ್ರದುರ್ಗ	5	11	80
5	ದಾವಣಗೆರೆ	4	4	80
6	ಕೋಲಾರ	5	2	63
7	ಚಿಕ್ಕಬಳ್ಳಾಪುರ	5	2	57
8	ಶಿವಮೊಗ್ಗ	6	7	93
9	ತುಮಕೂರು	9	4	144
10	ಬಾಗಲಕೋಟೆ	5	8	49
11	ಬೆಳಗಾವಿ	9	16	138
12	ವಿಜಯಪುರ	4	9	63
13	ಧಾರವಾಡ	3	0	33
14	ಗದಗ	4	2	39
15	ಹಾವೇರಿ	6	5	69
16	ಉ.ಕನ್ನಡ	10	3	83
17	ಬಳ್ಳಾರಿ	2	6	30
18	ವಿಜಯನಗರ	5	7	49
19	ಬೀದರ್	4	8	53
20	ಕಲಬುರಗಿ	6	16	84
21	ಯಾದಗಿರಿ	2	6	41
22	ಕೊಪ್ಪಳ	3	9	46
23	ರಾಯಚೂರು	4	6	50
24	ಚಾಮರಾಜನಗರ	3	3	60
25	ಚಿಕ್ಕಮಗಳೂರು	6	5	90
26	ದಕ್ಷಿಣ ಕನ್ನಡ	4	8	65
27	ಹಾಸನ	7	15	134
28	ಕೊಡಗು	2	7	29
29	ಮಂಡ್ಯ	6	10	113
30	ಮೈಸೂರು	6	9	118
31	ಉಡುಪಿ	2	6	62
	ರಾಜ್ಯದ ಒಟ್ಟು	147	205	2161

ಸಹ ನಿರ್ದೇಶಕರು
(ಆರೋಗ್ಯ & ಯೋಜನೆ)
ಆರೋಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು.

File No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)
Generated from eOffice by MALLIKARJUNA REDDY N - HFW-SO-HEALTH(MP) - SECTION OFFICER - HEALTH AND FAMILY WELFARE SEC on 07/08/20

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-(1)

UPHC - 365

National Urban Health Mission

UPHC LIST

Sl.No	Name of the District	UPHC LIST
1	Bagalkote	Navanagar UPHC
2	Bagalkote	Old City UPHC
3	Bagalkote	Ilkal UPHC
4	Bagalkote	Jamakhandi UPHC
5	Bagalkote	R Banahatti UPHC
6	Bagalkote	Teradal UPHC
7	Bagalkote	Mudhola UPHC
8	Bangalore Rural	UPHC_DODDABALLAPURA
9	Bangalore Rural	UPHC_HOSKOTE
10	Belgaum	UPHC ANGOL
11	Belgaum	UPHC GOKAK
12	Belgaum	UPHC VADAGAON
13	Belgaum	UPHC NIPPANI
14	Belgaum	UPHC MUTTYANATI
15	Belgaum	UPHC VANTAMURI
16	Belgaum	UPHC VINAYAK NAGAR
17	Belgaum	UPHC Kacheri Galli
18	Belgaum	UPHC RAMNAGAR
19	Belgaum	UPHC KHASBAG
20	Belgaum	UPHC RUKMINI NAGAR
21	Belgaum	UPHC CHOUGULEWADI
22	Bellary	UPHC - Millerpet
23	Bellary	UPHC - Mariswamya Mutt
24	Bellary	UPHC - Gandhi Nagar
25	Bellary	UPHC - Brucepet
26	Bellary	UPHC - Bandihatti
27	Bellary	UPHC - Cowl Bazaar
28	Bellary	UPHC - Guggarhatti
29	Bellary	UPHC - Devi Nagar
30	Bellary	UPHC - Siruguppa
31	Vijayanagara	UPHC - Gandhi Chowk
32	Vijayanagara	UPHC - DAM Road(16th Ward)
33	Vijayanagara	UPHC - Akashavani
34	Vijayanagara	UPHC - Chaparadahalli
35	Vijayanagara	UPHC - Ambedkar Nagar
36	Bidar	UPHC 10 BEDDEDMATERNITY CENTER
37	Bidar	UPHC POLICE HEALTH CENTER
38	Bidar	UPHC KUMBARWADA
39	Bidar	UPHC BIDRI COLONY
40	Bidar	UPHC NAUBAD
41	Bidar	UPHC BASAVAKALYAN
42	Bijapur	Shanti Nagar
43	Bijapur	UHC Darga
44	Bijapur	UHC Tazbawadi
45	Bijapur	UHC Yogapur
46	Bijapur	APMC

File No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

47	Bijapur	Ganeshnagar
48	Chamaraja Nagar	UPHC Kollegal
49	Chamaraja Nagar	UPHC Chamarajanagar
50	Chikkaballapur	UPHC Chikkaballapura
51	Chikkaballapur	UPHC Gowribidanur
52	Chikkaballapur	UPHC Chintamani
53	Chikkaballapur	UPHC Shidlaghatta
54	Chikmagalur	Uraban Health center A
55	Chikmagalur	Uraban Health center B
56	Chitradurga	UPHC NEHRU NAGARA
57	Chitradurga	UPHC MARUTHI NAGARA
58	Chitradurga	UPHC BUDDHA NAGARA
59	Chitradurga	UPHC Challakere
60	Chitradurga	UPHC Hiriyur
61	Dakshina Kannada	EKKURU
62	Dakshina Kannada	PADIL
63	Dakshina Kannada	SHAKTHINAGAR
64	Dakshina Kannada	LADYHILL
65	Dakshina Kannada	KULOOR
66	Dakshina Kannada	SURATHKAL
67	Dakshina Kannada	UPHC KULAI
68	Dakshina Kannada	KASBA BEGRE
69	Dakshina Kannada	UPHC PUTTUR
70	Dakshina Kannada	UPHC BANTWAL
71	Dakshina Kannada	BUNDER
72	Dakshina Kannada	UPHC JEPPU
73	Dakshina Kannada	ULLAL
74	Davanagere	HKR NAGAR
75	Davanagere	SMK NAGAR
76	Davanagere	BASHA NAGAR
77	Davanagere	BHARATH COLONY
78	Davanagere	AZAD NAGAR
79	Davanagere	UFWC-1
80	Davanagere	UFWC-2
81	Davanagere	UFWC-3
82	Davanagere	BENKI NAGAR
83	Davanagere	NITUVALLI
84	Davanagere	HARLAPURA
85	Dharwad	BARAKOTRI UPHC
86	Dharwad	HDMC MATERNITY HOSPITAL UPHC
87	Dharwad	MADARMADDI UPHC
88	Dharwad	NEHARU NAGAR UPHC
89	Dharwad	POLICE HEAD QUARTERS UPHC
90	Dharwad	PUROHIT NAGAR UPHC
91	Dharwad	ANAND NAGAR UPHC
92	Dharwad	AYODHYA NAGAR UPHC
93	Dharwad	DODDAKERI UPHC
94	Dharwad	GANDHI WAD UPHC
95	Dharwad	HDMC GANESH PETH HOSPITAL UPHC

File No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)
Generated from eOffice by MALLIKARJUNA REDDY N, HFW-SO-HEALTH1(MR), SECTION OFFICER, HEALTH AND FAMILY WELFARE SEC on 07/08/202

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

96	Dharwad	HDMC NAVANAGARALOPETHIC HOSPITAL UPHC
97	Dharwad	HDMC OLD HUBLI HOSPITAL UPHC
98	Dharwad	HDMC TORAVI GALLI HOSPITAL UPHC
99	Dharwad	HEGGERI UPHC
100	Dharwad	MEDARONI UPHC
101	Dharwad	HOME CHITAGUPPI CORPORATIONHOSPITAL UPHC
102	Dharwad	RAMALINGESHWAR NAGAR UPHC
103	Dharwad	SADARSOPA UPHC
104	Gadag	UPHC Gadag
105	Gadag	UPHC Betageri
106	Gadag	UPHC Rehamath Nagar
107	Gulbarga	Aland UPHC
108	Gulbarga	Chittapur UPHC
109	Gulbarga	Shahabad UPHC
110	Gulbarga	WADI
111	Gulbarga	Ashoknagar UPHC
112	Gulbarga	Heerapur UPHC
113	Gulbarga	ICDS UPHC
114	Gulbarga	Khanapur UPHC
115	Gulbarga	Makhatmpur UPHC
116	Gulbarga	Manikeshwari UPHC
117	Gulbarga	New Rehamt nagar UPHC
118	Gulbarga	SHABAZARA UPHC
119	Gulbarga	SIVAJINAGARA UPHC
120	Gulbarga	UFWC UPHC
121	Gulbarga	Sedam UPHC
122	Hassan	Uphc pensinmohalla
123	Hassan	Uphc Beernahallikere
124	Hassan	Uphc Krishna Hospital
125	Hassan	NUHM ARASIKERE URBAN
126	Haveri	UPHC -Haveri
127	Haveri	UPHC -1 Ranebennur
128	Haveri	UPHC -2 Ranebennur
129	Haveri	UPHC -Savanur
130	Kodagu	uphc kodagu
131	Kolar	UHC -NUGALABANDE
132	Kolar	DHARGMOHALL
133	Kolar	UPHC KOLAR
134	Kolar	RAHAMATHNAGAR
135	Kolar	GANDHINAGAR
136	Kolar	UHC BANGARPET
137	Kolar	UHC CORMANDEL
138	Kolar	UHC MARIKUPPAM
139	Kolar	UHC OPET
140	Koppal	CMC Koppal
141	Koppal	Gangavathi Ambedkar Nagar
142	Koppal	Gangavathi
143	Mandya	GUTHALU UPHC
144	Mandya	KYATHUMGERE UPHC

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

145	Mandya	Shankarpura UPHC
146	Mysore	UPHC Bannimantap
147	Mysore	UPHC N R MOHALLA
148	Mysore	UPHC Subramanyanagara
149	Mysore	UPHC Kumbarakoppalu
150	Mysore	UPHC SHANTINAGARA
151	Mysore	UPHC Eeranagere
152	Mysore	UPHC Giriyabovi Palya
153	Mysore	UPHC KYATHAMARANAHALLI MAT HOM
154	Mysore	UPHC LASHKAR B GANDHINAGARA
155	Mysore	UPHC VISHWESHWARA NAGARA
156	Mysore	UPHC Mat Hosp Nachanallipalya
157	Mysore	UPHC RAJENDRANAGARA
158	Mysore	NG Nanjangudu UPHC
159	Mysore	HUN Hunsur UPHC
160	Mysore	UPHC INDRANAGARA
161	Mysore	UPHC HHMBG
162	Mysore	UPHC Kuvempunagara
163	Mysore	UPHC Chamundipuram
164	Mysore	UPHC NAZARBAD
165	Mysore	UPHC Krishnamurthi Puram
166	Mysore	UPHC OLD AGRAHARA
167	Mysore	UPHC SARASWATIPURAM
168	Mysore	UPHC T.K.LAYOUT
169	Raichur	UPHC Siyatalab
170	Raichur	UPHC Zaheerabad
171	Raichur	UPHC Harijanwada
172	Raichur	UPHC LBS Nagar
173	Raichur	UPHC Ragimangedda
174	Raichur	UPHC Sindhanur
175	Ramanagar	UHC CHANNAPATTANA
176	Ramanagar	UHC_KANAKAPUR
177	Ramanagar	UHC MEHBOOBNAGARA
178	Ramanagar	UHC Rayaradoddi
179	Shimoga	BAPUJI NAGARA UPHC
180	Shimoga	VIDYANAGARA UPHC
181	Shimoga	BOMMANAKATTE UPHC
182	Shimoga	KOTE UPHC
183	Shimoga	SIGEHATTI UPHC
184	Shimoga	SRI RAM NAGARA UPHC
185	Shimoga	TUNGANAGARA UPHC
186	Shimoga	URUGADURU UPHC
187	Shimoga	Neharu Nagara
188	Shimoga	Ashwathngara
189	Shimoga	Ujjinipura
190	Shimoga	Jannapura
191	Shimoga	UPHC SUBHASHNAGAR
192	Shimoga	UPHC CHANNAKESAVA NAGARA
193	Tumkur	Kunigal UPHC

File No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)

Generated from eOffice by MALLIKARJUNA REDDY N , HFW-SO-HEALTH1(MB), SECTION OFFICER, HEALTH AND FAMILY WELFARE SEC on 07/08/20

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

194	Tumkur	Sira UPHC
195	Tumkur	Tiptur UPHC
196	Tumkur	Agrahara UPHC
197	Tumkur	KOTITHOPU UPHC
198	Tumkur	SHETTYHALLI GATE UPHC
199	Udupi	UPHC UDUPI
200	Udupi	UPHC Manipal
201	Uttara Kannada	UPHC DANDELI
202	Uttara Kannada	UPHC BAITHKOL
203	Uttara Kannada	UPHC sirsi
204	Yadgir	Shahapur UPHC
205	Yadgir	Surapur UPHC
206	Yadgir	Yadgir UPHC
207	BBMP	Austin Town Maternity Home
208	BBMP	AUSTIN TOWN UFWC
209	BBMP	BHUVANESHWARINAGAR HC
210	BBMP	C H HALLI (NGO)
211	BBMP	COX TOWN UFWC
212	BBMP	cox town Maternity Home
213	BBMP	D J HALLI UFWC
214	BBMP	D J HALLI MAT HOME
215	BBMP	Ganganagar Maternity Home
216	BBMP	GANGANAGAR UFWC
217	BBMP	KG HALLI HC
218	BBMP	KODIHALLI HC
219	BBMP	M R Palya Maternity Home
220	BBMP	M R PALYA UFWC
221	BBMP	MURPHY TOWN HC
222	BBMP	NEW BAGALUR LAYOUT HC
223	BBMP	OLD BYAPPANAHALLI HC
224	BBMP	ROBERTSON STREET HC
225	BBMP	SANJAYNAGAR DISP
226	BBMP	SHANTHINAGAR UFWC
227	BBMP	Shanthinagar Mat Home
228	BBMP	SULTHAN PALYA HC
229	BBMP	TASKAR TOWN HC
230	BBMP	ULSOOR UFWC
231	BBMP	VASANTHNAGAR Disp
232	BBMP	Coxtown Dispensary
233	BBMP	DOMLUR UPHC
234	BBMP	Lingaraji Puram Uphc
235	BBMP	V NAGENHALLI
236	BBMP	KACHERKANAHALLI UPHC
237	BBMP	BANASAWADI UPHC
238	BBMP	DR. B R Ambedkar UPHC(SHANTHALANAGAR)
239	BBMP	HEROHALLI UPHC
240	BBMP	THIPPENAHALLI
241	BBMP	JALAHALLI UPHC
242	BBMP	MATHIKERE UPHC

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

341	BBMP	AGRAHARALAYOUT
342	BBMP	KODIGEHALLI
343	BBMP	AMRUTHAHALLI
344	BBMP	SAHAKARNAGARA
345	BBMP	A Narayanapura UPHC
346	BBMP	DODDAKANNALLI UPHC
347	BBMP	DOODDANEKKUNDI 24X7 UPHC
348	BBMP	Garudacharpalya UPHC
349	BBMP	GUNJURU UPHC
350	BBMP	Haggaduru UPHC
351	BBMP	K NARAYANAPURA UPHC
352	BBMP	KADUGODI 24X7 UPHC
353	BBMP	MARTHAHALLI UPHC
354	BBMP	Ramamurthynagara UPHC
355	BBMP	VARTHURU 24X7 UPHC
356	BBMP	VIBUTHIPURA UPHC
357	BBMP	Vijanapura UPHC
358	BBMP	YAMLURU UPHC
359	BBMP	BCHFWS_RH_BANASANKARI
360	BBMP	BCHFWS_RH_H SIDHHAIAH ROAD
361	BBMP	BCHFWS_RH_HOSAHALLI
362	BBMP	BCHFWS_RH_SRIRAMPURA
363	BBMP	BCHFWS_RH_GORIPLAYA
364	BBMP	Ulsooru Referal Hospital
365	BBMP	BCHFWS_MH_POBBATHI

24/08/25.

DEPUTY DIRECTOR
National Urban Health Mission
Arogya Soudha, Bengaluru-560023.

File No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)
Generated from eOffice by MALLIKARJUNA REDDY N - HFW-SO-HEALTH(MP) - SECTION OFFICER, HEALTH AND FAMILY WELFARE SEC

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ (೩)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಳಪಟ್ಟ ಜಿಲ್ಲಾ ಆಸ್ಪತ್ರೆಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಜಿಲ್ಲಾ ಆಸ್ಪತ್ರೆ ಹೆಸರು
1	ಬಾಗಲಕೋಟೆ	ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ
2	ಬಳ್ಳಾರಿ	ಜಿಲ್ಲಾ ಆಸ್ಪತ್ರೆ, ಬಳ್ಳಾರಿ
3	ಬೆಂಗಳೂರು ನಗರ ಪ್ರಮುಖ ಆಸ್ಪತ್ರೆಗಳು	ಕೆ.ಸಿ. ಜನರಲ್ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ, ಜಯನಗರ, ಸರ್ ಸಿ ವಿ ರಾಮನ್ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ.
4	ಚಿತ್ರದುರ್ಗ	ಜಿಲ್ಲಾ ಆಸ್ಪತ್ರೆ,ಚಿತ್ರದುರ್ಗ (ಚಿತ್ರದುರ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಹಸ್ತಾಂತರಿಸುವ ಪ್ರಕಿಯೆ ಜಾರಿಯಲ್ಲಿದೆ)
5	ದಕ್ಷಿಣ ಕನ್ನಡ	ವೆನ್ ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
6	ದಾವಣಗೆರೆ	ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ
7	ಧಾರವಾಡ	ಜಿಲ್ಲಾ ಆಸ್ಪತ್ರೆ, ಧಾರವಾಡ
8	ಕೋಲಾರ	ಶ್ರೀ ನರಸಿಂಹ ರಾಜ ಜಿಲ್ಲಾ ಆಸ್ಪತ್ರೆ, ಕೋಲಾರ
9	ಮೈಸೂರು	ಜಿಲ್ಲಾ ಆಸ್ಪತ್ರೆ, ಮೈಸೂರು
10	ರಾಮನಗರ	ಜಿಲ್ಲಾ ಆಸ್ಪತ್ರೆ, ರಾಮನಗರ
11	ತುಮಕೂರು	ಜಿಲ್ಲಾ ಆಸ್ಪತ್ರೆ, ತುಮಕೂರು
12	ಉಡುಪಿ	ಜಿಲ್ಲಾ ಆಸ್ಪತ್ರೆ, ಉಡುಪಿ
13	ವಿಜಯಪುರ	ಜಿಲ್ಲಾ ಆಸ್ಪತ್ರೆ, ವಿಜಯಪುರ

ಜಂಟಿ ನಿರ್ದೇಶಕರು (ಪ್ರಭಾರಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ
ಅರೋಗ್ಯಸೌಧ, ದೊಡ್ಡ ರಸ್ತೆ, ಬೆಂಗಳೂರು-23

File No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)

Generated from eOffice by MALLIKARJUNA REDDY N, HFW-SO-HEALTH1(MP), SECTION OFFICER, HEALTH AND FAMILY WELFARE SEC

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-B (3)

ಕೆಪಿಎಂಇ ಕಾಯ್ದೆಯಡಿ ಆನ್‌ಲೈನ್ ಮುಖೇನಾ ನೋಂದಣಿಗೊಂಡ ಖಾಸಗಿ ಆಸ್ಪತ್ರೆಗಳ ಜಿಲ್ಲಾವಾರು ಮಾಹಿತಿ		
Sl No	**District**	**Hospital Count**
1	Bagalkot	266
2	Ballari	114
3	Belagavi	521
4	Bengaluru Rural	129
5	Bengaluru Urban	1616
6	Bidar	159
7	Chamarajanagar	20
8	Chikkaballapura	60
9	Chikkamagaluru	59
10	Chitradurga	94
11	Dakshina Kannada	157
12	Davanagere	106
13	Dharwad	143
14	Gadag	73
15	Hassan	69
16	Haveri	116
17	Kalaburagi	384
18	Kodagu	24
19	Kolar	111
20	Koppal	76
21	Mandya	71
22	Mysuru	249
23	Raichur	174
24	Ramanagara	67
25	Shivamogga	144
26	Tumakuru	177
27	Udupi	78
28	Uttara Kannada	90
29	Vijayanagara	113
30	Vijayapura	299
31	Yadgir	91
Total		5850

le No. HFW/83/SMM/2025-HEALTH 1-HEALTH AND FAMILY WELFARE SEC (Computer No. 1859474)
enerated from eOffice by MALLIKARJUNA REDDY N., HFW-SO-HEALTH1(MP), SECTION OFFICER, HEALTH AND

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವಂತಹ ಉತ್ತರಗಳನ್ನು ನೋಡಿದರೆ, ನಿಜವಾಗಿಯೂ ಆತಂಕಕಾರಿ ಅಂಕಿ-ಅಂಶಗಳನ್ನು ನಾವು ನೋಡಬಹುದಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಇರುವಂತಹ 2,878 ಸರ್ಕಾರಿ ಆಸ್ಪತ್ರೆಗಳಲ್ಲಿ ಕೇವಲ 14 ಆಸ್ಪತ್ರೆಗಳಲ್ಲಿ ಮಾತ್ರ fire safety clearance ಆಗಿರುತ್ತದೆ. ಅಂದರೆ, ಶೇಕಡ ೦೦.5 ರಷ್ಟು ಮಾತ್ರ. ಆದರೆ, ನಮ್ಮ ರಾಜ್ಯದಲ್ಲಿ 5,850 ಖಾಸಗಿ ಆಸ್ಪತ್ರೆಗಳಿದ್ದು ಅದರಲ್ಲಿ 315 ಆಸ್ಪತ್ರೆಗಳು ಅಂದರೆ, ಕೇವಲ ಶೇಕಡ ೦.೦5ರಷ್ಟು ಮಾತ್ರ fire safety clearance ಆಗಿರುತ್ತದೆ. ಕಳೆದ 20 ವರ್ಷಗಳ ಅವಧಿಯಲ್ಲಿ ಎಷ್ಟು ಅಗ್ನಿ ಅವಘಡಗಳು ಆಗಿವೆ ಎಂಬ ನನ್ನ ಪ್ರಶ್ನೆಗೆ 5 ಸರ್ಕಾರಿ ಆಸ್ಪತ್ರೆಗಳಲ್ಲಿ ಅಗ್ನಿ ಅವಘಡಗಳು ಆಗಿರುತ್ತವೆ. ಅದರಲ್ಲಿ ಏಪ್ರಿಲ್ 2024ರಲ್ಲಿ ಶಿವಮೊಗ್ಗ ಜಿಲ್ಲೆಯ ಮೆಗ್ಗಾನ್ ಆಸ್ಪತ್ರೆಯಲ್ಲಿ ಅಗ್ನಿ ಅವಘಡ ಆಗಿತ್ತು. ಆ ಸಮಯದಲ್ಲಿ ಐಸಿಯುನಲ್ಲಿದ್ದಂತಹ 28 ನವಜಾತು ಶಿಶುಗಳು ಮತ್ತು ಐಸಿಯುನಲ್ಲಿದ್ದಂತಹ 18 ದೊಡ್ಡ ಮಕ್ಕಳನ್ನು ಸರ್ಜಿ ಆಸ್ಪತ್ರೆಗೆ ಅಲ್ಲಿನ ಕಮೀಷನರ್ ಆಗಿದ್ದಂತಹ ಶ್ರೀ ಶಿವಕುಮಾರ್‌ರವರು ಶಿಫ್ಟ್ ಮಾಡಿದ್ದರು. ಆ ಸಮಯದಲ್ಲಿ ಸುಮಾರು 46 ಮಕ್ಕಳ ಜೀವವನ್ನು ಉಳಿಸುವಂತಹ ಜವಾಬ್ದಾರಿ ನಮ್ಮ ಮೇಲಿತ್ತು. ಅದರಂತೆ, ಸರ್ಜಿ ಆಸ್ಪತ್ರೆಯಲ್ಲಿ ಆ ಮಕ್ಕಳ ಜೀವ ಉಳಿಸಿರುವುದನ್ನು ಜ್ಞಾಪಿಸಿಕೊಳ್ಳುತ್ತೇನೆ. ಕಳೆದ 20 ವರ್ಷಗಳಲ್ಲಿ ಸುಮಾರು 5 ಸರ್ಕಾರಿ ಆಸ್ಪತ್ರೆಗಳಲ್ಲಿ ಅಗ್ನಿ ಅವಘಡ ಆಗಿರುತ್ತದೆ.

(ಮುಂದು)

(612) 11.08.2025 2.00 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

ಡಾ॥ ಧನಂಜಯ ಸರ್ಜಿ (ಮುಂದು):-

ಆದ್ದರಿಂದ ಮಾನ್ಯ ಸಚಿವರಿಗೆ 4 ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಮೊದಲನೆಯದಾಗಿ, ಎಲ್ಲಾ ಸರ್ಕಾರಿ ಆಸ್ಪತ್ರೆಯ ಫೈರ್ ಸೇಫ್ಟಿ ಕ್ಲಿಯರೆನ್ಸ್‌ನ್ನು ಪೂರ್ಣಗೊಳಿಸಲು ಎಷ್ಟು ಸಮಯಾವಕಾಶ ಬೇಕು? ಎರಡನೆಯದಾಗಿ, ನ್ಯಾಷನಲ್ ಬಿಲ್ಡಿಂಗ್ ಕೋಡ್ (ಎನ್.ಬಿ.ಸಿ) ಪ್ರಕಾರ ಸರ್ಕಾರಿ ಆಸ್ಪತ್ರೆಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಒಂದೇ ಫೈರ್ ಸೇಫ್ಟಿ ನಿಯಮವಿರುತ್ತದೆ ಎಂದು ಉತ್ತರದಲ್ಲಿ ತಿಳಿಸಿದ್ದು, ಸರ್ಕಾರಿ ಆಸ್ಪತ್ರೆಗಳಿಗೆ ಫೈರ್ ಕ್ಲಿಯರೆನ್ಸ್‌ಗೆ ಅವಕಾಶ ಕೊಡುತ್ತೀರಿ, ಅಷ್ಟು ಕಾಲಾವಕಾಶವನ್ನು ಖಾಸಗಿ ಆಸ್ಪತ್ರೆಗಳಿಗೂ ಕೊಡಬೇಕೆಂದು ಹೇಳಬಯಸುತ್ತೇನೆ. ಮೂರನೆಯದಾಗಿ, AB-ARK (Ayushman Bharat Arogya Karnataka Scheme) ಯೋಜನೆಯಡಿ 5 ವರ್ಷಗಳಲ್ಲಿ ಸುಮಾರು 63 ಲಕ್ಷ ರೋಗಿಗಳಿಗೆ ಆಗಸ್ಟ್ 23 ರ ಅಂಕಿ ಅಂಶದ ಪ್ರಕಾರ ಚಿಕಿತ್ಸೆ ನೀಡಲಾಗಿದ್ದು, ಅದರಲ್ಲಿ ಕಾಂಪ್ಲಿಕೇಟೆಡ್ ಕೇಸಸ್ ಎಲ್ಲವೂ ಆಯುಷ್ಮಾನ್ ಭಾರತ್ ಯೋಜನೆಯಡಿ ಇರುವಂಥ ಖಾಸಗಿ ಆಸ್ಪತ್ರೆಗಳಿಗೆ ರೆಫರೆನ್ಸ್ ಆಗುತ್ತವೆ. ಇದರಿಂದ ಲಕ್ಷಾಂತರ ರೋಗಿಗಳಿಗೆ ಅನ್ಯಾಯವಾಗುತ್ತದೆ. ಏಕೆಂದರೆ, Karnataka Private

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Medical Establishments (KPME) Act ಪ್ರಕಾರ ಯಾರಿಗೂ ನವೀಕರಣಕ್ಕೆ ಅವಕಾಶ ಕೊಡುತ್ತಿಲ್ಲ. ಹಾಗಾಗಿ, ಲಕ್ಷಾಂತರ ರೋಗಿಗಳಿಗೆ ಅನ್ಯಾಯವಾಗುತ್ತದೆ. ಇದಕ್ಕೆ ಸಮಂಜಸವಾದ ಉತ್ತರ ತಮ್ಮಿಂದ ಬರಬೇಕು. ನಾಲ್ಕನೆಯದಾಗಿ, ಒಂದು ಲಕ್ಷದಷ್ಟು ಸಣ್ಣ ಕ್ಲಿನಿಕ್‌ನಿಂದ ಹಿಡಿದು,...

ಸಭಾಪತಿಯವರು:- ಮಾನ್ಯ ಧನಂಜಯ ಸರ್ಜಿರವರೇ ತಾವು ಪ್ರಶ್ನೆ ಕೇಳಿದ್ದು ಸಾಕು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಧನಂಜಯ ಸರ್ಜಿರವರು ಈ ಒಂದು ಪ್ರಮುಖವಾದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ, ಫೈರ್ ಸೇಫ್ಟಿ ಕ್ಲಿಯರೆನ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದು, 10 ವರ್ಷ, 20 ವರ್ಷ, 30 ವರ್ಷ, 40 ವರ್ಷಗಳಷ್ಟು ಹಳೆಯ ಸರ್ಕಾರಿ ಆಸ್ಪತ್ರೆಗಳೆಲ್ಲವೂ ಇವೆ. ಹಾಗಾಗಿ, ಆ ಆಸ್ಪತ್ರೆಗಳೆಲ್ಲವನ್ನೂ ಹೊಸ ಮಾನದಂಡದಡಿ ನೋಡಿದಾಗ ಅವೆಲ್ಲಾ ಆಸ್ಪತ್ರೆಗಳಿಗೆ ಫೈರ್ ಸೇಫ್ಟಿ ಕ್ಲಿಯರೆನ್ಸ್ ಅಷ್ಟು ಸುಲಭವಾಗಿ ಸಿಗುವುದಿಲ್ಲ. ಅದಕ್ಕೆ ಬೇಕಾದಂಥ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಸಂಖ್ಯೆಯೂ ಬಹಳ ಕಡಿಮೆ ಇರುತ್ತದೆ. ಹೊಸದಾಗಿ ನಿರ್ಮಾಣ ಮಾಡುವಂಥ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಆರೋಗ್ಯ ಕೇಂದ್ರಗಳಲ್ಲಿ ಎಲ್ಲಾ ಹೊಸ ಫೈರ್ ಸೇಫ್ಟಿ norms ಪ್ರಕಾರ ಕಟ್ಟಬೇಕೆಂದು ಮಾಡುತ್ತಿದ್ದೇವೆ. ಹಳೆಯ ಆಸ್ಪತ್ರೆಗಳ ಫೈರ್ ಸೇಫ್ಟಿ ಕ್ಲಿಯರೆನ್ಸ್ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದು, ಅದಕ್ಕೆ ಒಂದು ಪಟ್ಟಿಯನ್ನು ಮಾಡಿದ್ದು, ಹಳೆಯ ಆಸ್ಪತ್ರೆಯ ಫೈರ್ ಸೇಫ್ಟಿ ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾದರೆ, ಸುಮಾರು ರೂ.೫೫೦ ಕೋಟಿ ಬೇಕಾಗುತ್ತದೆ. ಅದಕ್ಕಾಗಿ ಏಕಕಾಲದಲ್ಲಿಯೇ ಮಾಡುತ್ತೇವೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ, ಕಾಲಕ್ರಮೇಣ ಹಂತಹಂತವಾಗಿ ಮಾಡುವುದಕ್ಕೆ ಚಿಂತನೆ ಮಾಡುತ್ತಿದ್ದೇವೆ. ಅದಲ್ಲದೇ ಇತ್ತೀಚಿನ ದಿವಸಗಳಲ್ಲಿ ಹೆಚ್ಚು ಗಮನಕ್ಕೆ ಬಂದಿದೆ. ಏಕೆಂದರೆ, ಕಳೆದ ವರ್ಷದಲ್ಲಿಯೇ ಮೂರ್ನಾಲ್ಕು ಆಸ್ಪತ್ರೆಗಳಲ್ಲಿ ಇಂತಹ ಅವಗಡಗಳು ನಡೆದಿವೆ. ಆ ಕಾರಣದಿಂದ ಕಾರ್ಯದರ್ಶಿಗಳು ಹಾಗೂ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆಗಳು ನಡೆದು, ಮುಂದಿನ ದಿವಸಗಳಲ್ಲಿ ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕೆಂಬ ನಿಟ್ಟಿನಲ್ಲಿ ಹೆಚ್ಚು ಗಮನಹರಿಸಲಾಗಿದೆ. ಇದು ಖಾಸಗಿ ಆಸ್ಪತ್ರೆ ಹಾಗೂ ಸರ್ಕಾರಿ ಆಸ್ಪತ್ರೆ ಎರಡಕ್ಕೂ ಅನ್ವಯಿಸುತ್ತದೆ. ಹಂತಹಂತವಾಗಿ ನಾವು ಸಹ ಮಾಡಬೇಕಾಗುತ್ತದೆ. ಖಾಸಗಿ ಆಸ್ಪತ್ರೆಯವರು ಸಹ ಅವರಿಗೆ ಇರುವಂಥ ವ್ಯವಸ್ಥೆ ಅಡಿಯಲ್ಲಿ ಫೈರ್ ಸೇಫ್ಟಿ ಕ್ಲಿಯರೆನ್ಸ್ ತೆಗೆದುಕೊಳ್ಳುವಂಥ ಕೆಲಸ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಧನಂಜಯ ಸರ್ಜಿ:– ಮಾನ್ಯ ಸಭಾಪತಿಯವರೇ, ಆದರೆ ಕಾಲಾವಕಾಶವೂ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಿಗೆ ಒಂದೇ ಇರಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ಜಾಸ್ತಿ ಸಮಯವನ್ನು ತೆಗೆದುಕೊಂಡು, ಖಾಸಗಿ ಆಸ್ಪತ್ರೆಗಳಿಗೆ ಬೇಗ ಮುಗಿಸಿ ಎಂದು ಹೇಳುವಂಥದ್ದಾಗಬಾರದು. ಏಕೆಂದರೆ, ನ್ಯಾಷನಲ್ ಬಿಲ್ಡಿಂಗ್ ಕೋಡ್ ಇಬ್ಬರಿಗೂ ಒಂದೇ ಇರುವುದರಿಂದ ದಯವಿಟ್ಟು ಅದನ್ನು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ಫೈರ್ ಸೇಫ್ಟಿ ಇಲಾಖೆಯವರೊಂದಿಗೂ ಮಾತನಾಡುತ್ತಿದ್ದೇವೆ. ಅವರ ಹಂತದಲ್ಲಿಯೂ ಸಹ ಅನೇಕ ಕಡೆ ಖಾಸಗಿ ಆಸ್ಪತ್ರೆಯ ಹಳೆಯ ಕಟ್ಟಡಗಳಿವೆ ಮತ್ತು ಕ್ಲಿನಿಕ್‌ಗಳು, ನರ್ಸಿಂಗ್ ಹೋಮ್‌ಗಳು ಹಳೆಯದಾಗಿದ್ದು, ಬಾಡಿಗೆಯಲ್ಲಿರುತ್ತಾರೆ. ಹಾಗಾಗಿ, ಅವರಿಗೂ ಸಹ ಸಮಸ್ಯೆ ಇದೆ. ಅದಕ್ಕಾಗಿ ಫೈರ್ ಸೇಫ್ಟಿ ಇಲಾಖೆಯವರಿಗೆ ಇದನ್ನು ಸರಳೀಕರಣ ಮಾಡಲಿಕ್ಕೆ ಮತ್ತು ಅವರಿಗೂ practical ಆಗಿ... ಈಗ ಇರುವಂಥ ಫೈರ್ ಸೇಫ್ಟಿ ಕೋಡ್ ಏನಿದೆ, ಅದಕ್ಕೆ ಬಹಳ ಷರತ್ತುಗಳಿವೆ. ಏಕೆಂದರೆ, ಫೈರ್ ಸೇಫ್ಟಿಗೆ ಬಹಳ ಒತ್ತು ಕೊಟ್ಟಿದ್ದಾರೆ. ಸೇಫ್ಟಿಗೆ ಒತ್ತು ಕೊಡುವುದರಲ್ಲಿ ಏನಾಗಿದೆ ಎಂದರೆ, ಷರತ್ತುಗಳು ಬಹಳ rigid ಇರುವ ಕಾರಣದಿಂದ ಹಳೆಯ ಆಸ್ಪತ್ರೆಗಳಿಗೆ ಸ್ವಲ್ಪ ಸಮಸ್ಯೆಯಾಗುತ್ತಿದ್ದು, ಇಲ್ಲವೆಂದು ಹೇಳುತ್ತಿಲ್ಲ. ಈ ಸಂಬಂಧ ನಾನು ಕೂಡ ಎ.ಡಿ.ಜಿ.ಪಿ., ಫೈರ್ ಫೋರ್ಸ್‌ನವರ ಜೊತೆ ಸಭೆಯನ್ನು ನಡೆಸಿದ್ದು, ನಮ್ಮ ಆಸ್ಪತ್ರೆಯ ಸಮಿತಿಯವರೆಲ್ಲರೂ ಆ ಸಭೆಗೆ ಬಂದಿದ್ದರು. ಅದರಂತೆ ಅದು ಅವರ ಹಂತದಲ್ಲಿದೆ. ಜೊತೆಗೆ ಗೃಹ ಇಲಾಖೆಯವರೊಂದಿಗೂ ಮಾತನಾಡಿದ್ದು, ಅದಕ್ಕೆ ಎಷ್ಟು ಸಾಧ್ಯವಾಗುತ್ತದೆ, ಅಷ್ಟು ಸಹಾಯ ಮಾಡುವುದಕ್ಕೆ ನಾನು ಸಹ ಪ್ರಯತ್ನ ಮಾಡುತ್ತಿದ್ದೇನೆ. ಆದರೆ, ಈಗಾಗಲೇ ಇರುವಂಥ ಖಾಸಗಿ ಆಸ್ಪತ್ರೆಗಳಿಗೆ ನವೀಕರಣಕ್ಕಾಗಿ ಸಮಯಾವಕಾಶ ನೀಡುತ್ತಿದ್ದೇವೆ.

ಡಾ॥ ಧನಂಜಯ ಸರ್ಜಿ:– ಮಾನ್ಯ ಸಭಾಪತಿಯವರೇ, ನವೀಕರಣಕ್ಕೆ ಸಮಯಾವಕಾಶವನ್ನು ನೀಡುತ್ತಿಲ್ಲ.

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ನವೀಕರಣ ಮಾಡಲು ಈಗಾಗಲೇ ಅಪ್ಲೈ ಮಾಡಿರುವವರಿಗೆ ಸಮಯಾವಕಾಶ ಕಲ್ಪಿಸಿದ್ದೇವೆ. ಇನ್ನೂ ಎರಡು ತಿಂಗಳು ಸಮಯಾವಕಾಶ ಕೊಟ್ಟಿದ್ದೇವೆ. ಅದರಂತೆ ಎರಡು ಬಾರಿ ಅವರಿಗೆ ಸಮಯಾವಕಾಶ ಕೊಟ್ಟಿದ್ದೇವೆ. ಆದರೆ, ಗೃಹ ಇಲಾಖೆಯವರೊಂದಿಗೆ ಕುಳಿತುಕೊಂಡು, ಈ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಡಾ॥ ಧನಂಜಯ ಸರ್ಜಿ ಹಾಗೂ ನಮ್ಮ ಆಸ್ಪತ್ರೆಯ ಅಸೋಸಿಯೇಷನ್ ಮತ್ತು ಫೈರ್ ಸೇಫ್ಟಿ ಇಲಾಖೆಯವರೊಂದಿಗೆ ಮಾತನಾಡುತ್ತೇನೆ. ನೇರವಾಗಿ ನಮಗೆ ಬಾರದೇ ಇದ್ದರೂ ಅವರೆಲ್ಲರ ಜೊತೆ ಕುಳಿತುಕೊಂಡು ಮಾತನಾಡುತ್ತೇನೆ. ಏಕೆಂದರೆ, ಎಲ್ಲಾ ಬಿಲ್ಡಿಂಗ್‌ಗಳಿಗೂ ಒಂದೇ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನದಂಡ ಇದೆ. ಅದು ಆಸ್ಪತ್ರೆ ಇರಲಿ, ಕಾಂಪ್ಲೆಕ್ಸ್ ಇರಬಹುದು, ಯಾವುದೇ ಆಗಿರಬಹುದು. ಅದಕ್ಕಾಗಿ ಅವರೊಂದಿಗೆ ಮಾತನಾಡಿ, ಈ ಹಳೆಯ ಖಾಸಗಿ ಆಸ್ಪತ್ರೆಗಳಿಗೂ ಸಹಾಯ ಮಾಡುವಂಥ ಕೆಲಸ ಮಾಡುತ್ತೇನೆ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೇ, ರಾತ್ರಿ ವೇಳೆ ಫೈರ್ ಇಂಜಿನ್ sound ಬರುತ್ತಿರುತ್ತದೆ. ಅದಕ್ಕಾಗಿ 'Fire Safety Act for Medical Establishment' ಎಂದು ಹೇಗೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ, ದಯವಿಟ್ಟು ಆ ತರಹ ಅದಕ್ಕೆ ಒಂದು ಕಾನೂನನ್ನು ಸರ್ಕಾರದಿಂದ ಮಾಡಬೇಕು. ವೈದ್ಯರಿಗೆ ಬಹಳ ಸಮಸ್ಯೆಯಾಗಿದ್ದು, ದಯವಿಟ್ಟು ಇದಕ್ಕೆ ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಸಭಾಪತಿಯವರೇ, ಪರ್ಯಾಯ ವ್ಯವಸ್ಥೆಯನ್ನು ಸರ್ಕಾರದಿಂದ ಹುಡುಕುವಂಥ ಪ್ರಯತ್ನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 35

ಮಂಗಳೂರು ತಾಲ್ಲೂಕಿನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಬ್ ಸ್ಟೇಷನ್ ನಿರ್ಮಿಸುವ ಬಗ್ಗೆ

	ಪ್ರಶ್ನೆ	ಉತ್ತರ
ಅ)	ಮಂಗಳೂರು ತಾಲ್ಲೂಕಿನ ಮಹಾನಗರಪಾಲಿಕೆ ವ್ಯಾಪ್ತಿಯ ಕುಡುಪು ಪ್ರದೇಶದಲ್ಲಿ 110 ಕೆ.ವಿ. ಸಾಮರ್ಥ್ಯತದ ಸಬ್ ಸ್ಟೇಷನ್‌ನ್ನು 2018 ರಲ್ಲಿ ನಿರ್ಮಿಸಬೇಕೆಂದು ತೀರ್ಮಾನಿಸಲಾಗಿದ್ದು, ಇನ್ನೂ ಕಾರ್ಯಗತಗೊಳಿಸದಿರಲು ಕಾರಣಗಳೇನು ;	ಮಂಗಳೂರು ತಾಲೂಕಿನ ಕುಡುಪುನಲ್ಲಿ 2x20ಎಂ.ವಿ.ಎ., 110/11ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಕಾಮಗಾರಿಗೆ ದಿನಾಂಕ 29.08.2022 ರಂದು ನಡೆದ 89ನೇ ಕವಿಪ್ರನಿನಿಯ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಸದರಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಕುಡುಪು ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದ್ದರಿಂದ, ಉಪಕೇಂದ್ರದ ನಿರ್ಮಾಣಕ್ಕೆ ಸೂಕ್ತ ಖಾಸಗಿ ಸ್ಥಳವನ್ನು ಗುರುತಿಸಿ ಹಾಗು ಅದರ ತಾಂತ್ರಿಕ ಸೂಕ್ತತೆ ಯನ್ನು ಪರಿಶೀಲಿಸಿ ಸ್ಥಳ ಅಂತಿಮಗೊಳಿಸಲಾಗಿರುತ್ತದೆ. ಕುಡುಪು ಗ್ರಾಮದ ಸರ್ವೆ ನಂ. 16/17, 64/6,63/3,133/3A2&133/5 ರಲ್ಲಿ 2.58 ಎಕರೆ ಖಾಸಗಿ ಜಮೀನು ಖರೀದಿಗೆ ಜಿಲ್ಲಾಧಿಕಾರಿಯವರು ದಿನಾಂಕ 15.02.2023 ರಂದು ಭೂಮಿಯ ಸೆಂಟ್ 1 ಕ್ಕೆ ರೂ.3,79,705 ರಂತೆ ದರ ನಿಗದಿಪಡಿಸಿರುತ್ತಾರೆ. ಈ ದರಕ್ಕಿಂತ ಕಡಿಮೆ ದರದಲ್ಲಿ ಸುತ್ತಮುತ್ತಲಿನ ಪ್ರದೇಶದಲ್ಲಿನ ಸೂಕ್ತ ಖಾಸಗಿ ಜಮೀನಿನ ಲಭ್ಯತೆ ಬಗ್ಗೆ ಪರಿಶೀಲಿಸಲು ದಿನಾಂಕ 11.08.2023 ರ ಉದಯವಾಣಿ ಮತ್ತು ಹೊಸದಿಗಂತ ಕನ್ನಡ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ. ಆದರೆ, ಜಿಲ್ಲಾಧಿಕಾರಿಯವರು ನಿಗಧಿಪಡಿಸಿರುವ ದರಕ್ಕೆ ಯಾವುದೇ ಖಾಸಗಿ ಜಮೀನು ಲಭ್ಯವಿಲ್ಲವಾದ್ದರಿಂದ ಪ್ರಸ್ತಾವನೆಯಲ್ಲಿರುವ ಕುಡುಪು ಗ್ರಾಮದ ಖಾಸಗಿ ಜಮೀನಿನಲ್ಲಿಯೇ 110/11ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ನಿಗಮ ಕಾರ್ಯಾಲಯಕ್ಕೆ ದಿನಾಂಕ 05-10-2023 ರಂದು ಸಲ್ಲಿಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತದನಂತರ ನಿರ್ದೇಶಕರು (ತಾಂತ್ರಿಕ), ಬೆಂಗಳೂರು ರವರು ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಹಾಸನ ಹಾಗೂ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ ವೃತ್ತ, ಮಂಗಳೂರು ಇವರೊಂದಿಗೆ ದಿನಾಂಕ 09.02.2024 ರಂದು ಪ್ರಸ್ತಾವಿತ ಜಮೀನಿಗೆ ಬೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು, ನಿಗಮ ಕಾರ್ಯಾಲಯದಿಂದ ಕೆಲವೊಂದು (ಪರ್ಯಾಯ ಜಮೀನು ಲಭ್ಯವಿಲ್ಲದಿರುವ ಬಗ್ಗೆ, ನಿಗದಿಗೊಳಿಸಿದ ದರವನ್ನು ಕಡಿಮೆಗೊಳಿಸಲು, ವಿನ್ಯಾಸ ನಕ್ಷೆ ಮತ್ತು ಸಂಪರ್ಕ ರಸ್ತೆಯನ್ನು ನಿಗಮದ ಸ್ವಾಧಿನ ಪಡೆಯಲು ಕ್ರಮ ಇತ್ಯಾದಿ) ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಮರುಸಲ್ಲಿಸಲು ವಲಯ ಕಚೇರಿಗೆ ದಿನಾಂಕ 13.05.2024 ರಂದು ತಿಳಿಸಲಾಗಿರುತ್ತದೆ.

ನಿಗಮದ ಸೂಚನೆಯಂತೆ ವಿವರಣೆಗಳೊಂದಿಗೆ ಮುಖ್ಯ ಇಂಜಿನಿಯರ್(ವಿ) ಹಾಸನರವರಿಂದ 23.08.2024 ರಂದು ನಿಗಮ ಕಾರ್ಯಾಲಯಕ್ಕೆ ಪ್ರಸ್ತಾವನೆಯು ಸ್ವೀಕೃತಗೊಂಡಿರುತ್ತದೆ.

ದಿನಾಂಕ 26.12.2024 ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ದಾಖಲಾತಿಗಳನ್ನು ಕವಿಪ್ರನಿನಿಯ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಹಾಸನ ರವರು ತಹಶೀಲ್ದಾರರು ನೀಡಿರುವ ವರದಿ, ಖರೀದಿ ಒಡಂಬಡಿಕೆ, ರಸ್ತೆಯ ಅಗಲ ಮತ್ತು ಮುಖ್ಯ ರಸ್ತೆಗೆ ಇರುವ ದೂರಗಳನ್ನೊಳಗೊಂಡ ನಕ್ಷೆ ಇತ್ಯಾದಿ ವಿವರಗಳ ವರದಿಯನ್ನೊಳಗೊಂಡಂತೆ, ಭೂಸ್ವಾಧೀನ ಪ್ರಸ್ತಾವನೆಯು ನಿಗಮ ಕಾರ್ಯಾಲಕ್ಕೆ ಅನುಮೋದನೆಗಾಗಿ ದಿನಾಂಕ: 14.03.2025ರಂದು ಸ್ವೀಕೃತಗೊಂಡಿರುತ್ತದೆ.

ನಿಗಮ ಕಾರ್ಯಾಲಯದ ನಿರ್ದೇಶನದಂತೆ, ಕುಡುಪುವಿನಲ್ಲಿ ಪ್ರಸ್ತಾವಿತ ವಿದ್ಯುತ್ ಕೇಂದ್ರ ಸ್ಥಾಪನೆಗೆ ಗುರುತಿಸಿರುವ ಸ್ಥಳವನ್ನು ದಿನಾಂಕ 20.06.2025 ರಂದು ಸ್ಥಳ ಪರಿಶೀಲನೆ ಮಾಡಲಾಗಿದ್ದು, ಪರಿಶೀಲನಾ ವರದಿಯನ್ವಯ ಕುಡುಪುವಿನಲ್ಲಿ 2x10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಗುರುತಿಸಲಾದ ಜಾಗದಲ್ಲಿ ಉಪಕೇಂದ್ರ ಸ್ಥಾಪಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆರವರು ಮಂಗಳೂರು ತಾಲೂಕಿನ ಕುಡುಪುವಿನಲ್ಲಿ 110ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಗುರುತಿಸಿಲಾದ ಜಮೀನಿಗೆ ಸೆಂಟ್ಸ್ ಒಂದಕ್ಕೆ ರೂ.3,79,705/- ರಂತೆ 2.58 ಎಕರೆಗೆ ರೂ.9,79,63,890.00 ಗಳನ್ನು ದಿನಾಂಕ:15-02-2023ರ ಪತ್ರದಲ್ಲಿ ದರ ನಿಗಧಿಪಡಿಸಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಪ್ರಸ್ತುತ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಕುಡುಪುವಿನಲ್ಲಿ 2x10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಸದರಿ ಗ್ರಾಮದ ಸರ್ವೆ ನಂ. 16/17, 64/6,63/3,133/1A2(ಪಿ)2 ಮತ್ತು 133/5(ಪಿ) ಗಳಲ್ಲಿನ ಒಟ್ಟು ವಿಸ್ತೀರ್ಣ 2.58 ಎಕರೆ ಖಾಸಗಿ ಭೂ ಪರಿವರ್ತಿತ ಜಮೀನಿಗೆ ಜಿಲ್ಲಾಧಿಕಾರಿ, ದಕ್ಷಿಣಕನ್ನಡ ಜಿಲ್ಲೆರವರು ದಿನಾಂಕ 15.02.2023 ರಂದು ನಿಗಧಿಪಡಿಸಿದ ದರದನ್ವಯ ಸದರಿ ಜಮೀನನ್ನು ನಿಗಮದ ಹೆಸರಿಗೆ ನೋಂದಾಯಿಸಲು ತಗಲುವ ಶಾಸನಬದ್ಧ ವೆಚ್ಚ ಭರಿಸಲು ಅನುಮೋದನೆ ಸಂಬಂಧ ಪ್ರಸ್ತಾವನೆಯು ನಿಗಮ ಕಾರ್ಯಾಲಯದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. ಸದರಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ದಿನಾಂಕ:03.07.2025 ರಂದು ನಡೆದ ಕವಿಪ್ರನಿನಿಯ (ಸೆಸ್ಕ್ ಮತ್ತು ಮೆಸ್ಕಾಂ) 2 ನೇ ತಾಂತ್ರಿಕ ಸಮನ್ವಯ ಸಭೆಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಮರು ಅಂಗೀಕರಿಸಿ ಅನುಮೋದನೆ ನೀಡಲಾಗಿದೆ.
ಆ)	ಇಲ್ಲಿ ಸಬ್ ಸ್ಟೇಷನ್ ಇಲ್ಲದೇ ಅಡ್ಯಾರು, ಪಣಂಬೂರು, ಉಳ್ಳಬೆಟ್ಟು, ಗುರುಪುರ, ಕುಡುಪು ತಿರುಮ್ಮೆಲು ಪ್ರದೇಶಗಳಲ್ಲಿ ಗುಣಮಟ್ಟದ ವಿದ್ಯುತ್ ನೀಡಲು ಸಾಧ್ಯವಾಗದೇ ನಿಯತಕಾಲಿಕವಾಗಿ ವಿದ್ಯುತ್ ಸಂಪರ್ಕ ಕಡಿತ ಉಂಟಾಗಿದ್ದು, ಸ್ಥಳೀಯ ಜನರು ಈ ಬಗ್ಗೆ ಬೇಡಿಕೆ ನೀಡಿದ್ದರೂ ಕ್ರಮವಹಿಸದೇ ಇರಲು ಕಾರಣವೇನು;	ಅಡ್ಯಾರು, ಪಣಂಬೂರು, ಉಳಾಯಿಬೆಟ್ಟು, ಗುರುಪುರ, ಕುಡುಪು, ತಿರುಮ್ಮೆಲು ಪ್ರದೇಶಗಳಲ್ಲಿ ಪ್ರಸ್ತುತ, 23 ರಿಂದ 24 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ಸದರಿ ಪ್ರದೇಶಗಳಿಗೆ ಕವಿಪ್ರನಿನಿ ವತಿಯಿಂದ ವಿದ್ಯುತ್ ಸರಬರಾಜು ಮಾಡಲು ಯಾವುದೇ ನಿರ್ಬಂಧಗಳಿರುವುದಿಲ್ಲ. ಮುಂದುವರೆದು, ಕವಿಪ್ರನಿನಿ ವತಿಯಿಂದ ವಿದ್ಯುತ್ ಬೇಡಿಕೆ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಕೆಳಕಂಡ ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ: 1. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕಿನ ಅಡ್ಯಾರ್‌ನಲ್ಲಿ 2x20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆ ಕಾಮಗಾರಿಗೆ ಕವಿಪ್ರನಿನಿಯ 79ನೇ ತಾಂತ್ರಿಕ ಸಮನ್ವಯ ಸಮಿತ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಅರ್ಕುಳ ಗ್ರಾಮದ ಸ.ನಂ. 25/3 ರಲ್ಲಿ 3.0 ಎಕರೆ ಖಾಸಗಿ ಜಮೀನು ಗುರುತಿಸಲಾಗಿದ್ದು, ಜಿಲ್ಲಾಧಿಕಾರಿರವರಿಂದ ದರ ನಿಗದಿಯಾಗಬೇಕಿದೆ. 2. ಮಂಗಳೂರು ತಾಲೂಕಿನ ಎನ್.ಎಮ್.ಪಿ.ಎ ಯಲ್ಲಿ 110/33/11 ಕೆವಿ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾಮಗಾರಿಗೆ ನವ ಮಂಗಳೂರು ಬಂದರು ಪ್ರಾಧಿಕಾರಕ್ಕೆ ಸೇರಿದ ಸುಮಾರು 4.0 ಎಕರೆ ಜಮೀನನ್ನು 30 ವರ್ಷಗಳಿಗೆ ಲೀಸ್ ಪಡೆಯಲು ಪ್ರಸ್ತಾವನೆಯು ನಿಗಮ ಕಚೇರಿಯಲ್ಲಿ ದಿನಾಂಕ:19.07.2025 ಸಭೆ ನಡೆಸಲಾಗಿ ಭೂಮಿ ಗುತ್ತಿಗೆ ಒಪ್ಪಂದ ಪ್ರಕ್ರಿಯೆಯಲ್ಲಿದೆ. 3. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕಿನ ಕುಡುಪುನಲ್ಲಿ 2x20ಎಂ.ವಿ.ಎ., 110/11ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ದಿನಾಂಕ:03.07.2025 ರಂದು ನಡೆದ ಕವಿಪ್ರನಿನಿಯ (ಸೆಸ್ಕ್ ಮತ್ತು ಮೆಸ್ಕಾಂ) 2 ನೇ ತಾಂತ್ರಿಕ ಸಮನ್ವಯ ಸಭೆಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಮರು ಅಂಗೀಕರಿಸಿ ಅನುಮೋದನೆ ನೀಡಲಾಗಿದೆ. 2.58 ಎಕರೆ ಖಾಸಗಿ ಭೂ ಪರಿವರ್ತಿತ ಜಮೀನನ್ನು ನಿಗಮದ ಹೆಸರಿಗೆ ನೋಂದಾಯಿಸಲು ತಗಲುವ ಶಾಸನಬದ್ಧ ವೆಚ್ಚ ಭರಿಸಲು ಅನುಮೋದನೆ ಸಂಬಂಧ ಪ್ರಸ್ತಾವನೆಯು ನಿಗಮ ಕಾರ್ಯಾಲಯದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. ಮೆಸ್ಕಾಂ ವತಿಯಿಂದ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಮೆಸ್ಕಾಂನಿಂದ ಕಾಲಕಾಲಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. (ವ್ಯವಸ್ಥೆ ಸುಧಾರಣೆಯಡಿ ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ, ಲಿಂಕ್ ಲೈನ ಗಳ ನಿರ್ಮಾಣ, ಹೆಚ್.ಟಿ.ಎಲ್.ಟಿ ಮಾರ್ಗಗಳ ವಾಹಕ ಬದಲಾವಣೆ ಮೊದಲಾದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.) ಮೆಸ್ಕಾಂ ವ್ಯಾಪ್ತಿಯಲ್ಲಿ, ರೈತರಿಗೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಇ)	ಗುಣಮಟ್ಟದ ವಿದ್ಯುತ್ ನೀಡುವುದರಿಂದ ರೈತರ ಕೃಷಿ ಬೆಳೆಗೆ ಸಹಾಯಕವಾಗುವುದರಿಂದ ಈ ಬಗ್ಗೆ ಸರ್ಕಾರ ಗಮನ ವಹಿಸುವದೇ;	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ಸಾರಿಗೆ ಇಲಾಖೆಯು ಮಂಗಳೂರಿನಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಿ ವಿದ್ಯುತ್ ಸರಬರಾಜು ಮಾಡಲು ಬೇಡಿಕೆಯನ್ನು ಸಲ್ಲಿಸಿದ್ದರೂ ಇನ್ನೂ ಬೇಡಿಕೆ ಪೂರೈಸದಿರಲು ಕಾರಣವೇನು; ಈ ಬಗ್ಗೆ ಕೈಗೊಂಡ ಕ್ರಮವೇನು; (ವಿವರ ನೀಡುವುದು)	ಕವಿಪ್ರನಿನಿಗೆ ಸಾರಿಗೆ ಇಲಾಖೆಯಿಂದ ದಿನಾಂಕ:06.05.2025 ರಂದು ಅರ್ಜಿಯು ಸ್ವೀಕೃತಗೊಂಡಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕುಂಟಿಕಾನ ಮಂಗಳೂರು ಡಿಪೋ-3 ಯಲ್ಲಿ ಇವಿ ಚಾರ್ಜಿಂಗ್ ಗಾಗಿ 11ಕೆವಿ ನೆಲೆಯಲ್ಲಿ 4 ಮೆ.ವ್ಯಾ ವಿದ್ಯುತ್ ಸರಬರಾಜಿಗೆ ದಿನಾಂಕ 27-06-2025 ರಂದು ಕವಿಪ್ರನಿನಿಯಿಂದ ಮಂಜೂರಾತಿಯನ್ನು ನೀಡಲಾಗಿದೆ. ಅದರಂತೆ, ಸದರಿ ಪ್ರಸ್ತಾವನೆಗೆ ಮೆಸ್ಕಾಂ ವತಿಯಿಂದ ದಿ:02.08.2025 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿಯನ್ನು ಸಾರಿಗೆ ಇಲಾಖೆಯಿಂದ ಸ್ವಯಂ ಕಾರ್ಯನಿರ್ವಹಣೆ ಮಾದರಿಯಲ್ಲಿ ಕೈಗೊಳ್ಳಬೇಕಾಗಿರುತ್ತದೆ.
ಉ)	ಸ್ಮಾರ್ಟ್ ಸಿಟಿ-24 ಗಂಟೆ ವಿದ್ಯುತ್ ನೀಡಲು ಸಾಧ್ಯವಾಗದಿರುವ ಬಗ್ಗೆ ಇಲಾಖೆಯ ಗಮನದಲ್ಲಿದೆಯೇ; ಈ ಬಗ್ಗೆ ಕೆ.ಪಿ.ಟಿ.ಸಿ.ಎಲ್. ಇನ್ನೂ ಕೈಗೊಳ್ಳದಿರಲು ಕಾರಣಗಳೇನು; (ವಿವರ ನೀಡುವುದು); ಈ ಬಗ್ಗೆ ಕೆ.ಡಿ.ಪಿ. ಸಭೆಯಲ್ಲಿ ಕೂಡಲೇ ಸಬ್ ಸ್ಟೇಷನ್ ನ್ನು ಅಳವಡಿಸುವುದಾಗಿ ಆಶ್ವಾಸನೆ ನೀಡಿದರೂ ಇನ್ನೂ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?	ಸ್ಮಾರ್ಟ್ ಸಿಟಿ ಯೋಜನೆಯಡಿ ಮಂಗಳೂರು ನಗರಕ್ಕೆ 24ಗಂಟೆ ವಿದ್ಯುತ್ ಸರಬರಾಜು ನೀಡಲು ಕವಿಪ್ರನಿನಿ ವತಿಯಿಂದ ಯಾವುದೇ ನಿರ್ಬಂಧಗಳಿಲ್ಲದೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಕವಿಪ್ರನಿನಿ ವತಿಯಿಂದ ವಿದ್ಯುತ್ ಬೇಡಿಕೆ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಉದ್ದೇಶಿಸಿದ ಹೊಸ ವಿದ್ಯುತ್ ಉಪಕೇಂದ್ರಗಳ ವಿವರಗಳನ್ನು ಕ್ರಮ ಸಂಖ್ಯೆ (ಆ) ಮತ್ತು (ಇ) ಉತ್ತರದಲ್ಲಿ ಒದಗಿಸಲಾಗಿದೆ.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ವಿದ್ಯುತ್ ಉತ್ಪಾದನೆಯಲ್ಲಿ ದೊಡ್ಡ ಹೆಜ್ಜೆಯನ್ನು ಹಾಕಿದ್ದಾರೆ ಮತ್ತು self-sufficient ಅಂದರೆ ನಮ್ಮ ಕರ್ನಾಟಕದಲ್ಲಿ ವಿದ್ಯುತ್‌ಗೆ ಕೊರತೆ ಇಲ್ಲ ಎನ್ನುವಂಥ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಎಲ್ಲರಿಗೂ ವಿದ್ಯುತ್ ಮುಟ್ಟುವಂಥ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, 2016ನೇ ಇಸವಿಯಲ್ಲಿ ಮಂಗಳೂರು ತಾಲೂಕಿನ ಕುಡುಪುನಲ್ಲಿ ವಿದ್ಯುತ್ ಕೊರತೆ ಇದ್ದು, ಸಬ್-ಸ್ಟೇಷನ್ ಮಾಡಬೇಕೆಂದು ತೀರ್ಮಾನವಾಗುತ್ತದೆ. ಅದು ರೈತರ ಮತ್ತು ಕೈಗಾರಿಕೋದ್ಯಮದವರ ಹಾಗೂ ಗ್ರಾಹಕರ ಬೇಡಿಕೆಯಾಗಿದೆ. ಅದರನ್ವಯ ಅಲ್ಲಿ ಸಬ್-ಸ್ಟೇಷನ್ ಮಾಡಬೇಕೆಂದು ತೀರ್ಮಾನವಾದ ಮೇಲೆ 2025ನೇ ಇಸವಿಗೆ ಸುಮಾರು 6 ವರ್ಷಗಳಾಗಿದ್ದು, ಇನ್ನೂ ಅದರ ಪ್ರೋಸೆಸ್ ಅನ್ನು ಮಾಡುತ್ತಿದ್ದಾರೆ ವಿನಃ ಸಬ್-ಸ್ಟೇಷನ್ ಮಾಡಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯುತ್ ಕೊರತೆ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ ಸಬ್-ಸ್ಟೇಷನ್ ಮಾಡಲು ಸುಮಾರು 6 ವರ್ಷಗಳಷ್ಟು ಸಮಯ ಬೇಕೇ ಎಂಬುದು ನನ್ನ ಪ್ರಶ್ನೆಯಾಗಿದೆ. ಅವರ ಉತ್ತರದಲ್ಲಿ ಸಹ ಅಲ್ಲಿ ಹೋಗಿತ್ತು, ಇಲ್ಲಿ ಹೋಗಿತ್ತು, ಜಾಗ ನೋಡಿದ್ದೇವೆ, ಸ್ಥಳಕ್ಕೆ ಹೋಗಿದ್ದೇವೆ ಎಂದು ತಿಳಿಸಿದ್ದಾರೆ.

ಸಭಾಪತಿಯವರು:- ಮಾನ್ಯ ಸಚಿವರೇ, ತಾವು ಉತ್ತರ ನೀಡಿ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯೇನೆಂದರೆ, ಯಾವಾಗ ನಿರ್ದಿಷ್ಟವಾಗಿ ಈ ಒಂದು ಸಬ್-ಸ್ಟೇಷನ್ ತೆರೆಯುತ್ತಾರೆ? ಅಲ್ಲಿಯ ಜನರ ಬೇಡಿಕೆಯನ್ನು ಯಾವಾಗ ಈಡೇರಿಸುತ್ತಾರೆ ಎಂಬುದಕ್ಕೆ ಮೊದಲು ನನಗೆ ಉತ್ತರ ಬೇಕು.

ಶ್ರೀ ಕೆ.ಜೆ.ಜಾರ್ಜ್ (ಇಂಧನ ಸಚಿವರು):- ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ನೀಡಿದ್ದೇನೆ. ಕುಡುಪು ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದ್ದರಿಂದ, ಉಪಕೇಂದ್ರದ ನಿರ್ಮಾಣಕ್ಕೆ ಖಾಸಗಿ ಸ್ಥಳವನ್ನು ಗುರುತಿಸಿ, ಅದರ ತಾಂತ್ರಿಕ ಸೂಕ್ತತೆಯನ್ನು ಪರಿಶೀಲಿಸಿ ಅಂತಿಮ ನಿರ್ಧಾರ ತೆಗೆದುಕೊಂಡಿದ್ದೇವೆ. ಅದು ಸಹ ಹಳೆಯ ಜಾಗವಾಗಿದ್ದು, ಅದರ ಬೆಲೆ ಸುಮಾರು ರೂ.7 ಕೋಟಿಯಾಗಿದ್ದು, ಬಹಳ ದುಬಾರಿ ಬೆಲೆಯಾಗಿದೆ. ಅದನ್ನೇ ಖರೀದಿಸಲು ಈಗಾಗಲೇ ಅನುಮತಿ ಕೊಟ್ಟಿದ್ದು, ಆದಷ್ಟು ಬೇಗನೆ ಸಬ್-ಸ್ಟೇಷನ್ ಮಾಡುತ್ತೇವೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೇ, ಯಾವಾಗ ಸಬ್-ಸ್ಟೇಷನ್ ಮಾಡುತ್ತಾರೆ ಎಂಬುದನ್ನು ಹೇಳಲಿ. ಈಗಾಗಲೇ ಸುಮಾರು 6 ವರ್ಷಗಳು ಕಳೆದಿವೆ. ಇಡೀ ರಾಜ್ಯಕ್ಕೆ ವಿದ್ಯುತ್ ಕೊಡುತ್ತೀರಿ.

ಸಭಾಪತಿಯವರು:- ಮಾನ್ಯ ಸಚಿವರೇ, ಆದಷ್ಟು ಬೇಗ ಮಾಡಿಕೊಡಿ.

ಶ್ರೀ ಕೆ.ಜೆ.ಜಾರ್ಜ್:- ಮಾನ್ಯ ಸಭಾಪತಿಯವರೇ, ಆದಷ್ಟು ಬೇಗನೇ ಮಾಡಿಕೊಡುತ್ತೇವೆ. ನಾವು ಹೊಸದಾಗಿ ಸಾಕಷ್ಟು ಸಬ್-ಸ್ಟೇಷನ್‌ಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಇಂಧನದ ಕೊರತೆ ಇಲ್ಲ. ನಮ್ಮ ಕೊರತೆ ಇರುವುದೇನೆಂದರೆ, ಸಬ್-ಸ್ಟೇಷನ್ ಮತ್ತು conductor ಇವುಗಳ ಕೊರತೆ ಇತ್ತು. ಕಳೆದ ಮೂರು ವರ್ಷಗಳಿಂದ 400 ಸಬ್-ಸ್ಟೇಷನ್ ಮಾಡಲಿಕ್ಕೆ ಪದ್ಧತಿ ಮಾಡಿದ್ದೇವೆ. ಜಾಗ ಸಿಗದ ಪ್ರಯುಕ್ತ ತಡವಾಗಿದ್ದು, ಜಾಗಕ್ಕೆ ಎಷ್ಟು ಹಣ ಕೇಳಿದ್ದಾರೆ, ಆ ಹಣವನ್ನು ಕೊಡಲಿಕ್ಕೆ ಒಪ್ಪಿಗೆ ಮಾಡಿದ್ದೇವೆ. ಆದಷ್ಟು ಬೇಗ ಸುಮಾರು ಮೂರ್ನಾಲ್ಕು ತಿಂಗಳುಗಳಲ್ಲಿ ಆ ಪ್ರಕ್ರಿಯೆಯನ್ನು ಮುಗಿಸುತ್ತೇವೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೇ, ಕೆ.ಎಸ್.ಆರ್.ಟಿ.ಸಿ. ನವರು ಜಾರ್ಜಿಂಗ್ ಸ್ಟೇಷನ್ ಮಾಡಿಕೊಡುವಂತೆ ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಜೆ.ಜಾರ್ಜ್:- ಮಾನ್ಯ ಸಭಾಪತಿಯವರೇ, ಈಗಾಗಲೇ ಕೆ.ಎಸ್.ಆರ್.ಟಿ.ಸಿ. ನವರು ಜಾರ್ಜಿಂಗ್ ಸ್ಟೇಷನ್ ಮಾಡಿಕೊಡಲು ಅನುಮೋದನೆ ಕೊಟ್ಟಿದ್ದೇವೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಯವರೇ, ನಮ್ಮ ಸಚಿವರು ಉತ್ತಮ ಸಚಿವರಾಗಿದ್ದು, ಕೆ.ಡಿ.ಪಿ. ಸಭೆಯಲ್ಲಿ ಸಹ ಈ ವಿಚಾರವಾಗಿ ಚರ್ಚೆಯಾಗಿದ್ದು, ವಿದ್ಯುತ್ ಸಮಸ್ಯೆಯನ್ನು ತಕ್ಷಣ ಪರಿಹರಿಸಿಕೊಡುತ್ತೇನೆ ಎಂದು ಹೇಳಿದ್ದಾರೆ.

ಸಭಾಪತಿಯವರು:- ಮಾನ್ಯ ಐವನ್ ಡಿ'ಸೋಜಾರವರೇ ಸಾಕು ಕುಳಿತುಕೊಳ್ಳಿ. ಈಗ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಆ)ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ದಿನಾಂಕ: 11ನೇ ಆಗಸ್ಟ್ 2025 ರ ಸಮೂಹ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 150 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಸಭಾಪತಿಯವರು:- ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

06 ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾಪಗಳು

(ಅ) ವಿಷಯ:- ರಾಜ್ಯದ ಧಾರ್ಮಿಕ ಹೆಮ್ಮೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ಅನಾಮಿಕ ವ್ಯಕ್ತಿಯೊಬ್ಬರು ಯಾವುದೇ ಸಾಕ್ಷ್ಯವಿಲ್ಲದೆ ಆರೋಪ ಮಾಡಿರುವುದರ ಬಗ್ಗೆ ದೃಶ್ಯ ಮಾಧ್ಯಮದಲ್ಲಿ, ಡಿಜಿಟಲ್ ಪ್ಲಾಟ್‌ಫಾರ್ಮ್‌ನಲ್ಲಿ ವರದಿ ಪ್ರಕಟವಾಗುತ್ತಿರುವ ಕುರಿತು.

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಧಾರ್ಮಿಕ ಹೆಮ್ಮೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವ ಧರ್ಮಸ್ಥಳ, ಲಕ್ಷಾಂತರ ಹಿಂದೂ ಭಕ್ತರ ಭಾವನೆಯ ಕೇಂದ್ರವಾಗಿದೆ. ಇಂತಹ ಪವಿತ್ರ ಸ್ಥಳದ ವಿರುದ್ಧ, ಅನಾಮಿಕ ವ್ಯಕ್ತಿಯೊಬ್ಬರು ಯಾವುದೇ ದೃಢವಾದ ಸಾಕ್ಷ್ಯವಿಲ್ಲದೆ ಆರೋಪ ಮಾಡಿರುವುದರ ಕುರಿತು ಇತ್ತೀಚಿಗೆ ಬಹಳಷ್ಟು ದೃಶ್ಯ ಮಾಧ್ಯಮದಲ್ಲಿ, ಡಿಜಿಟಲ್ ಪ್ಲಾಟ್‌ಫಾರ್ಮ್‌ನಲ್ಲಿ ವರದಿ ಪ್ರಕಟವಾಗಿರುತ್ತದೆ.

ಇಂತಹ ಸಂಗತಿ ಅತ್ಯಂತ ಖಂಡನೀಯ ಮತ್ತು ಹಿಂದೂ ಸಮಾಜದ ಭಾವನೆಗೆ ಅವಮಾನವಾಗಿದೆ. ಇಂತಹ ಸುಳ್ಳು ಮತ್ತು ಉದ್ದೇಶಪೂರಿತ ಆರೋಪಗಳಿಂದ ಸನಾತನ ಧರ್ಮದ ಪಾವಿತ್ರ್ಯಕ್ಕೆ ಧಕ್ಕೆ ಉಂಟುಮಾಡುವುದು ಧರ್ಮ ವಿರೋಧಿ ಶಕ್ತಿಗಳ ಹಳೆಯ ನಿಟ್ಟಿ, ಹಿಂದೂ ಧರ್ಮ, ಹಿಂದೂತ್ವದ ಮೌಲ್ಯಗಳು ಹಾಗೂ ಧರ್ಮಸ್ಥಳದ ಹೆಗ್ಗಳಿಕೆಯನ್ನು ಹಾಳುಮಾಡಲು ಇಂತಹ ಯತ್ನಗಳು ನಡೆಯುತ್ತಾ ಬಂದಿವೆ.

ಜನರ ಭಕ್ತಿ ಭಾವನೆಗೆ ಧಕ್ಕೆ ಉಂಟುಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಾಗಿರಬೇಕು. ತನಿಖೆಯನ್ನು ತ್ವರಿತಗೊಳಿಸಿ, ಈ ಆರೋಪದ ಹಿಂದಿರುವ ನಿಜ ಸ್ವರೂಪವನ್ನು ಬಹಿರಂಗಪಡಿಸಬೇಕು, ಸದನದ ಮೂಲಕ ಗೃಹ ಸಚಿವರನ್ನು ಬಲವಾಗಿ ತನಿಖೆಯ ಪ್ರಗತಿ ವರದಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಿ, ಹಿಂದೂ ಧರ್ಮದ ಪಾವಿತ್ರ್ಯವನ್ನು ಹಾಳುಮಾಡಲು ಯತ್ನಿಸುವವರ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸಬೇಕು ಎಂದು ಹೇಳುತ್ತಾ, ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(613) 11.08.2025/2.10/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

ಆ) ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ, 187 ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಅವಧಿ ಮುಗಿದಿದ್ದರೂ, ರಾಜ್ಯ ಸರ್ಕಾರ ಇದುವರೆಗೂ ಮೀಸಲಾತಿ ಪಟ್ಟಿ ನೀಡದಿರುವ ಬಗ್ಗೆ.

ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ, 187 ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಅವಧಿ ಮುಗಿದಿದ್ದರೂ, ಚುನಾವಣಾ ಆಯೋಗ ಚುನಾವಣೆ ನಡೆಸುವುದಕ್ಕೆ ಸಿದ್ಧವಿದ್ದರೂ ರಾಜ್ಯ ಸರ್ಕಾರ ಇದುವರೆವಿಗೂ ಮೀಸಲಾತಿ ಪಟ್ಟಿಯನ್ನು ನೀಡದಿರುವ ವಿಚಾರದ ಬಗ್ಗೆ ದಿನಾಂಕ 05.08.2025 ರ ವಿಜಯವಾಣಿ ಪತ್ರಿಕೆಯಲ್ಲಿ "ಸಿಗದ ಮೀಸಲಾತಿ ಪಟ್ಟಿ, ಕೋರ್ಟ್‌ಗೆ ಹೋಗುವುದೇ ದಾರಿ" ಶಿರೋನಾಮೆಯಡಿ ವರದಿ ಪ್ರಕಟವಾಗಿರುತ್ತದೆ.

ಈಗಾಗಲೇ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಾಗಿ ಸರ್ಕಾರ ಮೀಸಲಾತಿ ಪಟ್ಟಿ ನೀಡದ ಕಾರಣಕ್ಕೆ ಆಯೋಗ ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡಿ, ಮೇ 31ಕ್ಕೆ ಗಡುವು ವಿಧಿಸಿದ್ದರೂ ಮೀಸಲಾತಿ ಪಟ್ಟಿ ನೀಡಿರುವುದಿಲ್ಲ. ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಆಯೋಗ ಸಿದ್ಧವಿದ್ದರೂ ಸರ್ಕಾರ ಮೀಸಲಾತಿ ಪಟ್ಟಿ ಕೊಡದ ಕಾರಣ ಆಯೋಗದವರು ಕೈಕಟ್ಟಿ ಕುಳಿತುಕೊಳ್ಳುವಂತಾಗಿದೆ. ಈ ಸಂಬಂಧ ಮೇಲ್ಮನವಿಗೆ ಮುಂದಾಗಿರುವುದು ತಿಳಿದು ಬಂದಿರುತ್ತದೆ.

ಆದಕಾರಣ, ರಾಜ್ಯ ಸರ್ಕಾರ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಸಂಬಂಧ ಕೂಡಲೇ ಮೀಸಲಾತಿ ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ಒದಗಿಸಿ ಚುನಾವಣಾ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ:– ರಾಜ್ಯದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ನಾಪತ್ತೆ ಪ್ರಕರಣಗಳ ಬಗ್ಗೆ.

ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ 10.08.2025ರ "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ರಾಜ್ಯದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ನಾಪತ್ತೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣಗಳು ಕೂಡ ಹೆಚ್ಚಾಗುತ್ತಿವೆ ಎಂಬುದು ತೀವ್ರ ಕಳವಳ ಹಾಗೂ ಆತಂಕಕಾರಿ ವಿಷಯ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಕಲಬುರಗಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿ ಕಂಡು ಬರುತ್ತಿದೆ.

2023ರಲ್ಲಿ ರಾಯಚೂರು ಜಿಲ್ಲೆಯಲ್ಲಿ 228 ಪ್ರಕರಣಗಳು, ಬೀದರ್ ಜಿಲ್ಲೆಯಲ್ಲಿ 182 ಪ್ರಕರಣಗಳು, ವಿಜಯನಗರ ಜಿಲ್ಲೆಯಲ್ಲಿ 185 ಪ್ರಕರಣಗಳು, ಕೊಪ್ಪಳ ಜಿಲ್ಲೆಯಲ್ಲಿ 176 ನಾಪತ್ತೆ ಪ್ರಕರಣಗಳು ದಾಖಲಾಗಿದ್ದು, 2024ರಲ್ಲಿ ಬೀದರ್ ಜಿಲ್ಲೆಯಲ್ಲಿ 247 ಪ್ರಕರಣಗಳು, ರಾಯಚೂರು ಜಿಲ್ಲೆಯಲ್ಲಿ 225 ಪ್ರಕರಣಗಳು, ಕೊಪ್ಪಳ ಜಿಲ್ಲೆಯಲ್ಲಿ 213 ಪ್ರಕರಣಗಳು ಮತ್ತು ವಿಜಯನಗರ ಜಿಲ್ಲೆಯಲ್ಲಿ 215 ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಗೃಹ ಇಲಾಖೆ ವರದಿ ತಿಳಿಸಿದೆ.

ಇದರ ಜೊತೆಗೆ ಪತ್ತೆಯಾಗದೇ ಉಳಿದಿರುವ 229 ಮಹಿಳೆಯರ ನಾಪತ್ತೆ ಪ್ರಕರಣಗಳು ಅತ್ಯಂತ ಆತಂಕಕಾರಿಯಾಗಿದ್ದು, ಇವುಗಳ ಬಗ್ಗೆ ಇನ್ನೂ ಸುಳಿವುಗಳು ಸಿಕ್ಕಿಲ್ಲ. ಈ ಪ್ರಕರಣಗಳ ಹಿಂದೆ ಅಪಹರಣ, ಮಾನವ ಕಳ್ಳಸಾಗಣೆ ಅಥವಾ ಇತರೆ ಗಂಭೀರ ಕಾರಣಗಳಿರುವ ಸಾಧ್ಯತೆ ಇದೆ. ಕೆಲ ಪ್ರಕರಣಗಳಲ್ಲಿ ಕೌಟುಂಬಿಕ ಕಲಹಗಳು, ಆರ್ಥಿಕ ತೊಂದರೆಗಳು, ಪ್ರೇಮ ವಿವಾಹ ಮುಂತಾದ ಕಾರಣಗಳಿಂದ ಮನೆಯನ್ನು ತೊರೆಯುವ ಘಟನೆಗಳೂ ನಡೆದಿವೆ.

ಸರ್ಕಾರ ಮತ್ತು ಪೊಲೀಸ್ ಇಲಾಖೆ ಇಂತಹ ಸಮಸ್ಯೆಯನ್ನು ನಿಭಾಯಿಸಲು ಹಲವಾರು ಕ್ರಮಗಳನ್ನು ಕೈಗೊಂಡಿರುವುದು ಶ್ಲಾಘನೀಯ. ಆದರೆ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ರೂಪಿಸುವುದು ಅತ್ಯಂತ ಅವಶ್ಯಕವಾಗಿದೆ. ಆದ್ದರಿಂದ ಮಹಿಳೆಯರ ನಾಪತ್ತೆ, ಕಳ್ಳಸಾಗಾಣಿಕೆ ಪ್ರಕರಣಗಳನ್ನು ತಡೆಯಲು ಮತ್ತು ನಾಪತ್ತೆಯಾದವರನ್ನು ಶೀಘ್ರವಾಗಿ ಪತ್ತೆ ಹಚ್ಚಲು ಇರುವ ಕಾನೂನು ಕ್ರಮಗಳನ್ನು ಇನ್ನಷ್ಟು ಬಲಪಡಿಸುವ ಬಗ್ಗೆ ನಾನು ತಮ್ಮ ಮೂಲಕ ಗೃಹ ಸಚಿವರಿಗೆ ತರಲು ಬಯಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾ ನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ವಿಷಯ:- ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಪ್ರಾರಂಭವಾದ ಗುಲ್ಬರ್ಗಾ ದೂರದರ್ಶನ ಕೇಂದ್ರವನ್ನು ಕೇಂದ್ರ ಸರ್ಕಾರ ಬಂದ್ ಮಾಡಲು ಹೊರಟಿರುವ ಕುರಿತು.

ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸ್ವಾತಂತ್ರ್ಯದ ಬಳಿಕ ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಪ್ರಾರಂಭವಾದ ಗುಲ್ಬರ್ಗಾ ದೂರದರ್ಶನ ಕೇಂದ್ರವನ್ನು ಕೇಂದ್ರ ಸರ್ಕಾರ ಬಂದ್ ಮಾಡಲು ಹೊರಟಿರುವ ಬಗ್ಗೆ ದಿನಾಂಕ 04.08.2025ರ "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ದೆಹಲಿಯಿಂದ ಮೊದಲುಗೊಂಡು ದಕ್ಷಿಣ ಭಾರತದ ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಥಮ ಆದ್ಯತೆಯಲ್ಲಿ ಅಂದಿನ ಕೇಂದ್ರ ಸರ್ಕಾರ ದೂರದರ್ಶನ ಕೇಂದ್ರವನ್ನು ಸೆಪ್ಟೆಂಬರ್ 3, 1977 ರಲ್ಲಿ ಆರಂಭಿಸಿತ್ತು. ಈಗ ಅದೇ ಕೇಂದ್ರ ಸರ್ಕಾರ ದೂರದರ್ಶನ ಕೇಂದ್ರವನ್ನು ಮುಚ್ಚಲು ಹೊರಟಿರುವುದು ವಿಪರ್ಯಾಸವೇ ಸರಿ.

ಕಲ್ಯಾಣ ಕರ್ನಾಟಕವು 370(ಜೆ) ಕಲಂ ಅಡಿಯಲ್ಲಿದ್ದು, ಹಿಂದುಳಿದ ಪ್ರದೇಶವಾಗಿದೆ. ಇಲ್ಲಿನ ಕಲೆ, ಕಲಾವಿದರು ಮತ್ತು ವೈಶಿಷ್ಟ್ಯವನ್ನು ಜನರಿಗೆ ತಲುಪಿಸಲು ಸರ್ಕಾರಿ ಸ್ವಾಮ್ಯದ ದೂರದರ್ಶನದ ಅವಶ್ಯಕತೆ ಇದ್ದು, ದೂರದರ್ಶನವನ್ನು ಬಂದ್ ಮಾಡಬಾರದು ಎಂಬುದು ಕರ್ನಾಟಕ ಜಾನಪದ ಪರಿಷತ್ ಆದಿಯಾಗಿ ಹಿರಿಯ ಸಾಹಿತಿಗಳು ಮತ್ತು ಗಣ್ಯರುಗಳ ಒತ್ತಾಯವಾಗಿದೆ.

ಕಳೆದ ಹಲವು ತಿಂಗಳುಗಳಿಂದ ಒಂದೊಂದೇ ಕಾರ್ಯಕ್ರಮವನ್ನು ಸ್ಥಗಿತಗೊಳಿಸುತ್ತಾ, ಬಂದಿದ್ದ ಕಲಬುರಗಿ ದೂರದರ್ಶನ ಕೇಂದ್ರವು ಇತ್ತೀಚೆಗೆ ಕಾರ್ಯಕ್ರಮಗಳ ಪ್ರಸಾರವನ್ನು ನಿಲ್ಲಿಸುತ್ತಾ ಬಂದಿರುವುದು ನೋವಿನ ಸಂಗತಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಿ ಹಲವು ದಶಕಗಳಿಂದ ಕಲ್ಯಾಣ ಕರ್ನಾಟಕದ ಸಂಸ್ಕೃತಿ, ಕಲೆ, ಸಾಹಿತ್ಯಗಳನ್ನು ಅನಾವರಣಗೊಳಿಸುತ್ತಾ ಬಂದಿರುವ ಇತಿಹಾಸದ ಗರಿಮೆಯನ್ನು ಹೊಂದಿರುವ ಕಲಬುರಗಿ ದೂರದರ್ಶನ ಕೇಂದ್ರವನ್ನು ಸ್ಥಗಿತಗೊಳಿಸದೇ ಮುಂದುವರೆಸುವ ಬಗ್ಗೆ ಕೇಂದ್ರದ ಮೇಲೆ ಒತ್ತಡ ತರಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ತರಲು ಬಯಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾ ನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉ) ವಿಷಯ:- ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೋರ್ಡ್, ಡಿಜಿಟಲ್ ಕ್ಲಾಸ್‌ಗಳಲ್ಲಿ ಬೋಧನೆ ಮಾಡುವ ಮೂಲಕ ಮಕ್ಕಳನ್ನು ಆಧುನಿಕ ಜಗತ್ತಿಗೆ ತಯಾರುಗೊಳಿಸಿ ಮಾನವ ಸಂಪನ್ಮೂಲವನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಕುರಿತು.

ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಇತ್ತೀಚೆಗೆ ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೋರ್ಡ್, ಡಿಜಿಟಲ್ ಕ್ಲಾಸ್‌ಗಳಲ್ಲಿ ಬೋಧನೆ ಮಾಡುವ ಮೂಲಕ ವಿದ್ಯಾರ್ಥಿಗಳನ್ನು ಆಧುನಿಕ ಜಗತ್ತಿಗೆ ತಯಾರುಗೊಳಿಸಿ ಮಾನವ ಸಂಪನ್ಮೂಲವನ್ನು ಮೇಲ್ದರ್ಜೆಗೆ ಏರಿಸಿ, ಕಲಿಕೆಯ ಒಂದು ಭಾಗ ಮೌಲ್ಯಮಾಪನವಾಗಬೇಕು. ಆದರೆ ಮೌಲ್ಯಮಾಪನವೇ ಬೋಧನೆ ಎಂದು ಇತ್ತೀಚೆಗೆ ಸರ್ಕಾರವು ಜಾರಿ ಮಾಡಿರುವ (Lesson Based Assessment) ಎಲ್.ಬಿ.ಎ., ಅಂದರೆ ಘಟಕ ಆಧಾರಿತ ಪರೀಕ್ಷೆಯು ನಮ್ಮ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕಾದ ವಿಷಯವಾಗಿದೆ. ಪ್ರಶ್ನೆ ಪತ್ರಿಕೆಗಳ ತಯಾರಿಕೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ, ನಂತರ ಅಂಕಗಳನ್ನು ತಂತ್ರಾಂಶದಲ್ಲಿ ಇಂದಿಕರಿಸುವುದು ಹಾಗೂ ಇನ್ನಷ್ಟು ಪ್ರಕ್ರಿಯೆಗಳನ್ನು ಒಳಗೊಂಡಿದೆ. ಆದರೆ ಇದೆಲ್ಲವನ್ನು ಶಿಕ್ಷಕರೇ ಮಾಡುತ್ತಾ ಕುಳಿತರೆ ಬೋಧನೆಗೆ ಸಮಯವಕಾಶ ಸಿಗದಂತಾಗುವುದು ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಾರದೆ ಇರುವುದು ನೋವಿನ ಸಂಗತಿಯಾಗಿದೆ. ಇದರಿಂದ ಮಕ್ಕಳು ಭಯಭೀತಗೊಂಡು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಪಠ್ಯತೇರ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿಲ್ಲ. ಸರ್ಕಾರದ ಇಂತಹ ನಿರ್ಧಾರಗಳಿಂದ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಏರುಪೇರುಗಳಾಗುತ್ತಿರುವುದನ್ನು ಸರ್ಕಾರವು ಗಮನಿಸಬೇಕಾದ ಅಂಶವಾಗಿದೆ. ಒಂದು ವರ್ಷಕ್ಕೆ ಪ್ರತಿ ಶಿಕ್ಷಕನಿಗೆ 2025-26ನೇ ಸಾಲಿನಲ್ಲಿ 242 ದಿನಗಳು / ವರ್ಕಿಂಗ್ ಡೇಸ್ ಲಭ್ಯವಾಗುತ್ತಿವೆ. ಹಾಗೂ 350 ಪಾಠಗಳು 8, 9 ಮತ್ತು 10 ನೇ ತರಗತಿಗಳಿವೆ, ಕನ್ನಡ ಶಿಕ್ಷಕರು 66, ಇಂಗ್ಲಿಷ್ ಶಿಕ್ಷಕರು 60, ಹಿಂದಿ ಶಿಕ್ಷಕರು 51, ಗಣಿತ ಶಿಕ್ಷಕರು 39, ವಿಜ್ಞಾನ ಶಿಕ್ಷಕರು 38, ಸಮಾಜ ವಿಜ್ಞಾನ ಶಿಕ್ಷಕರಂತೂ 96 ಪರೀಕ್ಷೆಗಳನ್ನು ಒಂದು ವರ್ಷದ ಅವಧಿಯಲ್ಲಿ ನಡೆಸಬೇಕು. ಅದಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆ ಸಿದ್ಧತೆ, ಮುದ್ರಣ ಸಂಘಟನೆ, ಮೌಲ್ಯಮಾಪನ ಅಂಕಗಳನ್ನು ಅಂತರ್ಜಾಲದಲ್ಲಿ ಇಂದಿಕರಿಸುವುದು. ಬೋಧನೆಯ ಪ್ರಮುಖ ಅಂಶ ಮಕ್ಕಳಲ್ಲಿ ಕಲಿಕೆಯಾಗುವುದು. ಅದರಲ್ಲಿ ಪರೀಕ್ಷೆಗೆ ಸಂಘಟಿಸಲು ಸಮಯವನ್ನು ಭಾಗಶಃ ಅರ್ಧಕ್ಕೂ ಹೆಚ್ಚು ಸಮಯ ವ್ಯಯಿಸಬೇಕಾಗುತ್ತದೆ. ಘಟಕ ಆಧಾರಿತ ಪರೀಕ್ಷೆಯ ಜೊತೆಗೆ ಪ್ರತಿ ವಿಷಯದ ಶಿಕ್ಷಕರು 4 ರೂಪನಾತ್ಮಕ ಪರೀಕ್ಷೆಗಳು 2 ಸಂಕಲನಾತ್ಮಕ ಪರೀಕ್ಷೆಗಳು ಮತ್ತು 10ನೇ ತರಗತಿಗೆ 2-3 ಸರಣಿ ಪರೀಕ್ಷೆಗಳನ್ನು ನಡೆಸುವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಣೆಗಾರಿಕೆಯೂ ಸಹಿತ ಶಿಕ್ಷಕರ ಮೇಲೆ ಇರುವುದು ಸರ್ಕಾರದ ಗಮನಕ್ಕೆ ಇಲ್ಲದೇ ಇರುವುದು ನೋವಿನ ಸಂಗತಿಯಾಗಿದೆ.

ಇದರಿಂದಾಗಿ, ನಮ್ಮ ಶಿಕ್ಷಕರು ತಮ್ಮನ್ನು ತಾವೇ ಶಪಿಸಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಿರುವುದು ದುರದೃಷ್ಟಕರ ಸಂಗತಿ. ಶಿಕ್ಷಕರು ಮಕ್ಕಳ ಜೊತೆಗೆ ಬೆರೆತು ಮಕ್ಕಳ ಭಾವನೆಗಳನ್ನು ಅರಳಿಸಬೇಕಾಗುವುದು ಶಿಕ್ಷಕರ ಕೆಲಸ. ಆದರೆ ಎಲ್.ಬಿ.ಎ., ಆದೇಶದಿಂದ ಶಿಕ್ಷಕರನ್ನು ಗುಮಾಸ್ತರಂತೆ ಕೆಲಸ ಮಾಡಲು ನಾವು ಹೊರಟಿದ್ದೇವೆ ಎನಿಸುತ್ತಿದೆ. ಭಾರತೀಯ ವ್ಯವಸ್ಥೆಯಲ್ಲಿ ಶಿಕ್ಷಕರಿಗೆ ಮಹೋನ್ನತ ಗೌರವವಿದೆ. ಆ ಮಹೋನ್ನತ ಗೌರವವನ್ನು ನಾವೆಲ್ಲರೂ ಗೌರವಿಸಬೇಕಾಗಿರುವುದು ಸರ್ಕಾರದ ಮಹತ್ವದ ಕಾರ್ಯವಾಗಿದೆ.

ಹಾಗೂ ಸರ್ಕಾರವು ಇತ್ತೀಚೆಗೆ ಎಲ್.ಬಿ.ಎ. ಆದೇಶಕ್ಕೆ ಸಂಬಂಧಿಸಿದಂತೆ, ಪರೀಕ್ಷೆಗಳನ್ನು ಸಂಘಟಿಸಲು ಮುದ್ರಣ ವೆಚ್ಚ, ಅಂತರ್ಜಾಲದಲ್ಲಿ ಇಂದಿಕರಿಸಲು ತಜ್ಞ ಸಿಬ್ಬಂದಿಯನ್ನು ಹಾಗೂ ಕಛೇರಿಯ ಸಹಾಯಕರನ್ನು ಸರ್ಕಾರವು ಒದಗಿಸಿದೆಯೇ? ಪರೀಕ್ಷೆಗಳನ್ನು ಸಂಘಟಿಸಲು ಬೇಕಾಗುವ ವೆಚ್ಚವನ್ನು ನಿರ್ವಹಿಸಲು ಮುಖ್ಯ ಶಿಕ್ಷಕರಿಗೆ ಸರ್ಕಾರವು ಅನುದಾನವನ್ನು ಒದಗಿಸಿದೆಯೇ? ಇಲ್ಲವಾದರೆ ಎಲ್.ಬಿ.ಎ.ಗೆ ತಗಲುವ ವೆಚ್ಚವನ್ನು ಮಕ್ಕಳ ಮೇಲೆ ಭರಿಸಲು ಸರ್ಕಾರ ಆದೇಶವೇನಾದರೂ ಮಾಡಿದೆಯೇ? ಇಂಥ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ತ್ರಿಶಂಕು ಸ್ಥಿತಿಯಲ್ಲಿರುವನು, ಆತನ ನೋವನ್ನು ಕೇಳುವವರು ಯಾರು? ಇಲ್ಲವಾದರೆ ಆತ ಕೈಲಿಂದ ಭರಿಸಬೇಕೇ? ಈ ಕುರಿತು ಸರ್ಕಾರ ಸ್ಪಷ್ಟವಾಗಿ ಉತ್ತರವನ್ನು ಒದಗಿಸಬೇಕು.

ಮೇಲಿನ ಎಲ್ಲಾ ಅಂಶಗಳನ್ನು ಕುರಿತು ಸರ್ಕಾರವು ಗಂಭೀರವಾಗಿ ಮತ್ತೊಮ್ಮೆ ಪರಿಶೀಲಿಸಿ ಈಗಾಗಲೇ ಹೊರಡಿಸಿದ ಆದೇಶವನ್ನು ಹಿಂಪಡೆಯುವಂತೆ ಸರ್ಕಾರವನ್ನು ನಾನು ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ತರಲು ಬಯಸುತ್ತೇನೆ.

ಶ್ರೀ ಮಧು ಬಂಗಾರಪ್ಪ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(614) 11.08.2025 2.20 ಬಿಸಿಹೆಚ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

ಊ) ದಿನಾಂಕ 09.08.2025ರಂದು " ನಂದಗಡ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಅವ್ಯವಹಾರ" ಕುರಿತು.

\- - -

ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವವುಳ್ಳ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ 09.08.2025ರಂದು "ನಂದಗಡ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಅವ್ಯವಹಾರ" ಎಂದು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. "ಖಾನಾಪುರ ತಾಲ್ಲೂಕಿನ ನಂದಗಡ ಗ್ರಾಮದಲ್ಲಿರುವ ಟಿ.ಎ.ಪಿ.ಎಂ.ಸಿ (ಮಾರ್ಕೆಟಿಂಗ್) ಸೊಸೈಟಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಹಗರಣ ನಡೆದಿದೆ ಎಂಬ ಸದ್ದು ತಾಲ್ಲೂಕಿನಲ್ಲಿ ಅತ್ಯಂತ ಸಂಚಲನ ಮೂಡಿಸಿದೆ. ಸಂಘದಲ್ಲಿರುವ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು ಸೇರಿಕೊಂಡು 2023-24ನೇ ಸಾಲಿನಲ್ಲಿ 84 ಲಕ್ಷ ರೂಪಾಯಿಗಳ ಮುಂಗಡ ಹಣದ ರೂಪದಲ್ಲಿ ನಿರ್ದೇಶಕರ ಮಂಡಳಿಯು ಕೋಟ್ಯಾಂತರ ರೂಪಾಯಿಗಳ ಆರ್ಥಿಕ ಭ್ರಷ್ಟಾಚಾರವನ್ನು ಮಾಡಿದೆ ಎಂದು ಲೆಕ್ಕಪರಿಶೋಧನಾ ವರದಿ ಸ್ಪಷ್ಟಪಡಿಸಿದೆ. ಇದು 2019ರಿಂದ ಸಂಘದಲ್ಲಿ ಮುಂಗಡ ಹಣವನ್ನು ನಿರ್ದೇಶಕರು ಪಡೆಯುತ್ತಿದ್ದು, ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಸಮಗ್ರ ಮಾಹಿತಿಯೊಂದಿಗೆ ಕಂಡುಬಂದಿರುತ್ತದೆ. ಹೀಗಾಗಿ, ಈ ಹಣಕಾಸು ವಂಚನೆಯ ಬಗ್ಗೆ ಸಮಗ್ರ ತನಿಖೆಯನ್ನು ನಡೆಸಿ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು.

ಕಳೆದ ಕೆಲವು ವರ್ಷಗಳಿಂದ ಆಡಿಟ್ ವರದಿಯಲ್ಲಿ ದೋಷಗಳನ್ನು ದಾಖಲಿಸಲಾಗಿದೆ. ಆದಾಗ್ಯೂ, ಸಂಬಂಧಪಟ್ಟ ಇಲಾಖೆ ಇದನ್ನು ಗಣನೆಗೆ ತೆಗೆದುಕೊಂಡಿಲ್ಲ. ಆದ್ದರಿಂದ ನಿರ್ದೇಶಕರ ಮಂಡಳಿಯು ಸಡಿಲವಾಗಿದೆ. ಸೊಸೈಟಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಸಂಪೂರ್ಣ ತನಿಖೆ ನಡೆಯಬೇಕು" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಕುರಿತು ಇಲಾಖೆಯ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಬಗ್ಗೆ ಇಲಾಖೆಯ ವತಿಯಿಂದ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡಲು ಮತ್ತು ಆರೋಪಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಸಹಕಾರ ಇಲಾಖೆ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಗಣಿಗಾರಿಕೆ ಹಾಗೂ ಮರಳುಗಾರಿಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಕೂಲಿ ಕಾರ್ಮಿಕರು ಹಾಗೂ ಸಣ್ಣ ಗುತ್ತಿಗೆದಾರರು ತೊಂದರೆಯಲ್ಲಿದ್ದು, ಜಿಲ್ಲೆಗೆ ಹೊಸ ಮರಳು ನೀತಿಯನ್ನು ಜಾರಿಗೊಳಿಸಿ ಪರವಾನಗಿ ನೀಡಬೇಕೆಂದು ಕೋರಿರುವ ಕುರಿತು.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಗಣಿಗಾರಿಕೆ ಹಾಗೂ ಮರಳುಗಾರಿಕೆಗೆ ಹೊಸ ನೀತಿಯನ್ನು ಜಾರಿಗೊಳಿಸಿ ಪರವಾನಗಿ ನೀಡುವಂತೆ ಕೋರಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

"ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಗಣಿಗಾರಿಕೆ ಹಾಗೂ ಮರಳುಗಾರಿಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಇವುಗಳನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದ ಲಕ್ಷಾಂತರ ಕಾರ್ಮಿಕ ಕುಟುಂಬಗಳು ಬೀದಿಗೆ ಬಂದಿವೆ. ಇದರಿಂದ ಜಿಲ್ಲೆಯ ಆರ್ಥಿಕತೆ ಕುಂಠಿತಗೊಂಡಿದ್ದು, ಕೆಂಪುಕಲ್ಲು ಮತ್ತು ಮರಳು ಇಲ್ಲದೇ ಕರಾವಳಿ ಭಾಗವಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಕಾಮಗಾರಿಗಳು ನಡೆಯುತ್ತಿಲ್ಲ ಮತ್ತು ಪ್ರಮುಖ ಕಾಮಗಾರಿಗಳು ಸ್ಥಗಿತಗೊಂಡಿರುವುದರಿಂದ ಜಿಲ್ಲೆಯ ಆರ್ಥಿಕತೆಯ ವ್ಯವಸ್ಥೆ ಮೇಲೆ ದೊಡ್ಡ ರೀತಿಯ ಹೊಡೆತ ಬಿದ್ದಿದೆ" ಎಂದು ವಿಜಯ ಕರ್ನಾಟಕ, ಉದಯವಾಣಿ ಮತ್ತು ವಾರ್ತಾ ಭಾರತಿ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ವರದಿಯನ್ನು ಲಗತ್ತಿಸಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಜನಪರ ಕಾಮಗಾರಿಗಳಿಗೆ ಕೆಂಪುಕಲ್ಲು ಮತ್ತು ಮರಳು ಅತ್ಯಂತ ಪ್ರಮುಖವಾದ ವಸ್ತುವಾಗಿದೆ. ರಾಜ್ಯ ಸರ್ಕಾರ ಹೊಸ ಮರಳು ಸಾಗಾಣಿಕೆ ನೀತಿಯಿಂದ ಸಂಪೂರ್ಣ ಸ್ಥಗಿತಗೊಂಡು ಇದನ್ನೇ ನಂಬಿ ಜೀವನ ಸಾಗಿಸುತ್ತಿದ್ದಂತಹ ಕಾರ್ಮಿಕರು ಸಂಕಷ್ಟಕ್ಕೀಡಾಗಿದ್ದಾರೆ. ಕೇರಳದಲ್ಲಿ 1 ಟನ್ ಕಲ್ಲಿಗೆ ಕೇವಲ 32 ರೂಪಾಯಿಗಳಷ್ಟು ರಾಜಧನ ನಿಗದಿಯಾಗಿದ್ದರೆ, ಅದೇ ಪ್ರಮಾಣದ ಕಲ್ಲಿಗೆ ಕರ್ನಾಟಕದಲ್ಲಿ 290 ರೂಪಾಯಿಗಳು ನಿಗದಿಪಡಿಸಿರುವುದು ಅತ್ಯಂತ ಖೇದಕರ. 1 ಟನ್ ಮರ ಇಟ್ಟಿಗೆಗೆ ಶೇ.96 ನಿಗದಿಪಡಿಸಿದ್ದು, ಇದನ್ನು ಶೇ.10ಕ್ಕೆ ನಿಗದಿಗೊಳಿಸಬೇಕು. ಹಾಗೆಯೇ ಕರಾವಳಿ ಜಿಲ್ಲೆಗಳಲ್ಲಿ ಪ್ರತ್ಯೇಕ ಮರಳು ನೀತಿಯನ್ನು ತಕ್ಷಣವೇ ಜಾರಿಗೆ ತರಬೇಕು. ಸರಳೀಕೃತ ವ್ಯವಸ್ಥೆಯಲ್ಲಿ ಮರಳುಗಾರಿಕೆ ಜಾರಿಗೊಳಿಸಿ ಸಾಗಾಟಕ್ಕೆ ಇರತಕ್ಕಂಥ ಅಡೆತಡೆಗಳನ್ನು ಕಾನೂನು ರೀತ್ಯಾ ವ್ಯವಹರಿಸಬೇಕು. ಹಳ್ಳ, ತೊರೆ, ತೋಡು, ನದಿ ಮತ್ತು ಹೊಳೆಗಳಲ್ಲಿ ಪ್ರಾಕೃತಿಕವಾಗಿ ಲಭ್ಯವಾಗುವ ಮರಳನ್ನು ತೆಗೆದು ಕಟ್ಟಡ ನಿರ್ಮಾಣಕ್ಕೆ ಬಳಸಲು ಪರವಾನಿಗೆ ನೀಡುವುದಕ್ಕೆ ಸ್ಥಳೀಯಾಡಳಿತಗಳಿಗೆ ಅವಕಾಶ ಕಲ್ಪಿಸಬೇಕು ಮತ್ತು ಈ ಎಲ್ಲಾ ತಾರತಮ್ಯವನ್ನು ಸರಿಪಡಿಸಿ ಜಿಲ್ಲೆಗೆ ಹೊಸ ನೀತಿಯೊಂದನ್ನು ಜಾರಿಗೊಳಿಸಬೇಕೆಂಬುದು ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಆಗ್ರಹವಾಗಿರುವುದರಿಂದ, ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

ಎ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಗರ್ಭಿಣಿ, ಬಾಣಂತಿಯರು, ಕಿಶೋರಿಯರು ಹಾಗೂ 6 ವರ್ಷದೊಳಗಿನ ಮಕ್ಕಳ ಆರೋಗ್ಯದ ಮೇಲೆ ನಿಗಾ ವಹಿಸಲು ಹಾಗೂ ಫಲಾನುಭವಿಗಳಿಗೆ ಫೇಸ್ ಕ್ಯಾಪ್ಚರ್ ಮೂಲಕ ಪೌಷ್ಠಿಕ ಆಹಾರ ಸರಬರಾಜು ಮಾಡುವಲ್ಲಿ ಆಗುತ್ತಿರುವ ತೊಂದರೆ ಬಗ್ಗೆ.

ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಮಹಿಳಾ ಮತ್ತು ಮಕ್ಕಳ ಇಲಾಖೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಗರ್ಭಿಣಿ, ಬಾಣಂತಿಯರು, ಕಿಶೋರಿಯರು ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆ ಸೇರಿದಂತೆ ಆರೋಗ್ಯದ ಮೇಲೆ ನಿಗಾವಹಿಸಲು ರೂಪಿಸಲಾಗಿದೆ. ಆದರೆ, ಫೇಸ್ ಕ್ಯಾಪ್ಚರ್ ಸಮಸ್ಯೆಯಿಂದ ಸಾಕಷ್ಟು ಫಲಾನುಭವಿಗಳು ಸೌಲಭ್ಯ ಸಿಗದೇ ಕೆಲವು ತಿಂಗಳುಗಳಿಂದ ಪರದಾಡುತ್ತಿದ್ದಾರೆ. ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಅಂಗನವಾಡಿ ವ್ಯಾಪ್ತಿಯ ಎಲ್ಲಾ ಅರ್ಹ ಫಲಾನುಭವಿಗಳ ಫೇಸ್ ಕ್ಯಾಪ್ಚರ್ ಮಾಡಿ ದಾಖಲೆ ಸಲ್ಲಿಸಿದರೆ ಮಾತ್ರ ಪೌಷ್ಟಿಕ ಆಹಾರ ಸರಬರಾಜು ಆಗಲಿದೆ.

ಆದರೆ, ಎಲ್ಲಾ ಕಡೆ ಮೊಬೈಲ್ ನೆಟ್‌ವರ್ಕ್ ಸರಿಯಾಗಿ ಕೆಲಸ ಮಾಡುವುದಿಲ್ಲ. ಕೆಲವು ಬಾರಿ ಆಧಾರ್‌ಗೆ ಲಿಂಕ್ ಆದ ಫೋನ್ ನಂಬರ್ ಇರುವುದಿಲ್ಲ. ಅದನ್ನು ದೃಢಪಡಿಸಲು ಓಟಿಪಿ ಬರುವುದಿಲ್ಲ. ಕೆಲವರ ಮೊಬೈಲ್ ಚಾಲ್ತಿಯಲ್ಲೇ ಇರುವುದಿಲ್ಲ. ಆಗ ಫಲಾನುಭವಿಗಳು 'ನೀವೇ ರೀಚಾರ್ಜ್ ಮಾಡಿಸಿ' ಎಂದು ಕೇಳುವ ನಿದರ್ಶನಗಳಿವೆ. ಕೆಲವರು ಆಧಾರ್ ಅಪ್‌ಡೇಟ್ ಮಾಡಿಸದ ಕಾರಣ ಅಲ್ಲಿರುವ ಫೋಟೋಗೆ ಈಗಿನ ಫೋಟೋ ಹೋಲಿಕೆಯಾಗದೇ ಫೇಸ್ ಕ್ಯಾಪ್ಚರ್ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಅವರ ಮನೆಗಳ ಬಳಿಗೆ ಹೋಗಬೇಕು. ಹೋದರೂ ಕೂಡ ಅಲ್ಲಿ ನೆಟ್‌ವರ್ಕ್ ಸಮಸ್ಯೆ ಕಾಡುತ್ತಿದೆ. ಹೀಗಾಗಿ, ಪ್ರತಿ ತಿಂಗಳು ಈ ಸಮಸ್ಯೆಯಿಂದಲೇ ಸರಿಯಾದ ಆಹಾರ ಪದಾರ್ಥಗಳು ಸರಬರಾಜು ಆಗುತ್ತಿಲ್ಲ. ಫೇಸ್ ಕ್ಯಾಪ್ಚರ್‌ಗಾಗಿ ಇಲಾಖೆಯಿಂದ ಪ್ರತ್ಯೇಕ ಮೊಬೈಲ್ ಕೊಟ್ಟಿಲ್ಲ. ಅಂಗನವಾಡಿ ಕಾರ್ಯಕರ್ತೆಯರ ಮೊಬೈಲ್‌ಗಳಲ್ಲೇ ಈ ಕಾರ್ಯ ಮಾಡಬೇಕು. ಕೆಲವರ ಬಳಿ ಅಷ್ಟು ಸೌಲಭ್ಯದ ಮೊಬೈಲ್‌ಗಳು ಇಲ್ಲ. ಅಲ್ಲದೇ ಫೇಸ್ ಕ್ಯಾಪ್ಚರ್‌ಗೆ ಅಗತ್ಯವಾದ ವಾತಾವರಣ ಇರದ ಕಾರಣ, ಫೇಸ್ ಕ್ಯಾಪ್ಚರ್ ಮಾಡುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸಿಕ್ಕಸಿಕ್ಕವರ ಹೆಸರಿನಲ್ಲಿ ಪೌಷ್ಟಿಕ ಆಹಾರ ವಿತರಣೆಯಾಗಿ ದುರ್ಬಳಕೆ ಆಗುತ್ತಿದ್ದ ಕಾರಣ ಅಕ್ರಮಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಉದ್ದೇಶ ಸರಿ ಇದ್ದರೂ ತಾಂತ್ರಿಕ ತೊಂದರೆಯಿಂದ ಫೇಸ್ ಕ್ಯಾಪ್ಚರ್ ಮಾಡಲಾಗದೇ ತೊಂದರೆಯಾಗಿದೆ ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು):- ಮಾನ್ಯ ಸಭಾಪತಿಯವರೇ ಕೇಂದ್ರ ಸರ್ಕಾರ ಕಳೆದ 3 ತಿಂಗಳ ಹಿಂದೆಯೇ face Recognition System ಅನ್ನು ಇಡೀ ದೇಶದಲ್ಲಿಯೇ introduce ಮಾಡಬೇಕೆಂದು ಹೇಳಿತ್ತು. ಕರಾವಳಿ ಭಾಗದಲ್ಲಿ network ಸಮಸ್ಯೆಗಳಿರಬಹುದು ಅಥವಾ ತಂತ್ರಾಂಶ ದೋಷಗಳಿರಬಹುದು ಈ ರೀತಿಯ ತಾಂತ್ರಿಕ ದೋಷಗಳಾಗುತ್ತಿವೆ ಎಂದು ನಾವು ಕೂಡ ಕೇಂದ್ರ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದೆವು. ಬಹಳಷ್ಟು ಅಂಗನವಾಡಿಗಳ Unions ಇರಬಹುದು, ಕಾರ್ಯಕರ್ತರುಗಳು ನನ್ನ ಹತ್ತಿರ ಬಂದು ಈ ಸಮಸ್ಯೆಗಳ ಬಗ್ಗೆ ಸಾಕಷ್ಟು ಬಾರಿ ಹೇಳಿದ್ದಾರೆ. ಆದರೆ ನಾನು ಅಭಿಮಾನದಿಂದ ಮಾನ್ಯ ಸದಸ್ಯರ ಗಮನಕ್ಕೆ, ತಮ್ಮ ಗಮನಕ್ಕೆ ಮತ್ತು ಈ ಸದನದ ಗಮನಕ್ಕೆ ತರುವುದೇನೆಂದರೆ Face Recognition System ನಲ್ಲಿ ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯ ಶೇ.94 complete ಮಾಡಿ 2nd rank ನಲ್ಲಿದ್ದೇವೆ. ಇಡೀ ದೇಶದಲ್ಲಿಯೇ ನಮ್ಮ ರಾಜ್ಯವನ್ನು 2ನೇ ಸ್ಥಾನಕ್ಕೆ ತಂದು ನಿಲ್ಲಿಸಿದ್ದೇವೆ. ಇದು ಹೇಗೆ ಸಾಧ್ಯವಾಯಿತೆಂದರೆ, ನಮ್ಮ ಆಡಳಿತದಲ್ಲಿ ಸ್ವಲ್ಪ ಸುಧಾರಣೆಯನ್ನು ತೆಗೆದುಕೊಂಡು ಬರಬೇಕೆಂದು ಹೇಳಿಕೊಂಡು, ಅಧಿಕಾರಿಗಳ ಸಹಕಾರ ಹಾಗೂ ನಮ್ಮ ಕಾರ್ಯಕರ್ತರ ಸಹಕಾರದಿಂದ ಈಗಾಗಲೇ ನಾವು 94 percent complete ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುವುದೇನೆಂದರೆ, ಪದೇಪದೇ ಸಾಕಷ್ಟು ಅವ್ಯವಹಾರಗಳಾಗುತ್ತವೆ, ದಿನಸಿ ಸಾಮಾನುಗಳನ್ನು ಬೋಗಸ್ ಆಗಿ ಕೊಡುತ್ತಾರೆಂದು ಬಹಳಷ್ಟು ದಿನಗಳಿಂದ ನಮ್ಮ ಇಲಾಖೆಯ ಮೇಲೆ ಆರೋಪ ಬರುತ್ತಿತ್ತು. ಈಗ Face Recognition System ಅನ್ನು ತಂದಿರುವುದರಿಂದ ಈ ಆರೋಪಕ್ಕೆ ಎಲ್ಲದಕ್ಕೂ ಕೂಡ ಉತ್ತರ ಸಿಕ್ಕಿದೆ. ಏಕೆಂದರೆ ಯಾರು ನಿಜವಾದ ಫಲಾನುಭವಿಗಳಿದ್ದಾರೆ ಅಂತಹವರಿಗಷ್ಟೇ ನಾವು ಆಹಾರ ಸಾಮಗ್ರಿಗಳನ್ನು 6 ತಿಂಗಳಿನಿಂದ 3 ವರ್ಷದ ಮಕ್ಕಳಿಗೆ, ಬಾಣಂತಿಯರಿಗೆ ಮತ್ತು ಕಿಶೋರಿ ಮಕ್ಕಳಿಗೆ Take Home Ration (THR) ಕೊಡುತ್ತೇವೆ ಅಥವಾ ಅವರು ಅಂಗನವಾಡಿಗೆ ಬಂದು ಊಟ ಮಾಡುತ್ತೇನೆಂದರೆ ಅಂಗನವಾಡಿಯಲ್ಲೂ ಕೂಡ ಕೊಡುತ್ತೇವೆ. (ಮುಂದು)

(615)11.8.2025/2.30/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮುಂದು):-

ಮೊದಲನೆಯದಾಗಿ ಈ ಆರೋಪದಿಂದ ಹೊರ ಬರಬೇಕೆಂದು ನಾನು ಕೂಡ ಬಹಳಷ್ಟು ಕಠಿಣವಾಗಿ ಇಡೀ ರಾಜ್ಯದಲ್ಲಿ Face Recognition System ತೆಗೆದುಕೊಂಡು ಬಂದಿದ್ದೇನೆ. ಮಾನ್ಯ ಸದಸ್ಯರು ಮೊಬೈಲ್ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ಒಂದು ಮಾತನ್ನು ಹೇಳಿದರು. ನಮ್ಮ ಸರ್ಕಾರ ಬಂದ ಮೇಲೆ ಕಳೆದ ಒಂದು ವರ್ಷದ ಹಿಂದೆಯೇ ಇಡೀ ರಾಜ್ಯದಲ್ಲಿ ನಮ್ಮ ಕಾರ್ಯಕರ್ತರಿಗೆ ಹೊಸದಾಗಿ ಮೊಬೈಲನ್ನು ಕೊಟ್ಟಿದ್ದೇನೆ. ನಾನು ಇಷ್ಟನ್ನು ಹೇಳಬಯಸುತ್ತೇನೆ, Face Recognition System ತಂದಿರುವುದರಿಂದ ನಮ್ಮ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕರ್ತೆಯರಿಗೆ ಸ್ವಲ್ಪ ಜಾಸ್ತಿ ಕೆಲಸವಾಗುತ್ತಿದೆ. ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಯಾವುದೇ ಸರ್ಕಾರ ಬಂದರೂ ಕೂಡ ಈ ಕಾರ್ಯಕರ್ತೆಯರನ್ನು BLO (Booth Level Officer) ಕೆಲಸಕ್ಕೆ ಏನು ನಾವು ಉಪಯೋಗ ಮಾಡುತ್ತಿದ್ದೆವು ಅದನ್ನು ಈ ಬಾರಿ ಚುನಾವಣೆ ಕೆಲಸದಿಂದ ಅವರಿಗೆ ವಿನಾಯಿತಿ ಕೊಡುವ ಕೆಲಸ ಮಾಡಿದ್ದೇವೆ. ಇದನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಜಂಟಿ ನಿರ್ದೇಶನದ ಮೇರೆಗೆ Face Recognition System ನಲ್ಲಿ ನಾವು ಅವರನ್ನು ಗುರುತಿಸಲಿಲ್ಲವೆಂದರೆ, ಮೊಬೈಲ್ ನಂಬರನ್ನು ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲಿಲ್ಲವೆಂದರೆ, ನಮಗೆ ಕೇಂದ್ರ ಸರ್ಕಾರದಿಂದ ಬರುವ ಅಕ್ಕಿ ಮತ್ತು ಗೋಧಿಯಂತಹ ಆಹಾರ ಧಾನ್ಯಗಳು ಬರುವುದಿಲ್ಲ. So, this is very important. ಇದರಲ್ಲಿ ಪಾರದರ್ಶಕತೆಯನ್ನು ತರುವುದಕ್ಕೆ ಮತ್ತು ಕೇಂದ್ರ ಸರ್ಕಾರದಿಂದ ICDS (Integrated Child Development Services) Programme ನಲ್ಲಿ ಆಹಾರವನ್ನು ತೆಗೆದುಕೊಳ್ಳುವುದಕ್ಕೆ ಇದನ್ನು ನಾವು ಮಾಡಲೇಬೇಕಾಗಿದೆ. ಆದರೆ ಇನ್ನೂ ಸರಳೀಕೃತ ಮಾಡುವುದಕ್ಕೆ ಮೂರು ತಿಂಗಳಾಗುತ್ತದೆ. ತಂತ್ರಾಂಶದಲ್ಲಿ ಇನ್ನೂ ಗಣನೀಯವಾದ ಬದಲಾವಣೆಯನ್ನು ತರುವುದಕ್ಕೆ ಇನ್ನೂ ಸರಳೀಕೃತ ಮಾಡುವುದಕ್ಕೆ ನಾವು ಇನ್ನೂ ಪ್ರಯತ್ನ ಮಾಡುತ್ತೇವೆ.

ಏ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇಲ್ಲಿನ ನಿವೃತ್ತ ಪ್ರಾಧ್ಯಾಪಕರುಗಳು ಮತ್ತು ಸಿಬ್ಬಂದಿಗಳು ಪ್ರತಿ ತಿಂಗಳು ಪಿಂಚಣಿ ಹಣ ಪಾವತಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿರುವ ಬಗ್ಗೆ.

\- - - -

ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇಲ್ಲಿ ಒಟ್ಟು 1800 ನಿವೃತ್ತ ನೌಕರರು ಇದ್ದು, ಅವರಿಗೆ ಪ್ರತಿ ತಿಂಗಳು ಪಿಂಚಣಿ ಹಣ ಪಾವತಿಸಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ನಿವೃತ್ತ ಶಿಕ್ಷಕ ಹಾಗೂ ಶಿಕ್ಷಕೇತರ ಸಂಘದವರು ಪ್ರತಿ ಬಾರಿ ಪ್ರತಿಭಟನೆ ಮಾಡಿಯೇ ಪಿಂಚಣಿ ಪಡೆಯುವ ವಾತಾವರಣ ನಿರ್ಮಾಣವಾಗಿರುವುದು. ಇದು ಯಾವ ಸರ್ಕಾರಕ್ಕೆ ಶೋಭೆ ತರುವಂತಹ ವಿಷಯವಲ್ಲ.

ವಿಶ್ವವಿದ್ಯಾಲಯಕ್ಕೆ ನಿವೃತ್ತ ನೌಕರರಿಗೆ ಪಿಂಚಣಿ ಹಣ ವಿತರಣೆ ಮಾಡಲು ವರ್ಷಕ್ಕೆ ಸುಮಾರು 126 ಕೋಟಿ 11 ಲಕ್ಷ ಹಣ ಬೇಕಾಗಿರುವುದು. ಇದರಲ್ಲಿ ಸರ್ಕಾರ ಇಲ್ಲಿಯವರೆಗೆ ಸುಮಾರು 55 ಕೋಟಿ ಮಾತ್ರ ಬಿಡುಗಡೆಗೊಳಿಸಿರುವುದು. ಹೀಗಾಗಿ 1ನೇ ಸೆಪ್ಟೆಂಬರ್, 2025ಕ್ಕೆ ಪಿಂಚಣಿ ವಿತರಣೆ ಮಾಡಲು ವಿಶ್ವವಿದ್ಯಾಲಯದಲ್ಲಿ ಹಣ ಇರುವುದಿಲ್ಲ. ಮತ್ತು ಇದಲ್ಲದೆ ಆಂತರಿಕ ಮೂಲಗಳಿಂದ ಸಂಗ್ರಹಿಸಿ ವಿತರಣೆ ಮಾಡಲು ಯಾವ ಅವಕಾಶಗಳು ಇರುವುದಿಲ್ಲ. ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಸಂಪೂರ್ಣ ಕಷ್ಟದಲ್ಲಿರುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಎಲ್ಲಾ ವಿಚಾರದ ಹಿನ್ನಲೆಯಲ್ಲಿ ಸರ್ಕಾರ ಮಾರ್ಚ್ ತಿಂಗಳ ಕೊನೆಯವರೆಗೆ ನಿವೃತ್ತ ನೌಕರರಿಗೆ ಪ್ರತಿ ತಿಂಗಳು ಪಿಂಚಣಿ ಹಣ ಸರಿಯಾಗಿ ವಿತರಿಸಲು ಇನ್ನೂ ಬಿಡುಗಡೆ ಮಾಡಬೇಕಾದ ಪಿಂಚಣಿ ಗ್ರಾಂಟ್ 71 ಕೋಟಿ 11 ಲಕ್ಷ ಹಣವನ್ನು ಹಂತ ಹಂತವಾಗಿ ಬಿಡುಗಡೆಗೊಳಿಸಲು ಉನ್ನತ ಶಿಕ್ಷಣ ಸಚಿವರನ್ನು ನಾನು ಆಗ್ರಹಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

ಸಭಾಪತಿಯವರು:- ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ನೀಡಿದ ಸೂಚನೆಯನ್ನು ನಿಯಮ 68ಕ್ಕೆ ಕನ್ವರ್ಟ್ ಮಾಡಿದ್ದೇನೆ. ಈಗ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

07. ಹಕ್ಕುಚ್ಯುತಿ ಪ್ರಸ್ತಾವ

ವಿಷಯ:- ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಕಲಬುರಗಿಯ ಚಿತ್ತಾಪುರದ Circuit House ನಲ್ಲಿ ದಿಗ್ಬಂಧನದಲ್ಲಿರಿಸಿದ್ದ ಬಗ್ಗೆ

– –

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ನಾನು ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಗುಲ್ಬರ್ಗದ ಚಿತ್ತಾಪುರಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲಿ ಗುಲ್ಬರ್ಗದಲ್ಲಿ Press Conference ಮಾಡುವಾಗ ಪತ್ರಿಕಾ ಮಿತ್ರರು ನನಗೆ ಒಂದು ಪ್ರಶ್ನೆ ಕೇಳಿದರು. ದೇಶದ ಪ್ರಧಾನ ಮಂತ್ರಿಗಳನ್ನು ಕೆಲವು ಕಾಂಗ್ರೆಸ್ ನಾಯಕರು ಮನ ಬಂದಂತೆ ನಿಂದಿಸುತ್ತಾರಲ್ಲಾ ಅದರ ಮೇಲೆ ನೀವೇಕೆ ಕ್ರಮ ಕೈಗೊಳ್ಳುವುದಿಲ್ಲ, ನೀವು ಏತಕ್ಕೆ ಮಾತನಾಡುವುದಿಲ್ಲ ಎಂದು ಕೇಳಿದರು. ಆಗ ನಾನು ಅವರಿಗೆ 'ಶ್ವಾನವೊಂದು ಬೊಗಳಿದರೆ ಆನೆ ಹೆದರುವುದೇ' ಎಂದು ಈ ಹಳ್ಳಿ ಗಾದೆಯನ್ನು ಹೇಳಿದೆ. ನಾನು ಇದನ್ನು ಏತಕ್ಕೆ ಹೇಳಿದೆನೆಂದರೆ, ಹಿರಿಯರನ್ನು ಕಿರಿಯರು ಈ ರೀತಿ ನಿಂದಿಸುವುದು ಸರಿಯಾದುದಲ್ಲ, ಅದನ್ನು ತಿದ್ದಿಕೊಳ್ಳಬೇಕೆಂದು ಇಷ್ಟನ್ನೇ ಹೇಳಿದೆ. ಅಲ್ಲಿಂದ ನಾನು 3 ಗಂಟೆಗೆ ಚಿತ್ತಾಪುರಕ್ಕೆ ಹೋಗಿದ್ದೆ. ಅಲ್ಲಿ ನನ್ನದೊಂದು ಸಭೆ ಇತ್ತು. ಆ ಸಭೆಯಲ್ಲಿ ನಾನು ಪಾಲ್ಗೊಳ್ಳಬೇಕಾಗಿತ್ತು. ಆದರೆ ಇನ್ನೂ ಸ್ವಲ್ಪ ಸಮಯವಿದೆಯೆಂದು ನಾನು ಅಲ್ಲಿಂದ Circuit House ಗೆ ಹೋದೆ. ನಾನು ಅಲ್ಲಿ ಕುಳಿತಿರಬೇಕಾದರೆ ಸುಮಾರು 20-30 ಕಾರ್ಯಕರ್ತರು ಅಲ್ಲಿಗೆ ಬಂದು ಘೋಷಣೆ ಕೂಗುವುದಕ್ಕೆ ಪ್ರಾರಂಭ ಮಾಡಿದರು. ಕ್ರಮೇಣ ಅಲ್ಲಿ 30-40 ಜನರಾದರು. ಇಲ್ಲಿ ಪ್ರಶ್ನೆಯೇನೆಂದರೆ, ಆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಈ ಗಾದೆ ಅವರಿಗೂ ಸಂಬಂಧವಾಗುತ್ತದೆ ಎಂದರು ಅದಕ್ಕೆ 'ಹೌದು' ಎಂದು ಹೇಳಿದೆ. ಏಕೆಂದರೆ ದೇಶದ ಪ್ರಧಾನ ಮಂತ್ರಿಗಳನ್ನು ತುಚ್ಛವಾಗಿ ನಿಂದಿಸುವಂತಹದ್ದು;

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ,

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಈಗ ನಾನು ಮಾತನಾಡುತ್ತಿದ್ದೇನೆ, ಅವರು ಆಮೇಲೆ ಮಾತನಾಡಲಿ. ನಾನು ಮಾತನಾಡುವಾಗ disturb ಮಾಡಬೇಡಿ. ಅದಕ್ಕೆ ನಾನು ಅವರ ಹೆಸರನ್ನು ಹೌದು ಎಂದು ಹೇಳಿದೆ.

ಶ್ರೀ ಸಲೀಂ ಅಹಮದ್:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇವರು ಯಾವ ವಿಷಯವನ್ನು ಚರ್ಚೆ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನನ್ನ ಹಕ್ಕುಚ್ಯುತಿಯಾಗಿದೆ. ನನ್ನ ಮೇಲೆ ಮಾರಣಾಂತಿಕ ಹಲ್ಲೆ ಮಾಡಬೇಕೆಂದು;

ಶ್ರೀ ಸಲೀಂ ಅಹಮದ್:- ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ನಮಗೆ ನೋಟಿಸ್ ಕೊಡಬೇಕು ಇಲ್ಲದಿದ್ದರೆ ನಮಗೆ ಗೊತ್ತಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕೇಳಿರುವುದು ಬೆಂಗಳೂರಿನ ಕಾಡುಗೋಡಿ ಪ್ಲಾಂಟೇಷನ್ ಪ್ರದೇಶದಲ್ಲಿರುವ ದಿನ್ನೂರು ಗ್ರಾಮದ ಹಿಂದುಳಿದ ಮತ್ತು ದಲಿತ ರೈತರ ಹಲವಾರು ದಶಕಗಳಿಂದ ವಾಸ ಮಾಡುತ್ತಿದ್ದ ಹಾಗೂ ಕೃಷಿ ನಡೆಸಿಕೊಂಡು ಬಂದ ಭೂಮಿಯನ್ನು . . . ಇದರ ಬಗ್ಗೆ ಕೇಳಿದ್ದೀರಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅದಲ್ಲ. ಅದರ ಬಗ್ಗೆ ತಾವು ಆಮೇಲೆ ಹೇಳುತ್ತೇನೆಂದು ಹೇಳಿದ್ದಿರಿ. ಇನ್ನೂ ನಮಗೆ ಹೇಳಿಲ್ಲ. ನಾನು ಕೇಳಿರುವುದೇನೆಂದರೆ, ನನ್ನ ವಿರುದ್ಧವಾಗಿ ಹಕ್ಕುಚ್ಯುತಿಯಾಗಿದೆ.

ಸಭಾಪತಿಯವರು:– ನೀವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಮಾತನಾಡಬೇಕು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ನಿಮಗೆ ಆಗಲೇ ಚೀಟಿ ಕಳುಹಿಸಿದೆ.

ಸಭಾಪತಿಯವರು:– ಚೀಟಿ ಕಳುಹಿಸಿದರೆ ಆಗುವುದಿಲ್ಲ. ನಿಲುವಳಿ ಸೂಚನೆ ಬಗ್ಗೆ ಮಾತನಾಡಬೇಕು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಮಾತನಾಡುತ್ತೇನೆ. ನನಗೆ ಆಗಿರುವಂತಹ ಹಕ್ಕುಚ್ಯುತಿ, ಅನ್ಯಾಯ, ನನ್ನ ಮೇಲೆ ಮಾರಣಾಂತಿಕ ಹಲ್ಲೆ ಮಾಡಬೇಕೆಂದು ಬಂದಿದ್ದರು. ಅದರ ಬಗ್ಗೆ ನಾನು ತಮ್ಮನ್ನು ಅನುಮತಿ ಕೇಳಿದ್ದೆ. ತಾವು ಪ್ರಸ್ತಾಪ ಮಾಡುವಂತೆ ಹೇಳಿದ್ದಿರಿ ಅದನ್ನು ಮಾಡುತ್ತಿದ್ದೇನೆ.

ಸಭಾಪತಿಯವರು:– ಮೊದಲು ಇದರ ಬಗ್ಗೆ ಮಾತನಾಡಿ. ನಂತರ ಅದರ ಬಗ್ಗೆ ಹೇಳಿ. ನಾನು ಅದನ್ನು ನಿಯಮ ೬೮ಕ್ಕೆ ಕನ್ವರ್ಟ್ ಮಾಡಿದ್ದೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಗ್ಗೆ ನಿಯಮ ೨೨ರಡಿ ಕೊಟ್ಟಿರುವಂತಹ ವಿಷಯ ಒಂದು ಪ್ಯಾರ ಇದೆ. ಈಗ ಅವರು ಯಾವ ವಿಷಯದ ಮೇಲೆ ಮಾತನಾಡುತ್ತಿದ್ದಾರೆ ಎಂಬುದು ನಮಗೆ ತಿಳಿಯಬೇಕಲ್ಲವೇ?

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನನ್ನ ಹಕ್ಕುಚ್ಯುತಿಯಾಗಿದೆ. ನನ್ನ ಮೇಲೆ ಮಾರಣಾಂತಿಕ ಹಲ್ಲೆ ಮಾಡಬೇಕೆಂದು ಮಂತ್ರಿಗಳು ಪ್ರಯತ್ನ ಮಾಡಿದರು. ಅವರನ್ನು ಸದನಕ್ಕೆ ಕರೆಸಬೇಕು. ನಾನು ಎಲ್ಲರಿಗೂ ಕಂಪ್ಲೇಂಟ್ ಕೊಟ್ಟಿದ್ದೇನೆ. ಯಾರೂ ಕೂಡ ಇದರ ಮೇಲೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ನಮಗೆ ವಿಷಯವೇ ಗೊತ್ತಿಲ್ಲ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಒಬ್ಬ ವಿರೋಧಪಕ್ಷದ ನಾಯಕನಿಗೆ ಹೀಗಾದರೆ ಬೇರೆಯವರ ಪರಿಸ್ಥಿತಿ ಏನು? ಅದನ್ನು ಕೇಳುವುದಕ್ಕೆ ನಿಂತಿದ್ದೇನೆ. ಇದು ನನ್ನ ಪ್ರಸ್ತಾಪ.

ಶ್ರೀ ಸಲೀಂ ಅಹಮದ್:– ನಮಗೆ ವಿಚಾರವೇನೆಂದು ಗೊತ್ತಾಗುತ್ತಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್:– ಮಾನ್ಯ ಸಭಾಪತಿಯವರೇ, ಮೊದಲು ಅವರು ನೋಟಿಸ್ ಕೊಡಲಿ ಆಮೇಲೆ ಇದರ ಬಗ್ಗೆ ಚರ್ಚೆ ಮಾಡಲಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಪೊಲೀಸ್ ಮಹಾನಿರ್ದೇಶಕರಿಗೆ ದೂರು ಕೊಟ್ಟಿದ್ದೇನೆ ಅವರೂ ಸಹ ಉತ್ತರ ಕೊಟ್ಟಿಲ್ಲ. ತಮಗೂ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು:– ಅಲ್ಲಿಯವರೆಗೂ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗಬಾರದು.

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ನನಗೆ ಚೀಟಿ ಕಳುಹಿಸಿದ್ದಿರಿ. ಚೀಟಿಯಲ್ಲಿ ಹಕ್ಕುಚ್ಯುತಿ ವಿಷಯವನ್ನು ಪ್ರಶ್ನೋತ್ತರ ವೇಳೆಯ ನಂತರ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ಕೇಳಿದಿರಿ. ಅದರ ಪ್ರಕಾರ ಕಳುಹಿಸಿಕೊಟ್ಟಿದ್ದೇನೆ. ನಿಲುವಳಿ ಸೂಚನೆ ಕೊಟ್ಟಿರುವ ಬಗ್ಗೆ ಮಾತನಾಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನೀವು ಓದುತ್ತಿರುವುದು ನನಗಾಗಿರುವ ಹಕ್ಕುಚ್ಯುತಿ ಬಗ್ಗೆ. ನಿಲುವಳಿ ಸೂಚನೆ ಬೇರೆ. ನಾನು ಚೀಟಿ ಕಳುಹಿಸಿರುವುದು ಹಕ್ಕುಚ್ಯುತಿ ವಿಚಾರ.

ಶ್ರೀ ಎನ್.ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೇ, no discussion. ಅವರು ಕಳುಹಿಸಿರುವ ಸೂಚನೆಯನ್ನು ಸಮಿತಿಗೆ ಕಳುಹಿಸಿಕೊಟ್ಟಿದ್ದೇವೆ. ಇಲ್ಲಿ ಮಾತನಾಡುವ ಹಾಗಿಲ್ಲ. ವರದಿ ಕೊಡುತ್ತೇವೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ನನಗಾಗಿರುವ ಅನ್ಯಾಯಕ್ಕೆ ಸದನದಲ್ಲಿ ಕೇಳಲೇ ಅಥವಾ ಬೀದಿಯಲ್ಲಿ ಕೇಳಬೇಕೇ?

(ಗೊಂದಲ)

ಶ್ರೀ ಸಲೀಂ ಅಹಮದ್:– ಉತ್ತರವನ್ನು ಯಾರು ಕೊಡುತ್ತಾರೆ?

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಸಂಬಂಧಪಟ್ಟ ಸಚಿವರು ರಾಜೀನಾಮೆ ಕೊಡಬೇಕು. ನನ್ನನ್ನು ಐದು ಗಂಟೆಗಳ ಕಾಲ ಕೂಡಿ ಹಾಕಿದ್ದರು.

(ಗೊಂದಲ)

ಸಭಾಪತಿಯವರು:– ಒಂದು ನಿಮಿಷ ಇರಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಹಕ್ಕುಚ್ಯುತಿ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿದ್ದಾರೆ. ಅದು ಪೆಂಡಿಂಗ್ ಇದೆ. ಅಲ್ಲಿ ತೀರ್ಮಾನ ಮಾಡಲಿ. ನಂತರ ಮಾತನಾಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನಾನು ಇನ್ನೂ ವಿಷಯ ಮಂಡನೆ ಮಾಡಬೇಕು.

ಸಭಾಪತಿಯವರು:- ಒಂದು ನಿಮಿಷ ಇರಿ. ನೀವೆಲ್ಲರೂ ನನ್ನನ್ನು ಅಡ್ಡದಾರಿ ಹಿಡಿಸುತ್ತೀರಿ. ನಾನು ಹೇಳುತ್ತೇನೆ ಸುಮ್ಮನೇ ಕುಳಿತುಕೊಳ್ಳಿ. ನೀವು ಕೊಟ್ಟ ಹಕ್ಕುಚ್ಯುತಿ ವಿಷಯವನ್ನು ಸಮಿತಿಗೆ refer ಮಾಡಿದ್ದೇವೆ. ನೀವು ಈಗ ನಿಲುವಳಿ ಸೂಚನೆ ಬಗ್ಗೆ ಮಾತನಾಡಬೇಕು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನನಗೆ ಉತ್ತರ ಬಂದಿಲ್ಲ.

ಸಭಾಪತಿಯವರು:- ನಾವು ಕಳುಹಿಸಿ ಕೊಟ್ಟಿದ್ದೇವೆ. ಉತ್ತರ ಬರುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ. ಆದಷ್ಟು ಬೇಗನೆ ಉತ್ತರ ತರಿಸಿಕೊಡುತ್ತೇನೆ. ಈಗ ನಿಲುವಳಿ ಸೂಚನೆಯ ಬಗ್ಗೆ ಮಾತನಾಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಒಬ್ಬ ವಿರೋಧಪಕ್ಷದ ನಾಯಕರನ್ನು ಒಂದು ಗೆಸ್ಟ್ ಹೌಸಿನಲ್ಲಿ ಐದು ಗಂಟೆಗಳ ಕಾಲ ಕೂಡಿ ಹಾಕುತ್ತಾರೆಂದರೆ ಸುಮ್ಮನೇ ಕುಳಿತುಕೊಳ್ಳಬೇಕೇ? ಯಾವಾಗ ಕೇಳಬೇಕು? **(ಗೊಂದಲ)**

(ಮುಂದು)

(616) 11.08.2025 (2.40) ಹೆಚ್‌ವಿ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

(ಗೊಂದಲ)

ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಸುಮಾರು 5 ಗಂಟೆಗಳ ಕಾಲ ಕೂಡಿ ಹಾಕಿದ್ದಾರೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕರಿಗೆ ಈ ರೀತಿಯಾದರೆ, ಬೇರೆಯವರ ಗತಿಯೇನು? ನನಗೆ ನ್ಯಾಯಬೇಕು.

(ಗೊಂದಲ)

ಸಭಾಪತಿಯವರು:- ಒಂದು ನಿಮಿಷ ಕೇಳಿ, ಸದರಿ ಹಕ್ಕುಚ್ಯುತಿ ಪ್ರಕರಣವನ್ನು ನಾನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಅವರು ಏನು ಉತ್ತರವನ್ನು ಕೊಡುತ್ತಾರೆ ಎನ್ನುವುದನ್ನು ನೋಡೋಣ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):- ಸನ್ಮಾನ್ಯ ಸಭಾಪತಿಯವರೇ, ಉತ್ತರ ಯಾರು ಕೊಡುತ್ತಾರೆ?

(ಗೊಂದಲ)

ಸಭಾಪತಿಯವರು:- ಸದರಿ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಒಬ್ಬ ಮಂತ್ರಿಗಳು ಹೇಳಿಕೆಯನ್ನು ಕೊಟ್ಟರೇ, ನಾವು ಕೇಳಿಸಿಕೊಂಡು ಸುಮ್ಮನಿರಬೇಕೆ? ತಾವು ನನ್ನ ರಕ್ಷಣೆಗೆ ಬರಬೇಕು.

(ಗೊಂದಲ)

ಸಭಾಪತಿಯವರು:- ಈಗ ಸದನವನ್ನು ಭೋಜನ ವಿರಾಮಕ್ಕಾಗಿ 3 ಗಂಟೆ 30 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 42 ನಿಮಿಷಗಳಿಗೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(617)11-08-2025/4-00/bkp-ks

(ಮಧ್ಯಾಹ್ನ 2 ಗಂಟೆ 42 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 5 ನಿಮಿಷಕ್ಕೆ ಸಮಾವೇಶಗೊಂಡಿತು.)

(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಕಲಬುರಗಿಯ ಚಿತ್ತಾಪುರದ Circuit House ನಲ್ಲಿ ದಿಗ್ಬಂಧನದಲ್ಲಿರಿಸಿದ್ದ ಬಗ್ಗೆ ಮುಂದುವರೆದ ಹಕ್ಕುಚ್ಯುತಿ ಪ್ರಸ್ತಾವದ ಮೇಲಿನ ಚರ್ಚೆ

……..

ಸಭಾಪತಿಯವರು:- ವಿರೋಧ ಪಕ್ಷದ ನಾಯಕರಾದ ಶ್ರೀಯುತ ನಾರಾಯಣಸ್ವಾಮಿಯವರು ಸೇರಿದಂತೆ ಎಲ್ಲರೂ ನಾನು ಹೇಳುವುದನ್ನು ಕೇಳಿ. ನೀವು ಕೊಟ್ಟಿದ್ದಂತಹ ಹಕ್ಕುಭಾಧ್ಯತಾ ಸೂಚನೆಯ ಪ್ರಸ್ತಾವನೆ ಏನಿತ್ತು, ಅಂದರೆ ವಿರೋಧ ಪಕ್ಷದ ನಾಯಕರು ದಿನಾಂಕ: 23-05-2025 ರಂದು ಹಕ್ಕುಚ್ಯುತಿ ಸೂಚನೆಯನ್ನು ನೀಡಿರುತ್ತಾರೆ, ದಿನಾಂಕ: 12-06-2025 ರಂದು ಹಕ್ಕುಬಾಧ್ಯತಾ ಸಮಿತಿಗೆ ಪರಿಶೀಲನೆಗಾಗಿ ಕಳುಹಿಸಲಾಗಿದೆ. ಸದರಿ ವಿಷಯವು ಸಮಿತಿ ಸಭೆಯಲ್ಲಿ ಚರ್ಚೆಯಾಗಿದೆ. ಅಲ್ಲಿಗೆ ಮುಗಿದಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಒಂದೇ ಒಂದು ವಿಷಯ. ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ನೀವು ಹಕ್ಕುಬಾದ್ಯತಾ ಸಮಿತಿಗೆ ಕಳುಹಿಸಿದ್ದು ಆಗಿದೆ. ಅದರಲ್ಲಿ ನಿಲುವಳಿ ಸೂಚನೆ..... ಇದಾದ ನಂತರ ನಾನು ಅದರ ಬಗ್ಗೆ ಮಾತನಾಡುತ್ತೇನೆ.

ಸಭಾಪತಿಯವರು:- ಇಲ್ಲ, ಇಲ್ಲ, ಮಾತನಾಡುವಂತಿಲ್ಲ. ಒಂದೇ ವಿಷಯದ ಬಗ್ಗೆ ಮಾತನಾಡಬೇಕು.

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಜಿಲ್ಲಾ ಉಸ್ತುವಾರಿ ಮಂತ್ರಿಗಳು ಶ್ವಾನಕ್ಕೆ ಹೋಲಿಸಿದವರನ್ನು ನಾವು ಪ್ರಶಸ್ತಿಗೆ recommend ಮಾಡಬೇಕೇ? ಎಂದು ಹೇಳಿದ್ದಾರೆ. ಅಂದರೆ, ಇದನ್ನು ಮಾಡಿಸಿದ್ದು ಅವರೇ ಎಂದಾಯಿತಲ್ಲವೇ? ನಾನು ಆವರ ಹೆಸರನ್ನು ಹಕ್ಕುಚ್ಯುತಿಯಲ್ಲಿ ಸೇರಿಸಿರುವುದಿಲ್ಲ..... (ಗೊಂದಲ) ಅದರಲ್ಲಿ ಅಧಿಕಾರಿಗಳ ಹೆಸರುಗಳನ್ನು ಮಾತ್ರ ನಾನು ಕೊಟ್ಟಿದ್ದೇನೆ. ಅದನ್ನು ಹೇಳಬೇಕಾಗಿದ್ದು, ಅದು ಬೇರೆ ವಿಷಯ.

ಸಭಾಪತಿಯವರು:- ಅದು ಮುಂದಿನ ವಿಷಯ, ಇದರ ಬಗ್ಗೆ ಮಾತನಾಡಿ.

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಮಾನ್ಯ ಸಭಾಪತಿಯವರೇ, ಅವರು regret ಮಾಡಬೇಕಾಗಿತ್ತು. ನಾನು ದೂರು ನೀಡಿದ ಮೇಲೆ ಮುಖ್ಯಮಂತ್ರಿಗಳಾದರೂ ಉತ್ತರ ಕೊಡಬೇಕಾಗಿತ್ತು, ಗೃಹ ಸಚಿವರು ಉತ್ತರ ಕೊಡಬೇಕಾಗಿತ್ತು ಅಥವಾ ಸಚಿವಾಲಯದವರು ಉತ್ತರ ಕೊಡಬೇಕಾಗಿತ್ತು. ಅವರು ಸಹ ಕೊಟ್ಟಿರುವುದಿಲ್ಲ. ಹೀಗಾದರೆ, ನಮಗೆ ರಕ್ಷಣೆಯನ್ನು ಯಾರು ಕೊಡಬೇಕು?

ಸಭಾಪತಿಯವರು:- ಈ ವಿಚಾರ ಹಕ್ಕುಬಾದ್ಯತಾ ಸಮಿತಿಗೆ ಹೋಗಿದೆ, ಅಲ್ಲಿ ಚರ್ಚೆಯಾಗಲಿ.

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಅದು ಬೇರೆ ವಿಚಾರ. ನಾನು ಅದರ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ಸಭಾಪತಿಯವರು:- ಅದನ್ನು ಚರ್ಚೆ ಮಾಡುವುದನ್ನು ಬಿಟ್ಟರೆ ಅದಕ್ಕೆ ಬೇರೆ ಏನು ಕೆಲಸ ಇದೆ? ಈ ಬಗ್ಗೆ ಚರ್ಚೆ ಮಾಡಲು ಬೇರೆ ಒಂದು ನೋಟಿಸ್ ಕಳುಹಿಸಿ. ನೀವು ಮಾತನಾಡುತ್ತಿರುವ ವಿಷಯ ಏನೆಂದು ಗೊತ್ತಾಗಲಿಲ್ಲ, ವಿಷಯ ಏನು?

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಮಾನ್ಯ ಸಭಾಪತಿಯವರೆ, ನಾನು ಅದೇ ವಿಚಾರವಾಗಿ ಹೇಳುತ್ತಿದ್ದೇನೆ.

ಸಭಾಪತಿಯವರು:- ನೀವು ಹೇಳುವುದು ಬೇಡ, ಈ ಬಗ್ಗೆ ನನಗೆ ನೋಟಿಸ್ ಕಳುಹಿಸಿಕೊಡಿ, ನಾನು ಅದನ್ನು ನೋಡುತ್ತೇನೆ. ಆಗ ನೀವು ಮಾತನಾಡಬಹುದು. ವಿಷಯ ಗೊತ್ತಿಲ್ಲದೇ ನೀವು ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಮಾನ್ಯ ಸಭಾಪತಿಯವರೆ, ನಮಗೆ ರಕ್ಷಣೆ ಇಲ್ಲದೇ ಇದ್ದಾಗ....

ಸಭಾಪತಿಯವರು:- ಈ ಬಗ್ಗೆ ನನಗೆ ಒಂದು ನೋಟಿಸ್ ಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:– ಮಾನ್ಯ ಸಭಾಪತಿಯವರೆ, ನಾನು ಹೇಳುವುದನ್ನು ಕೇಳಿ. ನಂತರ ಈ ಬಗ್ಗೆ ಏನಾದರೂ ತೀರ್ಮಾನ ಕೊಡಿ.

ಸಭಾಪತಿಯವರು:– ನೀವು ಹೇಳಿಕೆಯನ್ನು ಕೊಡುವುದಕ್ಕಿಂತ ಮುನ್ನ....

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:– ಮಾನ್ಯ ಸಭಾಪತಿಯವರೆ, ನನಗೆ ಆದಂತಹ ತೊಂದರೆಯನ್ನು ತಮ್ಮ ಮುಂದೆ ಹೇಳಿಕೊಳ್ಳುತ್ತಿದ್ದೇನೆ.

ಸಭಾಪತಿಯವರು:– ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅನುಮತಿ ಇದೆ, ಮಾತನಾಡಿ.

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:– ಮಾನ್ಯ ಸಭಾಪತಿಯವರೆ, ನಾನು ಕಲ್ಬುರ್ಗಿಗೆ ಪ್ರವಾಸ ಕಾರ್ಯಕ್ರಮವನ್ನು ಕೈಗೊಂಡಿದ್ದೆ. ಅಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಗಳನ್ನು ಕೇಳುವಾಗ ಪತ್ರಿಕಾ ಮಾಧ್ಯಮದವರು ನನಗೆ ಪ್ರಶ್ನೆಗಳನ್ನು ಕೇಳಿದರು. ಪ್ರಧಾನ ಮಂತ್ರಿಗಳನ್ನು ಇಷ್ಟ ಬಂದಂತೆ ನಿಂದಿಸುತ್ತಾರೆ. ನೀವು ಏತಕ್ಕೆ ಯಾರು ಸಹ ಕೇಳುವುದಿಲ್ಲ? ಎಂದು ಪ್ರಶ್ನೆಗಳನ್ನು ಕೇಳುತ್ತಾರೆ. ಅದಕ್ಕೆ ನಾನು ಒಂದು ಗಾಧೆ ಮಾತನ್ನು ಹೇಳಿದೆ. " ಶ್ವಾನ ಬೊಗಳಿದರೆ ಆನೆ ಹೆದರುವುದೆ" ಎಂದು ಒಂದು ಮಾತನ್ನು ಹೇಳಿದೆ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):– ಮಾನ್ಯ ಸಭಾಪತಿಯವರೆ, ವಿಷಯವನ್ನು ಬದಲಾಯಿಸುತ್ತಿದ್ದಾರೆ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:– ಮಾನ್ಯ ಸಭಾಪತಿಯವರೆ, ನಾನು ಅದೇ ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ, ನಾನು ಮಾತನಾಡುತ್ತಿದ್ದೇನೆ.

ಸಭಾಪತಿಯವರು:– ನಾನು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ಅವರು ಮಾತನಾಡಿದ ಮೇಲೆ ಸಚಿವರು ಉತ್ತರವನ್ನು ಹೇಳಲಿ.

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:– ಮಾನ್ಯ ಸಭಾಪತಿಯವರೆ, ಇಲ್ಲಿ ನನ್ನ ಪ್ರಶ್ನೆಯಿಲ್ಲ, ನಾನು ಮಾತನಾಡಿದ ಮೇಲೆ ನೀವು ಏನು ತೀರ್ಮಾನ ಕೊಡುತ್ತಿರೋ ಕೊಡಿ. ಆದಂತಹ ಘಟನೆಯ ಬಗೆಗಿನ ವಿಚಾರವನ್ನು ಪೀಠಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ,...

ಸಭಾಪತಿಯವರು:– ಶ್ರೀಯುತ ಭೋಜೇಗೌಡರೇ, ನೀವು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುತ್ತಿರೋ ಇಲ್ಲವೋ ಹೇಳಿ. ನೀವೇ ಎಲ್ಲವನ್ನು ಮಾಡಿ, ಸದನದ ಸಮಯವನ್ನು ಇಲ್ಲಿಯವರೆಗೆ ಹಾಳು ಮಾಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಮಾನ್ಯ ಸಭಾಪತಿಯವರೆ, ಈ ರೀತಿಯ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಅಲ್ಲಿಂದ ನಾನು ಚಿತ್ತಾಪುರಕ್ಕೆ 3-00 ಗಂಟೆಗೆ ಹೋದೆ. ಅಲ್ಲಿನ guest house ನಲ್ಲಿ.....

ಶ್ರೀ ಜಗದೇವ್ ಗುತ್ತೇದಾರ್(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಅದರ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪೂರ್ಣವಾಗಿ ಹೇಳಲಿಲ್ಲ. ಅರ್ಧ ವಿಚಾರವನ್ನು ಹೇಳಿದರು.

(ಗೊಂದಲ)

ಸಭಾಪತಿಯವರು:- ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ನೋಡಿ, ನಾನು ಅವರಿಗೆ ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಅವರು ಏನು ಮಾತನಾಡುತ್ತಾರೋ ಮಾತನಾಡಲಿ. ಅಕಸ್ಮಾತ್ ಅಸಂಸದೀಯ ಪದಗಳು ಬಂದರೆ, ಅವುಗಳನ್ನು ಕಡತದಿಂದ ತೆಗೆದುಹಾಕುತ್ತೇನೆ. ಈ ಬಗ್ಗೆ ಸರ್ಕಾರದ ಕಡೆಯಿಂದ ಉತ್ತರ ಹೇಳಲಿಕ್ಕೆ ಸಂಪೂರ್ಣವಾದ ಸಮಯವನ್ನು ತೆಗೆದುಕೊಂಡು ಉತ್ತರವನ್ನು ಹೇಳಲಿ.

ಶ್ರೀ ಜಗದೇವ್ ಗುತ್ತೇದಾರ್(ವಿಧಾನಸಭಾ ಕ್ಷೇತ್ರ):- ಮಾನ್ಯ ವಿರೋಧ ಪಕ್ಷದ ನಾಯಕರು ಪೂರ್ಣವಾಗಿ ಹೇಳಲಿಲ್ಲ. ಅರ್ಧ ವಿಚಾರವನ್ನು ಹೇಳಿದರು.

ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:- ಮಾನ್ಯ ಸಭಾಪತಿಯವರೆ, ಅಲ್ಲಿಗೆ ಜನರು ಬಂದು ಘೋಷಣೆಗಳನ್ನು ಕೂಗುತ್ತಿದ್ದರು, ನನಗೆ ಏನೆಂದು ಗೊತ್ತಿರಲಿಲ್ಲ. 5 ನಿಮಿಷ ಆಗುವಷ್ಟರೊಳಗೆ ಅಷ್ಟೊಂದು ಜನರು ಬಂದು, ಘೋಷಣೆಗಳನ್ನು ಕೂಗುತ್ತಿದ್ದರು. ನನಗೆ ಏನೆಂದು ಗೊತ್ತಿರಲಿಲ್ಲ. ಆಮೇಲೆ ಪೊಲೀಸ್‌ನವರು ಬಂದರು. ಇದ್ದಂತಹ 25-30 ಜನರನ್ನು ರಾತ್ರಿ 8-00 ಗಂಟೆಯವರೆಗೆ ಪೊಲೀಸ್‌ನವರು ಅಲ್ಲಿಯೇ ಇಟ್ಟುಕೊಂಡಿದ್ದರು. ನನ್ನ ಕಾರಿಗೆ ಇಂಕ್ ಅನ್ನು ಚೆಲ್ಲಿದರು, ಕಲ್ಲುಗಳನ್ನು ತೂರಿದರು. ನಾನು ಹೊರಗಡೆ ಬಂದಾಗ, 'ಬನ್ರಿ ನೀವು, ನಿಮ್ಮನ್ನು ಹಾಗೆ ಮುಗಿಸಿಬಿಡುತ್ತೇವೆ' ಎಂದು ಹೇಳುತ್ತಿದ್ದರು. ಇಷ್ಟೆಲ್ಲಾ ಆದರೂ ಸಹ 25 ಜನರನ್ನು ಪೊಲೀಸ್‌ನವರು ಹೊರಗಡೆ ಕಳುಹಿಸಲಿಕ್ಕೆ ಆಗಲಿಲ್ಲ. ಅಲ್ಲಿ 300 ಜನ ಪೊಲೀಸ್‌ನವರು ಇದ್ದರು. ಅಂದರೆ, ವ್ಯವಸ್ಥಿತವಾಗಿ ನಡೆದಿತ್ತು. ಇದಾದ ಮೇಲೆ ಬೆಳಗ್ಗೆ ಬಂದು ನಾನು ತಮಗೂ ಈ ಬಗ್ಗೆ ದೂರನ್ನು ಕೊಟ್ಟೆ. ಮುಖ್ಯಮಂತ್ರಿಗಳಿಗೂ ದೂರು ಕೊಟ್ಟೆ. ಮುಖ್ಯ ಕಾರ್ಯದರ್ಶಿಗಳಿಗೂ ಕೊಟ್ಟೆ. ಗೃಹ ಸಚಿವರಿಗೆ ಕೊಟ್ಟೆ, ಪೊಲೀಸ್ ಮಹಾ ನಿರ್ದೇಶಕರಿಗೆ ಕೊಟ್ಟೆ, ಯಾರೂ ಕೂಡ ಇದುವರೆವಿಗೂ ಕೂಡ ಒಂದೇ ಒಂದು ಮಾತನ್ನು ಆಡಿರುವುದಿಲ್ಲ. ಅದಾದನಂತರ ಈ ವಿಚಾರವನ್ನು ತಾವು ಹಕ್ಕುಚ್ಯುತಿ ಸಮಿತಿ ಪರಿಶೀಲನೆಗೆ ಕೊಟ್ಟಿದ್ದೀರಿ, ಅದರ ಬಗ್ಗೆ ನನ್ನ ಪ್ರಶ್ನೆ ಇಲ್ಲ. ಅದನ್ನು ಕೇವಲ ಪೊಲೀಸ್ ಆಫೀಸರ್‌ಗಳ ಮೇಲೆ ಮಾತ್ರ ನಾನು ದೂರು ಕೊಟ್ಟಿರುವುದಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(618) 11.08.2025 04.10 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಮಂತ್ರಿಗಳು ಬೆಳಗ್ಗೆ ಪ್ರೆಸ್‌ನವರು ಕೇಳಿದಾಗ ಏನು ಹೇಳಿದರೆಂದರೆ ನನ್ನನ್ನು ಶ್ವಾನಕ್ಕೆ ಹೋಲಿಸಿದವರಿಗೆ ನಾನೇನು ಪ್ರಶಸ್ತಿ ಕೊಡಬೇಕೆ? ಕೂಡಿ ಹಾಕಿದ್ದು ಸರಿ ಎಂದು ಹೇಳಿದರು.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಯಾರೋ ಮೊಟ್ಟೆ ಎಸೆದರು ಎಂದ ತಕ್ಷಣ ನಾನು 'Shadow Chief Minister', ನನಗೆ ಈ ರೀತಿ ಮಾಡುವುದು ಸರಿಯೇ ಎಂದು ನಮ್ಮ ಸರ್ಕಾರ ಇದ್ದಾಗ ಕೇಳಿದ್ದರು. ಆಗ ಸರ್ಕಾರ ಕ್ರಮ ಜರುಗಿಸುತ್ತೇವೆ ಎಂದು ಹೇಳಿ, ಇಡೀ ಸರ್ಕಾರವೇ ನಿಂತು ಅದನ್ನು ಪರಿಹರಿಸಿತು. ಇವತ್ತು ಗೃಹ ಸಚಿವರಾಗಲೀ, ಮುಖ್ಯಮಂತ್ರಿಗಳಾಗಲೀ, ಮುಖ್ಯ ಕಾರ್ಯದರ್ಶಿಯವರಾಗಲೀ ಯಾರೂ ಕೂಡ ಒಂದೇ ಒಂದು ಮಾತನ್ನು ಎಲ್ಲಿಯೂ ಹೇಳಿಲ್ಲ. ವಿರೋಧ ಪಕ್ಷದ ನಾಯಕನಿಗೆ ಗೌರವ ಕೊಡುವುದು ಎಂದರೆ ಇದೇನಾ? ಅಂದಮೇಲೆ ಸರ್ಕಾರ ಏನು ಮಾಡುತ್ತಿದೆ?

(ಗೊಂದಲ)

ಸಭಾಪತಿಯವರು (ಪೀಠದಿಂದ ಎದ್ದುನಿಂತು):- ಒಂದು ನಿಮಿಷ.... ಇದು ಮೇಲ್ಮನೆ ಇದಕ್ಕೆ ರೀತಿ ನೀತಿ ಎನ್ನುವುದು ಇದೆ. ಪದ್ಧತಿ ಇದೆ. ಪೀಠದಿಂದ ಮಾತನಾಡಲಿಕ್ಕೆ ನಾನು ಅನುಮತಿ ನೀಡಿದ್ದೇನೆಂದರೆ ಬೇಕಾದದ್ದನ್ನೆಲ್ಲಾ ಮಾತನಾಡುವಂತಿಲ್ಲ. ಯಾವುದು ಅಸಂಸದೀಯ ಎಂಬುದನ್ನು ನಾನು ನೋಡುತ್ತೇನೆ. ನನ್ನನ್ನು ನೋಡುವುದಕ್ಕೂ ಬಿಡದೆ ಎಲ್ಲರೂ ಎದ್ದೆದ್ದು ಮಾತನಾಡಿದರೆ ಹೇಗೆ? ಮಂತ್ರಿಗಳಾಗಿರುವವರೆಲ್ಲಾ ಎದ್ದು ನಿಂತು ಮಾತನಾಡಿದರೆ ಹೇಗೆ? ನನ್ನ ಅನುಮತಿಯಿಲ್ಲದೆ ಮಾತನಾಡಿದರೆ ಅದನ್ನು ಕಡತದಿಂದ ತೆಗೆಯಲಾಗುತ್ತದೆ ಎಂದು ಮತ್ತೊಮ್ಮೆ ಎಲ್ಲರಿಗೂ ಹೇಳುತ್ತಿದ್ದೇನೆ. ಅವರು ಮಾತನಾಡಲಿ, ನಂತರ ಉತ್ತರವನ್ನು ಸರ್ಕಾರ ಹೇಳಲಿ.

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೆ, ನೀವು ಈಗಾಗಲೇ ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುತ್ತೀರಿ. ಅದಕ್ಕೆ ಕಾಯಬೇಕಲ್ಲವೆ? ಪ್ರತಿಯೊಬ್ಬರೂ ಬಂದು ಇದೇ ರೀತಿ ಹೇಳುತ್ತಾ ಹೋದರೆ ತಾವು ಅವಕಾಶ ಕೊಡುತ್ತೀರಾ?

ಸಭಾಪತಿಯವರು:- ಹಕ್ಕುಬಾಧ್ಯತಾ ಸಮಿತಿಗೆ ಕೊಟ್ಟಿರುವುದು ಕೇವಲ ಅಧಿಕಾರಿಗಳ ಮೇಲೆ ಮಾತ್ರ. ಮಂತ್ರಿಗಳ ಮೇಲೆ ಕೊಟ್ಟಿಲ್ಲ ಎನ್ನುವುದು ಅವರ ಮಾತು. ಅದರಲ್ಲಿ ಇಲ್ಲದ ಕಾರಣಕ್ಕಾಗಿ ನಾನು ಮಾತನಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಅವರು ಮಾತನಾಡಿದ ನಂತರ ಸರ್ಕಾರಕ್ಕೆ ಉತ್ತರ ಹೇಳಲು ಅಧಿಕಾರವಿದೆ. ಉತ್ತರ ಹೇಳಿ. ಬೇಕಾದ್ದನ್ನು ಮಾತನಾಡಿದರೆ ನಾನು ತೆಗೆದುಹಾಕುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್:– ಅವರು ನೋಟಿಸ್ ಕೊಟ್ಟರೆ ನಾವು ಗೃಹ ಸಚಿವರ ಗಮನಕ್ಕೆ ತರುತ್ತೇವೆ. ಆಗ ಅವರಿಗೆ ಉತ್ತರ ಸಿಗುತ್ತದೆ. ಇದ್ದಕ್ಕಿದ್ದಂತೆ ಎದ್ದು ನನಗೆ ಈ ರೀತಿಯಾಗಿದೆ ಎಂದರೆ ತಕ್ಷಣ ಯಾರು ಉತ್ತರ ಕೊಡುವುದಕ್ಕೆ ಸಾಧ್ಯ?

ಸಭಾಪತಿಯವರು:– ನಾನು ಮೊದಲೇ ನೋಟಿಸ್ ಕೊಡಿ ಎಂದು ಹೇಳಿದೆ. ಅದಕ್ಕೆ ಅವರು ನಾನು ನೋಟಿಸ್ ಕೊಟ್ಟಿದ್ದೇನೆ ಎಂದು ಹೇಳಿದರು. ಅದರಲ್ಲಿ ಮಂತ್ರಿಗಳ ಹೆಸರನ್ನು ಹಾಕಿದ್ದೆನು, ಆದರೆ ಅಧಿಕಾರಿಗಳ ಮೇಲೆ ಮಾತ್ರ breach of privilege motion ಅನ್ನು move ಮಾಡಿದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಲೀಂ ಅಹಮದ್:– ಮಾನ್ಯ ಸಭಾಪತಿಯವರೆ, ಅವರು **[XXX]** ಮಾಡಿದ್ದಾರೆ ಎಂದು ಬಾಯಿಗೆ ಬಂದಂತೆಲ್ಲಾ ಮಾತನಾಡುವುದು ಸರಿಯೇ?

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರನ್ನು Shadow Chief Minister ಎಂದು ಕರೆಯಲಾಗುತ್ತದೆ ಎಂಬುದು ಎಲ್ಲರಿಗೂ ತಿಳಿದಿದೆ. ಅವರನ್ನು 5 ಗಂಟೆಗಳ ಕಾಲ ದಿಗ್ಬಂಧನದಲ್ಲಿ ಇಡಲಾಗಿದೆಯೆಂದರೆ ಅದು **[XXX]** ಅಲ್ಲದೆ ಮತ್ತೇನು? ಆಡಳಿತ ಪಕ್ಷಕ್ಕೆ ಹೆಚ್ಚು ಜವಾಬ್ದಾರಿ ಇರುತ್ತದೆಯೋ ಇಲ್ಲವೋ? ಕಾನೂನು ಕೈಗೆತ್ತಿಕೊಳ್ಳುವುದಕ್ಕೆ ಅಧಿಕಾರವಿದೆಯೇ?

(ಗೊಂದಲ)

(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಎಸ್.ಎಲ್.ಭೋಜೇಗೌಡರವರು ಪೀಠವನ್ನು ಅಲಂಕರಿಸಿದರು)

ವೈಸ್ ಛೇರ್ಮನ್ (ಎದ್ದು ನಿಂತು):– ಮಾನ್ಯ ಸಭಾನಾಯಕರೇ, ಈ ಸದನದ ಗೌರವವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸಭಾಪತಿಯವರು ಪೀಠದಿಂದ ಎದ್ದು ನಿಂತಿದ್ದರೂ ಈ ರೀತಿಯ ನಡವಳಿಕೆ ಸರಿಯೇ?

ಪೀಠದಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಡಲಾಗಿದೆ. ಅವರಿಗೆ ಮಾತನಾಡಲು ಅವಕಾಶ ಕೊಟ್ಟ ಮೇಲೆ ಆಡಳಿತ ಪಕ್ಷದವರಿಗೆ ಸ್ವಲ್ಪ ಸೈರಣೆ ಎಂಬುದು ಇರಬೇಕು. ಸಹನೆಯೂ ಇರಬೇಕು.

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

VICE CHAIRMAN:– If it is unparliamentary, it will definitely be removed from the records.

ಮಾನ್ಯ ವಿರೋಧ ಪಕ್ಷದ ನಾಯಕರೆ, ದಯಮಾಡಿ ಆ ದಿನದ ಘಟನೆ ಏನು ನಡೆದಿದೆ ಎನ್ನುವುದು ಸವಿವರವಾಗಿ ಆಡಳಿತ ಪಕ್ಷದವರಿಗೆ ಗೊತ್ತಾಗಬೇಕು. ದಯಮಾಡಿ ತಿಳಿಸಿ.

ಶ್ರೀ ಸಲೀಂ ಅಹಮದ್:– ಮಾನ್ಯ ವಿರೋಧ ಪಕ್ಷದ ನಾಯಕರೆ, ಸತ್ಯವನ್ನು ಹೇಳಿಬಿಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಅದನ್ನೇ ಹೇಳುತ್ತಿದ್ದೇನೆ. ಸತ್ಯವನ್ನು ಹೇಳಿದರೆ ನಿಮಗೆ ಹಿಡಿಸುವುದಿಲ್ಲ ಎಂಬುದು ನಮಗೆ ಗೊತ್ತಿದೆ.

(ಗೊಂದಲ)

ವೈಸ್ ಛೇರ್ಮನ್:– ನೀವು ವಿಷಯವನ್ನಷ್ಟೇ ಹೇಳಿ. ಆಡಳಿತ ಪಕ್ಷದವರು ದಯಮಾಡಿ ಘಟನೆ ಏನು ನಡೆದಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಸತ್ಯಕ್ಕೂ ಕಾಂಗ್ರೆಸ್ ಪಕ್ಷದವರಿಗೂ ಎಣ್ಣೆ-ಸೀಗೆಕಾಯಿ ಸಂಬಂಧವಿದ್ದಂತೆ.

ವೈಸ್ ಛೇರ್ಮನ್:– ಮಾನ್ಯ ಸಿ.ಟಿ.ರವಿಯವರೆ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

(ಮುಂದು)

(619) 11-08-2025 (4.20) ಕೆಜಿ:ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ವೈಸ್ ಛೇರ್ಮನ್‌ರವರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಆಡಳಿತ ಪಕ್ಷದವರು ದಯಮಾಡಿ ಘಟನೆ ಏನು ನಡೆದಿದೆ ಎನ್ನುವ ವಿಚಾರವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ನಾನು ಪೀಠದ ಮುಂದೆ ನಿಂತಿದ್ದೇನೆ. ಪೀಠದ ಮುಂದೆ ನಮ್ಮ ಭಿನ್ನಹವನ್ನು ಅರ್ಪಿಸುತ್ತಿದ್ದೇವೆ. ನಾನು ಸತ್ಯ ಹೇಳುವುದನ್ನು ಬಿಟ್ಟು ಬೇರೆ ಏನು ಹೇಳುತ್ತಿಲ್ಲ.,

(ಗೊಂದಲ)

ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಹೌದು, ಅವರು ಸತ್ಯವನ್ನೇ ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರೇ, ತಾವು ಸುಮ್ಮನಿರಿ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಅವರು ಕಿರುಚುತಿದ್ದರೆ, ನಾನು ಮಾತನಾಡುತ್ತಿರುತ್ತೇನೆ. ಆದರೆ, ಏನು ಪ್ರಯೋಜನ? 'ಶ್ವಾನ ಒಂದು ಬೊಗಳಿದರೆ, ಆನೆ ಹೆದರುವುದೇ' ಎನ್ನುವುದನ್ನು ಹೇಳಿದ್ದೇನೆ, ಅಲ್ಲವೇ; ಇದನ್ನು ಹೇಳಿದ ಮೇಲೆ ಇದರಲ್ಲಿ ಏನು ಪ್ರಚೋದನೆ? ಅವರು 5 ಗಂಟೆಗಳ ಕಾಲ ನನಗೆ ದಿಗ್ಬಂಧನ ಹಾಕಿದ್ದರು. ಅಂದಮೇಲೆ ಅವರು ಇಷ್ಟು ಹೇಳಿದ್ದನ್ನು ಕೇಳಿಬಿಟ್ಟು ಶಿಕ್ಷೆಯನ್ನು ಕೂಡುತ್ತಾರೆಯೇ? ಈ ದೇಶದಲ್ಲಿ., (ಗೊಂದಲ) ಶಿಕ್ಷೆ ಕೊಡುವುದಕ್ಕೆ ಕಾಂಗ್ರೆಸ್‌ನವರು ಇರುವುದೇ? ಅದಕ್ಕೆ ಬೇರೆ ಕಾನೂನು ಇಲ್ಲವೇ? ಆಯಿತು, ನಾನು ಏನೇ ತಪ್ಪು ಮಾಡಿರಲಿ, ಅವರು ದೂರು ಕೊಡಬೇಕಾಗಿತ್ತು, ಕೊಟ್ಟಿದ್ದಾರೆಯೇ? ಅವರು ಕೊಟ್ಟಿಲ್ಲ. ನಾನು ದೂರು ಕೊಟ್ಟಿದ್ದೇನೆ. ಇದು ಆಯಿತು.

ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಯವರಿಗೆ ದೂರು ಕೊಟ್ಟಿದ್ದೇನೆ. ಅವರನ್ನು ಕೇಳಿಕೊಂಡೆ. ಅವರು ಉತ್ತರ ಕೊಟ್ಟಿಲ್ಲ. ಅವರೇ ಹಿಂದೆ ಕೊಡಗಿನಲ್ಲಿ ಆದ ಘಟನೆಗೆ ಅವರು ಯಾವ ರೀತಿ ನಡೆದುಕೊಂಡರು? ಈಗ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ವಿರೋಧ ಪಕ್ಷದ ನಾಯಕರಿಗೆ ಈ ರೀತಿಯಾಗಿರುವುದು ಸರಿಯಲ್ಲ, ಇದು ತಪ್ಪು ಎಂದು ಎಲ್ಲಾದರೂ ಹೇಳಿದ್ದಾರೆಯೇ? ಮಾನ್ಯ ಗೃಹ ಮಂತ್ರಿಯವರು ಎಲ್ಲಿಯಾದರೂ ಹೇಳಿದ್ದಾರೆಯೇ? ಮುಖ್ಯ ಕಾರ್ಯದರ್ಶಿಯವರಿಗೆ ದೂರು ಕೊಟ್ಟಿದ್ದೆ. ಅವರು ಎಲ್ಲಾದರೂ ಹೇಳಿದ್ದಾರೆಯೇ? ಪೊಲೀಸ್ ಮಹಾ ನಿರ್ದೇಶಕರಿಗೆ ದೂರು ಕೊಟ್ಟಿದ್ದೇನೆ. ಅವರು ಎಲ್ಲಾದರೂ ಹೇಳಿದ್ದಾರೆಯೇ? ಇದುವರೆವಿಗೂ ಒಂದೇ ಒಂದು ಪ್ರಸ್ತಾಪ ಬಂದಿಲ್ಲ. ಅಂದಮೇಲೆ ಅವರ ಸಮರ್ಥನೆ ಏನು? ಮಾನ್ಯ ಎನ್.ರವಿಕುಮಾರ್‌ರವರು ಏನೋ ಹೇಳಿದರು ಎಂದು ಒಂದೇ ಒಂದು ಗಂಟೆಯಲ್ಲಿ ಅವರ ಮೇಲೆ ಎಫ್‌ಐಆರ್ ಹಾಕಿದ್ದಾರೆ. ನಾನು ಇಲ್ಲಿ ಇಷ್ಟು ಜನರ ಹೆಸರನ್ನು ಹೇಳಿದರೂ ಸಹ, ಒಂದೇ ಒಂದು ಎಫ್‌ಐಆರ್ ಅನ್ನು ಸರ್ಕಾರ ಹಾಕಿದೆಯೇ ಎಂಬುದನ್ನು ಹೇಳಲಿ? ಈಗಾಗಲೇ 3 ತಿಂಗಳು ಆಗುತ್ತಿದೆ. ಎಫ್‌ಐಆರ್ ಹಾಕಲಿಲ್ಲ ಅಲ್ಲವೇ; ಅಂದರೆ, ಅವರು ನಮ್ಮನ್ನು target ಮಾಡುತ್ತಿದ್ದಾರೆ ಅಲ್ಲವೇ? ಈ ಕಾರಣಕ್ಕಾಗಿಯೇ ನಾನು ಆ ಜಿಲ್ಲಾ ಉಸ್ತುವಾರಿ ಸಚಿವರನ್ನು ಇಲ್ಲಿಗೆ ಕರೆಯಿಸಬೇಕು, ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ಇದಕ್ಕೆ ಅವರು ಉತ್ತರ ಕೊಡಬೇಕು. ಇಲ್ಲವೆಂದರೆ, ಅವರ ರಾಜೀನಾಮೆಯನ್ನು ತೆಗೆದುಕೊಳ್ಳಬೇಕು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸಭಾನಾಯಕರಾದ ಶ್ರೀ ಎನ್.ಎಸ್.ಬೋಸರಾಜು, ಮಾನ್ಯ ಸಚಿವರಾದ ಎಂ.ಬಿ.ಪಾಟೀಲ್‌ರವರು ಹಾಗೂ ಮಾನ್ಯ ಸಚಿವರಾದ ಶರಣಪ್ರಕಾಶ್ ಪಾಟೀಲ್‌ರವರು ಆಡಳಿತ ಪಕ್ಷದ ಸದಸ್ಯರು ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡತೊಡಗಿದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು, (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ನಾವು ಅವರು ಹೇಳಿದಂತೆ ಕೇಳಬೇಕೇ?

(ಗೊಂದಲ)

ವೈಸ್ ಛೇರ್ಮನ್‌ರವರು:- ಮಾನ್ಯ ಸಭಾನಾಯಕರೇ, ಒಂದು ನಿಮಿಷ ಕೇಳಿ.,

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನಾನು ಅವರಿಗೆ ಪ್ರಶಸ್ತಿಗೆ recommendation ಮಾಡಬೇಕೆ, ಅದು ಉದ್ದಟತನ ಅಲ್ಲವೇ?

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ್ದು ಉದ್ದಟತನ.,

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನಾನು ಏನು ಮಾತನಾಡಿದ್ದೇನೆ?

(ಗೊಂದಲ)

ವೈಸ್ ಛೇರ್ಮನ್‌ರವರು:- ದಯಮಾಡಿ ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಸಭಾಪತಿಯವರೇ, ಅವರು ನಮ್ಮ ಊರಿಗೆ ಬಂದು ನಮ್ಮ ಮೇಲೆ ಮಾತನಾಡುತ್ತಿದ್ದಾರೆ.,

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, ಅವರು ಏನೇ ಮಾತನಾಡಿದರೂ ಸಹ ನಾವು ಸುಮ್ಮನೆ ಕುಳಿತುಕೊಂಡು ಇರಬೇಕೇ?.,

(ಗೊಂದಲ)

ವೈಸ್ ಛೇರ್ಮನ್‌ರವರು:- ಮಾನ್ಯ ಸಚಿವರಾದ ಎಂ.ಬಿ.ಪಾಟೀಲ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಇದರಲ್ಲಿ ಉದ್ದಟತನ ಏನಿದೆ?.,

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ಅವರು ಪ್ರಚೋದನೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅಂದರೆ, ಅವರು ಒಬ್ಬ ಪ್ರಧಾನ ಮಂತ್ರಿಯವರನ್ನು ವಿಷ ಸರ್ಪ ಎಂದು ಬೈದಿದ್ದು...

(ಗೊಂದಲ)

ವೈಸ್ ಛೇರ್ಮನ್‌ರವರು:– ತಾವು ಹಿರಿಯ ಸಭಾನಾಯಕರಾಗಿದ್ದೀರಿ. ತಾವು ಸಹ ಸಚಿವರ ತರಹ ಎದ್ದು ನಿಂತುಕೊಂಡರೆ ಹೇಗೆ?

(ಗೊಂದಲ)

(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು)

ವೈಸ್ ಛೇರ್ಮನ್‌ರವರು:– ಮಾನ್ಯ ಸಭಾನಾಯಕರವರೇ, ತಾವು ದಯಮಾಡಿ ಕುಳಿತುಕೊಳ್ಳಿ. ತಮಗೆ ಅವತ್ತಿನ ಘಟನೆಯ ಬಗ್ಗೆ ಪೂರ್ಣವಾದ ಮಾಹಿತಿ ಬೇಕೇ ಅಥವಾ ಬೇಡವೇ ಹೇಳಿ? ಅದಕ್ಕೆ ಅವರು ಹೇಳಿದ ಮೇಲೆ ತಾವು ಮಾತನಾಡಿ.

(ಗೊಂದಲ)

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರರು):– ಮಾನ್ಯ ಸಭಾಪತಿಯವರೇ, one side of the story ನೀವು ಕೇಳಿದ್ದೀರಿ ಅಲ್ಲವೇ; it is only one side of the story.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರಾದ ಸಲೀಂರವರೇ, ತಮಗೆ ಅವಕಾಶ ಬಂದಾಗ ತಾವು ಮಾತನಾಡಿ. ದಯವಿಟ್ಟು ಈಗ ಕುಳಿತುಕೊಳ್ಳಿ. ಈಗ ಅವರು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಸಲೀಂ ಅಹಮದ್:– ಮಾನ್ಯ ಸಭಾಪತಿಯವರೇ, ನಾವು ಎಷ್ಟು ಕೇಳಬೇಕು? (ಗೊಂದಲ) ಮಾನ್ಯ ಸಭಾಪತಿಯವರು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವರ ಕಷ್ಟ ಹೇಳಿಕೊಳ್ಳುವುದಕ್ಕೆ ಹೇಳಿದ್ದಾರೆ. ಆದರೆ, ಇವರು ದೊಡ್ಡ ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಇದು ಈಗಾಗಲೇ Privileges Committee ಗೆ ಹೋಗಿದೆ. ಅದರ ವರದಿ ಬರಬೇಕು. ವರದಿ ಬಂದ ಮೇಲೆ ಅದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ಮುಖ್ಯ ಸಚೇತಕರವರೇ, ಅವರಿಗೆ ಮಾತನಾಡುವುದಕ್ಕೆ ಪೀಠದಿಂದ ಆದೇಶ ನೀಡಿದ್ದಾರೆ. ಹಾಗಾಗಿ, ಅವರು ಮಾತನಾಡುವುದನ್ನು ಕೇಳಿ. ಮತ್ತೆ ನಿಮಗೆ ಅವಕಾಶ ಸಿಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್:– ಮಾನ್ಯ ಸಭಾಪತಿಯವರೇ, ನಮಗೆ ಅವಕಾಶ ಅಲ್ಲ. ಅವರು ಸಚಿವರ ರಾಜೀನಾಮೆ ಕೇಳಿದ್ದಾರೆ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು, (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಅವರು ಜಿಲ್ಲಾ ಉಸ್ತುವಾರಿ ಸಚಿವರನ್ನು ಇಲ್ಲಿಗೆ ಕರೆಸಬೇಕು. ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಅವರು ರಾಜೀನಾಮೆ ಕೊಡಬೇಕು ಎಂದು ಹೇಳಿದ್ದಾರೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ತಾವು ಹಿರಿಯ ಸಭಾನಾಯಕರು ಇದ್ದೀರಿ, ಮಾನ್ಯ ಸಚಿವರು ಇದ್ದೀರಿ. ತಾವೆಲ್ಲರೂ ಸಮರ್ಥರು ಇದ್ದೀರಿ. ಅಂತಹ necessity ಬಂದಾಗ ನೋಡೋಣ ಬಿಡಿ.

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ,,

(ಗೊಂದಲ)

ವೈಸ್ ಛೇರ್ಮನ್‌ರವರು:– ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅವರಿಗೆ yield ಆಗಿದ್ದಾರೆ ಬಿಡಿ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅವರು ಕೇಳಿಕೊಂಡಿದ್ದಾರೆ. ಹಾಗಾಗಿ, ನಾನು yield ಆಗಿದ್ದೇನೆ.

ವೈಸ್ ಛೇರ್ಮನ್‌ರವರು:– ಸಭಾನಾಯಕರೇ, ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಲಾಗಿತ್ತೋ ಅವರು ಅವರಿಗೆ yield ಆಗಿದ್ದಾರೆ. ಹಾಗಾಗಿ, ಅವರು ಮಾತನಾಡಲಿ ಬಿಡಿ.

(ಗೊಂದಲ)

ಶ್ರೀ ಸಲೀಂ ಅಹಮದ್:– ಅವರು substitute ಆಗಿದ್ದಾರೆಯೇ?

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು, (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಅವರಿಗೆ ಯಾವ ನಿಯಮದಡಿಯಲ್ಲಿ ಅವಕಾಶ ನೀಡಲಾಗಿದೆಯೋ ಅದೇರೀತಿ ನಮಗೂ ಅವಕಾಶ ಕೊಡಿ. ನಾವು ಮಾತನಾಡುತ್ತೇವೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ಸಭಾನಾಯಕರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ಅವರು ಮಾತನಾಡಲಿ. ಮಾನ್ಯ ಸದಸ್ಯರಾದ ಸಿ.ಟಿ.ರವಿಯವರೇ, ತಾವು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, 'ವೇದ ಸುಳ್ಳಾಗಬಹುದು, ಗಾದೆ ಸುಳ್ಳಾಗುವುದಿಲ್ಲವೆಂಬ' ಗಾದೆ ಮಾತಿದೆ. ಅದೇರೀತಿ ರೂಢಿ ಮಾತುಗಳು ಇವೆ. 'ಆಕಾಶಕ್ಕೆ ಉಗುಳಿದರೆ ಆಕಾಶಕ್ಕೆ ತಗಲುತ್ತದೆಯೇ' ಎನ್ನುವ ಹಾಗೆ, 'ನಾಯಿ ಬೊಗಳಿದರೆ, ಭೂಲೋಕ ಹಾಳಾಗುತ್ತದೆಯೇ' ಎನ್ನುವ ಹಾಗೆ, ಹಾಗೂ 'ಬೀದಿಯಲ್ಲಿ ಆನೆ ಹೋಗುತ್ತಿರುವಾಗ ನಾಯಿ ಬೊಗಳುತ್ತದೆ' ಎನ್ನುವ ರೂಢಿ ಮಾತುಗಳು ಇವೆ. ಈಗ ಆ ಶ್ವಾನ ನಾಯಿ.,

ವೈಸ್ ಛೇರ್ಮನ್‌ರವರು:– ಸಭಾನಾಯಕರೇ, ನಾಯಿ ಎನ್ನುವುದು ಗ್ರಾಮೀಣ ಭಾಷೆ. ಶ್ವಾನ ಎನ್ನುವುದು ಸಂಸ್ಕೃತ ಭಾಷೆ ಬಿಡಿ. ಅದರಲ್ಲಿ ಏನು ತಪ್ಪಿಲ್ಲ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಇವು ರೂಡಿಗತ ಮಾತುಗಳು. ಒಂದು ಪ್ರತಿ ಪಕ್ಷದ ನಾಯಕ ಹಾಗೆ ಹೇಳಿದಾಗ ಜವಾಬ್ದಾರಿಯುತ ಆಡಳಿತ ಪಕ್ಷ **[XXX]** ಕರೆಸುವುದನ್ನು ಸಮರ್ಥನೆ ಮಾಡಿಕೊಳ್ಳುವುದು ಇದೆಯಲ್ಲಾ.,

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು:– ಮಾನ್ಯ ಸಭಾಪತಿಯವರೇ, **[XXX]** ಅಲ್ಲ.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರಾದ ಸಿ.ಟಿ.ರವಿಯವರೇ, ಒಂದು ನಿಮಿಷ. ಪದೇ ಪದೇ.,

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ನಾವು ಬೀದಿ ನಾಯಿಗಳು ಅಲ್ಲವಲ್ಲ.,

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರಾದ ಸಿ.ಟಿ.ರವಿಯವರೇ, ಆ ಪದವನ್ನು ಬಳಸುವುದರಿಂದ ನಮ್ಮ ಗೌರವವೂ ಸಹ ಕಡಿಮೆಯಾಗುತ್ತದೆ. ಈಗಾಗಲೇ ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ already he has made a request in the month of March ಎಂದು ಹೇಳಿರುವುದನ್ನು ನಾನು ಎಲ್ಲೋ ಕೇಳಿದ್ದೇನೆ. ಆಗ ಮಾನ್ಯ ಮುಖ್ಯಮಂತ್ರಿಯವರಿಗೆ ದೂರು ಕೊಟ್ಟಿರುವುದಲ್ಲದೇ, ಅದು ಹಕ್ಕು ಭಾದ್ಯತಾ ಕಮಿಟಿಗೆ ಹೋಗಿದೆ. ಅಂತಹದ್ದರಲ್ಲಿ in spite of that ಈ ಪೀಠದಿಂದ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಹಾಗಾಗಿ, ಅವರು ಮಾತನಾಡಿ ಮುಗಿಸುವುದಕ್ಕೆ ಅವಕಾಶ ಕೊಡಿ.

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿ.ಟಿ.ರವಿ:- ಮಾನ್ಯ ಸಭಾಪತಿಯವರೇ, ವಿರೋಧ ನಾಯಕರಿಗೆ ರಕ್ಷಣೆ ಇಲ್ಲವೆಂದರೆ, ಇನ್ನು ಜನಸಾಮಾನ್ಯರಿಗೆ ಯಾವ ರೀತಿ ರಕ್ಷಣೆ ಇರುತ್ತದೆ.,

(ಗೊಂದಲ)

(ಮುಂದು)

(620) 11-08-2025/4.30/ಎಂವಿ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ವೈಸ್ ಛೇರ್ಮನ್‌ರವರು:- ಅವರು ಏನು ಹೇಳುತ್ತಿದ್ದಾರೆ, ಅದರ ಸತ್ಯಾಸತ್ಯತೆ ಹೊರಗಡೆ ಬರುವುದಕ್ಕೆ ಅದನ್ನು ಅವರು ಹೇಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಯಾರಾದರೂ 'ನಾಯಿ' ಎಂದು ಹೇಳುತ್ತಾರೆಯೇ?

(ಗೊಂದಲ)

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇವರು ಮಧ್ಯದಲ್ಲಿ ಮಾತನಾಡುತ್ತಾರೆ.

(ಗೊಂದಲ)

ವೈಸ್ ಛೇರ್ಮನ್‌ರವರು:- ಅವರು ಇನ್ನು ಮಾತನಾಡುವುದಿಲ್ಲ ಬಿಡಿ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆ ರೀತಿ ಮಾತನಾಡಿಲ್ಲವೆಂದು ಹೇಳುತ್ತಿದ್ದಾರೆ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:- ಮಾನ್ಯ ಸಭಾಪತಿಯವರೇ, ನಾವು ಯಾರಿಗಾದರೂ 'ನಾಯಿ' ಎಂದು ಬೈಯಬಹುದೇ?

(ಗೊಂದಲ)

ಶ್ರೀ ಸಿ.ಟಿ.ರವಿ:- ಮಾನ್ಯ ಸಭಾಪತಿಯವರೇ, ಈಗ ಟೀಕೆಗೆ ಅವಕಾಶವಿದೆ ಎಂದ ಮೇಲೆ ವಿರೋಧ ಪಕ್ಷದ ನಾಯಕರಿಗೆ....

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು:- ಮಾನ್ಯ ಸಭಾಪತಿಯವರೇ, ಅವರು ಯಾರನ್ನು ಬೇಕಾದರೂ ಟೀಕೆ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಈಗ ಅದನ್ನು ಸಮರ್ಥನೆ ಮಾಡಿಕೊಳ್ಳುವುದು ಇದೆಯಲ್ಲ ಅದು ಪ್ರಜಾಪ್ರಭುತ್ವದ ಮೌಲ್ಯಕ್ಕೆ ಕೊಡುವಂತಹ ಗೌರವ ಅಲ್ಲ. ಅದು ಸಂವಿಧಾನಕ್ಕೆ ಕೊಡುವಂತಹ ಬೆಲೆ ಅಲ್ಲ. ಇದು ಸಾಂವಿಧಾನಿಕವಾಗಿ ಇರುವಂತಹ ಹುದ್ದೆಯಾಗಿದೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ಶಾಸಕ ಹುದ್ದೆಯೂ ಸಹ ಸಂವಿಧಾನದ ಹುದ್ದೆ. ಈಗ ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಕೈಗಾರಿಕಾ ಸಚಿವರು):– ಮಾನ್ಯ ಸಭಾಪತಿಯವರೇ,...

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು yield ಆಗಬೇಡಿ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ನಾವು **[XXX]** ಮಾಡಿಲ್ಲ. ನಮಗೆ **[XXX]** ಗೊತ್ತಿಲ್ಲ. ಅದು ಬಿ.ಜೆ.ಪಿ. ಪಕ್ಷದ ಸಂಸ್ಕೃತಿ.

(ಗೊಂದಲ)

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವರು ಉತ್ತರ ಹೇಳಲಿ.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ಸಿ.ಟಿ.ರವಿಯವರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಇದನ್ನು ಮುಂದುವರೆಸುವುದಕ್ಕೆ ನನಗೂ ಇಷ್ಟವಿಲ್ಲ.

(ಗೊಂದಲ)

ವೈಸ್ ಛೇರ್ಮನ್‌ರವರು:– ತಮಗೆ ಏನಾಗಬೇಕೆಂದು please ಹೇಳಿ.

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಅದನ್ನು ಹೇಳುತ್ತೇನೆ. ಅದು ಗಾದೆ ಮಾತು; ನಾನು ಶ್ವಾನದ ಬಗ್ಗೆ ಹೇಳಿದ್ದು ನಿಜ.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಮತ್ತೆ ವಾಪಸ್ಸು ಅಲ್ಲಿಗೆ ಹೋಗಬೇಡಿ. ತಾವು ನೇರವಾಗಿ ವಿಚಾರಕ್ಕೆ ಬನ್ನಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಅದನ್ನು ಹೇಳಿದ್ದು ನಿಜ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಅದಾದ ಮೇಲೆ ಹೇಳಿದ್ದು ಏನು?

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ಅವರು ಯಾರನ್ನು 'ನಾಯಿ' ಎಂದು ಹೇಳಿದ್ದು?

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಒಂದು ಡಜನ್ ಹೆಸರುಗಳನ್ನು ಹೇಳಿದೆ. ಈಗ ಯಾರ್ಯಾರು...

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಅದು ಯಾರು ಎಂದು ಹೇಳಲಿ.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತನ್ನು ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, particular ಆಗಿ...

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತನ್ನು ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ಈಗ ತಾವುಗಳು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅದು ಗಾದೆ ಮಾತು. ಅದಕ್ಕೆ ಅದನ್ನು ಹೇಳಿದ್ದೇನೆ. ಯಾರ್ಯಾರು ಆ ರೀತಿ ಹೇಳುತ್ತಾರೋ ಅವರೆಲ್ಲ ಬೊಗಳಿದಂಗೆ ಎಂದು ಹೇಳಿದ್ದೇನೆ. ಹೌದು, ಏನೀಗ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ಅವರು ಏಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ?

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಅವರು ಹೆಸರನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಅದಕ್ಕೆ ಅವರು ಆ ರೀತಿ ಮಾಡಿದ್ದಾರೆ. ಅದಕ್ಕೆ ಅವರು **[XXX]** ಗಳನ್ನು ಕಳುಹಿಸಿದ್ದಾರೆ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ನಾವು **[XXX]** ಗಳನ್ನು ಕಳುಹಿಸಿಲ್ಲ. ಅವರ **[XXX]** ಗಳೇ ಬಂದಿದ್ದು.

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಅವರು ಎಷ್ಟು ಜನರಿಗೆ FIR ಹಾಕಿದ್ದಾರೆ?

(ಗೊಂದಲ)

ವೈಸ್ ಛೇರ್ಮನ್‌ರವರು:– ದಯವಿಟ್ಟು ಅದನ್ನು ಬಿಟ್ಟುಬಿಡಿ. ಅವರು ಇದನ್ನು conclude ಮಾಡುತ್ತಿದ್ದಾರೆ, ದಯವಿಟ್ಟು ತಾವುಗಳು ಕುಳಿತುಕೊಳ್ಳಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು complaint ಕೊಡುವಾಗ ಮಾನ್ಯ ಸಚಿವರ ಹೆಸರನ್ನು ಬರೆದಿಲ್ಲ. ಮತ್ತೆ ಎಲ್ಲೂ ಸಹ ಪ್ರಸ್ತಾಪ ಮಾಡಿಲ್ಲ. ಆದರೆ, next day ನಾನು ಬೆಂಗಳೂರಿಗೆ ಬಂದ ಮೇಲೆ ಪತ್ರಕರ್ತರು ಅವರನ್ನು ಕೇಳುತ್ತಾರೆ: ಏನು ಆ ರೀತಿ ದಿಗ್ಬಂಧನ ಹಾಕಿಬಿಟ್ಟಿದ್ದರಲ್ಲ ಎಂದು. ಅದನ್ನು ಅವರು ಕೇಳಿದ್ದು, ನಾನು ಕೇಳಿಲ್ಲ.

(ಗೊಂದಲ)

ವೈಸ್ ಛೇರ್ಮನ್‌ರವರು:– ದಯಮಾಡಿ please ಕುಳಿತುಕೊಳ್ಳಿ.

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಆಗ ಅವರು ಅದಕ್ಕೆ ಏನು ಹೇಳಬೇಕು ಎಂದರೆ, ಯಾರೋ ಕಾರ್ಯಕರ್ತರು ಏನೋ ಬೇಸರವಾಗಿ ಅಥವಾ ಕುಪಿತರಾಗಿ ಮಾಡಿದ್ದಾರೆಂದರೆ ಅದು ಬೇರೆ ವಿಷಯ. ಅವರು ಕಳುಹಿಸಿದ್ದಾರೆಂದು ನಾನೂ ಸಹ ಅಂದುಕೊಂಡಿರಲಿಲ್ಲ. ಬೆಳಗ್ಗೆ ಏನು ಮಾಡಿದರು ಎಂದರೆ, ಅಂದರೆ ಅವರು ಹೇಳಿರುವಂತಹ ಮಾತಿಗೆ ನಾನು ಏನು ಅವರಿಗೆ ಪ್ರಶಸ್ತಿಗೆ recommendation ಮಾಡಬೇಕಾಗಿತ್ತಾ ಎಂದರು. ಈ ರೀತಿ ಹೇಳಿದ ಮೇಲೆ ಏನು ಅರ್ಥ? ಆಗ ಇದೆಲ್ಲವನ್ನು ಸಂಪೂರ್ಣವಾಗಿ ಮಾಡಿಸಿದವರು ಇವರೇ ಎಂದು ಗ್ಯಾರಂಟಿಯಾಯಿತು. ಅದಾದ ಮೇಲೆ ನಾನು ಅವರ ಹೆಸರನ್ನು ತೆಗೆದುಕೊಂಡಿದ್ದು.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ,....

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅದಾದ ಮೇಲೆ ಅವರ ಹೆಸರನ್ನು ತೆಗೆದುಕೊಂಡಿದ್ದೇನೆ. ಆದುದರಿಂದ, ನಾನು ಈಗಲೂ ಸಹ ಹೇಳುತ್ತೇನೆ. ಶ್ರೀ ಪ್ರಿಯಾಂಕ್ ಖರ್ಗೆ **[XXX]** ಎಂದು ಹೇಳುತ್ತೇನೆ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, **[XXX]** ....

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅವರು **[XXX]** ಸರ್ಕಾರ ಮಾಡುತ್ತಿರುವುದು.

(ಗೊಂದಲ)

ಡಾ: ಯತೀಂದ್ರ. ಎಸ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವರು ಸತ್ಯ ಹೇಳಲಿ. ಅವರು ಏಕೆ ಚರ್ಚೆ ಮಾಡುತ್ತಾರೆ?

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು:– ಮಾನ್ಯ ಸಭಾಪತಿಯವರೇ, ಅವರು ಚರ್ಚೆ ಮಾಡಲಿ, ಆಗ ಸತ್ಯ ಬಯಲಿಗೆ ಬರುತ್ತದೆ.

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್‌ರವರು:– ಮಾನ್ಯ ಸಭಾನಾಯಕರೆ, ಈಗ ಅವರು ಮಾತನಾಡಿದ್ದಾರೆ. ತಾವು ಮಾತನಾಡುತ್ತೀರೋ ಅಥವಾ ತಮ್ಮ ಪರವಾಗಿ ಯಾರಾದರೂ ಮಾತನಾಡುತ್ತಾರೋ? ಉತ್ತರ ಕೊಡುವುದಾದರೆ ಎರಡು ನಿಮಿಷದಲ್ಲಿ ಉತ್ತರ ನೀಡಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಸಭಾಪತಿಯವರೇ, ತಾವು ಆ ಪೀಠದಲ್ಲಿ ಕುಳಿತಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಒಬ್ಬ ಸಚಿವರ ಬಗ್ಗೆ ಈ ರೀತಿ ಮಾತನಾಡುತ್ತಿದ್ದಾರೆಂದರೆ, ಅವರು ಈ ಮನೆಗೆ ಯಾವ ರೀತಿಯ ಗೌರವವನ್ನು ತರುತ್ತಿದ್ದಾರೆ? ಅವರು ಖರ್ಗೆ ಸಾಹೇಬರ ಬಗ್ಗೆ ಆ ರೀತಿ ಮಾತನಾಡುತ್ತಾರೆಂದರೆ,...

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಖರ್ಗೆ ಸಾಹೇಬರ ಬಗ್ಗೆ ಮಾತನಾಡಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಬಗ್ಗೆಯೂ ಸಹ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಶ್ರೀ ಪ್ರಿಯಾಂಕ್ ಖರ್ಗೆಯವರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ನನ್ನನ್ನು ಕೂಡಿ ಹಾಕಿದರೆ ಏನು ಅರ್ಥ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ತಾವು ಆ ಪದವನ್ನು ತೆಗೆದು ಹಾಕಬೇಕು.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನನ್ನನ್ನು ಕೂಡಿಹಾಕುವುದಲ್ಲದೆ, ಅವರು ಈ ರೀತಿಯ ಮಾತುಗಳನ್ನು ಮಾತನಾಡುವುದೇ? ನಾನು ಖರ್ಗೆ ಸಾಹೇಬರ ಬಗ್ಗೆ ಮಾತನಾಡಿಲ್ಲ.

(ಗೊಂದಲ)

ವೈಸ್ ಛೇರ್ಮನ್‌ರವರು:– ಒಂದು ನಿಮಿಷ ಕುಳಿತುಕೊಳ್ಳಿ. ಅದನ್ನು ಖಂಡಿತ ಕಡತದಿಂದ ತೆಗೆಸೋಣ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ,...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಮುಖಂಡರು...

ವೈಸ್ ಛೇರ್ಮನ್‌ರವರು:– ಮಾನ್ಯ ಮಂತ್ರಿಗಳು ದಯಮಾಡಿ ಕುಳಿತುಕೊಳ್ಳಿ. ಆಯಿತು, ಆ ಪದವನ್ನು ತೆಗೆಸೋಣ.

(ಗೊಂದಲ)

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):– ಮಾನ್ಯ ಸಭಾಪತಿಯವರೇ,...

(ಗೊಂದಲ)

ವೈಸ್ ಛೇರ್ಮನ್‌ರವರು:– ಯಾವ ಸದಸ್ಯರಿಗೂ ಕೂಡ, ಅದು ಮಂತ್ರಿಗಳು ಇರಬಹುದು, ಮಾನ್ಯ ಸದಸ್ಯರು ಇರಬಹುದು, ನಾವು ಯಾರಿಗೂ **[XXX]** ಎಂದು ಇಲ್ಲಿ ಹೇಳತಕ್ಕಂಥದ್ದು ಬಹಳ ಅಸಭ್ಯ.

(ಗೊಂದಲ)

ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಮಂತ್ರಿಗಳನ್ನು **[XXX]** ಎನ್ನುತ್ತಾರೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ಮಾನ್ಯ ಎಂ.ನಾಗರಾಜುರವರೆ, ತಾವು ಕುಳಿತುಕೊಳ್ಳಿ. ನಾನು ಅದರ ಬಗ್ಗೆಯೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ಅವರು **[XXX]** ಮಾಡಿಯೇ....

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಅವರು ಹೇಳಬಹುದೇ?

(ಗೊಂದಲ)

ವೈಸ್ ಛೇರ್ಮನ್‌ರವರು:– ಈಗ ವಿರೋಧ ಪಕ್ಷದ ನಾಯಕರು ಸವಿಸ್ತಾರವಾಗಿ ಅವರಿಗೆ ನಡೆದ ಘಟನೆಯನ್ನು written complaint ಕೊಡುವ ಮುಖಾಂತರ ಮತ್ತೆ ಸದನದಲ್ಲಿ ಕೊಟ್ಟಂತಹ ಅವಕಾಶವನ್ನು ಉಪಯೋಗ ಮಾಡಿಕೊಂಡು ಹೇಳಿದ್ದಾರೆ. ಆದರೆ, ನಾನು ಒಂದು ವಿಚಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಸದನದ ಗೌರವವನ್ನು ಕಾಪಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅವರು ಶ್ರೀ ಪ್ರಿಯಾಂಕ್ ಖರ್ಗೆಯವರನ್ನು ಏನು **[XXX]** ಎಂದು ಹೇಳಿದ್ದಾರೆ, ಆ ಪದವನ್ನು

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡತದಿಂದ ತೆಗೆದುಹಾಕಿ. ನಿಮಗೆ ಏನು ನ್ಯಾಯ ಬೇಕು ಎನ್ನುವಂತಹ ವಿಚಾರದಲ್ಲಿ ಮತ್ತೆ ಆಗಿರತಕ್ಕಂತಹ ಅನ್ಯಾಯ ಏನಿದೆ ಎಂಬ ವಿಚಾರವನ್ನು ತಾವೂ ಸಹ ತಿಳಿದಿದ್ದೀರಿ. ಈ ವಿಷಯ ಮಾನ್ಯ ಸಭಾನಾಯಕರಿಗೆ ಗೊತ್ತಿದೆ. ಆದುದರಿಂದ, ಮೂರು ನಿಮಿಷ ಅದು ಏನೆಂದು ಮಾತನಾಡಿ. ಈಗ ಬೇರೆ ಯಾರಿಗೂ ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ,...

(ಗೊಂದಲ)

ವೈಸ್ ಛೇರ್ಮನ್‌ರವರು:– ಅವರು already complaint ಕೊಟ್ಟಿರುವಂತಹವರು. ಅವರು ಹೇಳಿರುವಂತಹ ವಿಚಾರ. Next ಇರತಕ್ಕಂಥದ್ದು ಮಾನ್ಯ ಸಭಾನಾಯಕರು...

(ಗೊಂದಲ)

ಶ್ರೀ ಸುನೀಲ್‌ಗೌಡ ಪಾಟೀಲ್:– ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವರು ಆಮೇಲೆ ಉತ್ತರ ನೀಡಲಿ. ನಾನು ಒಂದೇ ನಿಮಿಷ ಮಾತನಾಡುತ್ತೇನೆ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಏಕೆ ಅವಕಾಶ ಕೊಡುತ್ತೀರಿ?

(ಗೊಂದಲ)

ವೈಸ್ ಛೇರ್ಮನ್‌ರವರು:– ಇಲ್ಲಿ ಎಷ್ಟೋ ಜನ ಸಮರ್ಥರು ಮತ್ತು ಮಂತ್ರಿಗಳು ಇದ್ದಾರೆ.

(ಗೊಂದಲ)

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಈಗ ಹಕ್ಕುಚ್ಯುತಿ...

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಏಕೆ ಅವಕಾಶ ಮಾಡಿಕೊಡುತ್ತೀರಿ? ಹಾಗಾದರೆ, ಎಲ್ಲರಿಗೂ ಅವಕಾಶ ಮಾಡಿಕೊಡಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಈಗ ಎಲ್ಲರೂ ಮಾತನಾಡಲಿ. ಪೂರ್ತಿ ದಿವಸ ಇದೇ ಆಗಲಿ. ನಾವೂ ಸಹ ಮಾತನಾಡುತ್ತೇವೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ನಾನು ಅವರಿಗೆ ಮಾತನಾಡುವುದಕ್ಕೆ ಹೇಳಿದ್ದೇನೆಯೇ? ಅವರು ಒಂದು ನಿಮಿಷ ಎಂದು ಹೇಳಿದ್ದಾರೆ. ಅವರು ಒಂದು ನಿಮಿಷ ಮಾತನಾಡುವುದಕ್ಕೆ ಬಿಟ್ಟುಬಿಡಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಈಗ ಅವರು ಮಾತನಾಡಿದರೆ, ಎಲ್ಲರೂ ಸಹ ಮಾತನಾಡುತ್ತಾರೆ. ಇವತ್ತು ಪೂರ್ತಿ ದಿವಸ ಇದೇ ಆಗುತ್ತದೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ನಾನು ಖಂಡಿತವಾಗಿ ಬೇರೆ ಯಾರಿಗೂ ಅವಕಾಶ ಕೊಡುವುದಿಲ್ಲ. ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಸಭಾಪತಿಯವರೇ, ಯಾರಿಗೂ ಅವಕಾಶ ಕೊಡಬೇಡಿ.

(ಗೊಂದಲ)

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ನಿಮಿಷ ಆ ಘಟನೆಯ ಬಗ್ಗೆ ಮಾತನಾಡುತ್ತೇನೆ.

(ಗೊಂದಲ)

ವೈಸ್ ಛೇರ್ಮನ್‌ರವರು:– ನಾನು ಖಂಡಿತ ಅವಕಾಶ ಕೊಡುವುದಿಲ್ಲ. ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಅವಕಾಶ ಕೊಡಿ.

(ಗೊಂದಲ)

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಇವರನ್ನು ಬೆಳಗ್ಗೆ ಐದು ಗಂಟೆ ಕಾಲ ದಿಗ್ಬಂಧನದಲ್ಲಿ ಇಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ತಾವು ಎಲ್ಲರಿಗೂ ಅವಕಾಶ ಮಾಡಿಕೊಡಿ. ಪೂರ್ತಿ ದಿವಸ ಇದೇ ಆಗಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಆ ಸಮಯದಲ್ಲಿ ನಾನು ಸಹ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಇದ್ದೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಸಹ ಮಾತನಾಡುತ್ತೇನೆ.

(ಗೊಂದಲ)

ವೈಸ್ ಛೇರ್ಮನ್‌ರವರು:- ಈಗ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್.ರವಿಕುಮಾರ್:- ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದೀರಿ ಎಂದು ತಮಗೆ ಬೆಲೆ ಕೊಟ್ಟು ಕುಳಿತುಕೊಳ್ಳುತ್ತೇನೆ. ಆದರೆ, ನನ್ನ ಒಂದೇ ಒಂದು ಮಾತು ಏನೆಂದರೆ, **(ಗೊಂದಲ)** ಅದಕ್ಕೆ ಏಕೆ FIR ಆಗಿಲ್ಲ? ಅದಕ್ಕೆ ಉತ್ತರ ಕೊಡಲಿ.

(ಮುಂದು)

(621) 11.08.2025 04.40 LL-AK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

(ಗೊಂದಲ)

ವೈಸ್ ಛೇರ್ಮನ್:- ಮಾನ್ಯ ಸಭಾನಾಯಕರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಜಗದೇವ್ ಗುತ್ತೇದಾರ್(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ.

(ಗೊಂದಲ)

ವೈಸ್ ಛೇರ್ಮನ್:- ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೇವ್ ಗುತ್ತೇದಾರ್:- ಮಾನ್ಯ ಸಭಾಪತಿಯವರೇ, ನಾನೂ ಕೂಡ ಕಲಬುರಗಿಯವನಾಗಿದ್ದು ಆ ಘಟನೆ ಬಗ್ಗೆ ನನಗೆ ಗೊತ್ತಿದೆ. ಹಾಗಾಗಿ, ನಾನು ಈ ಬಗ್ಗೆ ಮಾತನಾಡುತ್ತೇನೆ.

(ಗೊಂದಲ)

ವೈಸ್ ಛೇರ್ಮನ್:- ಮಾನ್ಯ ಸಭಾನಾಯಕರು ಎಲ್ಲಾ ವಿಚಾರಗಳ ಬಗ್ಗೆ ಉತ್ತರ ನೀಡುತ್ತಾರೆ. ಹಾಗಾಗಿ, ಈ ವಿಷಯವನ್ನು ಬೆಳೆಸುವುದು ಬೇಡ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಬಿ. ಪಾಟೀಲ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ಎಲ್ಲರಿಗೂ ಸಹ ಅವಕಾಶ ಕೊಡಬೇಕು. ತಾವು ಎಲ್ಲರಿಗೂ ನ್ಯಾಯ ಕೊಡಬೇಕು. ಅವರು ಸ್ವಲ್ಪ ಮಾತನಾಡಲಿ. ಹಾಗಾಗಿ, ತಾವು ಅವರಿಗೂ ಸ್ವಲ್ಪ ಮಾತನಾಡಲು ಅವಕಾಶ ಕೊಡಿ.

ವೈಸ್ ಛೇರ್ಮನ್:- ಆಯಿತು, ಅವಕಾಶ ಕೊಡುತ್ತೇನೆ. ಈ ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಮಾನ್ಯ ಸರ್ಕಾರದ ಮುಖ್ಯ ಸಚೇತಕರು ಮಾತನಾಡಿದ್ದಾರೆ. ಆಯಿತು, ಈಗ ಮಾನ್ಯ ಸಭಾನಾಯಕರು ಮಾತನಾಡಲಿ.

(ಗೊಂದಲ)

ಶ್ರೀ ಜಗದೇವ್ ಗುತ್ತೇದಾರ್:- ಮಾನ್ಯ ಸಭಾಪತಿಯವರೇ, ಈಗ ನಾನು ಮಾತನಾಡುತ್ತೇನೆ.

ಶ್ರೀ ಸಿ.ಟಿ. ರವಿ:- ಮಾನ್ಯ ಸಭಾಪತಿಯವರೇ, ಇಲ್ಲವಾದರೆ ಈ ವಿಷಯವನ್ನು ಚರ್ಚೆಗೆ ಕನ್ವರ್ಟ್ ಮಾಡಿ. ಎಲ್ಲರೂ ಚರ್ಚೆ ಮಾಡೋಣ.

(ಗೊಂದಲ)

ವೈಸ್ ಛೇರ್ಮನ್:- ಮಾನ್ಯ ಜಗದೇವ್ ಗುತ್ತೇದಾರ್‌ರವರೇ, ತಮಗೆ ಒಂದು ನಿಮಿಷ ಮಾತನಾಡಲು ಅವಕಾಶ ಇದೆ. ಬೇರೆ ಯಾರಿಗೂ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಜಗದೇವ್ ಗುತ್ತೇದಾರ್:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆ ದಿನ ಕಲಬುರಗಿ ಬಂದು ಪತ್ರಿಕಾಗೋಷ್ಠಿ ಮಾಡುತ್ತಿದ್ದರು. ಆ ಸಂದರ್ಭದಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು "ಆನೆ ಹೋಗುತ್ತಿದ್ದರೆ, ನಾಯಿ ಬೊಗಳುತ್ತಿತಂತೆ" ಎಂದು ಹೇಳಿದರು. ಅದಕ್ಕೆ ಪತ್ರಿಕೆಯವರು ನಾಯಿ ಎಂದರೆ ಯಾರು ಎಂದು ಕೇಳಿದ ಪ್ರಶ್ನೆಗೆ, ಅವರು "ಪ್ರಿಯಾಂಕ್ ಖರ್ಗೆ ರೀ" ಎಂದು ಹೇಳಿದರು. ಅದನ್ನು ನನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದೇನೆ. ಅದು ನನ್ನ ಬಳಿ ಇದೆ.

ವೈಸ್ ಛೇರ್ಮನ್:- ಹಾಗಾದರೆ, ಸದರಿ ಮಾಹಿತಿಯನ್ನು ತಾವು ಹಕ್ಕುಬಾಧ್ಯತಾ ಸಮಿತಿಗೆ ಕೊಡಿ. ಅಲ್ಲಿ ತಾವು ಸಾಕ್ಷಿಯಾಗಿ.

ಶ್ರೀ ಜಗದೇವ್ ಗುತ್ತೇದಾರ್:- ಮಾನ್ಯ ಸಭಾಪತಿಯವರೇ, ಅಲ್ಲಿ ಕೊಟ್ಟಿದ್ದೇವೆ.

(ಗೊಂದಲ)

Dr. SHARAN PRAKASH PATIL: It's a natural reaction of the public.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿ.ಟಿ. ರವಿ:– ಅದಕ್ಕೆ **[XXX]** ಮಾಡಬಹುದೇ?

(ಗೊಂದಲ)

ವೈಸ್ ಛೇರ್ಮನ್:– ನಿಮಗೆ ಸರ್ಕಾರದಿಂದ ಉತ್ತರ ಬೇಕೇ ಅಥವಾ ಬೇಡವೇ?

(ಗೊಂದಲ)

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಜಗದೇವ್ ಗುತ್ತೇದಾರ್‌ರವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಹಾಗಾಗಿ, ಈಗ ಅವರು ಮಾತನಾಡಲಿ. ಆದರೆ, ಮಾನ್ಯ ಸಿ.ಟಿ. ರವಿಯವರು ಏತಕ್ಕೆ ಮಾತನಾಡುವಾಗ ಅವರಿಗೆ ಪದೇ ಪದೇ ಅಡ್ಡಿಪಡಿಸುತ್ತಿದ್ದಾರೆ? ಅವರ ಮಾತನ್ನು ಸಹ ಕೇಳಲಿ. ಅವರು ಮಾತನಾಡಲು ಪೀಠ ಅಲೋ ಮಾಡಿದೆ. ಹಾಗಾಗಿ, ಅವರು ಮಾತನಾಡಲಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು):– ಅದು public reaction.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಇವರನ್ನು ಕೂಡಿ ಹಾಕಿದ್ದರೆ ಗೊತ್ತಾಗುತ್ತಿತ್ತು. ...**(ಗೊಂದಲ)...** It is not public reaction. It is Mr. Priyank Kharge's reaction.

(ಗೊಂದಲ)

ವೈಸ್ ಛೇರ್ಮನ್:– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸದನದ ಸಮಯ ವಿನಾಕಾರಣ ಹಾಳಾಗುತ್ತಿದೆ. ಈಗ ಮಾತನಾಡಲು ಯಾರಿಗೂ ಅವಕಾಶ ಇಲ್ಲ. ಮಾನ್ಯ ಸಭಾನಾಯಕರು ಈಗ ಮಾತನಾಡುತ್ತಾರೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಬೆಳಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವರು ಪ್ರಾರಂಭ ಮಾಡಿದರು. ತಕ್ಷಣ ಮಾನ್ಯ ಸಭಾಪತಿಯವರು ಇದಕ್ಕಾಗಿ ಸಮಯ ಕೊಡುತ್ತೇನೆ. ಹಾಗಾಗಿ, ಈಗ ಮಾತನಾಡುವುದು ಬೇಡವೆಂದು ಹಾಗೂ ಅದರ ಬಗ್ಗೆ ನಾನು ತೀರ್ಮಾನ ಕೊಡುತ್ತೇನೆಂದು ಹೇಳಿದರು. ಮಧ್ಯಾಹ್ನ ಮಾನ್ಯ ಸಭಾಪತಿಯವರು ಒಂದು ತೀರ್ಮಾನ ನೀಡಿದರು. ಆಗ ತಾವು ಕೂಡ ಈ ಸದನದಲ್ಲಿ ಇದ್ದಿರಿ. ಅದೇನೆಂದರೆ, ಈ ವಿಷಯದ ಮೇಲೆ ಮಾತನಾಡುವುದು ಬೇಡ. ಏಕೆಂದರೆ, ಈ ವಿಷಯವನ್ನು ಈಗಾಗಲೇ ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಿದ್ದು, ಸದರಿ ವಿಷಯ ಹಕ್ಕುಬಾಧ್ಯತಾ ಸಮಿತಿ

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೆ ಇರುವುದರಿಂದ, ಅಲ್ಲಿಂದ ವರದಿ ಬಂದ ನಂತರ ನಾವು ಚರ್ಚೆ ಮಾಡೋಣವೆಂದು ಹೇಳಿದರು. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ನಾನು ಅಧಿಕಾರಿಗಳ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾವನೆ ನೀಡಿದ್ದು, ಮಾನ್ಯ ಸಚಿವರ ಮೇಲೆ ನೀಡಿರುವುದಿಲ್ಲವೆಂದು ಪುನಃ ವಿಷಯ ಪ್ರಸ್ತಾಪ ಮಾಡಿರುತ್ತಾರೆ. ಅದಕ್ಕೆ ಮಾನ್ಯ ಸಭಾಪತಿಯವರು ಅವಕಾಶ ಮಾಡಿಕೊಟ್ಟಿರುತ್ತಾರೆ. ಅದರಂತೆ, ಆ ವಿಷಯವನ್ನು ಮಾತನಾಡುವಂತಹ ಸಂದರ್ಭದಲ್ಲಿ ಪುನಃ ಎಲ್ಲಾ ವಿಚಾರಗಳನ್ನು ತಂದಿರುತ್ತಾರೆ. ನಂತರ, ಅದು ಎಲ್ಲಿಯವರೆಗೂ ಹೋಗಿರುತ್ತದೆ? ನಾನು ಮಾನ್ಯ ಸಚಿವರ ಹೆಸರು ಹೇಳಿರುವುದಿಲ್ಲವೆಂದು ಮೊದಲು ಹೇಳಿ, ನಂತರ ಮಾನ್ಯ ಉಸ್ತುವಾರಿ ಸಚಿವರು, ಮಂತ್ರಿಗಳು ಎಂದು ಹೇಳಿದರು. ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಕರೆಯಬೇಕು ಎಂದು ಹೇಳಿದರು. ರಾಜೀನಾಮೆ ನೀಡಬೇಕೆಂದು ಹೇಳಿದರು. ಇವೆಲ್ಲವನ್ನೂ ಮಾತನಾಡಿರುವುದು ಸರಿಯಲ್ಲ. ಹಾಗಾಗಿ, ಅವುಗಳನ್ನು ಕಡತದಿಂದ ತೆಗೆಸಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಕೇಳಿದ್ದಾರೆ, ಆ ವಿಷಯವನ್ನು ಮಾನ್ಯ ಸಭಾಪತಿಯವರು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಿದ್ದಾರೆ. ಅದರಂತೆ, ಅಲ್ಲಿ ಏನು ನಡೆಯುತ್ತದೋ ಅದು ನಡೆಯಲಿ. ಅಲ್ಲಿಂದ ತೀರ್ಮಾನ ಬಂದ ನಂತರ, ಅದಕ್ಕೆ ಸರ್ಕಾರ ಯಾವ ರೀತಿ ಉತ್ತರ ಕೊಡಬೇಕೋ ಅದನ್ನು ಕೊಡುತ್ತದೆ. ಅದಕ್ಕೆ ಸರ್ಕಾರ ಕೂಡ ಸಿದ್ಧವಿದೆ. ನಾವು ಎಲ್ಲರಿಗೂ ಗೌರವ ಕೊಡಬೇಕು. ಮಾನ್ಯ ಸದಸ್ಯರಿಗಾಗಲಿ, ಮಾನ್ಯ ವಿರೋಧ ಪಕ್ಷದ ನಾಯಕರಿಗಾಗಲಿ ಅಥವಾ ಮಾನ್ಯ ಸಚಿವರಿಗಾಗಲಿ ಎಲ್ಲರಿಗೂ ಗೌರವ ಸಿಗಬೇಕು ಎನ್ನುವುದು ಸರ್ಕಾರದ ಆಶಯವಾಗಿರುತ್ತದೆ. ಅದನ್ನು ಬಿಟ್ಟು ಇವರು ರೌಡಿಸಂ, **[XXX]** ಎಂದೆಲ್ಲಾ ದೊಡ್ಡ ದೊಡ್ಡ ಹಿರಿಯ ಸದಸ್ಯರುಗಳು ಮಾತನಾಡುತ್ತಾರೆಂದರೆ, ಇದು ಸರಿಯಲ್ಲ. ಒಬ್ಬರು ಮಾತನಾಡಿದರೆ, ಮತ್ತೊಬ್ಬರಿಗೂ ಮಾತನಾಡುವುದಕ್ಕೆ ಶಕ್ತಿ ಇದೆ. ನಾವು ಕೂಡ ಮಾತನಾಡುತ್ತೇವೆ. ಅದನ್ನು ಮಾತನಾಡುವುದಕ್ಕೆ ಯಾರೂ ಕೂಡ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಐವನ್ ಡಿ' ಸೋಜಾ:– ಮಾನ್ಯ ಸಭಾಪತಿಯವರೇ,...

(ಗೊಂದಲ)

ವೈಸ್ ಛೇರ್ಮನ್:– ಮಾನ್ಯ ಐವನ್ ಡಿ' ಸೋಜಾ ರವರೇ, ಮಾನ್ಯ ಸಭಾನಾಯಕರು he is capable. Why do you obstruct him?

ಶ್ರೀ ಎನ್.ಎಸ್. ಬೋಸರಾಜು:– ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಸಭಾಪತಿಯವರು ಈಗಾಗಲೇ ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಿರುತ್ತಾರೆ. ಹಾಗಾಗಿ, ಅಲ್ಲಿ ಏನು ತೀರ್ಮಾನ ಬರುತ್ತದೋ ಅದರ ಮೇರೆಗೆ ಮುಂದುವರೆದರೆ ಸಮಸ್ಯೆ ಬಗೆಹರಿಯುತ್ತದೆ.

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್:– ಒಂದು ನಿಮಿಷ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಐವನ್ ಡಿ' ಸೋಜಾ:– ಮಾನ್ಯ ಸಭಾಪತಿಯವರೇ, ಅವರು ಕ್ಷಮೆ ಕೇಳಬೇಕು.

ವೈಸ್ ಛೇರ್ಮನ್:– ಯಾರು ಕ್ಷಮೆ ಕೇಳಬೇಕು?

ಶ್ರೀ ಐವನ್ ಡಿ' ಸೋಜಾ:– ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕ್ಷಮೆ ಕೇಳಬೇಕು.

ವೈಸ್ ಛೇರ್ಮನ್:– ಅದನ್ನು ಅವರು ಯಾವಾಗ ಕೇಳಬೇಕು? Basically, you are an Advocate. ಅದು ಯಾವಾಗ ಬರಬೇಕು? ಹಕ್ಕುಬಾಧ್ಯತಾ ಸಮಿತಿಯಿಂದ ವರದಿ ಬಂದ ನಂತರ, ಯಾರು ಯಾರಿಗೆ ಕ್ಷಮೆ ಕೇಳಬೇಕು ಎನ್ನುವುದು ತೀರ್ಮಾನ ಆಗುತ್ತದೆ. When already it is in a proper forum, again you are asking in this forum and in this forum also an opportunity is given.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸಭಾಪತಿಯವರೇ, ಹಾಗಾದರೆ ಈ ವಿಷಯವನ್ನು ಅಲೋ ಮಾಡಿ, ಇಷ್ಟು ಹೊತ್ತು ಸದನದ ಸಮಯವನ್ನು ಏತಕ್ಕೆ ಹಾಳು ಮಾಡಿರುತ್ತೀರಿ?

(ಗೊಂದಲ)

ವೈಸ್ ಛೇರ್ಮನ್:– ಆ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಪೀಠದಿಂದ ಅವಕಾಶ ಕೊಟ್ಟಾಗಿತ್ತು. ಅದರಿಂದಾಗಿ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿರುತ್ತಾರೆ. ಅದಕ್ಕೆ ಮಾನ್ಯ ಸಭಾನಾಯಕರು ಸರ್ಕಾರದ ಪರವಾಗಿ ಉತ್ತರ ನೀಡಿರುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ನೀಡಿರುವುದಿರಂದ, ಅಲ್ಲಿಂದ ಏನು outcome ಬರುತ್ತದೆ ನೋಡೋಣ. ತಮ್ಮ ಬಳಿ ಇರುವ ಸಾಕ್ಷಾಧಾರಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ನೀಡಿ. ಅಲ್ಲಿಂದ ವರದಿ ಬಂದ ನಂತರ, ಆ ವಿಷಯ ತಮಗೆ ತೃಪ್ತಿಕರವಾಗದೇ ಇದ್ದರೆ, ಅದನ್ನು ತಾವು ಬೇರೆ ರೂಪದಲ್ಲಿ you have liberty to file a private complaint. ತಮಗೆ ಎಲ್ಲಾ ರೀತಿಯಲ್ಲಿಯೂ ಅವಕಾಶ ಇದೆ. ಈ ದಿನ ಸರ್ಕಾರದಿಂದ ಈ ಉತ್ತರ ಬಂದಿರುತ್ತದೆ. ಈ ಉತ್ತರ ತಮಗೆ ಸಮಾಧಾನವಾಗಿಲ್ಲದೇ ಇದ್ದರೆ, ಮುಂದೆ ತಾವು ಇದನ್ನು ಪ್ರಶ್ನೆ ಮಾಡಬಹುದಾಗಿದೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಏನೆಂದರೆ, ಹಕ್ಕುಚ್ಯುತಿ ಪ್ರಸ್ತಾವನೆಯಲ್ಲಿ ನಾನು ಮಾನ್ಯ ಮಂತ್ರಿಗಳ ಹೆಸರನ್ನು ಪ್ರಸ್ತಾಪವೇ ಮಾಡಿರುವುದಿಲ್ಲ.

(ಗೊಂದಲ)

ಶ್ರೀ ಜಗದೇವ್ ಗುತ್ತೇದಾರ್:– ಮಾನ್ಯ ಸಭಾಪತಿಯವರೇ, ಆದರೆ ಆ ದಿನ ಪತ್ರಿಕಾಗೋಷ್ಠಿಯಲ್ಲಿ ಮಾನ್ಯ ಮಂತ್ರಿಗಳ ಹೆಸರು ತೆಗೆದುಕೊಂಡಿರುತ್ತಾರೆ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇಲ್ಲಿ ಮಾಡುತ್ತಿರುವುದು ಬೇರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಜಗದೇವ್ ಗುತ್ತೇದಾರ್:- ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಾವು ಕ್ಷಮೆ ಕೇಳಬೇಕೆಂದು ಹೇಳಿದ್ದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮಂತ್ರಿಗಳ ಬಳಿ ಕ್ಷಮೆ ಕೇಳಿರುತ್ತಾರೆ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನನ್ನನ್ನು ಸರ್ಕಾರಿ ಪರಿವೀಕ್ಷಣಾ ಮಂದಿರದಲ್ಲಿ ಬೆಳಗ್ಗೆ ಸಂಜೆಯವರೆಗೆ ಕೂಡಿ ಹಾಕಿದ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಮಂತ್ರಿಗಳ ಸಮಜಾಯಿಷಿ ಕೇಳಿದಾಗ, "ಹೌದು ರೀ, ನಾವು ಕೂಡಿ ಹಾಕುವುದೇ" ಎಂದು ಹೇಳಿರುತ್ತಾರೆ. ಹಾಗಾದರೆ, ಅದನ್ನು ಮಾಡಿಸಿದವರು ಯಾರು?

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, it is his imagination. ಹಾಗೆಂದು ಮಾನ್ಯ ಮಂತ್ರಿಗಳು ಹೇಳಿರುತ್ತಾರೆಯೇ? ಆ ರೀತಿ ಇವರು ಅಂದುಕೊಳ್ಳುತ್ತಿದ್ದಾರಷ್ಟೇ. ಆ ರೀತಿ ಇವರು ಕಥೆ ಕಟ್ಟುತ್ತಿದ್ದಾರೆ. ಇದು ಇವರ imagination ಅಷ್ಟೇ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಇವರನ್ನು ಕೂಡಿ ಹಾಕಿದ್ದರೆ ಇವರಿಗೆ ಅರ್ಥವಾಗುತ್ತಿತ್ತು. ತಾವು ಕೂಡ ಅಧಿಕಾರದಲ್ಲಿ ಏನು ಗೂಟ ಹೊಡೆದುಕೊಂಡು ಇರುವುದಿಲ್ಲ. ನಮಗೂ ಕಾಲ ಬರುತ್ತದೆ. ಆಗ ನಾವು ಉತ್ತರ ಕೊಡುತ್ತೇವೆ.

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್:- ಮಾನ್ಯ ಸಭಾಪತಿಯವರೇ, ನಾವು ಕೂಡ ಕಳೆದ ೩೦ ವರ್ಷಗಳಿಂದ ಇದನ್ನೇ ನೋಡಿಕೊಂಡು ಬರುತ್ತಿದ್ದೇವೆ. ಆ ರೀತಿ ಜನ ಕೂಡಿ ಹಾಕುವ ಹಾಗೆ ಅವರು ನಡೆದುಕೊಳ್ಳಬಾರದಿತ್ತು. It's a normal reaction of the people.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಹಾಗಾದರೆ ನಮ್ಮನ್ನು ಕೂಡಿ ಹಾಕುತ್ತಾರಾ ಇವರು?

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಮಾನ್ಯ ಸಭಾಪತಿಯವರೇ, ನಾವು ಹಾಕಿರುವುದಿಲ್ಲ. ಜನ ಅವರನ್ನು ಕೂಡಿ ಹಾಕಿರುತ್ತಾರೆ. It's a normal reaction of the people.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್:– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ವಿಚಾರ ಹೇಳಬೇಕೆಂದು ಬಯಸಿದ್ದರೋ ಅದನ್ನು ಸದನಕ್ಕೆ ತಿಳಿಸಿದ್ದಾರೆ. **(ಗೊಂದಲ)** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನೀಡಿದಂತಹ ಅವಕಾಶ ಬಳಸಿಕೊಂಡು ಅವರು ತಮ್ಮ ವಿಚಾರವನ್ನು ತಿಳಿಸಿದ್ದಾರೆ. ಅದಕ್ಕೆ ಸರ್ಕಾರ ಕೂಡ ಉತ್ತರ ನೀಡಿರುತ್ತದೆ. ಈ ವಿಚಾರದಲ್ಲಿ ಹಕ್ಕುಚ್ಯುತಿ ಇರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಮುಂದೆ ಹೇಳಿರುತ್ತಾರೆ.

ಶ್ರೀ ಜಗದೇವ್ ಗುತ್ತೇದಾರ್:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುತ್ತೇನೆ.

ವೈಸ್ ಛೇರ್ಮನ್:– ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ಈ ವಿಷಯದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಮುಂದೆ ಹೇಳಿರುತ್ತಾರೆ. ಅದರಂತೆ, ಹಕ್ಕುಚ್ಯುತಿ ಇರುವಂಥದ್ದು ಅಧಿಕಾರಿಗಳ ಮೇಲೆ ಹೊರೆತು, ಯಾವುದೇ ಮಂತ್ರಿಗಳ ಮೇಲಿರುವುದಿಲ್ಲ ಎಂದು ಹೇಳಿರುವಂತಹ ಸಂದರ್ಭದಲ್ಲಿ ಸರ್ಕಾರ ಕೂಡ ಅದಕ್ಕೆ ಉತ್ತರ ನೀಡಿರುತ್ತದೆ. ಆದುದರಿಂದ, ಈ ವಿಷಯ ಇಲ್ಲಿಗೆ ಮುಕ್ತಾಯವಾಗಿರುತ್ತದೆ. ಈಗ ಮುಂದಿನ ವಿಷಯ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು. ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸುತ್ತಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(622) 11.08.2025 4.50 ವೈಎಲ್-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

08.ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಮೊದಲನೇ ಪಟ್ಟಿ)

I. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಭಾರತ ಸಂವಿಧಾನದ 213ರ ಅನುಚ್ಛೇದದ 2(ಎ)ನೇ ಖಂಡದ ಮೇರೆಗೆ:

1. ದಿನಾಂಕ:13.05.2025ರಂದು ಹೊರಡಿಸಲಾದ, 2025ರ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರದ ಪ್ರಕರಣ-3ರ (ತಿದ್ದುಪಡಿ) ಅಧ್ಯಾದೇಶ ಸಂಖ್ಯೆ 03.

2. ದಿನಾಂಕ:27.05.2025ರಂದು ಹೊರಡಿಸಲಾದ, 2025ರ ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ(ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧ್ಯಾದೇಶ ಸಂಖ್ಯೆ 04.

3. 0:27.05.2025ರಂದು ಹೊರಡಿಸಲಾದ, 2025ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2, 4, 5ನೇ ಪ್ರಕರಣಗಳ ತಿದ್ದುಪಡಿ ಮತ್ತು 3, 6ರ ಪ್ರತಿಯೋಜನೆ ಹಾಗೂ 7ಎ ಹೊಸ ಪ್ರಕರಣ ಸೇರ್ಪಡೆಗೊಳಿಸಿದ ಆಧ್ಯಾದೇಶ ಸಂಖ್ಯೆ: 05.

4. ದಿನಾಂಕ:27.05.2025 ರಂದು ಹೊರಡಿಸಲಾದ, 2025 ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ 3, 4 ಮತ್ತು 5ನೇ ಪ್ರಕರಣಗಳ(ತಿದ್ದುಪಡಿ) ಹಾಗೂ 3ಎ ಹೊಸ ಪ್ರಕರಣದ ಸೇರ್ಪಡೆಗೊಳಿಸಿದ ಅಧ್ಯಾದೇಶ ಸಂಖ್ಯೆ: 06

2023ರ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಅಧಿನಿಯಮ ಪ್ರಕರಣ 82(2)ರ ಮೇರೆಗೆ:

2025ರ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ನಿಯಮಗಳನ್ನು ರಚಿಸಿ, ದಿನಾಂಕ: 18.03.2025ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಲಾ-ಎಲ್‌ಎಎ0/9/2024.

II **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ,

1978ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

1981ರ ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ(ಎರಡನೇ ತಿದ್ದುಪಡಿ) ನಿಯಮಗಳ ನಿಯಮ 5,6,7ಮತ್ತು 8ಅನ್ನು ತಿದ್ದುಪಡಿಮಾಡಿ, ದಿನಾಂಕ:06.01.2025ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಇ 15 ಸಾವಿಯೋ 2024.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

III. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 182ರ ಮೇರೆಗೆ:

1. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪೀರ್ ಟು ಪೀರ್ ಸೌರವಿದ್ಯುತ್ ವಹಿವಾಟಿನ ಅನುಷ್ಠಾನ) ವಿನಿಯಮಗಳನ್ನು ರಚಿಸಿ, ದಿನಾಂಕ:06.08.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಎಸ್/03/1/560.
2. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಸಂಪನ್ಮೂಲ ಸಮರ್ಪಕತೆಯ ಚೌಕಟ್ಟು) ವಿನಿಯಮಗಳನ್ನು ರಚಿಸಿ, ದಿನಾಂಕ:23.09.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆಸಿ/ಎಫ್/30/Vol.10/690.
3. 2024ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಶುಲ್ಕ) ವಿನಿಯಮಗಳನ್ನು ರಚಿಸಿ, ಅಧಿಸೂಚನೆ ಸಂಖ್ಯೆ: ದಿನಾಂಕ:26.11.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: DD//48/2024/988.

IV. **ಶ್ರೀ ದಿನೇಶ್ ಗುಂಡೂರಾವ್, (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,

2012ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮದ ಪ್ರಕರಣ 9 (2)ರ ಮೇರೆಗೆ:

2015ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ಕೌನ್ಸೆಲಿಂಗ್, ಹಂಚಿಕೆ ಮತ್ತು ಪ್ರಮಾಣೀಕರಣ)(ತಿದ್ದುಪಡಿ) ನಿಯಮಗಳ ನಿಯಮ 2ರ ತಿದ್ದುಪಡಿ, ಪದಾವಳಿಯನ್ನು ಬಿಟ್ಟುಬಿಡುವುದು, ನಿಯಮ 3, 5ರ ತಿದ್ದುಪಡಿ, ನಿಯಮ 6, 7ರ ಪ್ರತ್ಯಾಯೋಜನೆ ನಿಯಮ 8, 9 ಮತ್ತು 12 ಅನ್ನು ತಿದ್ದುಪಡಿಗೊಳಿಸಿ, ದಿನಾಂಕ:11.06.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ 363 ಎಚ್‌ಎಸ್‌ಎಚ್ 2021.

2011ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮದ ಪ್ರಕರಣ 12 (3)ರ ಮೇರೆಗೆ:

1. 2011ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ (2011ರ ಕರ್ನಾಟಕ ಅಧಿನಿಯಮ 2) ಪ್ರಕರಣ 12ರ ಮೇರೆಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು 2025ನ್ನು ರಚಿಸಿ, ದಿನಾಂಕ:27.05.2025ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಕುಕ 220 ಹೆಚ್‌ಎಸ್‌ಹೆಚ್ 2025.

2. 2025ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳ ನಿಯಮ 6 ಮತ್ತು 9ರ ತಿದ್ದುಪಡಿ ಮಾಡಿ, ದಿನಾಂಕ:13.06.2025ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಕುಕ 156 ಹೆಚ್‌ಎಸ್‌ಹೆಚ್ 2025.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. 2025ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳು ಕನ್ನಡ ಆವೃತ್ತಿಯಲ್ಲಿ ನಿಯಮ-3ರ ಪಟ್ಟಿಯ ಕ್ರಮ ಸಂಖ್ಯೆ (3)ರಲ್ಲಿನ/ಸಿದ್ಧ ಮತ್ತು ಯೋಗ)" ಎಂಬ ಪದಗಳ ನಂತರ "**ಮತ್ತು ಇತರೆ ಗ್ರೂಪ್-ಎ ಅಧಿಕಾರಿಗಳು**"ಎಂದು ಸೇರ್ಪಡೆಗೊಳಿಸಿ, ದಿನಾಂಕ:17.06.2025ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಕುಕ 220 ಹೆಚ್ಎಸ್ಹೆಚ್ 2025.

V. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ (ಕರ್ನಾಟಕ ಅಧಿನಿಯಮದ 14) ಪ್ರಕರಣ 320ರ ಮೇರೆಗೆ:

2025ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತಿಗಳ ನಿಯಂತ್ರಣ) (ತಿದ್ದುಪಡಿ) ಮಾದರಿ 4ನೇ ಉಪವಿಧಿ, 12ನೇ ಉಪವಿಧಿ ಹಾಗೂ 13ನೇ ಉಪವಿಧಿಗಳನ್ನು ತಿದ್ದುಪಡಿಗೊಳಿಸಿ, ದಿನಾಂಕ:03.06.2025ರಂದು ಹೊರಡಿಸಲಾದ ಅಧಿಸೂಚನೆ 30: RDPR 26 GPA 2025.

VI. **ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ,

1963ರ ಕರ್ನಾಟಕ ಅರಣ್ಯ ಅಧಿನಿಯಮದ ಕಲಂ 103ರ ಮೇರೆಗೆ:

1. 1969ರ ಕರ್ನಾಟಕ ಅರಣ್ಯ ನಿಯಮಗಳ ನಿಯಮ 118 145 147 149 153 155 157 163 ಮತ್ತು 164-Bನ್ನು ತಿದ್ದುಪಡಿ ಮಾಡಿ, ದಿನಾಂಕ:17.11.2023ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಅಪಜೀ 119 ಎಫ್ಡಿಪಿ 2016.

2. 2023ರ ಕರ್ನಾಟಕ ಅರಣ್ಯ (ತಿದ್ದುಪಡಿ) ನಿಯಮಗಳ ನಿಯಮ 1ರ ಉಪ ನಿಯಮ (2)ರಲ್ಲಿ ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮ ಪ್ರಕಟಣೆಯಾದ "ದಿನಾಂಕದಿಂದ ಜಾರಿಗೆ ಬರತಕ್ಕದ್ದು ಪದಗಳ ಬದಲಾಗಿ" ಈ ನಿಯಮಗಳು 01ನೇ ಫೆಬ್ರವರಿ 2024ರಿಂದ ಜಾರಿಗೆ ಬರತಕ್ಕದ್ದು" ಎಂದು ತಿದ್ದುಪಡಿ ಮಾಡಿ, ದಿನಾಂಕ:31.01.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಅಪಜೀ 119 ಎಫ್ಡಿಪಿ 2016.

3. 2023ರ ಕರ್ನಾಟಕ ಅರಣ್ಯ (ತಿದ್ದುಪಡಿ) ನಿಯಮಗಳ ನಿಯಮ 15ರ ಉಪ ನಿಯಮ (1)ರಲ್ಲಿ "ಎರಡು ಸಾವಿರ ರೂಪಾಯಿಗಳು" ಪದಗಳ ಬದಲಾಗಿ "ಇಪ್ಪತ್ತು ಸಾವಿರ ರೂಪಾಯಿಗಳು" ಎಂದು ತಿದ್ದುಪಡಿ ಮಾಡಿ, ದಿನಾಂಕ:01.04.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಅಪಜೀ 119 ಎಫ್ಡಿಪಿ 2016.

VII **ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು-:-** ಮಾನ್ಯ ಸಭಾಪತಿಯವರೇ,

1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಅಧಿನಿಯಮ ಪ್ರಕರಣ 14(2)ರ ಮೇರೆಗೆ:

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. 2006ರ ಕರ್ನಾಟಕ ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯ ಪದವಿ ಮತ್ತು ಡಿಪ್ಲೋಮಾ ವ್ಯಾಸಂಗ ಕ್ರಮಗಳಿಗೆ ಆಯ್ಕೆ ಮತ್ತು ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆ ನಡೆಸುವ ನಿಯಮಗಳ ನಿಯಮ 3, 10, 11 ಹಾಗೂ 15ಅನ್ನು ತಿದ್ದುಪಡಿಗೊಳಿಸಿ, ದಿನಾಂಕ:13.06.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಂಇಡಿ/95/ಆರ್‌ಜಿಯು/2023.

2. ಕರ್ನಾಟಕ ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯ ಪದವಿ ಮತ್ತು ಡಿಪ್ಲೋಮಾ ವ್ಯಾಸಂಗ ಕ್ರಮಗಳಿಗೆ ಆಯ್ಕೆ ಮತ್ತು ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆ ನಡೆಸುವ ನಿಯಮಗಳ ನಿಯಮ 10 ಅನ್ನು ತಿದ್ದುಪಡಿಗೊಳಿಸಿ, ದಿನಾಂಕ:18.12.2024ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಂಇಡಿ/126/ಆರ್‌ಜಿಯು/2024.

VIII. **ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, 1965ರ ಕರ್ನಾಟಕ ಅಬಕಾರಿ ಅಧಿನಿಯಮದ ಪ್ರಕರಣ 71(4)ರ ಮೇರೆಗೆ:

1. 1967ರ ಕರ್ನಾಟಕ ಅಬಕಾರಿ(ಬಾಟ್ಲಿಂಗ್ ಆಫ್ ಲಿಕ್ಕರ್)(ಎರಡನೇ ತಿದ್ದುಪಡಿ) ನಿಯಮಗಳ ನಿಯಮ 15 ಅನ್ನು ತಿದ್ದುಪಡಿಗೊಳಿಸಿ, ದಿನಾಂಕ: 24.04.2025ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ 5 ಪಿಇಎಸ್ 2024.
2. 1967ರ ಕರ್ನಾಟಕ ಅಬಕಾರಿ (ಬೀವರಿ) ನಿಯಮಗಳ ನಿಯಮ 2ಅನ್ನು ತಿದ್ದುಪಡಿಗೊಳಿಸಿ, ದಿನಾಂಕ:08.01.2025ರಂದು ಹೊರಡಿಸಲಾಗಿರುವ ಅಧಿಸೂಚನೆ-1ಸಂಖ್ಯೆ: ಆಇ 5 ಪಿಇಎಸ್ 2024.
3. 1967ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್) ನಿಯಮಗಳ ನಿಯಮ 15ಅನ್ನು ಹೊರಡಿಸಲಾಗಿರುವ ಅಧಿಸೂಚನೆ-II ತಿದ್ದುಪಡಿಗೊಳಿಸಿ, ದಿನಾಂಕ:08.01.2025ರಂದು ಸಂಖ್ಯೆ: ಆಇ 5 ಪಿಇಎಸ್ 2024.
4. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ನಿಯಮ 2-ಎಇ, ಅನುಸೂಚಿ-ಎ, ಅನುಸೂಚಿ-ಡಿ ಮತ್ತು ಅನುಸೂಚಿ-ಡಿ1 ಅನ್ನು ಹೊರಡಿಸಲಾಗಿರುವ ಅಧಿಸೂಚನೆ-II ತಿದ್ದುಪಡಿಗೊಳಿಸಿ, ದಿನಾಂಕ:08.01.2025ರಂದು ಸಂಖ್ಯೆ: ಆಇ 5 ಪಿಇಎಸ್ 2024.
5. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ಅನುಸೂಚಿ-ಡಿ ಅನ್ನು ತಿದ್ದುಪಡಿಗೊಳಿಸಿ, ದಿನಾಂಕ:13.05.2025ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ 4 ಪಿಇಎಸ್ 2025.

1978ರ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

2025ರ ಕರ್ನಾಟಕ ನಾಗರಿಕ ಸೇವೆಗಳ (ಅಬಕಾರಿ ಇಲಾಖೆ ಅಧಿಕಾರಿ ಮತ್ತು ನೌಕರರ ವರ್ಗಾವಣೆ) ನಿಯಮಗಳನ್ನು ರಚಿಸಿ, ದಿನಾಂಕ:14.05.2025ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ 10 ಪಿಇಎಸ್ 2024.

ವೈಸ್ ಛೇರ್ಮನ್:- ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಎರಡನೇ ಪಟ್ಟಿ)

I. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **<u>ಕಂಪನಿ ಕಾಯ್ದೆ 2013ರ ಕಲಂ 395(1)(ಬಿ) ರನ್ವಯ ಮತ್ತು 394 (2)ರ ಪ್ರಕಾರ</u>**

1. ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

(2) **<u>ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಸೆಕ್ಷನ್ (ಕಲಂ) 12(6) ತಿದ್ದುಪಡಿಯನ್ವಯ</u>**

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ, (ಕ್ರೋಡೀಕೃತ) 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

II. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉಪ ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, (ಬೆಂಗಳೂರು ನಗರ ಯೋಜನೆಗೆ ಸಂಬಂಧಿಸಿದಂತೆ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್ಎಸ್ಬಿ, ಬಿಎಂಆರ್ಡಿಎ, ಬಿಎಂಆರ್ಸಿಎಲ್ ಪ್ರಾಧಿಕಾರಗಳು)

<u>(1) ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 394/395 ಹಾಗೂ ಕಾಡಾ ಅಧಿನಿಯಮ 1980ರ ಕಲಂ 24ರನ್ವಯ</u>

1. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಕಾಡಾ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಗಳು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಕಾಡಾ ಅಚ್ಚುಕಟ್ಟು ಪ್ರಾಧಿಕಾರ "ತುಂಗಭದ್ರ ಕಾಡಾ ಮುನಿರಾಬಾದ್" ಕೊಪ್ಪಳ ಇದರ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2022-23ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(2) The Karnataka Improvement Boards (Amendment) ACT, 1983 ಪ್ರಕಾರ

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ ಇದರ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

(3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976ರ ಕಲಂ(ಎ)ರನ್ವಯ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ

(4) ಸಾರ್ವಜನಿಕ ಕಂಪನಿ ಕಾಯ್ದೆ 2013 ಸೆಕ್ಷನ್ 394 ಮತ್ತು 395 ರನ್ವಯ

ಬೆಂಗಳೂರು ಹೊರವಲಯ ವರ್ತುಲ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2022-23 ಮತ್ತು 2023-24ರ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(5) ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಅಧಿನಿಯಮ 1976ರ ಸೆಕ್ಷನ್ 150 (2) ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ) 1990-91 ರಿಂದ 2013-14 ಮತ್ತು 2019-20 ಹಾಗೂ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

III. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, **(1) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಲಂ 56(3)ನೇ ಪ್ರಕರಣದನ್ವಯ**

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ 2020-21 ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(2) ಕಂಪನಿ ಕಾಯ್ದೆ 2013ರ ಕಲಂ 395(1)(ಬಿ)ರನ್ವಯ

1. ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ ನಿಯಮಿತದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

2. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

IV. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950 ಕಲಂ 33ರಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

V. **ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕಂಪನಿ ಕಾಯ್ದೆ 2013ರ ಕಲಂ 394(2) ರನ್ವಯ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಕೆಎಸ್ಐಡಿಸಿ) 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

(2) ಕಂಪನಿ ಕಾಯ್ದೆ 2013ರ ಕಲಂ 394(2) ಮತ್ತು ಕೆ.ಐ.ಎ.ಡಿ.ಬಿ ಕಾಯ್ದೆ 1966ರ ಕಲಂ 24(4) ರನ್ವಯ.

1. ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ.

2. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

3. ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

4. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇದರ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

(3) Sub Section (2)of Section 7 of The Companies ACT, 2013 and Rule 18 of The Companies (In Corporation Rules) ರನ್ವಯ

ತುಮಕೂರು ಮಿಷನ್ ಟೂಲ್ ಪಾರ್ಕ್ ಸಂಸ್ಥೆ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

VI. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಇಂಧನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕಂಪನಿ ಕಾಯ್ದೆ 2013ರ ಕಲಂ 395(1) ರನ್ವಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

2. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

3. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

4. ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

VII. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ಅಧಿನಿಯಮ 2013 (ತಿದ್ದುಪಡಿ) ಅಧಿನಿಯಮ 2017 & 2023 ಮತ್ತು ನಿಯಮಗಳ 2017ರ ಕಾಯ್ದೆ ಕಲಂ 26ರಂತೆ

ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳು ಮತ್ತು ಹಂಚಿಕೆ ಬಳಕೆ) 2024-25ನೇ ಸಾಲಿನ ವಾರ್ಷಿಕ ವರದಿ.

VIII. ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಲೋಕೋಪಯೋಗಿ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೇ,

ಕಂಪನಿ ಕಾಯ್ದೆ 2013ರ ಕಲಂ 394 ಮತ್ತು 395ರಡಿಯಲ್ಲಿ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಸಭೆಯಲ್ಲಿ ಮಂಡಿಸಲಾಯಿತು.

IX. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಂದಾಯ (ಮುಜರಾಯಿ ಹೊರತುಪಡಿಸಿ) ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ಅರ್ಯ ವೈಶ್ಯ ಸಮುದಾಯ ಅಭಿವೃದ್ಧಿ ಅಧಿನಿಯಮ 2013 ರನ್ವಯ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

(2) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ-12(7)ರನ್ವಯ

ಡಾ.॥ ಬಿ.ಕೆ. ಮಮತ, ಹಿಂದಿನ ತಹಶೀಲ್ದಾರ್ ಗ್ರೇಡ್-1, ಮಂಡ್ಯ ತಾಲ್ಲೂಕು & ಜಿಲ್ಲೆ (ಹಾಲಿ ಕೆ.ಎ.ಎಸ್(ಹಿ.ಶ್ರೇ) ವೃಂದದ ಅಧಿಕಾರಿ) ಇವರ ವಿರುದ್ಧ ತೆಗೆದುಕೊಂಡ ಕ್ರಮದ ಬಗ್ಗೆ ಉಭಯ ಸದನಗಳಲ್ಲಿ ಸಲ್ಲಿಸಿರುವ ವಿವರಣಾತ್ಮಕ ಟಿಪ್ಪಣಿ.

X. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 262(3)ರನ್ವಯ ಮತ್ತು 253(3) & 246(12) ತಿದ್ದುಪಡಿ

1. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ಯಾದಗಿರಿ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಉತ್ತರ ಕನ್ನಡ (ಕಾರವಾರ) ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

4. ಮಂಡ್ಯ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

5. ಕರ್ನಾಟಕ ರಾಜ್ಯ ತಾಲ್ಲೂಕು ಪಂಚಾಯತಿಗಳ 2020-21 ಮತ್ತು 2021-22ನೇ ಸಾಲಿನ ಕ್ರೋಡೀಕೃತ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿ.

6. ಗ್ರಾಮ ಪಂಚಾಯಿತಿಗಳ (ಕ್ರೋಡೀಕೃತ) 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7. ಕೋಲಾರ ಜಿಲ್ಲಾ ಪಂಚಾಯತ್‌ನ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 300ರ ಉಪ ಪ್ರಕರಣ (5) ರನ್ವಯ

ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2024-25ನೇ ಸಾಲಿನ ವಾರ್ಷಿಕ ವರದಿ.

(3) ಕಂಪನಿ ಕಾಯ್ದೆ 2013ರ ಪರಿಚ್ಛೇದ 395 ಅನುಸಾರ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ (ಕಿಯೋನಿಕ್ಸ್) 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

XI. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ವಸತಿ, ವಕ್ಸ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ ಕಾಯ್ದೆ 1973ರ ಸೆಕ್ಷನ್- 41ರೊಡನೆ ಓದಿಕೊಂಡಂತೆ Comptroller and Auditor Generals (Duties, Powers and Conditions of Service) act 1971 ಸೆಕ್ಷನ್ 19(3)ರ ಪ್ರಕಾರ

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇದರ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(2) ಕಂಪನಿ ಕಾಯ್ದೆ 2013ರ ಪರಿಚ್ಛೇದ 395 ಅನುಸಾರ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳು.

XII. **ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):-** ಮಾನ್ಯ ಸಭಾಪತಿಯವರೇ,

(1) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974ರ ಸೆಕ್ಷನ್ 39(2)ಅನುಸಾರ ಹಾಗೂ ವಾಯುಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ 1981ರ ಸೆಕ್ಷನ್ 35 (2)ಅನುಸಾರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

(2) ಕಂಪನಿ ಕಾಯ್ದೆ 2013ರ ಕಲಂ 394(1)(ಬಿ) ರಡಿ

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

XIII. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 40(3) & 57ರಂತೆ**

1. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ಜಿ.ಕೆ.ವಿ.ಕೆ) ಬೆಂಗಳೂರು ಇದರ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ,
2. ಕೃಷಿ ವಿಶ್ವವಿದ್ಯಾಲಯ ಧಾರವಾಡ ಇದರ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ.
3. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ.

(2) ಕಂಪನಿ ಕಾಯ್ದೆ 2013ರ ಕಲಂ 394(2) ರನ್ವಯ

1. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಕರಣೆ ಹಾಗೂ ರಫ್ತು ನಿಗಮ ನಿಯಮಿತ ಸಂಸ್ಥೆಯ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ, ಕಲಬುರಗಿ ಇದರ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

XIV. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ತೋಟಗಾರಿಕೆ ವಿಶ್ವವಿದ್ಯಾಲಯದ ಅಧಿನಿಯಮ 2009ರ ಅಧ್ಯಾಯ IX ಸೆಕ್ಷನ್ 57 ರನ್ವಯ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ VI ಸೆಕ್ಷನ್ 40(3)ರನ್ವಯ.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ 2022-23ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ.

(2) **ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರಡಿ ನೋಂದಣಿ ಸಂಖ್ಯೆ:ಡಿಆರ್‌ಜೆ .ಎಸ್‌ಒಆರ್/132/2017-18, ದಿನಾಂಕ:16.05.2017ರಂತೆ ನೋಂದಣಿಯಾಗಿದ್ದು, ಸದರಿ ಮಂಡಳಿಯ ಬೈಲಾದ ಕಂಡಿಕೆ 17-18ರಲ್ಲಿ**

ಕರ್ನಾಟಕ ರಾಜ್ಯ ಲಂಬೆ ಅಭಿವೃದ್ಧಿ ಮಂಡಳಿ ಇಂಡಿ (ವಿಜಯಪುರ) 2021-22 ರಿಂದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳು.

(3) **ಕಂಪನಿಗಳ ಕಾಯ್ದೆ (Companies ACT) 1956 ಸೆಕ್ಷನ್ 619(ಎ)(2)ರನ್ವಯ**

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(4) **ಕಂಪನಿ ಕಾಯ್ದೆ 2013ರ ಕಲಂ 395ರ ಪ್ರಕಾರ**

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಸಂಸ್ಥೆಯ 2023-24ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)

XV. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳ 1968ರ ನಿಯಮ 28ರನ್ವಯ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ 2024-25ನೇ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(2) ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮ 2009ರಲ್ಲಿ ಹೊಸ ನಿಯಮ 13 ಅನ್ನು ದಿನಾಂಕ:03.12.2024 ರಂದು ಹೊಸದಾಗಿ ರೂಪಿಸಲಾಗಿದ್ದು ಅದರನ್ವಯ

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ 2010-11 ರಿಂದ 2023-24ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2009-10 ರಿಂದ 2018-19ನೇ ಸಾಲಿನ ವರೆಗಿನ ಲೆಕ್ಕಪರಿಶೋಧನಾ ವರದಿಗಳು.

XVI. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

1956ರ ಕಂಪನಿ ಅಧಿನಿಯಮಗಳ ಕಲಂ 619(4)ರನ್ವಯ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

XVII. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕಂಪನಿ ಕಾಯ್ದೆ 2013ರ ಕಲಂ 395(1)(ಐ) ರನ್ವಯ

1. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ 2021-22ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

XVIII. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಹಕಾರ (ಕೃಷಿ ಮಾರುಕಟ್ಟೆಯನ್ನು ಹೊರತುಪಡಿಸಿದಂತೆ) ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63(11) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29(ಡಿ)ರನ್ವಯ

1. ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2023-24ನೇ ಸಾಲಿನ ಕ್ರೋಡೀಕೃತ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗದ ನೇಕಾರರ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ಸಹಕಾರ ಕುರಿ ಮತ್ತು ಸಾಕಾಣಿಕೆದಾರರ ಸಂಘಗಳ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
6. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
7. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು ಇದರ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
8. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿಯಮಿತದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ,

XIX. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಕೆಯುಡಬ್ಲ್ಯೂಎಸ್‌ಡಿಬಿ ಮತ್ತು ಕೆಯುಐಡಿಎಫ್‌ಸಿ ಸೇರಿದಂತೆ) ಬೆಂಗಳೂರು ನಗರಾಭಿವೃದ್ಧಿ ಹೊರತುಪಡಿಸಿದಂತೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48(5) &49 ರನ್ವಯ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 68-ಡಿ(2)ರನ್ವಯ & 68ಸಿ(4)ರನ್ವಯ.

1. ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳು.
2. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ. 3. ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ,
5. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2023-24 ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6. ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ 2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
7. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ಹಾಗೂ ಲೆಕ್ಕತಪಾಸಣಾ ವರದಿ.
9. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
10. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
11. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
12. ನೆಲಮಂಗಲ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
13. ಆನೇಕಲ್ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
14. ದೊಡ್ಡಬಳ್ಳಾಲರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
15. ಚನ್ನಪಟ್ಟಣ ನಗರ ಯೋಜನಾ ಪ್ರಾಧಿಕಾರದ 2022-23, 2023-24 ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ ಲೆಕ್ಕಪರಿಶೋಧನಾ ವರದಿ.
16. ಮಾಗಡಿ ಯೋಜನಾ ಪ್ರಾಧಿಕಾರದ 2023-24ನೇಸಾಲಿನ ಲೆಕ್ಕಪರಿಶೋಧನಾ ವರದಿ.
17. ಹೊಸಕೋಟೆ ಯೋಜನಾ ಪ್ರಾಧಿಕಾರದ 2021-22 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ,
18. ಶಹಾಪೂರ ನಗರ ಯೋಜನಾ ಪ್ರಾಧಿಕಾರದ 2022-23 ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2022-23 ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
19. ಮಳವಳ್ಳಿ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ.
20. ಚಿಂತಾಮಣಿ ನಗರ ಯೋಜನಾ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
21. ಶಿಡ್ಲಘಟ್ಟ ನಗರ ಯೋಜನಾ ಪ್ರಾಧಿಕಾರದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

22. ಕುಣಿಗಲ್ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

23, ವಾಡಿ-ಶಹಾಬಾದ ನಗರ ಯೋಜನಾ ಪ್ರಾಧಿಕಾರದ 2023-24 ಮತ್ತು 2024- 25ನೇ ಸಾಲಿನ ವಾರ್ಷಿಕ ವರದಿಗಳು ಮತ್ತು ಲೆಕ್ಕಪರಿಶೋಧನಾ ವರದಿ,

24. ಕುಂದಾಪುರ ಯೋಜನಾ ಪ್ರಾಧಿಕಾರದ 2019-20 ರಿಂದ 2024-25ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2021-22 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

25. ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರದ 2021-22 ರಿಂದ 2024-25ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2020-21 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

26. ಬಾದಾಮಿ ನಗರ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21 ರಿಂದ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

27. ಸುರಪುರ ನಗರ ಯೋಜನಾ ಪ್ರಾಧಿಕಾರದ 2018-19 ರಿಂದ 2021-22,2023-24 ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2017-18 ರಿಂದ 2023-24 ಸಾಲಿನ ಲೆಕ್ಕಪರಿಶೋಧನಾ ವರದಿ.

28. ಬೇಲೂರು-ಹಳೇಬೀಡು ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

29. ರಾಣೇಬೆನ್ನೂರು ನಗರ ಯೋಜನಾ ಪ್ರಾಧಿಕಾರದ 2021-22 ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2016-17 ಮತ್ತು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

30. ಕಾಪು ನಗರ ಯೋಜನಾ ಪ್ರಾಧಿಕಾರದ 2021-22, 2022-23 ಮತ್ತು 2024-25ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2021-22 ರಿಂದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

31. ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ 2022-23 ಮತ್ತು 2023-24ನೇಸಾಲಿನ ಲೆಕ್ಕಪರಿಶೋಧನಾ ವರದಿ.

32. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ(ಬೈಯಪ್ಪ) 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

33. ಉಪನಗರ ವರ್ತುಲ ರಸ್ತೆ(ಎಸ್‌ಟಿಆರ್‌ಆ) ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

34. ಗೋಕಾಕ ನಗರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

35. ಮೂಡಬಿದ್ರೆ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

36. ಬಂಟ್ವಾಳ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

37. ಮಾಲೂರು ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

38. ಅರಸೀಕೆರೆ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

39, ಸಿಂಧಗಿ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

40. ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

41. ನಿಪ್ಪಾಣಿ ನಗರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

42. ಹೊಸಪೇಟೆ (ವಿಜಯನಗರ) ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

43. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

44. ಗದಗ-ಬೆಟಗೆರಿ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

45. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

46. ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

47. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

48. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

49. ಕೆ.ಜಿ.ಎಫ್ (ಕೋಲಾರ) ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ ಮತ್ತು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

50. ಚೆನ್ನೈ-ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ ಸ್ಥಳೀಯ ಯೋಜನಾ ಪ್ರಾಧಿಕಾರ ತುಮಕೂರು 2024-25ನೇ ಸಾಲಿನ ವಾರ್ಷಿಕ ವರದಿ.

51. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

52. ಸೇಡಂ (ಕಲಬುರಗಿ) ನಗರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

53. ಕುಶಾಲನಗರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

54. ತಿಪಟೂರು ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

55. ಬಾದಾಮಿ ನಗರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

56. ಇಲಕಲ್ಲ ನಗರ ಯೋಜನಾ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

57. ಕನಕಪುರ ನಗರ ಯೋಜನಾ ಪ್ರಾಧಿಕಾರದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

58. ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತೋರಣಗಲ್ಲು, ಬಳ್ಳಾರಿ ಇದರ 2024-25ನೇ ಸಾಲಿನ ವಾರ್ಷಿಕ ವರದಿ.

59. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

60. ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರದ 2024-25ನೇ ಸಾಲಿನ ವಾರ್ಷಿಕ ವರದಿ.

(2) **ಕಂಪನಿ ಅಧಿನಿಯಮ 2013ರ ಕಲಂ 394(2)ರನ್ವಯ ಮತ್ತು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1985ರ ಕಲಂ 13 ರನ್ವಯ**

1. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2013-14ನೇ ಸಾಲಿನ ವಾರ್ಷಿಕ ವರದಿ ಮತ್ತು(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ)
2. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(3) ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರನ್ವಯ

1. ಮೈಸೂರು ಮಹಾನಗರ ಪಾಲಿಕೆ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಶಿವಮೊಗ್ಗ ಮಹಾನಗರ ಪಾಲಿಕೆ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

XX, **ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಕಾಯ್ದೆ 1960ರ ನಿಯಮ-25ರನ್ವಯ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

XXI. **ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) **ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 47 (3) & 47 (4) ರನ್ವಯ ಹಾಗೂ 50 (1) ಮತ್ತು (2)ರನ್ವಯ**

1. ಮೈಸೂರು ವಿಶ್ವವಿದ್ಯಾಲಯದ 2020-21 ಮತ್ತು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ.
2. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ 2023-24ನೇ ಸಾಲಿನ ವಾರ್ಷಿಕ ವರದಿ,
3. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ (ವಿಜಯಪುರ) 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2021-22 ಮತ್ತು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು,
4. ಗುಲಬರ್ಗಾ (ಕಲಬುರಗಿ) ವಿಶ್ವವಿದ್ಯಾಲಯದ 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ವರದಿಗಳು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ (ಬೆಳಗಾವಿ) ಇದರ 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನ ವರದಿ.
6. ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನ ಗಂಗೋತ್ರಿ) ಬೆಂಗಳೂರು ಇದರ 2023-24ನೇ ಸಾಲಿನ ವಾರ್ಷಿಕ ವರದಿ,
7. ಕುವೆಂಪು ವಿಶ್ವವಿದ್ಯಾಲಯ (ಶಿವಮೊಗ್ಗ) ಇದರ 2021-22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನ ವರದಿ.
8. ದಾವಣಗೆರೆ ವಿಶ್ವ ವಿದ್ಯಾಲಯ ಇದರ 2022-23 ಮತ್ತು 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿ.
9. ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು ಇದರ 2022-23 ಮತ್ತು 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿ.

(2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಸೆಕ್ಷನ್ 25 ರನ್ವಯ ಮತ್ತು 1991 ಅಧ್ಯಾಯ 4 ಕಂಡಿಕೆ (25) &(26) ರನ್ವಯ

1. ಕರ್ನಾಟಕ ವಿಶ್ವವಿದ್ಯಾಲಯ (ಧಾರವಾಡ) ಇದರ 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
2. ಹಂಪಿ ವಿಶ್ವವಿದ್ಯಾಲಯದ 2023-24ನೇ ಸಾಲಿನ ವಾರ್ಷಿಕ ವರದಿ ಮತ್ತು 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನ ವರದಿ.

(3) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅಧಿನಿಯಮ,2010ರ ಕಲಂ 22(1) ಹಾಗೂ 21(1)ರನ್ವಯ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ವರದಿಗಳು.

ವೈಸ್ ಛೇರ್ಮನ್:- ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

09.ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ, ಕ.ವಿ.ಪ.:– ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ವೈಸ್ ಛೇರ್ಮನ್:– ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ:- ಕಲಬುರಗಿ ಜಿಲ್ಲೆಯಲ್ಲಿನ ಜಮೀನುಗಳನ್ನು ಖರೀದಿಸಿ ಅತ್ಯಮೂಲ್ಯವಾದ ಸುಣ್ಣದ ಕಲ್ಲಿನ ನೈಸರ್ಗಿಕ ಸಂಪನ್ಮೂಲ ಬಳಸಿಕೊಂಡು ಸಿಮೆಂಟ್ ಉತ್ಪಾದನೆ ಮಾಡುತ್ತಿರುವ ಕಾರ್ಖಾನೆಗಳಿಂದ ಜನ ಜಾನುವಾರು ಮತ್ತು ಬೆಳೆಗಳ ಮೇಲೆ ದುಷ್ಪರಿಣಾಮಗಳು ಉಂಟಾಗುತ್ತಿರುವ ಕುರಿತು.

ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಯಲ್ಲಿನ ಜಮೀನುಗಳನ್ನು ಖರೀದಿಸಿ ಅತ್ಯಮೂಲ್ಯವಾದ ಸುಣ್ಣದ ಕಲ್ಲಿನ ನೈಸರ್ಗಿಕ ಸಂಪನ್ಮೂಲ ಬಳಸಿಕೊಂಡು ಸಿಮೆಂಟ್ ಉತ್ಪಾದನೆ ಮಾಡುತ್ತಿರುವ ಕಾರ್ಖಾನೆಗಳಿಂದ ಜನ ಜಾನುವಾರು ಮತ್ತು ಬೆಳೆಗಳ ಮೇಲೆ ದುಷ್ಪರಿಣಾಮಗಳು ಉಂಟಾಗುತ್ತಿರುವ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ಒಗಿಸಿದ್ದು, ಕೆಲವೊಂದು ಮಹತ್ವದ ಸಂಗತಿಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ

ಕಲಬುರಗಿ ಜಿಲ್ಲೆಯಲ್ಲಿರುವ ಬೃಹತ್ ಸಿಮೆಂಟ್ ಕಾರ್ಖಾನೆಗಳ ಮಾಲಿನ್ಯದಿಂದ ಸುತ್ತ-ಮುತ್ತಲಿನ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತಾದ ವಿಷಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಯಡಿ ಬರುತ್ತಿದ್ದು, ಅದರಂತೆ, ಕೆಎಸ್‌ಪಿಸಿಬಿಯಿಂದ ಮಾಹಿತಿ ಪಡೆದಿದ್ದು, ಅವರು ನೀಡಿರುವ ವಿವರಗಳನ್ನು ಕೆಳಕಂಡಂತೆ ನೀಡಿದೆ:

ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ 08 ಸಿಮೆಂಟ್ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು, ಕೆಎಸ್‌ಪಿಸಿಬಿ ಮಂಡಳಿಯಿಂದ ಜಲ ಕಾಯ್ದೆ 1974 ಮತ್ತು ವಾಯು ಕಾಯ್ದೆ 1981ರಡಿಯಲ್ಲಿ ಚಾಲನಾ ಸಮ್ಮತಿ ಪತ್ರ (Consent for operation) ಪಡೆದಿರುತ್ತವೆ. ವಿವರಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಲಾಗಿದೆ.

ಸಿಮೆಂಟ್ ಕಾರ್ಖಾನೆಗಳು ಪರಿಸರ (ಸಂರಕ್ಷಣೆ) ಕಾಯ್ದೆ 1986 ರ ಅಡಿಯಲ್ಲಿ ಅಧಿಸೂಚಿಸಿರುವ Environment Impact Assessment Notification 2006 (ಈ ಹಿಂದೆ 1994) ರ ಪರಿವ್ಯಾಪ್ತಿಗೆ ಒಳಪಟ್ಟಿದ್ದು, ಸ್ಥಾಪನೆಗೂ ಮುನ್ನ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಪರಿಸರ ವಿಮೋಚನಾ ಪತ್ರ (Environment Clearance) ಪಡೆಯಬೇಕಾಗಿರುತ್ತದೆ. ಅದರಂತೆ 1994ರ ನಂತರ ಸ್ಥಾಪಿಸಲ್ಪಟ್ಟ ಅಥವಾ ಸಾಮರ್ಥ್ಯ ಹೆಚ್ಚಳಗೊಂಡ ಸಿಮೆಂಟ್ ಕಾರ್ಖಾನೆಗಳು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಪರಿಸರ ವಿಮೋಚನಾ ಪತ್ರ ಪಡೆದಿರುತ್ತವೆ. ಈ ಪ್ರಕ್ರಿಯೆಯಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯದ ನಿರ್ದೇಶನದಂತೆ, ಪರಿಸರ ಸಾರ್ವಜನಿಕ ಸಭೆ (Environment Public Hearing) ಯನ್ನು ನಡೆಸಿ ಸಾರ್ವಜನಿಕರ ಅಹವಾಲು/ಆಕ್ಷೇಪಣೆಗಳನ್ನು ಸಂಗ್ರಹಿಸಿ ಅವುಗಳ ಪರಿಶೀಲನೆಯ ನಂತರ ಪರಿಸರ ವಿಮೋಚನಾ ಪತ್ರ ನೀಡಲಾಗಿರುತ್ತದೆ.

ಮುಂದುವರೆದು, ಜಲ ಕಾಯ್ದೆ 1974 ಮತ್ತು ವಾಯುಕಾಯ್ದೆ 1981 ರಡಿಯಲ್ಲಿ ಸ್ಥಾಪನಾ ಸಮ್ಮತಿ ಪತ್ರ (Consent for establishment) ನೀಡುವ ಮುನ್ನ ಕೈಗಾರಿಕೆಯ ಸ್ಥಳ ಪರಿಶೀಲನೆ ನಡೆಸಿ ಸ್ಥಳ ಸೂಕ್ತತೆಯನ್ನು ಖಾತರಿ ಪಡಿಸಿಕೊಂಡ ನಂತರವೇ ಮಂಡಳಿಯಿಂದ ಕೈಗಾರಿಕೆಗೆ ಸ್ಥಾಪನಾ ಸಮ್ಮತಿ ಪತ್ರ ನೀಡಲಾಗಿರುತ್ತದೆ. ಅಲ್ಲದೇ, ಚಾಲನಾ ಸಮ್ಮತಿ ಪತ್ರ (Consent for operation) ನೀಡುವ ಮುನ್ನ ಪರಿಸರ ವಿಮೋಚನಾ ಪತ್ರ (Environment Clearance) ಹಾಗೂ ಸ್ಥಾಪನಾ ಸಮ್ಮತಿ ಪತ್ರದ (Consent for establishment) ಷರತ್ತುಗಳ ಅನುಪಾಲನೆಯನ್ನು ಖಾತರಿ ಪಡಿಸಿಕೊಳ್ಳಲಾಗುತ್ತದೆ.

...2

ಕಲಬುರಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳಿಂದ ಮಾಲಿನ್ಯ ಉಂಟಾಗಿ ಜನಸಾಮಾನ್ಯರಿಗೆ ತೊಂದರೆ ಹಾಗೂ ಬೆಳೆ ನಾಶವಾಗುತ್ತಿರುವುದೆಂದು ಆಕ್ಷೇಪಿಸಿ ಕಲಬುರಗಿ ಜಿಲ್ಲೆಯ ಪರಿಸರ ಧಾರಣ ಸಾಮರ್ಥ್ಯದ ಅಧ್ಯಯನವನ್ನು ನಡೆಸುವಂತೆ ಶ್ರೀ ಉಮೇಶ ಪಾಂಡುಸಿಂಗ ಚವ್ಹಾಣ, ಮಳಖೇಡ ಗ್ರಾಮ ಪಂಚಾಯತಿ ಸದಸ್ಯರು, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ದಿನಾಂಕ 27.09.2024 ರಂದು ಮಂಡಳಿಗೆ ದೂರು ಸಲ್ಲಿಸಿದ್ದು, ಈ ಸಂಬಂಧ, ಕಲಬುರಗಿ ಜಿಲ್ಲೆಯ ಕೈಗಾರಿಕೆಗಳನ್ನು ಪರಿವೀಕ್ಷಿಸಿ ವಸ್ತುಸ್ಥಿತಿ ವರದಿ ನೀಡಲು ಮಂಡಳಿಯಿಂದ ದಿನಾಂಕ 20.11.2024 ರಂದು ಮಂಡಳಿಯ ಅಧಿಕಾರಿಗಳ 02 ತಾಂತ್ರಿಕ ತಂಡಗಳನ್ನು ರಚಿಸಲಾಗಿತ್ತು. ಸದರಿ ತಂಡಗಳು ದಿನಾಂಕ 03.12.2024 ರಿಂದ 07.12.2024 ರವರೆಗೆ ಸಿಮೆಂಟ್ ಕೈಗಾರಿಕೆಗಳನ್ನು ಪರಿವೀಕ್ಷಿಸಿ ಮಂಡಳಿಗೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿನ ಸಿಮೆಂಟ್ ಕೈಗಾರಿಕೆಗಳಲ್ಲಿ ಈ ಕೆಳಕಂಡ ಸಾಮಾನ್ಯ ನ್ಯೂನ್ಯತೆಗಳನ್ನು ಗಮನಿಸಲಾಗಿರುತ್ತದೆ.

1) ಕಾರ್ಖಾನೆಗೆ ಸಂಪರ್ಕಿಸುವ ರಸ್ತೆಗಳಿಗೆ ಸಮರ್ಪಕವಾಗಿ ಕಾಂಕ್ರೀಟ್/ಡಾಂಬರ್ ಮಾಡದಿರುವುದರಿಂದ ವಾಹನಗಳ ಸಂಚಾರದ ವೇಳೆ ಧೂಳು ಬರುತ್ತಿರುವುದು.

2) ಕಾರ್ಖಾನೆಯ ಒಳಗಿರುವ ಎಲ್ಲಾ ರಸ್ತೆಗಳಿಗೆ ಸಮರ್ಪಕವಾಗಿ ಕಾಂಕ್ರೀಟ್/ಡಾಂಬರ್ ಮಾಡದಿರುವುದರಿಂದ ವಾಹನಗಳ ಸಂಚಾರದ ವೇಳೆ ಧೂಳು ಬರುತ್ತಿರುವುದು.

3) ಸಂಪರ್ಕ ರಸ್ತೆಗಳಲ್ಲಿ ಮತ್ತು ಒಳರಸ್ತೆಗಳಲ್ಲಿ ಧೂಳು ನಿಯಂತ್ರಿಸಲು ನೀರಿನ ಸಿಂಪಡಣೆ, ನಿಯಮಿತ ಸ್ವಚ್ಛತೆ, ಇತ್ಯಾದಿ ಕ್ರಮಗಳನ್ನು ನಿಯಮಿತವಾಗಿ ಕೈಗೊಳ್ಳದೇ ಇರುವುದು.

4) ಸಿಮೆಂಟ್ ಕಾರ್ಖಾನೆಗಳ ಮುಖ್ಯ ಕಚ್ಚಾ ವಸ್ತುಗಳಾದ ಸುಣ್ಣದಕಲ್ಲು, ಕಲ್ಲಿದ್ದಲು, ಮುಂತಾದವುಗಳನ್ನು ತೆರೆದ ಪ್ರದೇಶದಲ್ಲಿ ಸಂಗ್ರಹಿಸುತ್ತಿರುವುದರಿಂದ ಧೂಳು ಬರುತ್ತಿರುವುದು.

5) ಸಿಮೆಂಟ್ ಕಾರ್ಖಾನೆಯ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಗಿಡಗಳ ಮೇಲೆ, ರಸ್ತೆಗಳ ಮೇಲೆ ಸಿಮೆಂಟ್ ಧೂಳು ಕಂಡು ಬಂದಿರುವುದು.

6) ತ್ಯಾಜ್ಯ ಸಹ ಸಂಸ್ಕರಣೆ (Waste Co-Processing)ಗೆ ಸ್ವೀಕರಿಸಿದ ತ್ಯಾಜ್ಯಗಳನ್ನು ತೆರೆದ ಪ್ರದೇಶದಲ್ಲಿ ಸಂಗ್ರಹಿಸಿರುವುದರಿಂದ ವಾಸನೆ, ನೊಣಗಳ ಉಪದ್ರವ ಉಂಟಾಗಿರುವುದು.

7) ಸಿಮೆಂಟ್ ಕೈಗಾರಿಕೆಗಳಲ್ಲಿ ವೈಜ್ಞಾನಿಕ ಮಳೆನೀರು ನಿರ್ವಹಣೆ (Scientific Storm Water Management) ಅಳವಡಿಸದೇ ಇರುವುದು.

ಮೇಲ್ಕಂಡ ನ್ಯೂನ್ಯತೆಗಳ ಕುರಿತಂತೆ ದಿನಾಂಕ 21.04.2025 ರಂದು ಕಲಬುರಗಿಯ 08 ಸಿಮೆಂಟ್ ಕೈಗಾರಿಕೆಗಳ ಮೌಖಿಕ ವಿಚಾರಣೆ ನಡೆಸಿ, ತದನಂತರ ಮಂಡಳಿಯಿಂದ ಜಲ ಕಾಯ್ದೆ 1974ರ ಕಲಂ 33 (ಎ) ಮತ್ತು ವಾಯು ಕಾಯ್ದೆ 1981ರ ಕಲಂ 31 (ಎ) ಅಡಿಯಲ್ಲಿ ಪ್ರಸ್ತಾವಿತ ಮುಚ್ಚುವ ಆದೇಶದ ನಿರ್ದೇಶನ ನೀಡಲಾಗಿದೆ.

ಸದರಿ ನಿರ್ದೇಶನಗಳಿಗೆ ಕೈಗಾರಿಕೆಗಳು ಕೈಗೊಂಡ ಅನುಪಾಲನೆಯನ್ನು ಪರಿಶೀಲಿಸಿ ನಿಯಮಾನುಸಾರ ಕೆಎಸ್‌ಪಿಸಿಬಿಯು ಮುಂದಿನ ಕ್ರಮ ಕೈಗೊಳ್ಳುತ್ತದೆ.

ಅಲ್ಲದೇ, ಕಲಬುರ್ಗಿ ಜಿಲ್ಲೆಯಲ್ಲಿ ಈ ಸಿಮೆಂಟ್ ಘಟಕಗಳು CSR ಯೋಜನೆಯಡಿ ಕಾರ್ಖಾನೆಗಳ ಅಕ್ಕಪಕ್ಕದಲ್ಲಿರುವ ಗ್ರಾಮಗಳಲ್ಲಿ ಶಿಕ್ಷಣ, ಸಮುದಾಯ ಆರೋಗ್ಯ, ತರಬೇತಿ, ಮಹಿಳಾ ಸಬಲೀಕರಣ, ಕುಡಿಯುವ ನೀರು, ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳು, ನೈರ್ಮಲ್ಯ, ಮರ ಬೆಳಸುವಿಕೆ ಇತ್ಯಾದಿ ಚಟುವಟಿಕೆಗಳಿಗೆ ಖರ್ಚು ಮಾಡಿದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

ಸಂಖ್ಯೆ ಸಿಐ 234 ಎಸ್‌ಪಿಐ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-1

ಕಲಬುರಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಮೆಂಟ್ ಕೈಗಾರಿಕೆಗಳ ವಿವರ

ಕ್ರ.ಸಂ	ಕೈಗಾರಿಕೆ ಹೆಸರು ಮತ್ತು ವಿಳಾಸ	ಕಾರ್ಖಾನೆ ಸ್ಥಾಪನೆಯಾದ ವರ್ಷ	ವಾರ್ಷಿಕ ಉತ್ಪಾದನಾ ಸಾಮರ್ಥ್ಯ (ಮಿಲಿಯನ್ ಮೆಟ್ರಿಕ್ ಟನ್‌ಗಳಲ್ಲಿ)	ಚಾಲನಾ ಸಮ್ಮತಿ ಪತ್ರದ ಚಾಲ್ತಿ ಅವಧಿ
1)	ಎ.ಸಿ.ಸಿ ಲಿಮಿಟೆಡ್, ನ್ಯೂ ವಾಡಿ ಪ್ಲಾಂಟ್, ವಾಡಿ.	2001	ಕ್ಲಿಂಕರ್-4.59 ಸಿಮೆಂಟ್-3.99	30-06-2026
2)	ಎ.ಸಿ.ಸಿ ಲಿಮಿಟೆಡ್, ಓಲ್ಡ್ ವಾಡಿ ಪ್ಲಾಂಟ್, ವಾಡಿ.	1969	ಕ್ಲಿಂಕರ್-1.85 ಸಿಮೆಂಟ್-1.95	30-06-2026
3)	ಚೆಟ್ಟಿನಾಡು ಸಿಮೆಂಟ್ ಕಾರ್ಪೊರೇಷನ್ ಲಿಮಿಟೆಡ್, ಸಂಗಮ್ ಕೆ ಗ್ರಾಮ, ಚಿಂಚೋಳಿ ತಾಲ್ಲೂಕು.	2012	ಕ್ಲಿಂಕರ್-2 ಸಿಮೆಂಟ್-2.5	30-06-2029
4)	ಅಲ್ಟ್ರಾಟೆಕ್ ಸಿಮೆಂಟ್ಸ್ ಲಿಮಿಟೆಡ್ (ರಾಜಶ್ರೀ ಸಿಮೆಂಟ್ಸ್) ಆದಿತ್ಯನಗರ, ಮಲ್ಖೇಡ್ ರಸ್ತೆ, ಸೇಡಂ ತಾಲ್ಲೂಕು.	1984	ಕ್ಲಿಂಕರ್-9 ಸಿಮೆಂಟ್-8.7	30-06-2026
5)	ವಾಸವದತ್ತ ಸಿಮೆಂಟ್ಸ್, ಸೇಡಂ.	1986	ಕ್ಲಿಂಕರ್-6 ಸಿಮೆಂಟ್-9	30-06-2026
6)	ಕಲಬುರಗಿ ಸಿಮೆಂಟ್ ಪ್ರೈವೇಟ್ ಲಿಮಿಟೆಡ್ (ವಿಕಟ್ ಸಾಗರ್ ಸಿಮೆಂಟ್ ಲಿಮಿಟೆಡ್), ಛತ್ರಸಾಲ್ ಗ್ರಾಮ, ಚಿಂಚೋಳಿ ತಾಲ್ಲೂಕು.	2013	ಕ್ಲಿಂಕರ್-2.75 ಸಿಮೆಂಟ್-3.60	30-06-2029
7)	ಓರಿಯಂಟ್ ಸಿಮೆಂಟ್ ಲಿಮಿಟೆಡ್, ಇಟಗಿ ಗ್ರಾಮ, ಚಿತ್ತಾಪುರ ತಾಲ್ಲೂಕು.	2015	ಕ್ಲಿಂಕರ್- 2.1125 ಸಿಮೆಂಟ್-3.00	30-06-2026
8)	ಶ್ರೀ ಸಿಮೆಂಟ್ಸ್ ಲಿಮಿಟೆಡ್, (ಕರ್ನಾಟಕ ಸಿಮೆಂಟ್ ಪ್ರಾಜೆಕ್ಟ್), ಬೆನಕನಹಳ್ಳಿ ಮತ್ತು ಕೊಲ್ಲಾ ಗ್ರಾಮ, ಸೇಡಂ ತಾಲ್ಲೂಕು.	2018	ಕ್ಲಿಂಕರ್- 2.4 ಸಿಮೆಂಟ್- 4	30-06-2028

ಸದಸ್ಯ ಕಾರ್ಯದರ್ಶಿ

ವಿಧಾನ ಪರಿಷತ್ತಿನ ನಡವಳಿಗಳು
"ಶಿದ್ದಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಧಿಕೃತ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
11-08-2025 242

ಅನುಬಂಧ-೭

ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಸಾಬಣ್ಣ ತಳವಾರ ರವರ ಗಮನಸೆಳೆಯುವ ಸೂಚನೆಗೆ (ನಿಯಮ-72ರ ಮೇರೆಗೆ) ಸಂಬಂಧಿಸಿದ ಉತ್ತರ.

Corporate Social Responsibility ರಡಿ ಸಿಮೆಂಟ್ ಕಂಪನಿಗಳು ಜಿಲ್ಲೆಯಲ್ಲಿ ಕಳೆದ 14 ವರ್ಷಗಳಲ್ಲಿ (2010-11 ರಿಂದ 2024-25) ಖರ್ಚು ಮಾಡಿದ ಮೊತ್ತದ ವಿವರ. (ಕಂಪನಿವಾರು ವಿವರ)

(gÀÆ.®PÀëUÀ¼À°è)

ಕ್ರಮ ಸಂ.	ಕಂಪನಿಯ ಹೆಸರು ಮತ್ತು ವಿಳಾಸ	2010-11	2011-12	2012-13	2013-14	2014-15	2015-16	2016-17	2017-18	2018-19	2019-20	2020-21	2021-22	2022-23	2023-24	2024-25
1	ಮೆ: ಅದಾನಿ ಸಿಮೆಂಟ್ (ಹಿಂದಿನ ಮೆ. ಎ.ಸಿ.ಸಿ ಲಿಮಿಟೆಡ್), ಪೊಡ-ಗಿ&೨. ಪೋಸ್ಟ್: ವಾಡಿ (ಜಂ), ತಾ: ಚಿತ್ತಾಪೂರ ಜಿಕಲಬುರಗಿ	-	-	-	273.36	247.13	193.61	85.78	137.58	168.55	211.59	123.67	107.49	128.03	459.54	-
2	ಮೆB ಓರಿಯಂಟ್ ಸಿಮೆಂಟ್ಸ್ ಪ್ರೈ೦ಟೆ. ಲಿಮಿಟೆಡ್, ಇಟಗಾ, ಮೊಗಲಾ, ದಿಗ್ಗಾಂವ, ಗ್ರಾಮ, ತಾಃಚಿತ್ತಾಪೂರ, ಜಿಃ ಕಲಬುರಗಿ	-	-	-	25.25	109.82	0.46	717.88	1034.99	472.07	466.09	193.66	569.33	345.96	1242.65	321.34
3	ಮೆಃ ಅಲ್ಟ್ರಾಟೆಕ್ ಸಿಮೆಂಟ್ಸ್ ಲಿಮಿಟೆಡ್, (ಮೆಃ ಕೆಸೋರಾಮ ಇಂಡಸ್ಟ್ರೀಸ್), ಸರಳಾ ನಗರ, ತಾಃ ಸೇಡಂ-೫೮೫೨೨೨, ಜಿಃಕಲಬುರಗಿ	-	-	-	45.64	20.11	36.72	38.24	40.63	15.84	6.51	13.97	38	14.5	25.86	
4	ಮೆB ಅಲ್ಟ್ರಾಟೆಕ್ ಸಿಮೆಂಟ್ಸ್ ಲಿಮಿಟೆಡ್, (ಮೆಃರಾಜಶ್ರೀ ಸಿಮೆಂಟ್ಸ್ ಲಿ), ಆದಿತ್ಯನಗರ, ಮಳಖೇಡ್ ರಸ್ತೆ, ಪೋಃತಾBಃಸೇಡಂ ಜಿಃಕಲಬುರಗಿ	-	276.54	276.54	621.76	364.63	334.77	381.77	508.8	511.01	505.69	500.33	556.67	899.03	1231.5	
5	ಮೆB ಶ್ರೀ ಸಿಮೆಂಟ್ ಲಿಮಿಟೆಡ್, ಬೆನಕನಹಳ್ಳಿ ಗ್ರಾಮ, ಕೋಡ್ಲಾ ತಾಃ ಸೇಡಂ ಜಿಃಕಲಬುರಗಿ	-	-	-	-	-	-	-	-	2018-19 ರಿಂದ 2024-25 ಸಾಲಿನ ರವರೆಗೆ ರೂ.4378 ಲಕ್ಷಗಳನ್ನು ಖರ್ಚು ಮಾಡಿರುತ್ತಾರೆ						
6	ಮೆB ಚೆಟ್ಟಿನಾಡ್ ಸಿಮೆಂಟ್ಸ್ ಕಾರ್ಪೋರೇಷನ್ ಲಿಮಿಟೆಡ್, ಕಲ್ಲೂರ ವರ್ಸ್F, ಸಂಗA(ಕೆ), ಪೋಃ ಗರಗಪ್ಪಳ್ಳಿ, ತಾಃಚಿಂಚೋಳಿ, ಜಿಃ ಕಲಬುರಗಿ	15.2	21.21	118.23	99.77	53.9	33.19	47.48	64.59	45.64	75.06	30.7	40.16	16.33	23.72	14.11
7	ಮೆಃ ಕಲಬುರಗಿ ಸಿಮೆಂಟ್ಸ್ ಪ್ರೈ೦ಟೆ.ಲಿ (ವಿಕಾಟ್ ಸಾಗರ್ ಸಿಮೆಂಟ್ ಪ್ರೈ೦ಟೆ.ಲಿ.), ಪೋಃ ಛತ್ರಸಾಲಾ, ತಾಃಚಿಂಚೋಳಿ, ಜಿಃಕಲಬುರಗಿ					133.32	151.01	156.53	152.76	149.78	137.01	162.11	161.51	293.75	272.79	

ಸದರಿ ಮಾಹಿತಿಯನ್ನು ಸಂಬಂಧಪಟ್ಟ ಘಟಕದವರಿಂದ ಪಡೆದು ಸಲ್ಲಿಸಲಾಗುತ್ತಿದೆ

ಸಹಿ/-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲಬುರಗಿ ಜಿಲ್ಲೆಯಲ್ಲಿರುವ ಬೃಹತ್ ಸಿಮೆಂಟ್ ಕಾರ್ಖಾನೆಗಳ ಮಾಲಿನ್ಯದಿಂದ ಸುತ್ತ-ಮುತ್ತಲಿನ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತಾದ ವಿಷಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವ್ಯಾಪ್ತಿಯಡಿ ಬರುತ್ತಿದ್ದು, ಅದರಂತೆ ಕೆಎಸ್‌ಪಿಸಿಬಿಯಿಂದ ಮಾಹಿತಿ ಪಡೆದಿದ್ದು, ಅವರು ನೀಡಿರುವ ವಿವರಗಳನ್ನು ಈಗಾಗಲೇ ಒದಗಿಸಿದ್ದೇನೆ. ಅದರ ಬಗ್ಗೆ ಓದಿ ತಿಳಿಸಿ ಎಂದರೆ, ವಿವರವಾಗಿ ಓದಿ ಹೇಳುತ್ತೇನೆ. ಈಗಾಗಲೇ ಹೆಚ್ಚಿನ ಮಾಹಿತಿಯನ್ನು ನೀಡಿದ್ದು, ಅದರ ಜೊತೆಗೆ ಕರ್ನಾಟಕ ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿಯ ಮೆಂಬರ್ ಸೆಕ್ರೆಟರಿರವರು ಸಹ ಮಾಹಿತಿಯನ್ನು ಕೊಟ್ಟಿದ್ದಾರೆ. ಈಗಾಗಲೇ ಅನೇಕ ದೂರುಗಳು ಬಂದಿದ್ದು, personal hearing ಗೆ ದಿನಾಂಕ: 21.04.2025 ರಂದು ಅವರಿಗೆ ನೋಟಿಸ್ ನೀಡಿ, ಮಾಹಿತಿಯನ್ನು ಪಡೆದುಕೊಂಡಿದ್ದು, ಅವರು, "There are no specific studies" ಎಂದು ಹೇಳಿದ್ದಾರೆ. ಯಾವುದೇ ಒಂದು ನಿಖರವಾದ ಅಧ್ಯಯನ ಇಲ್ಲ. Cement industry ಗಳಿಂದ ಬೆಳೆಗಳಿಗೆ ಹಾನಿ ಆಗುವುದಿಲ್ಲ ಎಂದು ಹೇಳಿದ್ದಾರೆ. ಜೊತೆಗೆ ಇನ್ನಿತರ ವಿಚಾರಗಳ ಬಗ್ಗೆ ಹೇಳಿದ್ದು, ಅದರ ಸಂಪೂರ್ಣ ಮಾಹಿತಿಯನ್ನು ಈಗಾಗಲೇ ಕೊಟ್ಟಿದ್ದೇನೆ. ಜೊತೆಗೆ ಮಾನ್ಯ ಸದಸ್ಯರು ಸಿ.ಎಸ್.ಆರ್. ಫಂಡ್ ಬಗ್ಗೆ ಕೇಳಿದ್ದಾರೆ.

ಡಾ॥ ತಳವಾರ್ ಸಾಬಣ್ಣ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದು, ಇದೊಂದು ತೀರಾ ಗಂಭೀರವಾದ ವಿಚಾರವಾಗಿದೆ.

ವೈಸ್ ಛೇರ್ಮನ್:- ಮಾನ್ಯ ಸದಸ್ಯರೇ, ಗಮನ ಸೆಳೆಯುವ ವಿಚಾರದ ಬಗ್ಗೆ ಇನ್ನೂ ನಾಲ್ಕೈದು ಸದಸ್ಯರು ಇದ್ದಾರೆ. ದಯವಿಟ್ಟು ಸಮಯವನ್ನು ನೋಡಿ ಮಾತನಾಡಿ. You have every right to talk. 5 ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಡಾ॥ ತಳವಾರ್ ಸಾಬಣ್ಣ:- ಮಾನ್ಯ ಸಭಾಪತಿಯವರೇ, ಕಲಬುರಗಿ ಜಿಲ್ಲೆಯಲ್ಲಿರುವಂಥ ಒಂದು ಬಹುಮುಖ್ಯವಾದ ಸಮಸ್ಯೆ ಕುರಿತು ನಿಯಮ 72 ರಡಿ ಅವಕಾಶ ಕಲ್ಪಿಸಿದ್ದಕ್ಕಾಗಿ ಮೊದಲು ಧನ್ಯವಾದಗಳನ್ನರ್ಪಿಸುತ್ತೇನೆ. ಇದೊಂದು ತೀರಾ ಗಂಭೀರವಾದ ವಿಚಾರವಾಗಿದೆ. ನಾನು ಮೂಲತಃ ಕಲಬುರಗಿ ಜಿಲ್ಲೆಯವನಾಗಿದ್ದು, ಸ್ವತಃ ನನ್ನ ತಂದೆಯವರೇ ಆ ಕಲಬುರಗಿ ಜಿಲ್ಲೆ ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದರು. ಆ ಜಿಲ್ಲೆಯಲ್ಲಿ ಆಗುತ್ತಿರುವಂಥ ಸಮಸ್ಯೆ ಕುರಿತು ಮಾನ್ಯ ಸಚಿವರ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ ಮತ್ತು ಮಾನ್ಯ ಇಂಧನ ಸಚಿವರು ಕಲಬುರಗಿ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದರಿಂದ ಅವರ ಭಾಗದಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ನನಗೆ ಇನ್ನೂ ಹೆಚ್ಚಿನ ಖುಷಿಯಾಗಿದೆ. ಹಾಗಾಗಿ, ಆ ವಿಚಾರವನ್ನು ಅವರ ಗಮನಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದು, ನಂತರ ಉತ್ತರ ಏನು ಕೊಡುತ್ತಾರೆ ಎಂಬುದನ್ನು ನೋಡಿ, ಮತ್ತೆ ವಿಚಾರ ಮಾಡುತ್ತೇನೆ. ಮಾನ್ಯ ಸಚಿವರಿಗೂ ತಿಳಿದಿರುವಂತೆ ಕಲಬುರಗಿ ಜಿಲ್ಲೆಯಲ್ಲಿ ಹೇರಳವಾಗಿ ಸುಣ್ಣದ ಕಲ್ಲು ಬಹಳ ಸಿಗುತ್ತವೆ. ಅದರಲ್ಲಿಯೂ ವಿಶೇಷವಾಗಿ ಶಹಾಬಾದ್, ಚಿತ್ತಾಪೂರ್, ಸೇಡಂ, ಚಿಂಚೋಳಿ ತಾಲ್ಲೂಕಿನಲ್ಲಿ ಅತೀ ಹೆಚ್ಚಾಗಿ ಸುಣ್ಣದ ಕಲ್ಲು ಸಿಗುತ್ತದೆ. ಈ ಸುಣ್ಣದ ಕಲ್ಲಿನಿಂದ ಸಿಮೆಂಟ್ ಉತ್ಪಾದನೆ ಮಾಡುತ್ತೇವೆ. ಹಾಗಾಗಿ, ಸಿಮೆಂಟ್ ಉತ್ಪಾದನೆ ಮಾಡಲು ಬಹುಮುಖ್ಯವಾಗಿರುವಂಥ ನೈಸರ್ಗಿಕ ಸಂಪನ್ಮೂಲ ಕಲಬುರಗಿ ಜಿಲ್ಲೆಯಲ್ಲಿ ಲಭ್ಯವಿರುವುದರಿಂದ ಅಲ್ಲಿ ಸುಮಾರು 8 ರಿಂದ 10 ಬೃಹತ್ ಪ್ರಮಾಣದ ಸಿಮೆಂಟ್ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಎ.ಸಿ.ಸಿ. ಸಿಮೆಂಟ್ ಕಾರ್ಖಾನೆಯು 1935 ರಲ್ಲಿಯೇ ಅಂದರೆ, ಸ್ವತಂತ್ರ್ಯ ಪೂರ್ವದಲ್ಲಿಯೇ ನಮ್ಮ ಊರಿನ ಪಕ್ಕದಲ್ಲಿಯೇ ಪ್ರಾರಂಭವಾಗಿತ್ತು. ಅದರ ನಂತರ ಹಲವಾರು ಸಿಮೆಂಟ್ ಕಾರ್ಖಾನೆಗಳು ಪ್ರಾರಂಭವಾಗಿರುವುದನ್ನು ಕಾಣುತ್ತೇವೆ. ಮೊದಲನೆಯದಾಗಿ, ಈ ಸಿಮೆಂಟ್ ಕಾರ್ಖಾನೆಗಳು ಅಲ್ಲಿರುವಂಥ ನೈಸರ್ಗಿಕ ಸಂಪನ್ಮೂಲ ಮತ್ತು ಸುಣ್ಣದ ಕಲ್ಲನ್ನು ಬಳಸಿಕೊಳ್ಳುತ್ತವೆ. ಎರಡನೆಯದಾಗಿ, ದೊಡ್ಡ ದೊಡ್ಡ ಪ್ರಮಾಣದಲ್ಲಿ ಅಲ್ಲಿರುವಂಥ ಸುಮಾರು ಒಂದು ಸಾವಿರ, ಎರಡು ಸಾವಿರ, ಮೂರು ಸಾವಿರ ಎಕರೆವರೆಗೂ ರೈತರ ಜಮೀನನ್ನು ಖರೀದಿ ಮಾಡಿ, ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತಾರೆ. ಅಲ್ಲಿ ಕಾಗಿಣಾ ನದಿ ಹರಿಯುತ್ತದೆ. ಹಾಗೆಯೇ ಮಾನ್ಯ ಸಚಿವರ ಊರಾದ ಸೇಡಂ ಪಕ್ಕದಲ್ಲಿಯೇ ಒಂದು ನದಿ ಇದ್ದು, ಆ ನದಿಯೂ ಸಹ ಅಲ್ಲಿ ಹರಿಯುತ್ತದೆ. ಅಲ್ಲಿರತಕ್ಕಂಥ ಜಲಮೂಲವನ್ನು ಬಳಸಿಕೊಂಡು, ಆ ಕಾರ್ಖಾನೆಗಳು ಸಿಮೆಂಟ್ ಉತ್ಪಾದನೆ ಮಾಡುತ್ತಿವೆ. ದುರಾದೃಷ್ಟವಶಾತ್, ಈ ಸಿಮೆಂಟ್ ಉತ್ಪಾದನೆ ಮಾಡುವಂಥ ಸಿಮೆಂಟ್ ಕಾರ್ಖಾನೆಗಳು ಅಲ್ಲಿರುವಂಥ ಸಂಪನ್ಮೂಲವನ್ನು ಬಳಸಿಕೊಂಡು, ಪ್ರತಿಫಲವಾಗಿ ಅಲ್ಲಿಯ ಜಿಲ್ಲೆಯವರಿಗೆ ಅನುಕೂಲವಾಗುವ ರೀತಿ ಆಗಬೇಕಲ್ಲವೇ ಎಂಬುದು ನಮ್ಮ ಸಮಸ್ಯೆಯಾಗಿದೆ. ಅಲ್ಲಿಯ ಜನರಿಗೆ ಅನುಕೂಲವಾಗುವ ಬದಲಾಗಿ ಇವತ್ತು ದುಷ್ಪರಿಣಾಮ ಬೀಳುತ್ತಿದೆ. ಯಾವ ರೀತಿಯಾದ ದುಷ್ಪರಿಣಾಮ ಬೀರುತ್ತಿವೆ ಎನ್ನುವುದನ್ನು ನೋಡುವುದಾದರೆ, ಜಲಮಾಲಿನ್ಯ, ವಾಯುಮಾಲಿನ್ಯ, ಭೂಮಿ ಮಾಲಿನ್ಯ ಇವೆಲ್ಲವೂ ಮಾಲಿನ್ಯವಾಗುತ್ತಿವೆ. ಮತ್ತೆ ಅಲ್ಲ ಮಾಲಿನ್ಯವಾಗುವುದಲ್ಲದೇ ಅಲ್ಲಿರುವಂಥ ಜನಜೀವನದ ಮೇಲೆ ಅತ್ಯಂತ ಹೆಚ್ಚಿನ ದುಷ್ಪರಿಣಾಮ ಬೀರುತ್ತಿವೆ. ಉದಾಹರಣೆಗೆ ಹೇಳುವುದಾದರೆ, ಸಿಮೆಂಟ್ ಕಾರ್ಖಾನೆಯವರು ಸಿಮೆಂಟ್ ಉತ್ಪಾದನೆ ಮಾಡುವಾಗ ಸಿಮೆಂಟ್ ಕಾರ್ಖಾನೆಯಿಂದ ಬರುವಂಥ ಧೂಳು ಏನಿದೆ, ಅದನ್ನು ಹಗಲು ವೇಳೆ ಮಷಿನ್‌ನಿಂದ control ಮಾಡಿ, ರಾತ್ರಿ ವೇಳೆ ಸಿಮೆಂಟ್ ಕಾರ್ಖಾನೆಯಿಂದ ಬರುವಂಥ ಧೂಳನ್ನು ಹೊರಗೆ ಬಿಡುತ್ತಾರೆ. ಇದು ವಾಸ್ತವಿಕ ಸಂಗತಿಯಾಗಿದೆ. ಆ ಧೂಳನ್ನು ಹೊರಗೆ ಬಿಟ್ಟಾಗ ಅಲ್ಲಿರುವಂಥ ಸುತ್ತಮುತ್ತ ರೈತರು ಬೆಳೆದಂಥ ಬೆಳೆಗಳ ಮೇಲೆ ಹರಡುತ್ತವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(623) 11.08.2025/5.00/ಎಸ್‌ಕೆ-ಆರ್‌ಎನ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

ಡಾ॥ ತಳವಾರ್ ಸಾಬಣ್ಣ (ಮುಂದು)

ಅದು ಹರಡುವುದರಿಂದ, ಅಲ್ಲಿ ಹಲವಾರು ರೋಗಗಳಿಗೆ ಕಾರಣವಾಗುತ್ತಿದೆ. ಇವತ್ತು ತೋಗರಿ ಬೆಳೆ ಮತ್ತು ಜೋಳ ಬೆಳೆ ಇಳುವರಿ ಕಡಿಮೆಯಾಗಿದೆ. ಕಲಬುರಗಿಯ ಜನರು ಬೆಳೆಯುವಂತಹ ಬಹು ಮುಖ್ಯ ಬೆಳೆಗಳ ಇಳುವರಿ ಇವತ್ತು ಕಡಿಮೆಯಾಗಿರುವುದು ಒಂದನೇ ಸಮಸ್ಯೆ ಆಗಿದೆ. ಇನ್ನೂ ಎರಡನೇ ಸಮಸ್ಯೆ ಏನೆಂದರೆ, ಕಾಗಿನಿ ನದಿ ಮತ್ತು ಇನ್ನಿತರ ನದಿಗಳಿಂದ ನೀರನ್ನು ಕಾರ್ಖಾನೆಗಳು ಬಳಸಿಕೊಂಡು, ರಾಸಾಯನಿಕಪೂರಿತವಾದಂತಹ ಕೊಳಚೆ ನೀರನ್ನು ಅದೇ ನದಿಗಳಿಗೆ ಬಿಡುತ್ತಾರೆ. ಆ ನದಿಗಳಲ್ಲಿರುವ ಜೀವ ವೈವಿಧ್ಯ biodiversity ಅವೆಲ್ಲವೂ ಸಾಯುತ್ತಿದ್ದಾವೆ. ಆ ನೀರು ಕಲುಷಿತಗೊಳ್ಳುತ್ತಿದೆ. ನೂರಾರು ಹಳ್ಳಿಗಳಿರುವ ರೈತರು ಮತ್ತು ನಾನು ಕೂಡ ಅದೇ ಕಾಗಿನಿ ನದಿಯ ನೀರನ್ನು ಕುಡಿಯುತ್ತೇವೆ. ಆ ನೀರು ಕುಡಿಯುವ ಜನರಿಗೆ ಇವತ್ತು ಸಾಕಷ್ಟು ಸಮಸ್ಯೆಗಳಾಗುತ್ತಿದೆ. ಆ ಸಿಮೆಂಟ್‌ನ ಧೂಳಿನಿಂದಾಗಿ ನೀರು ವಿಷಪೂರಿತವಾಗುತ್ತಿದೆ. ಇದರಿಂದಾಗಿ ಅಲ್ಲಿರುವ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುವ ಮೂಲಕ ಟಿ.ಬಿ., ಕ್ಯಾನ್ಸರ್, ಅಸ್ತಮಾ, ಉಸಿರಾಟದ ತೊಂದರೆ, ಚರ್ಮದ ಕಾಯಿಲೆ ಕೂಡ ಬರುತ್ತಿದೆ. ಈ ಮಾರಕ ಕಾಯಿಲೆಗಳಿಂದ ಬಳಲುತ್ತಿರುವ ಜನರು ಸಾವಿಗೆ ತುತ್ತಾಗುತ್ತಿದ್ದಾರೆ. ಜಾನವಾರುಗಳ ಸಹಿತ ನೀರು ಕುಡಿಯುತ್ತವೆ. ಅವುಗಳಗೂ ಗೊತ್ತಾಗುವುದಿಲ್ಲ. ನಾವು ಆ ನೀರನ್ನು ಶುದ್ದೀಕರಿಸುತ್ತೇವೆ. ಆ ನೀರನ್ನು ಕುಡಿದ ಜಾನಾವಾರುಗಳ ಮೇಲೆ ಕೂಡ ಇದರ ಪರಿಣಾಮ ಬೀರುತ್ತಿರುವುದು ಮೂರನೇ ಸಮಸ್ಯೆಯಾಗಿದೆ. ಇನ್ನೂ ನಾಲ್ಕನೇ ಸಮಸ್ಯೆ ಏನೆಂದರೆ, ಕೈಗಾರಿಕೆಗಳಿಗೆ ಪೂರೈಕೆ ಮಾಡುವಂತಹ Lime Stone ಗಣಿಗಳೇನಿದ್ದಾವೆ. ಅವರು ಏನು ಮಾಡುತ್ತಾರೆಂದರೆ, ರಾತ್ರಿ ವೇಳೆಯಲ್ಲಿ ಕಲ್ಲು ತೆಗೆಯುವುದಕ್ಕಾಗಿ ಬ್ಲ್ಯಾಸ್ಟ್ ಮಾಡುತ್ತಾರೆ. ಬ್ಲ್ಯಾಸ್ಟ್ ಮಾಡಿದ ಮೇಲೆ ಸುತ್ತಮುತ್ತಲಿರುವ ಹಳ್ಳಿಗಳಲ್ಲಿರುವ ಕಟ್ಟಡಗಳು ಬಿರುಕುಗೊಂಡಿದೆ. ಅವು ಯಾರ ಮನೆಗಳು? ಬಡವರು ಕಟ್ಟಿದ ಮನೆಗಳು. ತಮಗೆ ಗೊತ್ತಿರುವ ಹಾಗೇ ಪಕ್ಕದ ವಿಜಯಪುರದ ಜಿಲ್ಲೆಯವರು. ಅದೃಷ್ಟವಷಾತ್ Mumbai Presidency ಗೆ ಇದ್ದವರು. ಹೈದರಾಬಾದರಿನ ನಿಜಾಮರ ಕಾಲಕ್ಕೆ ಒಳಪಟ್ಟವರು. ಇಡೀ ನಮ್ಮ ಜೀವನವೇ ಅಲ್ಲಿ ಹದಗೆಟ್ಟು ಹೋಗಿದೆ.

ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):- ಅದಕ್ಕಾಗಿಯೇ 371 (ಜೆ) ಅವಕಾಶ ಕಲ್ಪಿಸಿದೆ.

ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):- ಏನು ಸರ್?

ವೈಸ್ ಛೇರ್ಮನ್:- ಮಾನ್ಯ ತಳವಾರ್ ಸಾಬಣ್ಣನವರೇ, ಒಂದು ನಿಮಿಷ ಕೇಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಅಲ್ಲಿರುವವರ ಜನರ ಜೀವನ ಹದಗೆಟ್ಟು ಹೋಗಿದೆ. ಏಕೆಂದರೆ, ರೈತರು..

ವೈಸ್ ಛೇರ್ಮನ್:– ಸಮಸ್ಯೆಗಳು ಬಗ್ಗೆ ಹೇಳಿ.

ಡಾ॥ ತಳವಾರ್ ಸಾಬಣ್ಣ:– ಸಮಸ್ಯೆಯ ಬಗ್ಗೆ ಹೇಳುತ್ತಿದ್ದೇನೆ.

ವೈಸ್ ಛೇರ್ಮನ್:– ತಮಗೆ ಕೊಟ್ಟಿರುವಂತಹ ಕಾಲವಕಾಶದಲ್ಲಿ ಮಾತನಾಡಿ. ತಾವು ಒಂದು ನಿಮಿಷ ಕೇಳಿ. ಗಮನ ಸೆಳೆಯುವ ಸೂಚನೆಯಲ್ಲಿ ಗಮನ ಸೆಳೆದ ಮೇಲೆ ಮಾನ್ಯ ಮಂತ್ರಿಯವರಿಂದ ಉತ್ತರ ಪಡೆದ ಮೇಲೆ ತಾವು ಒಂದರಿಂದ ಮೂರು ಸಮಸ್ಯೆಗಳನ್ನು ಹೇಳಿದ್ದೀರಿ. ಇಂತಹ ಸಮಸ್ಯೆ ಇದೆ ಎಂದು ಅದನ್ನು ಸಂಕ್ಷಿಪ್ತವಾಗಿ ಹೇಳಿ. ಮಾನ್ಯ ಸಚಿವರು ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ಸರ್ಕಾರ ಕೂಡ ಇದೆ. ಇದಕ್ಕೆ ಪೂರಕವಾಗಿ ಏನು ಮಾಡಬೇಕೆಂಬ ಬಗ್ಗೆ ವಿಚಾರವನ್ನು ತಿಳಿಸಿದರೆ ಸಾಕು.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಸಮಸ್ಯೆಯ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ವೈಸ್ ಛೇರ್ಮನ್:– ತಾವು ಹೇಳಿ.

ಡಾ॥ ತಳವಾರ್ ಸಾಬಣ್ಣ:– ಅವರು ಉತ್ತರ ಹೇಳಿದ ಮೇಲೆ ಒಂದೆರಡು ಸಮಸ್ಯೆಗಳನ್ನು ಹೇಳುತ್ತೇನೆ.

ವೈಸ್‌ಛೇರ್ಮನ್:– ಒಂದು ಕಾರ್ಖಾನೆಯನ್ನು ನಡೆಸುವುದರಿಂದ ಏನೇನು ತೊಂದರೆಗಳಿವೆ? ಅದರಲ್ಲಿ ಏನೇನು ಅನುಕೂಲ ಮತ್ತು ಅನಾನುಕೂಲವಿದೆ ಎಂಬ ಬಗ್ಗೆ ತಿಳಿದುಕೊಳ್ಳುವಷ್ಟು ಸಾಮಾನ್ಯ ಜ್ಞಾನ ಎಲ್ಲರಿಗೂ ಇದೆ. ಮಾನ್ಯ ಸಚಿವರು ಉತ್ತರವನ್ನು ಹೇಳಿ ಮುಗಿಸಲಿ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ನಾನು ಒಂದೇ ನಿಮಿಷದಲ್ಲಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ವೈಸ್ ಛೇರ್ಮನ್:– ತಾವು ಒಂದು ನಿಮಿಷದಲ್ಲಿ ಮುಗಿಸಿ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಅಲ್ಲಿ ಬ್ಲ್ಯಾಸ್ಟ್ ಮಾಡುವುದರಿಂದ..

ವೈಸ್ ಛೇರ್ಮನ್:– ಮಾನ್ಯ ಸದಸ್ಯರೇ, ಅದು ಬಿಡಿ. ಬ್ಲ್ಯಾಸ್ಟ್ ಯಾವ ರೀತಿ ಮಾಡಬೇಕೆಂಬ ಬಗ್ಗೆ ತಾವು ಹೇಳಿ. ಕಾನೂನಿನ ಪ್ರಕಾರ ಇಂತಹ ರೀತಿ ಬ್ಲ್ಯಾಸ್ಟ್ ಮಾಡಬೇಕೆಂಬ ಬಗ್ಗೆ ಪರವಾನಿಗೆ ಕೊಡುವಾಗಲೇ ಕೊಟ್ಟಿರುತ್ತಾರೆ. ಆ ಪ್ರಕಾರವಾಗಿ ನಡೆದಿಲ್ಲ ಎಂಬ ಬಗ್ಗೆ ಹೇಳಿ. ಅದಕ್ಕೆ ಇನ್ನೊಮ್ಮೆ ಏನು ಮಾಡಬೇಕೆಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಅಲ್ಲಿರುವ ಜನರು ಪ್ರತಿದಿನ ಹೋರಾಟ ಮಾಡುತ್ತಿದ್ದಾರೆ. ಸಮಸ್ಯೆಗಳಿಗೆ ಪರಿಹಾರ ಸಿಗದೇ ಇರುವ ಕಾರಣಕ್ಕಾಗಿ, ಈ ವಿಷಯವನ್ನು ಇಲ್ಲಿ ನಾನು ತರಬೇಕಾಗಿದೆ. ಆಲ್ಲಿ ಸಮಸ್ಯೆ ಇಲ್ಲದೇ ಹೋಗಿದ್ದರೆ, ಇಲ್ಲಿ ವಿಷಯನೇ ತರುತ್ತಿರಲಿಲ್ಲ. ಅಲ್ಲಿ ಅನೇಕ ಸಮಸ್ಯೆಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಭವವಾಗಿರುವುದರಿಂದ, ಅಲ್ಲಿರುವ ಜನ ಜಾನುವಾರುಗಳು, ಕೃಷಿ ಭೂಮಿ ಬೆಳೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದು ತಮಗೆಲ್ಲರಿಗೂ ಗೊತ್ತಿರುವ ಹಾಗೆ ನೈಸರ್ಗಿಕ ಪರಿಸರವನ್ನು ಮಾಲಿನ್ಯ ಮಾಡಬಾರದು ಎಂಬ ಬಗ್ಗೆ ಒಂದು ಕಾನೂನು ಇದೆ. ಕಾನೂನು ವಿರೋಧ ಮಾಡುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬುದು ಇದೆ. ಇವತ್ತಿನವರೆವಿಗೂ ಯಾವ ಕೈಗಾರಿಕೆಗಳ ಮೇಲೆ ಕ್ರಮ ಕೈಗೊಂಡಿದ್ದಾರೆ? ಅಲ್ಲಿ ಸುಮಾರು ಎಂಟರಿಂದ ಹತ್ತು ಕೈಗಾರಿಕೆಗಳಿವೆ. ಅವರು ಸರ್ಕಾರವನ್ನೇ dictate ಮಾಡುವಂತಹ ಪರಿಸ್ಥಿತಿಯಲ್ಲಿದ್ದಾರೆ. ಅಲ್ಲಿರುವ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಮೇಲೆ dictate ಮಾಡುವಂತಹ ಪರಿಸ್ಥಿತಿಯಲ್ಲಿದ್ದಾರೆ. ಹೀಗಾಗಿ ಜನರ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಈ ನಿಟ್ಟಿನಲ್ಲಿ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ಇವೆಲ್ಲಾ ಸಮಸ್ಯೆಗಳು ಅಲ್ಲಿನ ವಾಸ್ತವದ ಸಮಸ್ಯೆಯಾಗಿದೆ. ತಮ್ಮ ಮೂಲಕ ಮಾನ್ಯ ಸಚಿವರು ಇದಕ್ಕೆ ಪರಿಹಾರವೇನು ಎಂಬ ಹೇಳುತ್ತಾರೆ? ಕೊನೆಯದಾಗಿ ನಾನು ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಬಗ್ಗೆ ನಾನು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಬಹಳಷ್ಟು ಸಮಸ್ಯೆಗಳನ್ನು ಹೇಳಿದ್ದಾರೆ. ಇದು ವಾಯು ಮಾಲಿನ್ಯ ನಿಯಂತ್ರಣ ಮಂಡಳಿಗೆ ವ್ಯಾಪ್ತಿಗೆ ಬರುತ್ತದೆ. ಈ ಪ್ರಶ್ನೆ ವರ್ಗಾವಣೆಯಾಗಿ ಮಾನ್ಯ ಈಶ್ವರ್ ಖಂಡ್ರೆ ಸಾಹೇಬರಿಗೆ ಬರಬೇಕಾಗಿತ್ತು. ಇಲ್ಲಿ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯವರದೇ ಆದಂತಹ ಮಾನದಂಡಗಳಿವೆ. ಪ್ರತಿ ವರ್ಷ ನಿರೀಕ್ಷಣಾ ಪತ್ರಗಳನ್ನು ಕೊಡುತ್ತಾರೆ. Public hearing ಮಾಡುತ್ತಾರೆ. ಎಲ್ಲವನ್ನೂ ಕೂಡ ಮಾಡುತ್ತಾರೆ. ಇದಾದ ಮೇಲೂ ಕೂಡ ಮಾನ್ಯ ಸದಸ್ಯರ ಹೇಳಿರುವ ಸಿಮೆಂಟ್ ಕಾರ್ಖಾನೆಗಳು ಏನಿದ್ದಾವೆ, ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಮತ್ತು ಮಾನ್ಯ ಸಚಿವರಿಗೆ ಇವತ್ತಿನ ದಿವಸ ಇದನ್ನೆಲ್ಲಾ ಹೇಳಿ, ವಿಶೇಷವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿರಾಪೇಕ್ಷಣಾ ಪತ್ರ ಪಡೆಯುವುದಕ್ಕೆ ತಮ್ಮದೇ ಆದಂತಹ ಕೆಲವೊಂದು ನಿಯಮಗಳಿವೆ, ಆದಾದ ಮೇಲೆ comply ಮಾಡಬೇಕಾಗುತ್ತದೆ. ಅದಕ್ಕೆ ನೀರಾಪೇಕ್ಷಣಾ ಪತ್ರ ಕೊಡಬೇಕಾಗುತ್ತದೆ. ಅದೆಲ್ಲವೂ ಉತ್ತರದಲ್ಲಿ ಹೇಳಿದ್ದೇನೆ. ಎಂಟು ಕಾರ್ಖಾನೆಗಳಿದ್ದಾವೆ. ಅವು ಏನೇನು ಮಾಡುತ್ತೇವೆ ಎಂಬ ಬಗ್ಗೆಯೂ ಹೇಳಿದ್ದೇನೆ. ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಮತ್ತು ಮಾನ್ಯ ಸಚಿವರಿಗೆ ಈ ವಿಚಾರವನ್ನು ಹೇಳಿ, ಇವತ್ತಿನ ದಿವಸ ಅಲ್ಲಿ ಯಾವ ತರ ಮಾಲಿನ್ಯವಾಗುತ್ತದೆ? ಅದನ್ನು ತಡೆಗಟ್ಟುವುದಕ್ಕೆ ಇವತ್ತಿನ ದಿವಸ ಕ್ರಮ ಕೈಗೊಳ್ಳಬೇಕು. ಯಾರ ಮಾಲಿನ್ಯ ಮಾಡುತ್ತಾರೋ, ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ನಾನು ಅವರಿಗೆ ತಿಳಿಸುತ್ತೇನೆ.

ವೈಸ್ ಛೇರ್ಮನ್:- ಮಾನ್ಯ ಸಚಿವರೇ, ಈ ಸಮಸ್ಯೆಗಳ ಜೊತೆಗೆ ಬೆಳೆಗಳ ನಾಶವಾಗುತ್ತದೆ. ಜನ-ಜಾನುವಾರುಗಳ ಸಮಸ್ಯೆಯ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಸಭಾಪತಿಯವರೇ, ಅದಕ್ಕೆ ಪರಿಹಾರ ಕೊಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್:– ಅದರ ಬಗ್ಗೆ ತಾವು ಒಂದು ಸಭೆ ಮಾಡಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸಭಾಪತಿಯವರೇ, ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಅದು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಗೆ ಬರುವಂತಹದ್ದು. ಅದರಲ್ಲಿ ಸದಸ್ಯ ಕಾರ್ಯದರ್ಶಿ ಇರುತ್ತಾರೆ. ಇದಕ್ಕೆ ಮಾನ್ಯ ಸಚಿವರು ಕೂಡ ಇದ್ದಾರೆ. ಮಾನ್ಯ ಸದಸ್ಯರು ಹೇಳಿರವಂತಹ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದು, ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಹೇಳುತ್ತೇನೆ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

ವೈಸ್ ಛೇರ್ಮನ್:– ಆಯಿತು ಕುಳತುಕೊಳ್ಳಿ. ಮಾನ್ಯ ಮಂಜುನಾಥ್ ಭಂಡಾರಿಯವರೇ ಮಾತನಾಡಿ. ಮಾನ್ಯ ಐವನ್ ಡಿ'ಸೋಜಾರವರೇ ಮಾತನಾಡಿ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

ವೈಸ್ ಛೇರ್ಮನ್:– ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾನ್ಯ ಸಚಿವರ ಗಮನಸೆಳೆಯಿರಿ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

ವೈಸ್ ಛೇರ್ಮನ್:– ಮಾನ್ಯ ಸದಸ್ಯರೇ, ತಾವು ದಯವಿಟ್ಟು ಕುಳತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅವರು ಹೇಳಿರುವುದೇನೆಂದರೆ, ಅವರ ಇಲಾಖೆಗೆ ಸಂಬಂಧಪಡದೇ ಹೋದರೂ, ತಾವು ಕೇಳಿರುವ ಪ್ರಶ್ನೆಗಳಿಗೆ ಆ ಇಲಾಖೆಯ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಅಧಿಕಾರಿಗಳಿಗೂ ಹೇಳುತ್ತೇನೆ ಎಂದು ಹೇಳಿದ್ದಾರೆ. ತಮಗೆ ಮತ್ತೆ ಏನು ಬೇಕು?

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಅಲ್ಲಿ ಆಗುವಂತಹ ದುಷ್ಪರಿಣಾಮಗಳ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ. ನಾನು ಕೇಳುವುದೇನೆಂದರೆ, ಅಲ್ಲಿ ಸಿ.ಎಸ್.ಆರ್. ಫಂಡ್ ಇರುತ್ತದೆ. ಅದು ಸರಿಯಾಗಿ ಬಳಕೆಯಾಗಬೇಕು. ಅದಕ್ಕೆ ವಿಜ್ಞಾನಿಗಳನ್ನೊಳಗೊಂಡ ಒಂದು ಅಧ್ಯಯನ ತಂಡ ಮಾಡಿ. ಕಲಬುರಗಿಯಲ್ಲಿ Central University ಇದೆ. ಅಲ್ಲಿರುವ ವಿಜ್ಞಾನಗಳಗೊಂಡ ಒಂದು ಅಧ್ಯಯನ ತಂಡ ಮಾಡಿ. ಅಲ್ಲಿನ ದುಷ್ಪರಿಣಾಮಗಳ ಬಗ್ಗೆ ಅದಕ್ಕೆ ಒಂದು ಅಧ್ಯಯನ ಕೈಗೊಂಡಿರುವ ಒಂದು ವರದಿಯನ್ನು ತೆಗೆದುಕೊಂಡ ಮೇಲೆ ಅದಕ್ಕೆ ತಾವು ಪರಿಹಾರ ಕೊಡಿ.

ವೈಸ್ ಛೇರ್ಮನ್:– ಮಾನ್ಯ ಸದಸ್ಯರೇ, ಆಯಿತು ಕುಳತುಕೊಳ್ಳಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ಒಂದು ಕರ್ನಾಟಕ ರಾಜ್ಯ ವಾಯ ಮಾಲಿನ್ಯ ನಿಯಂತ್ರಣ ಮಂಡಳಿ ಇದೆ. ಅವರು ಈ ಎಲ್ಲಾ ಕೆಲಸವನ್ನು ಮಾಡುತ್ತಾರೆ. ಇಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಮಾನ್ಯ ಸಚಿವರು ಕೂಡ ಇದ್ದಾರೆ. ನಾವು ಇದರ ಬಗ್ಗೆ ಸ್ಪಷ್ಟವಾಗಿ ಚರ್ಚೆ ಮಾಡುತ್ತೇವೆ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ದಯವಿಟ್ಟು, ಮಾನ್ಯ ಸಚಿವರಾದರೂ ಹೇಳಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್:– ಮಾನ್ಯ ಸದಸ್ಯರೇ, ಆಯಿತು ಕುಳಿತುಕೊಳ್ಳಿ. ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾನ್ಯ ಸಚಿವರ ಗಮನಸೆಳೆಯಿರಿ.

ಆ) ವಿಷಯ:– ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅರಣ್ಯ ವಿಭಾಗದಲ್ಲಿ ಆನೆಗಳ ಸಂಘರ್ಷವನ್ನು ತಡೆಯಲು "ಎಲಿಫೆಂಟ್ ಟಾಸ್ಕ್ ಫೋರ್ಸ್" ಅನ್ನು ರಚಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

– – –

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅರಣ್ಯ ವಿಭಾಗದಲ್ಲಿ ಆನೆಗಳ ಸಂಖ್ಯೆ ಹೆಚ್ಚುತ್ತಿದ್ದು, ಆನೆ ಸಂಘರ್ಷವನ್ನು ತಡೆಯಲು "ಎಲಿಫೆಂಟ್ ಟಾಕ್ಸ್ ಫೋರ್ಸ್" ನ್ನು ರಚಿಸಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಶ್ರೀ ಈಶ್ವರ್ ಬಿ. ಖಂಡ್ರೆ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

****

ರಾಜ್ಯದಲ್ಲಿ ಮಾನವ – ಆನೆ ಸಂಘರ್ಷ ಅತೀ ಹೆಚ್ಚಾಗಿರುವ ಜಿಲ್ಲೆಗಳಾದ ಹಾಸನ, ಚಿಕ್ಕಮಗಳೂರು, ಕೊಡಗು, ಹುಣಸೂರು, ಚಾಮರಾಜನಗರ, ರಾಮನಗರ, ಬನ್ನೇರುಘಟ್ಟ ಹಾಗೂ ಬಂಡೀಪುರಗಳಲ್ಲಿ ಸರ್ಕಾರದ ಆದೇಶದನ್ವಯ ಒಟ್ಟು 8 ಆನೆ ಕಾರ್ಯಪಡೆಗಳನ್ನು ರಚಿಸಲಾಗಿರುತ್ತದೆ.

ಮಾನವ-ಆನೆ ಸಂಘರ್ಷ ಕಂಡುಬರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7 ಆನೆ ಹಿಮ್ಮೆಟ್ಟಿಸುವ ತಂಡಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ತಂಡಗಳು ನಿರಂತರ ಗಸ್ತು ಕಾರ್ಯ ಕೈಗೊಂಡು ಆನೆ ಹಾವಳಿ ಕಂಡುಬಂದಾಗ ತಕ್ಷಣ ಸ್ಪಂದಿಸಿ ಸಂಘರ್ಷ ನಿಯಂತ್ರಿಸುವಲ್ಲಿ ಅಗತ್ಯ ಕ್ರಮ ವಹಿಸುತ್ತಿವೆ.

ಸ್ಥಳೀಯ ಗ್ರಾಮಸ್ಥರಿಗೆ ಮೂಲಭೂತ ಸೌಕರ್ಯಗಳಾದ ಬೀದಿ ದೀಪಗಳು, ಶೌಚಾಲಯ ವ್ಯವಸ್ಥೆ ಗಳನ್ನು ಸಂಬಂಧಿಸಿದ ಜಿಲ್ಲಾಡಳಿತ ವತಿಯಿಂದ ಒದಗಿಸಬೇಕಾಗಿರುತ್ತದೆ.

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆಗಳು ಅರಣ್ಯದಿಂದ ಗ್ರಾಮಗಳಿಗೆ ಪ್ರವೇಶಿಸುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

    1. ಆನೆ ನಿರೋಧಕ ಕಂದಕ ನಿರ್ಮಿಸಲಾಗಿದೆ, ಹಳ್ಳ,ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತು ಸೋಲಾರ್ ಟೆಂಟೆಕಲ್ ಬೇಲಿಯ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.

    2. ಇಲಾಖಾ ಸಿಬ್ಬಂದಿಗಳಿಂದ ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆಯು ಗ್ರಾಮಗಳಿಗೆ ದಾಳಿ ಮಾಡಿದಾಗ ಮರಳಿ ಅರಣ್ಯಕ್ಕೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

    3. ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿಬೇಲಿಯನ್ನು ನಿರ್ಮಿಸಲಾಗುತ್ತಿದೆ.

    4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆಹಾವಳಿ ಸಮಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.

    5. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿಗಳ ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮ ಕೈಗೊಳ್ಳಲಾಗಿದೆ.

    6. ಆನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕವನ್ನುಅಳವಡಿಸಲಾಗುತ್ತಿದೆ.

2. ರಾಜ್ಯದಲ್ಲಿ ಮಾನವ- ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ ಸಕ್ರೆಬೈಲು ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ ಪಶುವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಗಳೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದು ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.

3. ಮಾನವ- ಆನೆ ಸಂಘರ್ಷಹೆಚ್ಚಿರುವ 10 ಜಿಲ್ಲೆಗಳಲ್ಲಿ" **ಅನೆ ಎಲ್ಲಿ**" ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತುತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆ ಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4. ಸದರಿ ತಂತ್ರಜ್ಞಾನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ವಿಸ್ತರಿಸಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

5. ಮಂಗಳೂರು ಅರಣ್ಯ ವಿಭಾಗದಲ್ಲಿ ಮುಂಚೂಣಿ ಸಿಬ್ಬಂದಿಗಳ ವೃಂದಗಳಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

ವೃಂದ/ ಹುದ್ದೆಯ ಪ್ರವರ್ಗ	ಮಂಜೂರಾದ ಹುದ್ದೆಗಳು				ಭರ್ತಿಯಾದ ಹುದ್ದೆಗಳು				ಖಾಲಿ ಇರುವ ಹುದ್ದೆಗಳು			
	ಪ್ರವರ್ಗ 'ಎ'	ಪ್ರವರ್ಗ 'ಬಿ'	ಪ್ರವರ್ಗ 'ಸಿ'	ಒಟ್ಟು	ಪ್ರವರ್ಗ 'ಎ'	ಪ್ರವರ್ಗ 'ಬಿ'	ಪ್ರವರ್ಗ 'ಸಿ'	ಒಟ್ಟು	ಪ್ರವರ್ಗ 'ಎ'	ಪ್ರವರ್ಗ 'ಬಿ'	ಪ್ರವರ್ಗ 'ಸಿ'	ಒಟ್ಟು
ಉಪ ವಲಯ ಅರಣ್ಯ ಅಧಿಕಾರಿ-ಕಂ-ಮೋಜಣಿದಾರ	35	13	43	**91**	35	13	22	**70**	0	0	21	**21**
ಗಸ್ತು ಅರಣ್ಯ ಪಾಲಕ (ಅರಣ್ಯ ರಕ್ಷಕ)	29	22	125	**176**	29	17	38	**84**	0	5	87	**92**
ಅರಣ್ಯ ವೀಕ್ಷಕ	29	6	27	**62**	1	4	0	**5**	28	2	27	**57**

- ಈ ಮೇಲೆ ನಮೂದಿಸಿರುವ ಪ್ರವರ್ಗ 'ಬಿ' ಮತ್ತು ಪ್ರವರ್ಗ 'ಸಿ' ಹುದ್ದೆಗಳು ನೇರವಾಗಿ ಕ್ಷೇತ್ರ ಮಟ್ಟದಲ್ಲಿ ಅರಣ್ಯ ಮತ್ತು ವನ್ಯಜೀವಿ ಸಂಪತ್ತನ್ನು ರಕ್ಷಿಸುವ ಜವಾಬ್ದಾರಿ ಹೊಂದಿರುತ್ತವೆ. ಪ್ರವರ್ಗ 'ಎ' ಹುದ್ದೆಗಳು ಕಚೇರಿ ಕರ್ತವ್ಯ/ ಮಾಹಿತಿ ಸಂವಹನ ತಂತ್ರಜ್ಞಾನ/ ನಿಸ್ತಂತು ಹಾಗೂ ಶಸ್ತ್ರ, ನಿರ್ವಹಣೆ/ ಸರ್ಕಾರಿ ಮರಮಟ್ಟು ಸಂಗ್ರಹಾಲಯ, ಮುಂತಾದ ಇತರೆ ರೀತಿಯ ಕರ್ತವ್ಯಗಳನ್ನು ಹೊಂದಿರುವ ಹುದ್ದೆಗಳು ಆಗಿರುತ್ತವೆ.

- ಉಪ ವಲಯ ಅರಣ್ಯ ಅಧಿಕಾರಿ-ಕಂ-ಮೋಜಣಿದಾರ ಮತ್ತು ಗಸ್ತು ಅರಣ್ಯ ಪಾಲಕ (ಅರಣ್ಯ ರಕ್ಷಕ) ವೃಂದಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳ ಪೈಕಿ ಶೇ. 50 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಉಳಿದ ಶೇ. 50 ರಷ್ಟು ಹುದ್ದೆಗಳನ್ನು ಕೆಳಗಿನ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. ಅದೇ ರೀತಿ ಅರಣ್ಯ ವೀಕ್ಷಕ ವೃಂದದಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳ ಪೈಕಿ ಶೇ. 75 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಉಳಿದ ಶೇ. 25 ರಷ್ಟು ಹುದ್ದೆಗಳನ್ನು ಇತರೆ ಗ್ರೂಪ್ 'ಡಿ' ಸಿಬ್ಬಂದಿಗಳ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.

- ಉಪ ವಲಯ ಅರಣ್ಯ ಅಧಿಕಾರಿ-ಕಂ-ಮೋಜಣಿದಾರ ವೃಂದದಲ್ಲಿ ಖಾಲಿ ಇರುವ ಪ್ರವರ್ಗ 'ಸಿ' ಹುದ್ದೆಗಳ ಜವಾಬ್ದಾರಿಯನ್ನು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಉಪ ವಲಯ ಅರಣ್ಯ ಅಧಿಕಾರಿ-ಕಂ-ಮೋಜಣಿದಾರರಿಗೆ ವಹಿಸಲಾಗಿರುತ್ತದೆ.

- ಗಸ್ತು ಅರಣ್ಯ ಪಾಲಕ (ಅರಣ್ಯ ರಕ್ಷಕ) ವೃಂದದಲ್ಲಿ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ. ಅದರಲ್ಲಿ ಮಂಗಳೂರು ಅರಣ್ಯ ವಿಭಾಗಕ್ಕೆ ಸಂಬಂಧಿಸಿದ 21 ಗಸ್ತು ಅರಣ್ಯ ಪಾಲಕ (ಅರಣ್ಯ ರಕ್ಷಕ) ಹುದ್ದೆಗಳು ಸಹ ಸೇರಿರುತ್ತವೆ.

- ಅರಣ್ಯ ವೀಕ್ಷಕ ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪ್ರಕ್ರಿಯೆ ಶೀಘ್ರವೇ ಮುಕ್ತಾಯಗೊಳ್ಳಲಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಉತ್ತರವನ್ನು ಓದಿ ತಮಗೆ submit ಮಾಡುವಷ್ಟು ಏನಿಲ್ಲ. ಅದು ಈಗ ಕೊಡುತ್ತಾರೆ. ಎರಡು ಪುಟಗಳಷ್ಟು ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆ ಉತ್ತರ ಏನೇ ಇರಲಿ. ನನ್ನ ಮುಖ್ಯವಾದ ಅಂಶವೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅರಣ್ಯ ವಿಭಾಗದಲ್ಲಿ ಸುಮಾರು ಹತ್ತು ವರ್ಷಗಳ ಹಿಂದೆ ಒಂದು ಆನೆ ಇತ್ತು. ಇವತ್ತಿನ ದಿವಸ ಇಪ್ಪತ್ತೆರಡು ಆನೆಗಳು ಆ ವಿಭಾಗದೊಳಗಡೆ ಬಂದಿವೆ. ಈ ಆನೆಗಳ ಹಾವಳಿಯಿಂದಾಗಿ ಜನರ ಜೀವನ ದುಸ್ತರವಾಗಿಬಿಟ್ಟಿದೆ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ದಿನ ಪತ್ರಿಕೆಯನ್ನು ಓದಿದ ಕೂಡಲೇ ಆನೆಗಳ ಒಂದು ಹೋರಾಟಗಳು ಮತ್ತು ಇವತ್ತು ಆನೆಗಳು ಕಾಡಿನಲ್ಲಿ ಇರಬೇಕಾಗಿತ್ತು. ಇದರ ಬಗ್ಗೆ ನಮ್ಮ ಜಿಲ್ಲೆಯ ಬಗ್ಗೆ ಬೆಳಗ್ಗೆ ಚರ್ಚೆಯಾಯಿತು. ಇದರ ಬಗ್ಗೆ ಪ್ರತಾಪ ಸಿಂಹ ಕೆ ನಾಯಕ್‌ರವರು ಮಾತನಾಡಿದರು. ಇದರ ಬಗ್ಗೆ ಮಾನ್ಯ ಕಿಶೋರ್‌ರವರು ಕೂಡ ಮಾತನಾಡಿದರು. ಆನೆಗಳ ಹಾವಳಿಯನ್ನು ಹತ್ತಿಕ್ಕುವ ಬಗ್ಗೆ ಏನಾದರೊಂದು ವ್ಯವಸ್ಥಿತವಾದ ಕಾರ್ಯಕ್ರಮ ತಮ್ಮಲ್ಲಿ ಇದೆಯಾ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ಇವತ್ತು ಇಪ್ಪತ್ತೆರಡು ಆನೆಗಳು ಈ ಪ್ರದೇಶದಲ್ಲಿ ಇರುವುದಕ್ಕೆ ಕಾರಣವೇನು? ಚಾರ್ಮಾಡಿಯಿಂದ ಸುಳ್ಯದವರೆಗಿನ ಭಾಗದಲ್ಲಿ ಅರಣ್ಯ ಪ್ರದೇಶವಿದ್ದು, ಈಗಾಗಲೇ ಸಾಕಷ್ಟು National Highway improve ಆಗುತ್ತಿದ್ದಾವೆ. ಕಾಮಗಾರಿಗಳು ನಡೆಯುತ್ತಿದೆ. ಇವತ್ತು ಕಾಡುಗಳಲ್ಲಿ ಬೆಂಕಿ ಬೀಳುತ್ತಿದೆ. ಈ ಸಂದರ್ಭಗಳಲ್ಲಿ ಆನೆಗಳು ಇವತ್ತು ಕಾಡಿನಲ್ಲಿ ಇರಬೇಕಾಗಿತ್ತು. ಅವು ರಸ್ತೆಗೆ ಬಂದು ಮನೆ, ಕೃಷಿ ಭೂಮಿಯನ್ನು ನಾಶ ಮಾಡುವಂತಹ ಪರಿಸ್ಥಿತಿ ಇವತ್ತು ಉಂಟಾಗಿದೆ.

(ಮುಂದು)

(624) 11.08.2025 5.10 ಬಿಸಿಹೆಚ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಐವನ್ ಡಿ'ಸೋಜಾ (ಮುಂದು)

ಇದರಿಂದ ಅನೇಕ ಜೀವಗಳು ಬಲಿಯಾಗಿವೆ. ಅನೇಕ ಕೃಷಿ ಭೂಮಿಗಳು ನಾಶವಾಗಿವೆ. ವಾಹನಗಳಲ್ಲಿ ಹೋಗುವವರ ಮೇಲೆ attack ಮಾಡಿರುವಂತಹ ಪ್ರಸಂಗ ನಡೆದಿದೆ. 'ಒಬ್ಬರು ಬೈಕ್‌ನಲ್ಲಿ ಹೋಗುವಾಗ ಆನೆ attack ಮಾಡಿದೆ, ಬೈಕ್‌ನಿಂದ ಬಿದ್ದಿದ್ದಾನೆ; ಪ್ರಾಣ ಕಳೆದುಕೊಂಡಿಲ್ಲ. ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿದ್ದಾನೆ ಎಂದು ನಿನ್ನೆ ದಿವಸ ಕೂಡ ಒಂದು ಪತ್ರಿಕೆಯಲ್ಲಿ report ಆಗಿದೆ. ಅನೇಕ ಕಡೆಗಳಲ್ಲಿ ಈ ರೀತಿ ಆಗುತ್ತಿದೆ. ಅಲ್ಲಿ ಜನ ಭಯಭೀತರಾಗಿದ್ದಾರೆ. ನನ್ನ ಪ್ರಶ್ನೆ ಇರುವುದೇನೆಂದರೆ, ಇವತ್ತಿನ ದಿವಸ ಆನೆಗಳು ರಸ್ತೆಗೆ ಬರಲು ಕಾರಣವೇನು? ಆನೆಗಳು ರಸ್ತೆಗೆ ಬರದಂತೆ ತಡೆಯಲು ಸರ್ಕಾರದಲ್ಲಿ ಏನಾದರೂ ವ್ಯವಸ್ಥೆ ಇದೆಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಅರಣ್ಯ ಸಚಿವರು ಪ್ರಶ್ನೋತ್ತರ ಅವಧಿಯಲ್ಲಿ ಆನೆಗಳು ಕಾಡಿನಿಂದ ಹೊರಗೆ ಬರದಂತೆ ತಡೆಯಲು ನಾವು ಬೇಲಿ ಮತ್ತು ತಂತಿಗಳನ್ನು ಹಾಕುತ್ತೇವೆ ಎಂದು ಹೇಳಿದರು. ಆದರೆ ಇವತ್ತಿನ ದಿವಸ . . .

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ಡಿಸೋಜಾರವರೇ, ಆನೆಗಳು ಏಕೆ ನಾಡಿಗೆ ಬರುತ್ತಿವೆಯೆಂದು ನೀವೇ ಹೇಳಿ.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಸರ್ಕಾರ ಕಾಡು ಉಳಿಸಿಕೊಳ್ಳುತ್ತಿಲ್ಲ. ಕಾಡು ಉಳಿಸಿಕೊಳ್ಳುವುದಕ್ಕೆ ಸಿಬ್ಬಂದಿಗಳಿಲ್ಲ. ಅಲ್ಲಿ ಶೇ.೬೦ ರಷ್ಟು ಹುದ್ದೆಗಳು ಖಾಲಿ ಇವೆ.

ಸಭಾಪತಿಯವರು:– ಮಾನ್ಯ ಡಿಸೋಜಾ ರವರೇ, ಇದು ಗಮನ ಸೆಳೆಯುವ ಸೂಚನೆ.

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಅಲ್ಲಿ ಒಟ್ಟು 328 ಹುದ್ದೆಗಳು ಮಂಜೂರಾಗಿವೆ. ಬರೀ 157 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಇನ್ನೂ 171 ಹುದ್ದೆಗಳು ಖಾಲಿ ಇವೆ. Sixty percent of posts are vacant. ಹುದ್ದೆಗಳು ಅಷ್ಟು ಇರಬೇಕಾಗಿತ್ತು. ಮತ್ತೆ ಆನೆಗಳನ್ನು ಹೇಗೆ ಹಿಡಿಯುತ್ತಾರೆ. ಜನರಿಗೆ ರಕ್ಷಣೆ ಕೊಡುವುದು ಹೇಗೆ? ಇವರು ಸಂಘರ್ಷವನ್ನು ತಡೆಗಟ್ಟುವುದು ಹೇಗೆ? ಹಾಗಾಗಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು; ಅಲ್ಲಿಗೆ Task Forces ಕೊಡಬೇಕು. ಅವರಿಗೆ ಇರತಕ್ಕಂಥ vehicles ಆನೆಗಳಿಗಿಂತಲೂ ಕಡಿಮೆ ಇರತಕ್ಕಂಥ vehicles. ಅಲ್ಲಿಗೆ ಏನೂ infrastructure ಕೊಟ್ಟಿಲ್ಲ. ಅರಣ್ಯಗಳನ್ನು ಉಳಿಸುತ್ತಿಲ್ಲ.

ಸಭಾಪತಿಯವರು:– ಶ್ರೀ ಐವನ್ ಡಿ'ಸೋಜಾ ರವರೇ, ತಾವು ಮಾತನಾಡಿದ್ದು ಸಾಕು. ಮಾನ್ಯ ಅರಣ್ಯ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, Task Force ಅನ್ನು immediate ಆಗಿ ರಚನೆ ಮಾಡಬೇಕು ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಆನೆಗಳ ಹಾವಳಿಯನ್ನು ತಡೆಗಟ್ಟಿ ಜನರಿಗೆ ರಕ್ಷಣೆ ಕೊಡಬೇಕು. ಈಗ ಅಲ್ಲಿ ಜನ ಭಯಭೀತರಾಗಿದ್ದಾರೆ. ಆನೆಗಳ ದಾಳಿಯಿಂದ ಮರಣ ಹೊಂದಿದವರಿಗೆ ಪರಿಹಾರ ಕೊಡುತ್ತಿರುವುದು ಸಾಕಾಗುವುದಿಲ್ಲ. ಬೇರೆ ರಾಜ್ಯಗಳಲ್ಲಿ ಆನೆಗಳ ದಾಳಿಯಿಂದ ಮರಣ ಹೊಂದಿದವರಿಗೆ ಹೆಚ್ಚು ಪರಿಹಾರ ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಸತ್ತವರಿಗೆ ಹೆಚ್ಚಿನ ಪರಿಹಾರ ಸಿಗುತ್ತಿಲ್ಲ. ಕೃಷಿ ಭೂಮಿ ಸಂಪೂರ್ಣವಾಗಿ ಬಿದ್ದು ಹೋಗಿದೆ.

ಸಭಾಪತಿಯವರು:– ಶ್ರೀ ಐವನ್ ಡಿ'ಸೋಜಾ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಇದು ಗಮನ ಸೆಳೆಯುವ ಸೂಚನೆ.

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ಇದಕ್ಕೆ ಏನಾದರೂ ಉತ್ತರ ಕೊಡದಿದ್ದರೆ ಕಷ್ಟವಾಗುತ್ತದೆ.

ಸಭಾಪತಿಯವರು:– ಮಾನ್ಯ ಸಚಿವರೇ, ತಾವು ಉತ್ತರ ಕೊಡಿ. ಆಗ ಸರಿ ಆಗುತ್ತದೆ.

ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ಮಾನವ–ಪ್ರಾಣಿ ಸಂಘರ್ಷದ ಬಗ್ಗೆ, ಮಾನವ–ಆನೆ ಸಂಘರ್ಷದ ಬಗ್ಗೆ ಇಂದು ಬೆಳಗ್ಗೆ ಪ್ರಶ್ನೋತ್ತರ ಸಮಯದಲ್ಲಿ ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರೊಬ್ಬರು ಕೇಳಿದಂತಹ ಎಲ್ಲಾ ಪ್ರಶ್ನೆಗಳಿಗೆ ನಾನು ಸವಿಸ್ತಾರವಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ಕೊಟ್ಟಿದ್ದೇನೆ. ಪುನಃ ಅದನ್ನು ಪುನರುಚ್ಚರಿಸಬೇಕೆಂದರೆ ಗೌರವಾನ್ವಿತ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಆನೆಗಳು ಏಕೆ ಅರಣ್ಯದಿಂದ ಹೊರಗಡೆ ಬರುತ್ತಿವೆ? ಮಾನವ-ಪ್ರಾಣಿ ಸಂಘರ್ಷದಿಂದ ಏನೇನು ಅನಾಹುತಗಳಾಗುತ್ತಿವೆ?

ಸಭಾಪತಿಯವರು:- ಎಲ್ಲಾ ಅವರಿಗೆ ಗೊತ್ತಿದೆ. ಈಗ ಅದಕ್ಕೆ ಏನು ಮಾಡುತ್ತೀರಿ ಹೇಳಿ.

ಶ್ರೀ ಈಶ್ವರ ಬಿ.ಖಂಡ್ರೆ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರದ್ದು ಪರಿಹಾರ ಕೊಡುವ ಬಗ್ಗೆ ಬೇಡಿಕೆ ಇದೆ. ಕಳೆದ ಬಾರಿ ನಾವು ರೂ.47 ಕೋಟಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ತಕ್ಷಣವೇ ಪರಿಹಾರವನ್ನು ಕೊಡುತ್ತಿದ್ದೇವೆ. ಈ ವರ್ಷ ಇಲ್ಲಿಯವರೆಗೆ ಸುಮಾರು ರೂ. 25 ಕೋಟಿಗಳಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. ಮಂಗಳೂರು ಅರಣ್ಯ ವಿಭಾಗದಲ್ಲೂ ಕೂಡ ಬೆಳೆ ನಷ್ಟವಾಗಿರುವುದಕ್ಕೆ ಜುಲೈ 1ನೇ ತಾರೀಖಿನವರೆಗೆ ಬರೀ ಒಂದೂವರೆ ಲಕ್ಷ ರೂಪಾಯಿಗಳು ಮಾತ್ರ pending ಇದೆ. ಶೀಘ್ರದಲ್ಲೇ ಆ ಪರಿಹಾರವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ. ವೈಜ್ಞಾನಿಕವಾಗಿ ಪರಿಹಾರವನ್ನು ಕೊಡುವುದಕ್ಕೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇವತ್ತಿನ ದಿವಸ ಪ್ರಾಣ ಹಾನಿಯಾಗದ ರೀತಿಯಲ್ಲಿ ಮಾಡುವುದಕ್ಕೆ ಮತ್ತು ಅರಣ್ಯದಿಂದ ಆನೆಗಳು ಹೊರಗಡೆ ಬರದಂತೆ ನಾವು ಕಂದಕಗಳನ್ನು ನಿರ್ಮಾಣ ಮಾಡುತ್ತಿದ್ದೇವೆಂದು ಹೇಳಿದ್ದೇನೆ. ಅದೇ ರೀತಿ Tentacle Fencing ಮಾಡುತ್ತಿರುವುದನ್ನು ಕೂಡ ಹೇಳಿದ್ದೇನೆ. ರೈಲ್ವೇ ಬ್ಯಾರಿಕೇಡ್ ಮಾಡುವುದನ್ನೂ ಕೂಡ ಹೇಳಿದ್ದೇನೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಸುಮಾರು 8 ಆನೆ ಕಾರ್ಯಪಡೆ ಕೆಲಸ ಮಾಡುತ್ತಿದೆ. ಈ ಆನೆ ಕಾರ್ಯಪಡೆಯಲ್ಲಿ ಒಟ್ಟು 8 ಜನ ನಮ್ಮ ಅಧಿಕಾರಿಗಳು ಇರುತ್ತಾರೆ. ಸುಮಾರು 24 ಜನ ಹೊರಗುತ್ತಿಗೆ ಆಧಾರದ ಮೇಲೆ ಸ್ಥಳೀಯರಿಗೆ ತರಬೇತಿ ಕೊಟ್ಟು ಅಲ್ಲಿ ನೇಮಕ ಮಾಡಲಾಗುತ್ತದೆ. ಅಲ್ಲಿ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ನಾವು ಮಾಡುತ್ತಿದ್ದೇವೆ. ಇತ್ತೀಚಿನ ದಿನಗಳಲ್ಲಿ ಆನೆಗಳು ಮಂಗಳೂರಿಗೆ ಹೋಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಮಂಗಳೂರಿಗೆ ಒಂದು ಆನೆ ಕಾರ್ಯಪಡೆಯನ್ನು ಮಂಜೂರು ಮಾಡಬೇಕೆಂದು ಕೇಳಿದ್ದಾರೆ. ಮಾನ್ಯ ಸದಸ್ಯರ ಮನವಿ ಮೇರೆಗೆ, ಪ್ರಸ್ತುತ 8 ಆನೆ ಕಾರ್ಯಪಡೆ ಕೆಲಸ ಮಾಡುತ್ತಿದ್ದು, ಮಂಗಳೂರಿಗೆ ಒಂದು ಆನೆ ಕಾರ್ಯಪಡೆಯನ್ನು ಮಂಜೂರು ಮಾಡುತ್ತೇವೆ. ಅಂದರೆ ಹೆಚ್ಚುವರಿಯಾಗಿ ಇನ್ನೂ ಒಂದು ಆನೆ ಕಾರ್ಯಪಡೆಯನ್ನು ಮಂಜೂರು ಮಾಡುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಮಾನವ-ಪ್ರಾಣಿ ಸಂಘರ್ಷ ಆಗುತ್ತಿರುವುದಕ್ಕೆ ನಾವು ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗ ಹೊಸದಾಗಿ ಒಂದು ಅಧ್ಯಯನ ಮಾಡಿಸಿ, ಆನೆ ಕಾರಿಡಾರ್ ಮಾಡುವುದಕ್ಕೆ Task Force ತಂಡವನ್ನು ಮಾಡಿದ್ದೇವೆ. ಈಗ ಅವರು ಕೂಡ ಒಂದು ವರದಿಯನ್ನು ಕೊಟ್ಟಿದ್ದಾರೆ. ನಾನು ವಿವಿಧ ಇಲಾಖೆಗಳೊಂದಿಗೆ ಆ ವರದಿ ಬಗ್ಗೆ ಸಮಾಲೋಚನೆ ಮಾಡಬೇಕಾಗಿದೆ. ಏಕೆಂದರೆ ಇದರಲ್ಲಿ ಸಾವಿರಾರು ಎಕರೆ ಭೂಮಿಯನ್ನು ನಾವು ಪಡೆಯಬೇಕಾಗುತ್ತದೆ. ಅದು ಕೃಷಿ ಇಲಾಖೆ ಜಮೀನು ಇರಬಹುದು, ತೋಟಗಾರಿಕೆ ಇಲಾಖೆ ಜಮೀನು ಇರಬಹುದು, ಕಂದಾಯ ಇಲಾಖೆ ಜಮೀನು ಇರಬಹುದು ಅಥವಾ ಖಾಸಗಿ ಜಮೀನು ಇರಬಹುದು. ಯಾವ ಕಾರಿಡಾರ್‌ನಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಲವಾರು ವರ್ಷಗಳಿಂದ ಆನೆಗಳು ಓಡಾಟ ಮಾಡುತ್ತಿದ್ದವು, ಆ ಕಾರಿಡಾರ್ ಈಗ ಅಲ್ಲಿ fragment ಆಗಿದೆ. ಬಹಳಷ್ಟು ಕಡೆ ಅಭಿವೃದ್ಧಿ ಹೆಸರಿನಲ್ಲಿ ನಾವು ಕೆನಾಲ್‌ಗಳನ್ನು ನಿರ್ಮಾಣ ಮಾಡಿದ್ದೇವೆ, ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಾಣ ಮಾಡಿದ್ದೇವೆ. ಈಗಾಗಲೇ ಹಲವಾರು ಕಡೆ Optical Fiber Cable ಹಾಕಿದ್ದೇವೆ. ಇವತ್ತಿನ ದಿವಸ ಅನೇಕ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆ. ಇವೆಲ್ಲಾ ಕಾರಣಗಳಿಂದಾಗಿ ಇವತ್ತಿನ ದಿವಸ ಆನೆ ಕಾರಿಡಾರ್‌ಗೆ ಧಕ್ಕೆಯಾಗಿದೆ. ಪುನಃ ನಾವು ಅದನ್ನು ಸರಿಪಡಿಸಬೇಕೆಂದರೆ, ಇದಕ್ಕೆ ಬಹಳ ದೊಡ್ಡ ಮಟ್ಟದಲ್ಲಿ ನಾನು ಎಲ್ಲವನ್ನೂ ಅಧ್ಯಯನ ಮಾಡಿ, ಅದನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗಿ, ಅದಕ್ಕೆ ಅವಶ್ಯಕತೆ ಇರತಕ್ಕಂಥ ಅನುದಾನದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಮನವರಿಕೆ ಮಾಡಿಕೊಟ್ಟು, ಅದನ್ನು ಪಡೆದುಕೊಂಡು ಮುಂದಿನ ದಿನಮಾನಗಳಲ್ಲಿ ಒಂದು ಯೋಜನೆಯನ್ನು ರೂಪಿಸಿ ಶಾಶ್ವತವಾದಂತಹ ಪರಿಹಾರ ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಅರಣ್ಯ ಸಚಿವರು ಮಂಗಳೂರು ವಿಭಾಗಕ್ಕೆ ಒಂದು Task Force ಅನ್ನು ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಸಚಿವರು immediate ಆಗಿ constitute ಮಾಡಿ ಅದನ್ನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಖಾಲಿ ಇರುವಂತಹ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಎಂದು ಹೇಳಲಿಲ್ಲ. ಶೇ.೬೦ ರಷ್ಟು ಹುದ್ದೆಗಳು ಖಾಲಿ ಇವೆ.

ಶ್ರೀ ಈಶ್ವರ ಬಿ.ಖಂಡ್ರೆ:- ಮಾನ್ಯ ಸದಸ್ಯರು ಶೇ.೬೦ ರಷ್ಟು ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದಾರೆ. ಈಗಾಗಲೇ ಸುಮಾರು ೩೧೦ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ೫೪೦ ಅರಣ್ಯ ರಕ್ಷಕರ ಹುದ್ದೆಗಳ ಭರ್ತಿ ಪ್ರಕ್ರಿಯೆ ನಡೆಯುತ್ತಿದೆ. ಬುಡಕಟ್ಟು ಸಮುದಾಯದವರಿಗೂ ಕೂಡ ಅದರಲ್ಲಿ ಮೀಸಲಾತಿ ಇದೆ. ಅದೆಲ್ಲವನ್ನೂ ಸೇರಿಸಿಕೊಂಡು ಈಗಾಗಲೇ ನಾವು ಪರೀಕ್ಷೆ ಮಾಡಿದ್ದೇವೆ. ಒಂದು ತಿಂಗಳು ಅಥವಾ ಎರಡು ತಿಂಗಳೊಳಗಾಗಿ ಅವರನ್ನು ಪಾರದರ್ಶಕವಾಗಿ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿ ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಎಲ್ಲೆಲ್ಲಿ ವನ್ಯ ಜೀವಿಗಳ ಧಾಮಗಳಿವೆಯೋ, ಎಲ್ಲೆಲ್ಲಿ ಮಾನವ-ಪ್ರಾಣಿ ಸಂಘರ್ಷ ಜಾಸ್ತಿ ಇದೆಯೋ ಅಂತಹ ಕಡೆ ಅವರನ್ನು posting ಮಾಡಬೇಕೆಂದು ನಾನು ಸೂಚನೆಯನ್ನು ಕೂಡ ಕೊಟ್ಟಿದ್ದೇನೆ. ಹಾಗೆಯೇ ಬಾಕಿ ಇರುವಂತಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಗೆ ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಅದನ್ನೂ ಕೂಡ ಮಂಜೂರಾತಿ ಮಾಡಿಸಿಕೊಂಡು ಆ ಪ್ರಕ್ರಿಯೆಯನ್ನೂ ಪ್ರಾರಂಭ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಚಿವರೇ, ತಮಗೆ ಧನ್ಯವಾದಗಳು.

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೇ ಒಂದು ನಿಮಿಷ. . .

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಶ್ರೀ ಡಿ.ಎಸ್.ಅರುಣ್‌ರವರೇ, ಒಂದು ನಿಮಿಷ. ನೀವೆಲ್ಲರೂ ನಿಯಮ 72 ಅನ್ನು ಓದಬೇಕು. ನೀವು ಅದನ್ನು ಓದದೇ ಎಲ್ಲರೂ ಒಟ್ಟಿಗೆ ಮೇಲೆ ಎದ್ದೇಳಬಾರದು. ನಿಯಮ 72 ರಡಿಯಲ್ಲಿ ಯಾರು ಪ್ರಶ್ನೆ ಕೇಳಿರುತ್ತಾರೋ ಅವರು ಮಾತ್ರ ಎದ್ದು ಪ್ರಶ್ನೆ ಕೇಳಬೇಕು. ಎಲ್ಲರೂ ಒಟ್ಟಿಗೆ ಎದ್ದುನಿಂತರೆ ಹೇಗೆ?

ಇ) ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಅನುದಾನದ ಕೊರತೆಯಿಂದಾಗಿ ಬಸವ ಕಲ್ಯಾಣದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಕುರಿತು.

ಡಾ.ಎಂ.ಜಿ.ಮುಳೆ (ನಾಮನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಅನುದಾನದ ಕೊರತೆಯಿಂದಾಗಿ ಬಸವ ಕಲ್ಯಾಣದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಈಶ್ವರ ಬಿ.ಖಂಡ್ರೆ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು, (ಕಂದಾಯ ಸಚಿವರ ಪರವಾಗಿ) ಮಾನ್ಯ ಸಭಾಪತಿಯವರೇ. . .

ಸರ್ಕಾರದ ಉತ್ತರ

ಬಸವಕಲ್ಯಾಣದ ಸಮಗ್ರ ಅಭಿವೃದ್ಧಿಗಾಗಿ 2005ರಲ್ಲಿ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ರಚನೆ ಮಾಡಿ ಬಸವಕಲ್ಯಾಣ ಹಾಗೂ ಸುತ್ತಲಿನ ಪ್ರದೇಶದಲ್ಲಿನ ಒಟ್ಟು 29 ಸಾಂಸ್ಕೃತಿಕ ಸ್ಮಾರಕಗಳನ್ನು ಗುರುತಿಸಿ ಮಂಡಳಿಗೆ ವಹಿಸಲಾಗಿರುತ್ತದೆ. 2005 ರಿಂದ ಇಲ್ಲಿಯವರೆಗೆ ಸುಮಾರು 17 ಸ್ಮಾರಕಗಳ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ ಹಾಗೂ ಉಳಿದ ಸ್ಮಾರಕಗಳನ್ನು ಅನುದಾನದ ಲಭ್ಯತೆಯಂತೆ ಹಂತ-ಹಂತವಾಗಿ ಅಭಿವೃದ್ಧಿ ಪಡಿಸುವ ಯೋಜನೆಯಿರುತ್ತದೆ. ಅಲ್ಲದೇ ಪರುಷಕಟ್ಟೆ ಸೇರಿದಂತೆ ನೂತನ ಅನುಭವ ಮಂಟಪ ನಿರ್ಮಾಣ ಯೋಜನೆ ಸರ್ಕಾರದ ಆದೇಶ ಸಂಖ್ಯೆ: ಕಂಇ 169 ಆರ್ ಬಿ ಎ 2023, ದಿನಾಂಕ:26.6.2025ರಲ್ಲಿ ಪರಿಷ್ಕೃತ ಅಂದಾಜು ಮೊತ್ತ ರೂ. 742.00 ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು, ಇಲ್ಲಿಯವರೆಗೆ ರೂ. 325.00 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಶರಣರ ವಚನಗಳನ್ನು ಸಂಗ್ರಹಣೆ ಮಾಡುವ ಕೆಲಸ ಪೂರ್ಣಗೊಳಿಸಲಾಗಿದ್ದು ಅವುಗಳನ್ನು ಧ್ವನಿ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ನೂತನ ಅನುಭವ ಮಂಟಪದ ಒಳಾಂಗಣದಲ್ಲಿ ಅಳವಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಚಾಲುಕ್ಯರ ಹಳೆಯ ಕೋಟೆಯಲ್ಲಿ ಕೋಟೆಯ ಇತಿಹಾಸವನ್ನು ಲೈಟ್ ಮತ್ತು ಲೇಸರ್ ಶೋ ಮೂಲಕ ಜನರಿಗೆ ತಿಳಿಸಲಾಗುತ್ತಿದೆ. ಬಸವ ವನ ಉದ್ಯಾನ ವನದ ಸುತ್ತ ತಡೆಗೋಡೆಯನ್ನು ನಿರ್ಮಿಸಲಾಗಿದ್ದು, ಸದರಿ ಸ್ಮಾರಕಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ.ಎಂ.ಜಿ.ಮುಳೆ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಈಗ ಕೊಟ್ಟಿದ್ದಾರೆ, ನಾನೇನು ನೋಡಿಲ್ಲ. ನನ್ನ ಮಾಹಿತಿ ಪ್ರಕಾರ ಸುಮಾರು 50 ಲಕ್ಷ ರೂಪಾಯಿಗಳ ಅನುದಾನ ಬರುತ್ತಿದೆ. ಅಲ್ಲಿ outsource ಮತ್ತು regular ಸಿಬ್ಬಂದಿಗಳಿದ್ದಾರೆ. ಅವರ salary ಗೆ ರೂ.2,40,00,000 ರಷ್ಟಾಗುತ್ತದೆ. ಕಡಿಮೆ ಅನುದಾನದಿಂದ ಅಲ್ಲಿ ಯಾವುದೇ ಸ್ಮಾರಕಗಳ ನಿರ್ವಹಣೆ ಮತ್ತು ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲಾ ಸಾಕಷ್ಟು ಸ್ಮಾರಕಗಳು ದುರಸ್ತಿಯಲ್ಲಿವೆ. ಸುಮಾರು 30 ಸ್ಮಾರಕಗಳಿದ್ದವು, ಈಗ ಅದು 20 ಸ್ಮಾರಕಗಳಿಗೆ ಬಂದಿವೆ. ಇದು ಬಿಟ್ಟು ಯಾವುದೇ ಬಸವವನದ ಕೆಲಸ ಇರಲಿ, ಚಾಲುಕ್ಯರ ಕಾಲದ ಕೋಟೆ ಇರಲಿ, ಆ ಕೋಟೆ ನಿರ್ವಹಣೆ ಮತ್ತು sound and light ಅದು ಯಾವುದೂ ಈಗ ಚಾಲ್ತಿಯಲ್ಲಿ ಇಲ್ಲ.

(ಮುಂದು)

(625)11.8.2025/5.20/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

ಡಾ: ಎಂ.ಜಿ. ಮುಳೆ (ಮುಂದು):-

ಬಸವ ವನದಲ್ಲಿ ಐದು ಶೌಚಾಲಯಗಳಿವೆ ಆದರೆ ಯಾವುದೇ ಶೌಚಾಲಯಗಳೂ ಕೆಲಸ ಮಾಡುತ್ತಿಲ್ಲ. ಅದನ್ನು ನಿರ್ವಹಣೆ ಮಾಡುವುದಕ್ಕೆ ಯಾರೂ ಇಲ್ಲ. ಅಲ್ಲಿ ಇಂತಹ ಪರಿಸ್ಥಿತಿ ಇದೆ. ತಾವು ಶರಣರಿದ್ದೀರಿ, ಬಸವಣ್ಣನವರ ಬಗ್ಗೆ ಅಪಾರ ಅಭಿಮಾನದಿಂದ ಉತ್ತರ ಕೊಡುತ್ತಿದ್ದೀರಿ. ಅಣ್ಣ ಬಸವಣ್ಣನವರ ಸಾಂಸ್ಕೃತಿಕ ನಾಯಕರಾಗಿದ್ದೀರಿ, ಅಲ್ಲಿ ಸಾಂಸ್ಕೃತಿಕ ಭವನವಿಲ್ಲ. ಇದೇ ಪ್ರಕಾರವಾದರೆ ಬಹಳ ಕಷ್ಟವಿದೆ. ಅದರ ಪಕ್ಕ ಶಿವಪುರದಲ್ಲಿ ಐತಿಹಾಸಿಕವಾದ ಶಿವಮಂದಿರವಿದೆ. ಅದನ್ನೂ ಸಹ ಯಾರೂ ನಿರ್ವಹಣೆ ಮಾಡುತ್ತಿಲ್ಲ. ಇದಕ್ಕೆ ಅನುದಾನವನ್ನು ಹೆಚ್ಚು ಮಾಡಬೇಕು ಮತ್ತು ನೂತನ ಅನುಭವ ಮಂಟಪ ನಿರ್ಮಾಣ ಮತ್ತು ಪರುಷಕಟ್ಟೆ ಬಿಟ್ಟು ಇನ್ನೂ ಬೇರೆ ಸ್ಮಾರಕಗಳನ್ನು ಅಭಿವೃದ್ಧಿ ಮಾಡುವುದಕ್ಕೆ ನಿರ್ವಹಣೆ ಮಾಡುವುದಕ್ಕೆ, ಕೋಟೆ ಅಭಿವೃದ್ಧಿ ಮಾಡುವುದಕ್ಕೆ, ನಾರಾಯಣಪುರ ಮತ್ತು ಶಿವಪುರಕ್ಕೆ ಹೊಸ ಯೋಜನೆಯನ್ನು ಮಾಡಿ ಅದಕ್ಕೆ ತಕ್ಕ ಅನುದಾನವನ್ನು ಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) (ಕಂದಾಯ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೇ, ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಅನುದಾನದ ಕೊರತೆ ಇಲ್ಲ. ಅನುಭವ ಮಂಟಪ ನಿರ್ಮಾಣ ಕಾಮಗಾರಿಗೆ ಈಗಾಗಲೇ 325 ಕೋಟಿ ರೂಪಾಯಿಗಳ ವೆಚ್ಚವಾಗಿದೆ. ಇನ್ನೂ 25 ಕೋಟಿ ರೂಪಾಯಿಗಳು ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿದೆ. ಇನ್ನೂ ನೂರು ಕೋಟಿ ರೂಪಾಯಿಗಳನ್ನು ಈ ವರ್ಷ ಕೊಡಬೇಕೆಂದು ಮನವಿ ಮಾಡಿದ್ದೇನೆ. ಅದು ಬಿಡುಗಡೆಯಾಗುತ್ತದೆ. ಮೊನ್ನೆ ನಡೆದ ಸಚಿವ ಸಂಪುಟದಲ್ಲಿ ಪರಿಷ್ಕೃತ ಅಂದಾಜು ಪಟ್ಟಿ 742 ಕೋಟಿ ರೂಪಾಯಿಗಳಿಗೆ ಅವಶ್ಯಕತೆಗನುಗುಣವಾಗಿ ಮಂಜೂರಾತಿ ಪಡೆದಿದ್ದೇವೆ. ಕಾಮಗಾರಿ ವೇಗದ ಗತಿಯಲ್ಲಿ ನಡೆಯುತ್ತಿದೆ. ನಮ್ಮ ಉದ್ದೇಶವೇನೆಂದರೆ, ಮುಂಬರುವ ಜೂನ್ ತಿಂಗಳ ಒಳಗಾಗಿ ಬಸವ ಜಯಂತಿಯ ಪೂರ್ವದಲ್ಲಿ ಇಡೀ ಜಗತ್ತಿಗೆ ಪ್ರಜಾಪ್ರಭುತ್ವದ ಪರಿಕಲ್ಪನೆ ಕೊಟ್ಟಂತಹ 770 ಕಂಬಗಳ ಮೇಲೆ ಏನು 770 ಶರಣರಿದ್ದರು ಆ ಎಲ್ಲಾ ಶರಣರ ವಚನಗಳನ್ನು 770 ಕಂಬಗಳ ಮೇಲೆ ಕೆತ್ತಿ ಅದನ್ನು ಬಹಳ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಂದರವಾಗಿ, ಭವ್ಯವಾಗಿ ಜಗತ್ತಿಗೆ ಸಂದೇಶ ಕೊಡುವಂತಹ ಗುಣಮಟ್ಟದ ಕಾಮಗಾರಿ ನಡೆಯುತ್ತಿದೆ. ಅದನ್ನು ಮುಂಬರುವ ಜೂನ್ ತಿಂಗಳ ಒಳಗಾಗಿ ಲೋಕಾರ್ಪಣೆ ಮಾಡಲಾಗುವುದು. ಸನ್ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಘೋಷಣೆ ಮಾಡಿದ್ದಾರೆಂದು ಮಾನ್ಯ ಶಾಸಕರಾದ ಮುಳೆಯವರಿಗೆ ಹೇಳಬಯಸುತ್ತೇನೆ. ಅವರಿಗೆ ಕಳಕಳಿ ಇದೆ. ಅವರು ಸಹ ಶಾಸಕರಾಗಿ ಅಲ್ಲಿ ಸೇವೆ ಸಲ್ಲಿಸಿದ್ದಾರೆ. ಪ್ರಾಧಿಕಾರ ಮಾಡುವುದಕ್ಕೆ, ಬಸವಕಲ್ಯಾಣದಲ್ಲಿ ಸ್ಮಾರಕಗಳನ್ನು ನಿರ್ಮಾಣ ಮಾಡುವುದಕ್ಕೆ ಅವರ ಕೊಡುಗೆಯೂ ಇದೆ. ಈಗ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 17 ಸ್ಮಾರಕಗಳು ನಿರ್ಮಾಣವಾಗಿವೆ. ಅವುಗಳನ್ನು ನಿರ್ವಹಣೆ ಮಾಡುವುದಕ್ಕೆ ನಾನೇ ಹಿಂದೆ 2017-18ರಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಜಾಸ್ತಿ ಉಳಿದಿದ್ದ ಅನುದಾನವನ್ನು corpus fund ಎಂದು 15 ಕೋಟಿ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದೇವೆ. ಏಕೆಂದರೆ ಸ್ಮಾರಕಗಳನ್ನು ನಿರ್ಮಾಣ ಮಾಡುತ್ತೇವೆ ಅದರ ನಿರ್ವಹಣೆ ಮಾಡದಿದ್ದರೆ ಅಲ್ಲಿ ಬಹಳಷ್ಟು ಅನೈತಿಕ ಚಟುವಟಿಕೆಗಳು ನಡೆಯುವಂತಹದ್ದು ಅಥವಾ ಅದು ಹಾಳಾಗುವುದನ್ನು ನಾವು ನೋಡಿದ್ದೇವೆ. ಅದಾಗಬಾರದೆಂದು ಅಲ್ಲಿಗೆ ಒಬ್ಬ ಕಮಿಷನರ್‌ರವರನ್ನು ನೇಮಕ ಮಾಡಿದ್ದು, ಗುತ್ತಿಗೆ ಆಧಾರದ ಮೇಲೆ ಕೆಲವು ಜನರು ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 15 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಏನು ಬಡ್ಡಿ ಬರುತ್ತದೆ ಆ ಹಣದಲ್ಲಿ ಎಲ್ಲಾ ಸ್ಮಾರಕಗಳನ್ನು ನಿರ್ವಹಣೆ ಮಾಡುವಂತಹ ಕೆಲಸಗಳು ನಡೆಯುತ್ತಿವೆ. ತಾವು ಈಗಾಗಲೇ ಕೋಟೆಯ ಬಗ್ಗೆ ಹೇಳಿದ್ದೀರಿ. ಕೋಟೆಯಲ್ಲಿ ಲೈಟ್ ಮತ್ತು ಲೇಸರ್ ಶೋ ಗಳನ್ನು ನಾನೇ ಉದ್ಘಾಟನೆ ಮಾಡಿದ್ದೇನೆ. ಅದು ನಡೆಯುತ್ತಿದೆ. ಬಸವವನ ಉದ್ಯಾನದ ಸುತ್ತ ತಡೆಗೋಡೆಯನ್ನು ನಿರ್ಮಾಣ ಮಾಡುವುದು ಆಗಿದೆ. ಕೆಲವು ತಾಂತ್ರಿಕ ದೋಷಗಳಿಂದ ಕೆಲವು ದಿನಗಳವರೆಗೆ ಅದು ಸ್ಥಗಿತಗೊಂಡಿತ್ತು. ಜಿಲ್ಲಾಧಿಕಾರಿಗಳಿಗೆ ಹೇಳಿ ಅದನ್ನು ಸರಿಪಡಿಸಬೇಕೆಂದು ಸೂಚನೆ ಕೊಟ್ಟಿದ್ದೇನೆ. ಅನುಭವ ಮಂಟಪಕ್ಕೆ ಅನುದಾನ ಬಿಡುಗಡೆಯಾಗಿದೆ. ಈ ವರ್ಷ ಪ್ರಾಧಿಕಾರಕ್ಕೆ ಆಯವ್ಯಯದಲ್ಲಿ ಕೇವಲ ೫೦ ಲಕ್ಷ ರೂಪಾಯಿಗಳ ಅನುದಾನವನ್ನು ಮೀಸಲಿಡಲಾಗಿದೆ ಎಂದು ಏನು ಹೇಳುತ್ತಿದ್ದೀರಿ ಆ ಅನುದಾನವನ್ನು ಜಾಸ್ತಿ ಮಾಡಬೇಕೆಂದು ನಾನು ಕೇಳಿದ್ದೇನೆ. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಅನುದಾನದ ಕೊರತೆ ಇಲ್ಲ. ತಾವು ವಿಧಾನ ಪರಿಷತ್ ಸದಸ್ಯರಾಗಿದ್ದೀರಿ, ಅದರ ಬಗ್ಗೆ ಕಳಕಳಿಯುಳ್ಳವರಾಗಿದ್ದೀರಿ, ಅದರ ಬಗ್ಗೆ ಮೇಲ್ವಿಚಾರಣೆ ಮಾಡಿ ಇನ್ನೂ ಪರಿಣಾಮಕಾರಿಯಾಗಿ ಉತ್ತಮ ರೀತಿಯಲ್ಲಿ ಬಸವ ಕಲ್ಯಾಣ ಅಭಿವೃದ್ಧಿ ಮಾಡುವುದಕ್ಕೆ ಸಹಕಾರ ಮಾಡಬೇಕೆಂದು ಹೇಳಬಯಸುತ್ತೇನೆ.

ಡಾ: ಎಂ.ಜಿ. ಮುಳೆ:- ಮಾನ್ಯ ಸಭಾಪತಿಯವರೇ, ನೂತನ ಅನುಭವ ಮಂಟಪ ಕಟ್ಟಿರುವ ಬಗ್ಗೆ ಯಾವುದೇ ವಾದ ಇಲ್ಲ. ತಮ್ಮನ್ನು ಅಭಿನಂದಿಸುತ್ತೇನೆ. ಆದರೆ 'ಪರುಷಕಟ್ಟೆ'ಯ ಕೆಲಸ ಇನ್ನೂ ಆಗಿಲ್ಲ. ಆದರೆ 'ಅರಿವಿನ ಮನೆ'ಯ ಸ್ಥಿತಿ ಏನಿದೆ, ತಿಪ್ಪನಾಳ ಕೆರೆಯ ಪರಿಸ್ಥಿತಿ ಏನಿದೆ ಅಲ್ಲಿ ಬೋಟಿಂಗ್ ಆಗಬೇಕು, ಸ್ಮಾರಕಗಳು ಆಗಬೇಕು, ಆ ಕೆರೆಯಲ್ಲಿ ಬಸವೇಶ್ವರರ ಪ್ರತಿಮೆ ನಿರ್ಮಾಣವಾಗಬೇಕು. ಅದು ಸಹ ಆಗುತ್ತಿಲ್ಲ. ಪಕ್ಕದ ನಾರಾಯಣಪುರದಲ್ಲಿ ಐತಿಹಾಸಿಕವಾದ ಶಿವಮಂದಿರವಿದೆ. ಅದರ ಬಗ್ಗೆ ಚರ್ಚೆಯೇ ಇಲ್ಲ. ಸಾಮಾನ್ಯ ನಿರ್ವಹಣೆಯೂ ಆಗಿಲ್ಲ. ಅಲ್ಲಿ ಎಷ್ಟು ಧೂಳು ಇದೆ ಎಂದರೆ ಯಾರಾದರೂ ಅಂತರ್‌ರಾಷ್ಟ್ರೀಯ ಪ್ರವಾಸಿಗರು ಅದು ಮಹಾತ್ಮ ಬಸವೇಶ್ವರರ ಕರ್ಮಭೂಮಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಅಲ್ಲಿಗೆ ಬಂದರೆ ಕಾಲಿಗೆ ಚುಚ್ಚುವ ಮುಳ್ಳು ಮತ್ತು ಮೂಗಿಗೆ ಧೂಳು ತುಂಬಿಕೊಳ್ಳುತ್ತದೆ. ಬಸವ ಕಲ್ಯಾಣದಲ್ಲಿ ಯಾವುದೇ ತಕ್ಕ ವ್ಯವಸ್ಥೆಗಳಿಲ್ಲ. ಅದು ತಮಗೂ ಗೊತ್ತಿದೆ. ಇದರ ಬಗ್ಗೆ ಬಹಳ ಕಾಳಜಿ ವಹಿಸಿ. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ೫೦ ಲಕ್ಷ ರೂಪಾಯಿಗಳ ಅನುದಾನ ಸಾಕಾಗುತ್ತದೆಯೇ? ಅಲ್ಲಿ ೩೦ ಸ್ಮಾರಕಗಳಿವೆ. ಈಗ ೨೦ ಸ್ಮಾರಕಗಳು ಉಳಿದಿವೆ. ಅಲ್ಲಿನ ಒಂದು ಸ್ಮಾರಕಕ್ಕೂ ಲೈಟ್ ಇಲ್ಲ, ಅದನ್ನು ನೋಡುವುದಕ್ಕೆ ಹೋದವರಿಗೆ ಮೂಲಭೂತ ಸೌಕರ್ಯಗಳಿಲ್ಲ. ಅಲ್ಲಿ ಬಹಳ ವಿಚಿತ್ರ ಪರಿಸ್ಥಿತಿ ಇದೆ. ಅದು ತಮಗೆ ಗೊತ್ತಿದೆ. ತಾವು ಮನಸ್ಸು ಮಾಡಿ ಇದಕ್ಕೆ ಅನುದಾನವನ್ನು ಹೆಚ್ಚು ಮಾಡಬೇಕು. ಹೊಸದು ನಿರ್ಮಾಣ ಮಾಡುವುದು ಬೇರೆ. ಕೋಟೆ ನಿರ್ಮಾಣವಾಗಲೀ ಮತ್ತೇನಾದರೂ ಆಗಲೀ minimum Rs. 5 crore ಗಳನ್ನು ತಾವು ಕೊಡಬೇಕು. ಅಲ್ಲಿ 'ಶಿವಸೃಷ್ಟಿ' ನಿರ್ಮಾಣ ಆಗುತ್ತಿದೆ. ಅದಕ್ಕೆ ಹಿಂದಿನ ಸರ್ಕಾರ ಅದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು ಅದನ್ನು ವಾಪಸ್ ತೆಗೆದುಕೊಳ್ಳಲಾಗಿದೆ. ಅದನ್ನು ಪೂರ್ಣಗೊಳಿಸುವುದಕ್ಕೆ ಸಹಾಯಧನ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಈಶ್ವರ್ ಖಂಡ್ರೆ:– ಮಾನ್ಯ ಸಭಾಪತಿಯವರೇ, 'ಶಿವಸೃಷ್ಟಿ'ಗೆ ಯಾವುದೇ ಹಣ ಬಿಡುಗಡೆಯಾಗಿಲ್ಲ. ನಿಮಗೆ ತಪ್ಪು ಕಲ್ಪನೆ ಇದೆ. ಹೊಸ ಸರ್ಕಾರ ಬಂದ ಮೇಲೆ ಯಾವುದೇ ಹಣವೂ ವಾಪಸ್ ಆಗಿಲ್ಲ. ಬಿಡುಗಡೆಯೇ ಆಗಿಲ್ಲ ಎಂದರೆ ವಾಪಸ್ ಹೋಗುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಪರುಷಕಟ್ಟೆ ಮಾಡುವುದಕ್ಕೆ ಮೊನ್ನೆಯ ಸಚಿವ ಸಂಪುಟ ಸಭೆಯಲ್ಲಿ 20 ಕೋಟಿ ರೂಪಾಯಿಗಳು ಮಂಜೂರಾತಿಯಾಗಿದೆ. ಅದಕ್ಕೆ ವಿನ್ಯಾಸ ತಯಾರು ಮಾಡಲು ವಿಸ್ತೃತವಾದಂತಹ ಒಂದು ಯೋಜನಾ ವರದಿಯನ್ನು ತಜ್ಞರೆಲ್ಲಾ ಕೂಡಿ ತಯಾರು ಮಾಡುತ್ತಿದ್ದಾರೆ. ಹಾಗೂ ಶ್ರೀ ಗೊ.ರು. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ಇದೆ. ಕಾಲಕಾಲಕ್ಕೆ ಅವರು ಕುಳಿತುಕೊಂಡು ಬಸವತತ್ವದ ಆಧಾರದ ಮೇಲೆ ಸ್ಮಾರಕಗಳನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕೆನ್ನುವುದರ ಬಗ್ಗೆ ಸಲಹೆ ಸೂಚನೆಗಳನ್ನು ಕೊಡುತ್ತಿರುತ್ತಾರೆ. ಅವರು ಕೊಟ್ಟಂತಹ ಸಲಹೆಗಳನ್ನು ಅನುಷ್ಠಾನ ಮಾಡುವ ಕೆಲಸವನ್ನು ಜಿಲ್ಲಾಡಳಿತ ಮಾಡುತ್ತಿದೆ. ನಾನು ಉಸ್ತುವಾರಿ ಮಂತ್ರಿಯಾಗಿ ಬಸವಕಲ್ಯಾಣಕ್ಕೆ ಬರುತ್ತೇನೆ, ನಾನು ಮತ್ತು ನೀವು ಸೇರಿ ಪ್ರಗತಿ ಪರಿಶೀಲನೆ ಮಾಡೋಣ. ರಸ್ತೆ ಗುಂಡಿಗಳು ಇತ್ಯಾದಿ ಸಮಸ್ಯೆಗಳನ್ನು ಹೇಳಿದಿರಿ, ಸ್ಥಳೀಯರು, ಎಲ್ಲರೂ ಸೇರಿ; ಬರೀ ಅನುದಾನ ಬಿಡುಗಡೆ ಮಾಡಿದರೆ ಆಗುವುದಿಲ್ಲ. ರೂ. 325 ಕೋಟಿಗಳನ್ನು ಖರ್ಚು ಮಾಡಲಾಗಿದೆ, ಇನ್ನೂ 75 ಕೋಟಿ ರೂಪಾಯಿಗಳು ಈಗ ಬಿಡುಗಡೆಯಾಗುತ್ತಿದೆ. ಒಟ್ಟು 400 ಕೋಟಿ ರೂಪಾಯಿಗಳು. ಇದೇನು ಸಣ್ಣ ಅನುದಾನವೇನಲ್ಲ. ಇಷ್ಟು ಅನುದಾನ ಯಾವ ತಾಲ್ಲೂಕಿಗೂ ಬಂದಿಲ್ಲ. ಬಾಕಿ ಅನುದಾನವೂ ಕಾಲ ಕಾಲಕ್ಕೆ ಬರುತ್ತದೆ. ತಾವು ಸ್ಥಳೀಯವಾಗಿ ಕುಳಿತುಕೊಂಡು ಎಲ್ಲರ ಜೊತೆ ಚರ್ಚೆ ಮಾಡಿ ಸುಧಾರಣೆ ಮಾಡುವಂತಹ ರೀತಿಯಲ್ಲಿ ನಾವೆಲ್ಲಾ ಕ್ರಮ ಜರುಗಿಸೋಣ. ಮುಂಬರುವ ದಿನಮಾನಗಳಲ್ಲಿ ಎಲ್ಲರನ್ನೂ ಸೇರಿಸಿಕೊಂಡು ಅಭಿವೃದ್ಧಿ ಬಗ್ಗೆ ಚರ್ಚೆ ಮಾಡೋಣ.

ಡಾ: ಎಂ.ಜಿ. ಮುಳೆ:– ಮಾನ್ಯ ಸಭಾಪತಿಯವರೇ, ಬೇರೆ ತಾಲ್ಲೂಕು ಬೇರೆ, ಬಸವ ಕಲ್ಯಾಣ ಬೇರೆ. ಇದು ಅಣ್ಣ ಬಸವಣ್ಣನ ಕರ್ಮಭೂಮಿ, ಕ್ರಾಂತಿ ಭೂಮಿ. ಅಲ್ಲಿ ಕನಿಷ್ಟ ಆ ಭೂಮಿಗೆ ತಕ್ಕಂತಹ ವ್ಯವಸ್ಥೆಯಾಗಬೇಕು. ಇಷ್ಟೇ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ವಿನಂತಿ. ಅನುಭವ ಮಂಟಪ ನಿರ್ಮಾಣಕ್ಕೆ ಎಷ್ಟು ಹಣವನ್ನು ಕೊಡುತ್ತಿದ್ದೀರಿ ಅದು ಒಳ್ಳೆಯದೇ, ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಅಲ್ಲಿ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ ಏನೂ ಇಲ್ಲ. ಇದಕ್ಕೆ ಏನಾದರೂ ಮಾಡಬೇಕಲ್ಲವೇ?

ಶ್ರೀ ಈಶ್ವರ್ ಖಂಡ್ರೆ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮುಳೆಯವರಿಗೂ ಗೊತ್ತಿದೆ. ನೂತನ ಅನುಭವ ಮಂಟಪ ನಿರ್ಮಾಣ ಯೋಜನೆಗೆ ರೂ. 742 ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ. ದೂರದರ್ಶಿತ್ವ ಇಟ್ಟುಕೊಂಡು ಮುಂದೆ ಯಾವುದೇ ರೀತಿಯ ಹೊರೆ ಆಗಬಾರದೆನ್ನುವಂತಹ ರೀತಿಯಲ್ಲಿ ಅಲ್ಲಿ 'ಶರಣ ಗ್ರಾಮ' ನಿರ್ಮಾಣ ಮಾಡುವಂತಹದ್ದು, ಇಷ್ಟಲಿಂಗ ಪೂಜೆಯನ್ನು ವೈಜ್ಞಾನಿಕ ದೃಷ್ಟಿಯಿಂದ ಮಾಡಿ ಯುವಕರಿಗೆ ಕೌಶಲ್ಯ ತರಬೇತಿ ಕೊಡುವಂತಹದ್ದು, ಶರಣರ ಕಾಯಕ ತತ್ವವನ್ನು ಪ್ರತಿಯೊಬ್ಬರೂ ಪಾಲಿಸಬೇಕೆನ್ನುವ ರೀತಿಯಲ್ಲಿ ಒಂದು ಯೋಜನೆಯನ್ನು ರೂಪಿಸುವಂತಹದ್ದು ಇದರ ಬಗ್ಗೆ ಸುಮಾರು ಜನ ತಜ್ಞರೆಲ್ಲರೂ ಕೂಡಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇಂತಹದ್ದಕ್ಕೆ ನೀವು ಪ್ರೋತ್ಸಾಹ ಕೊಡಬೇಕಾಗುತ್ತದೆ. ಯಾವುದೋ ಒಂದು ರಸ್ತೆಯಲ್ಲಿ ಗುಂಡಿ ಮುಚ್ಚಿಲ್ಲ, ಸ್ಥಳೀಯ ಸಂಸ್ಥೆಯು ಶೌಚಾಲಯವನ್ನು ಸ್ವಚ್ಛವಾಗಿಟ್ಟಿಲ್ಲ ಎಂಬ ವಿಷಯಗಳನ್ನು ತಂದು, ಅಭಿವೃದ್ಧಿಯಾಗುತ್ತಿರುವ ಬಸವ ಕಲ್ಯಾಣದಲ್ಲಿ ಏನೋ ನಡೆಯುತ್ತಿದೆ ಎಂದು ಬಿಂಬಿಸುವುದು ಸರಿಯಲ್ಲ. ಯಾವುದು ಎಲ್ಲಿ ಲೋಪದೋಷಗಳಿದೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾವು ನೀವು ಕೂಡಿ ಮಾಡೋಣ. ಅದಕ್ಕೆ ಮುಂಬರುವಂತಹ ದಿನಮಾನಗಳಲ್ಲಿ ಈಗಾಗಲೇ ನಾವು ಹೇಳಿದ್ದೇವೆ.

(ಮುಂದು)

(626) 11.08.2025 5.30 ಹೆಚ್‌ವಿ.ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಈಶ್ವರ ಖಂಡ್ರೆ(ಮುಂದು):-

ಸನ್ಮಾನ್ಯ ಸಭಾಪತಿಯವರೇ, ಬಸವ ಕಲ್ಯಾಣ ಅಭಿವೃದ್ಧಿಗೆ ಯಾವುದೇ ರೀತಿಯ ಹಣದ ಕೊರತೆಯೂ ಇಲ್ಲ; ಇಚ್ಛಾಶಕ್ತಿಯೂ ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿಯೇ ಮೊದಲನೆಯ ಸಂಸತ್ತು ಎಂದು ಅನುಭವ ಮಂಟಪವನ್ನು ಕರೆಯುತ್ತೇವೆ. ಇದು 12ನೇ ಶತಮಾನದಲ್ಲಿಯೇ ಪ್ರಾರಂಭವಾಗಿತ್ತು. ಇದನ್ನು ಒಂದು ಆದರ್ಶ ರೀತಿಯಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಧಾರ್ಮಿಕ ಕೇಂದ್ರವನ್ನಾಗಿಸಬೇಕೆನ್ನುವ ಪರಿಕಲ್ಪನೆಯನ್ನು ಇಟ್ಟುಕೊಂಡು ಮಾಡಲಾಗಿದೆ.

ಡಾ॥ ಎಂ.ಜಿ.ಮುಳೆ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಸವಣ್ಣನವರನ್ನು ಸಾಂಸ್ಕೃತಿ ನಾಯಕರನ್ನಾಗಿ ಮಾಡಿದ್ದಾರೆ. ಇಲ್ಲಿ ಒಂದು ಸಾಂಸ್ಕೃತಿಕ ಭವನ ನಿರ್ಮಾಣ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸಭಾಪತಿಯವರು:- ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಖಂಡ್ರೆ:- ಸನ್ಮಾನ್ಯ ಸಭಾಪತಿಯವರೇ, ಸುಮಾರು 20 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಭಾ ಭವನ ನಿರ್ಮಾಣ ಮಾಡಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ, ನಾನು ಜಿಲ್ಲಾ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾಗ, ಅದನ್ನು ಉದ್ಘಾಟನೆ ಮಾಡಿದ್ದೆವು. ಆ ಸಭಾ ಭವನದಲ್ಲಿ ಸುಮಾರು ೫,೦೦೦ ಆಸನಗಳಿವೆ. ಅದನ್ನು ಇನ್ನೂ ಪೂರ್ಣ ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಅದನ್ನು ಉಪಯೋಗ ಮಾಡಿಕೊಂಡು ಮತ್ತೊಂದು ಸಭಾ ಭವನದ ಅವಶ್ಯಕತೆ ಕಂಡುಬಂದರೆ, ಅದಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತದೆ.

11. ನಿಯಮ 330ರ ಮೇರೆಗೆ ಚರ್ಚೆ

ಅ) ರಾಜ್ಯಾದ್ಯಂತ ನಿರ್ಮಾಣಗೊಳ್ಳುತ್ತಿರುವ ಅಕ್ರಮ ಬಡಾವಣೆಗಳನ್ನು ತಡೆಗಟ್ಟಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳದಿರುವ ಕುರಿತು.

ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಇಡೀ ರಾಜ್ಯಾದ್ಯಂತ ಅಕ್ರಮ ಬಡಾವಣೆಗಳು ತಲೆ ಎತ್ತುತ್ತಿವೆ. ಅದಕ್ಕೆ ಸರ್ಕಾರ ಈಗ ಕಡಿವಾಣ ಹಾಕುತ್ತಿದೆ. ಇದರ ಮಧ್ಯೆ ಪ್ರಶ್ನೆಯೊಂದು ಏಳುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಒಬ್ಬ ಖಾಸಗಿ ವ್ಯಕ್ತಿ ಸುಮಾರು ೫ ಎಕರೆ ಜಮೀನಿನಲ್ಲಿ ಈ ಹಿಂದೆ ನಿವೇಶನಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ನಿರ್ಮಾಣ ಮಾಡಿರುವ 100 ನಿವೇಶನಗಳ ಪೈಕಿ 70 ನಿವೇಶನಗಳು ಮಾರಾಟವಾಗಿರುತ್ತವೆ, ಉಳಿದ 30 ನಿವೇಶನಗಳು ಮಾರಾಟವಾಗಿರುವುದಿಲ್ಲ. ಅಂತಹ ನಿವೇಶನಗಳು ರಿಜಿಸ್ಟ್ರೇಶನ್ ಆಗುವುದಿಲ್ಲ. ಬಾಕಿ ನಿವೇಶನಗಳನ್ನು ಮಾಡಿದರೆ ಹೊಸ ಕಾನೂನಿನ ಪ್ರಕಾರ ನಮೂನೆ-೩ ಸಿಗಬೇಕಾಗುತ್ತದೆ. ನಮೂನೆ-೩ ಸಿಗಬೇಕಾದರೆ, ಕ್ರಯಾಪತ್ರ ಅಥವಾ ದಾನಪತ್ರ ಇರಬೇಕಾಗುತ್ತದೆ. ಆ ವ್ಯಕ್ತಿಗೆ ೫ ಎಕರೆ ಜಮೀನು ವಂಶ ಪಾರಂಪರೆಯಾಗಿ ಬಂದಿರುತ್ತದೆ. ಆತನ ಬಳ ಸೇಲ್ ಡೀಡ್ ಕಾಪಿ ಇರುವುದಿಲ್ಲ. ಇದರಿಂದಾಗಿ ಉಳಿಕೆ ನಿವೇಶನಗಳನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದಾಗಿ ಅನಧಿಕೃತ ಬಡಾವಣೆಗಳಿಗೆ ಕಾಯಕಲ್ಪವನ್ನು ಕಲ್ಪಿಸಿದಂತಾಗುತ್ತದೆಯೇ ಹೊರತು ತಡೆಯುವುದಕ್ಕೆ ಯಾವುದೇ ರೀತಿಯ ಅವಕಾಶವಾಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಉಳಿಕೆ 30 ನಿವೇಶನಗಳ ಪೈಕಿ ಆ ಭೂಮಿ ಮಾಲೀಕ 20X30, 30X40 ಅಥವಾ 40X60 ಅಳತೆಯ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾನೆ. ಇದಕ್ಕೆ ಖಾತೆ ಸಹ ಆಗುವುದಿಲ್ಲ. ಇದನ್ನು ಸರಿಪಡಿಸದೇ ಹೋದರೆ, ಅಕ್ರಮ ಬಡಾವಣೆಗಳನ್ನು ತಡೆಗಟ್ಟುವುದಕ್ಕೆ ಅಸಾಧ್ಯವಾಗುತ್ತದೆ. ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರಗಳು....

ಸಭಾಪತಿಯವರು:- ಮಾನ್ಯ ಮಂಜೇಗೌಡರೇ, ಇದಕ್ಕೆ ಪರಿಹಾರವೇನು ಸರ್ಕಾರ ಏನು ಮಾಡಬೇಕೆಂದು ಹೇಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಿ.ಎನ್.ಮಂಜೇಗೌಡ:– ಸನ್ಮಾನ್ಯ ಸಭಾಪತಿಯವರೇ, ಬೆಳಗ್ಗೆ ಪ್ರಶ್ನೆ ಕೇಳುವುದಕ್ಕೆ ತಾವು ನನಗೆ ಅವಕಾಶವನ್ನು ಮಾಡಿಕೊಡಲಿಲ್ಲ. ದಯಮಾಡಿ ಈಗ ನಿಯಮ ೩೩೦ರಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಭೂಮಿಯನ್ನು ಖರೀದಿ ಮಾಡಿದರೆ ಉದಾಹರಣೆಗೆ ಹೇಳಬೇಕಾದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ಪಡೆದುಕೊಳ್ಳುವುದಕ್ಕೆ ಒಂದು ಒಂದೂವರೆ ವರ್ಷಗಳ ಹಿಂದೆಯೇ ಸುಮಾರು ಒಂದೂವರೆ ಲಕ್ಷದಷ್ಟು ಅರ್ಜಿಗಳು ಬಂದಿವೆ. ಇಲ್ಲಿಯವರೆವಿಗೂ ಆ ಪ್ರಾಧಿಕಾರದವರು ರೈತರಿಂದ ಭೂಮಿಯನ್ನು ಖರೀದಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಸರ್ಕಾರ ೫೦:೫೦ರ ಅನುಪಾತದಲ್ಲಿ ಭೂ ಮಾಲೀಕರಿಗೆ ಭೂ ಪರಿಹಾರವನ್ನು ಕೊಡಬೇಕೆನ್ನುವ ನಿಯಮವನ್ನು ಮಾಡಿದೆ. ಅದು ಕೂಡ ಸರಿಯಾಗಿ ಕಾರ್ಯಗತವಾಗಿಲ್ಲ. ಪ್ರಾಧಿಕಾರದ ವತಿಯಿಂದ ನಿವೇಶನಗಳನ್ನು ಹಂಚಿಕೆ ಮಾಡದೇ ಹೋದರೇ, ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಗ್ರಾಮೀಣ ಪ್ರದೇಶದ ವಿದ್ಯಾವಂತರು ಉದ್ಯೋಗವನ್ನು ಅರಸಿಕೊಂಡು ನಗರಕ್ಕೆ ಬಂದಂತಹ ಸಂದರ್ಭದಲ್ಲಿ ಅವರಿಗೆ ನಿವೇಶನದ ಅವಶ್ಯಕತೆ ಹೆಚ್ಚಾಗಿರುತ್ತದೆ. ಪ್ರಾಧಿಕಾರದ ವತಿಯಿಂದ ನಿವೇಶನಗಳನ್ನು ಹಂಚಿಕೆ ಮಾಡದೇ ಇರುವುದರಿಂದ ಮತ್ತು ಕಡಿಮೆ ದರದಲ್ಲಿ ಎರಡನೆ ಮಾರಾಟ ಮಾಡುವವರಿಂದ ನಿವೇಶನಗಳನ್ನು ಖರೀದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹವರು ಈ ರೀತಿ ಉಳಕೆಯ ನಿವೇಶನಗಳನ್ನು ಖರೀದಿ ಮಾಡುವುದಕ್ಕೆ ಮುಂದಾಗುತ್ತಾರೆ. ಗ್ರಾಮೀಣ ಪ್ರದೇಶದಲ್ಲಿರುವ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಎರಡೂ ಇಲಾಖೆಗಳು ಸೇರಿ ಒಬ್ಬ ಇಂಜಿನಿಯರ್ ಅನ್ನು ನೇಮಕ ಮಾಡಿಕೊಂಡಿದ್ದರೆ ಉತ್ತಮವಾಗಿರುತ್ತಿತ್ತು ಎನ್ನುವುದು ನನ್ನ ಅನಿಸಿಕೆಯಾಗಿದೆ. ಬೆಂಗಳೂರು ನಗರ ಒಂದರಲ್ಲಿಯೇ ಸುಮಾರು ೫,೦೦೦ ದಿಂದ ೬,೦೦೦ ಅಕ್ರಮ ಬಡಾವಣೆಗಳಿವೆ ಎನ್ನುವ ಅಂಶ ನನಗೆ ತಿಳಿದು ಬಂದಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ Land Reforms Act ನ್ನು ಜಾರಿಗೆ ತಂದಿದ್ದರು. ಉತ್ತಮ ಉದ್ದೇಶದಿಂದ ಇದನ್ನು ಜಾರಿಗೆ ತರಲಾಯಿತು. ಆದರೆ, ಅಕ್ರಮವಾಗಿ ಬಡಾವಣೆ ಮಾಡುವವರು ಈ ಕಾನೂನನ್ನು ಬಳಕೆ ಮಾಡಿಕೊಂಡು ಬಡಾವಣೆಗಳನ್ನು ರಚನೆ ಮಾಡಿದ್ದಾರೆ. ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಅಕ್ರಮ ಬಡಾವಣೆಗಳ ನಿರ್ಮಾಣವನ್ನು ತಡೆಗಟ್ಟುವುದಕ್ಕೆ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಾಗ ಕೆಲವೊಂದು ಅಂಶಗಳನ್ನು ಗಮನಿಸಬೇಕಾಗುತ್ತದೆ. ಮೊದಲು ಖಾಸಗಿ ಬಡಾವಣೆಗಳನ್ನು ನಿರ್ಮಾಣ ಮಾಡುವಾಗ Economically Weaker Section ಅವರಿಗಾಗಿ ಶೇಕಡಾವಾರು ಒಂದಿಷ್ಟು ನಿವೇಶನಗಳನ್ನು ಮೀಸಲಿಡುತ್ತಿದ್ದರು. ಈಗ ಆ ಪದ್ಧತಿ ಇಲ್ಲ. ಯಾವುದೇ ಖಾಸಗಿ ವ್ಯಕ್ತಿ ೫೦ ಎಕರೆ ಅಥವಾ ೨೦ ಎಕರೆ ಭೂಮಿಯಲ್ಲಿ ಬಡಾವಣೆ ರಚನೆ ಮಾಡುವಂತಹ ಸಂದರ್ಭದಲ್ಲಿ ಅಥವಾ ನಗರ ಪ್ರಾದಿಕಾರದ ವತಿಯಿಂದ ಬಡಾವಣೆಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ Economically

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Weaker Section ಅವರಿಗಾಗಿ ಹಿಂದೆ ಯಾವ ರೀತಿ ಶೇಕಡಾವಾರು ನಿವೇಶನಗಳನ್ನು ಮೀಸಲಿಡುತ್ತಿದ್ದರು ಆ ಪದ್ಧತಿಯನ್ನು ಈಗಲೂ ಮುಂದುವರಿಸಿಕೊಂಡು ಹೋದರೆ, ಈ ರೀತಿಯಾಗಿರುವ ಅಕ್ರಮ ಬಡಾವಣೆಗಳನ್ನು ತಡೆಗಟ್ಟಬಹುದಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾಪ ಮಾಡುತ್ತಿರುವ ನಿಯಮ ೩೩೦ಕ್ಕೆ ಇಲಾಖೆಯಿಂದ ಅಥವಾ ಮಾನ್ಯ ಸಚಿವರಿಂದ ಉತ್ತರ ಬಂದಿರಲಿಲ್ಲ. ಈಗ ತಾವು ನನ್ನ ಹೆಸರನ್ನು ಕರೆದ ಮೇಲೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಉತ್ತರವನ್ನು ನೋಡುವುದಕ್ಕಾಗಲೀ ಅಥವಾ ಅದನ್ನು ಓದಿಕೊಂಡು ಮಾನ್ಯ ಸಚಿವರಲ್ಲಿ ಪ್ರಶ್ನೆ ಕೇಳುವುದಕ್ಕಾಗಲೀ ಸಾಧ್ಯವಾಗುತ್ತಿಲ್ಲ. ನನ್ನ ಅಭಿಪ್ರಾಯವನ್ನು ಮಾತ್ರ ತಿಳಿಸುವುದಕ್ಕೆ ಅವಕಾಶವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನವನ್ನು ಬಯಸಿ ಯಾರು ಅರ್ಜಿಯನ್ನು ಹಾಕಿಕೊಂಡಿರುತ್ತಾರೆ, ಅವರಿಗೆ ನಿವೇಶನಗಳನ್ನು ಹಂಚಿಕೆ ಮಾಡುವಂತಹ ಕಾರ್ಯವನ್ನು ನಿಗದಿತ ಸಮಯದಲ್ಲಿ ಮಾಡಿ ಮುಗಿಸಿದರೆ, ಈ ರೀತಿಯಾದ ಅಕ್ರಮ ಬಡಾವಣೆಗಳ ನಿರ್ಮಾಣವನ್ನು ತಡೆಗಟ್ಟಬಹುದಾಗಿದೆ. ಈಗ ಹೊಸದಾಗಿ ಒಂದು ಕಾನೂನನ್ನು ಜಾರಿಗೆ ತರಲಾಗಿದೆ. ಮೊದಲು "ಬಿ" ಖಾತೆಗಳನ್ನು ಕೊಡುತ್ತಿದ್ದರು. ಈಗ ಬೆಂಗಳೂರು ನಗರದಲ್ಲಿ "ಬಿ" ಖಾತೆ ನಿವೇಶನಗಳಿಗೆ "ಎ" ಖಾತೆಗಳನ್ನು ಮಾಡಿಕೊಡುತ್ತಿದ್ದಾರೆ. ಆ ನಿವೇಶನಗಳಿಗೆ ಅಗತ್ಯವಾಗಿರುವ development charges ಗಳನ್ನು ಕಟ್ಟಿಸಿಕೊಂಡು ಮನೆಗಳನ್ನು ಕಟ್ಟುವುದಕ್ಕೆ ಪ್ಲಾನ್‌ಗೆ ಅನುಮೋದನೆಯನ್ನು ನೀಡುತ್ತಿದ್ದಾರೆ. ಇದೇ ಕಾನೂನನ್ನು ಇಡೀ ರಾಜ್ಯಕ್ಕೆ ವಿಸ್ತರಿಸಿದರೆ, ಅಕ್ರಮ ಬಡಾವಣೆಗಳನ್ನು ತಡೆಗಟ್ಟಬಹುದಾಗಿದೆ ಇದರ ಜೊತೆಗೆ stamp duty, ಸಂಬಂಧಪಟ್ಟ ಇಲಾಖೆಗೆ ಬರುವುದಕ್ಕೆ ಸಾಧ್ಯವಾಗುತ್ತದೆ.

ಅದೇ ರೀತಿ ಕಾಸಗಿ ವ್ಯಕ್ತಿಯೊಬ್ಬ ಸುಮಾರು 5 ಎಕರೆ ಜಮೀನಿನಲ್ಲಿ ನಿವೇಶನಗಳನ್ನು ನಿರ್ಮಾಣ ಮಾಡಿದ್ದರೆ, ಅದರಲ್ಲಿ ಅರ್ಧಕ್ಕೆ ಮಾತ್ರ ಖಾತೆಯನ್ನು ಕೊಟ್ಟು, ಉಳಿದರ್ಧ ಮಾರಾಟವಾಗದೇ ಇರುವ ನಿವೇಶನಗಳನ್ನು ಮಾರಾಟ ಮಾಡುವುದಕ್ಕೆ ಸರ್ಕಾರ ಕ್ರಮವನ್ನು ಜರುಗಿಸಿದರೆ, ಅಕ್ರಮ ಬಡಾವಣೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಬಂದಂತಹ ದಂಪತಿಗಳಿಗೆ ಒಂದು ಮಗು ಇದ್ದರೇ, ಆ ಮಗುವಿಗೆ 7-8 ವರ್ಷಗಳಾಗುವಷ್ಟರಲ್ಲಿ ಆ ಮಗುವಿನ ಪೋಷಕರು ಒಂದು ಆಸ್ತಿ ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿರುತ್ತಾರೆ. ಇವರು ಪ್ರಾಧಿಕಾರಗಳಿಂದ ಮತ್ತು ಎರಡನೆಯ ಕೈಯಿಂದ ನಿವೇಶನವನ್ನು ಖರೀದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ಅಕ್ರಮ ಬಡಾವಣೆಗಳ ನಿರ್ಮಾಣವನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಜರುಗಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಸುರೇಶ್ ಬಿ.ಎಸ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಯಮ ೩೩೦ರಡಿಯಲ್ಲಿ ಕೇಳಿರುವ ವಿಚಾರವೇ ಬೇರೆ, ಈಗ ಅವರು ಪ್ರಸ್ತಾಪ ಮಾಡಿರುವ ವಿಚಾರವೇ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆಯಾಗಿದೆ. ಮಾನ್ಯ ಸದಸ್ಯರು ರಾಜ್ಯಾದ್ಯಂತ ಎಲ್ಲೆಲ್ಲಿ ಅಕ್ರಮ ಬಡಾವಣೆಗಳು ನಿರ್ಮಾಣವಾಗಿವೆ, ಈ ಅಕ್ರಮ ಬಡಾವಣೆಗಳನ್ನು ನಿರ್ಮಾಣ ಮಾಡಿರುವ ಅಧಿಕಾರಿಗಳ ವಿರುದ್ಧ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಈ ಅಕ್ರಮ ಬಡಾವಣೆಗಳ ನಿರ್ಮಾಣವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಅದನ್ನು ಹೊರತುಪಡಿಸಿ ಮಾನ್ಯ ಸದಸ್ಯರು ಇನ್ನೂ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೂ ನಾನು ಉತ್ತರವನ್ನು ಕೊಡುತ್ತೇನೆ.

ಮಾನ್ಯ ಸದಸ್ಯರು ಕೇಳಿರುವ ಕೊನೆಯ ಪ್ರಶ್ನೆಗೆ ಮೊದಲು ಉತ್ತರವನ್ನು ಕೊಡುತ್ತೇನೆ. ಬೆಂಗಳೂರು ಬಿ.ಡಿ.ಎ., ಮತ್ತು ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ "ಬಿ" ಖಾತೆಯ ನಿವೇಶನಗಳಿಗೆ "ಎ" ಖಾತೆ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಜಾರಿಗೊಳಿಸಲು ಹೊರಟಿದೆ. ಇದೇ ವ್ಯವಸ್ಥೆಯನ್ನು ಗ್ರಾಮೀಣ ಭಾಗದಲ್ಲಿಯೂ ಜಾರಿಗೊಳಿಸಬೇಕೆನ್ನುವ ಮನವಿಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ನಾವು ಈಗಾಗಲೇ ಈ ಪ್ರಸ್ತಾವನೆಯನ್ನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅದು ಕಾನೂನು ಇಲಾಖೆಯ ಪರಿಶೀಲನೆಯಲ್ಲಿದೆ. ಬೆಂಗಳೂರು ನಗರದಲ್ಲಿ ಹೇಗೆ "ಬಿ" ಖಾತೆಗೆ "ಎ" ಖಾತೆ ಮಾಡಿಕೊಡುವಂತಹ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಅದೇ ವ್ಯವಸ್ಥೆಯನ್ನು ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ.

(ಮುಂದು)

(627) 11.8.2025 5.40 ಪಿಕೆ:ಬಿಎನ್ಎಸ್ ಸಭಾಪತಿಗಳ ಉಪಸ್ಥಿತಿ

ಶ್ರೀ ಬಿ.ಎಸ್.ಸುರೇಶ್(ಮುಂದು)

ಈಗಾಗಲೇ ಈ ಪ್ರಸ್ತಾವನೆ ಇದೆ. ಮುಂದಿನ ದಿವಸಗಳಲ್ಲಿ ಇದಕ್ಕೆ ಕಾಯಕಲ್ಪ ಕೊಡುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು, ಇಡೀ ರಾಜ್ಯದಲ್ಲಿ ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸಲು ಏನೇನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದರು. ಸೆಕ್ಷನ್ 17 (ಎ) ಪ್ರಕಾರ, ರಾಜ್ಯದಲ್ಲಿ ಯಾರು ಅಕ್ರಮ ಬಡಾವಣೆಗಳನ್ನು ನಿರ್ಮಾಣ ಮಾಡಿದ್ದಾರೋ ಅವುಗಳನ್ನು ತೆರವುಗೊಳಿಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ಅಕ್ರಮ ಬಡಾವಣೆ ನಿರ್ಮಾಣ ಮಾಡಿರುವವರಿಗೆ ಎರಡು ಸಲ ನೋಟಿಸ್ ಕೊಟ್ಟರೂ ಸಹ ಅದು ಹಾಗೆಯೇ ಮುಂದುವರೆದಿದ್ದರೆ ಅಂಥದ್ದನ್ನು ತೆರವುಗೊಳಿಸುವ ಸಂಪೂರ್ಣ ಅಧಿಕಾರವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅಕ್ರಮವಾಗಿ ನಿರ್ಮಾಣವಾದ ಬಡಾವಣೆಗಳನ್ನು ಯಾವ ಅಧಿಕಾರಿಗಳು ತೆರವುಗೊಳಿಸುವುದಿಲ್ಲವೋ ಅಂಥವರನ್ನು ಸೆಕ್ಷನ್ 76 ಎಫ್ಎಫ್ಎಫ್ ಪ್ರಕಾರ ದಂಡನೆ ಮಾತ್ರವಲ್ಲ, ಮೊದಲನೇ ಸಲ ರೂ.೫೦,೦೦೦, ಎರಡನೇ ಸಲ ರೂ. 1,೦೦,೦೦೦ ಫೈನ್ ಹಾಕಲಾಗುತ್ತದೆ. ಕರ್ನಾಟಕ ಸರ್ಕಾರ ಅಧಿನಿಯಮದ ಪ್ರಕಾರ ಅವರನ್ನು ಸಸ್ಪೆಂಡ್ ಮಾಡುವಂಥದ್ದು, ಡಿಸ್ಮಿಸ್ ಮಾಡುವಂಥದ್ದು ಆಗುತ್ತದೆ. ಮೊದಲು ಆ ಜಮೀನು ಮಾಲೀಕರಿಗೆ ನೋಟಿಸ್ ಕೊಡುವ ಅಧಿಕಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅವರು ತೆರವು ಮಾಡಿಸುವ ಕಾರ್ಯವನ್ನು ಮಾಡಬೇಕಾಗುತ್ತದೆ. ಅಧಿಕಾರಿಗಳು ತಪ್ಪು ಮಾಡಿದ ಸಂದರ್ಭದಲ್ಲಿ ಅವರನ್ನು ಸಸ್ಪೆಂಡ್ ಅಥವಾ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಿಸ್‌ಮಿಸ್ ಮಾಡುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಈಗಾಗಲೇ ಇಡೀ ರಾಜ್ಯದ ನಮ್ಮ ಬಹಳಷ್ಟು ಅಭಿವೃದ್ಧಿ ಪ್ರಾಧಿಕಾರಿಗಳಲ್ಲಿ, ಬಾಗಲಕೋಟೆ, ಬೆಳಗಾವಿ ಇಂತಹ ಪ್ರದೇಶಗಳಲ್ಲಿ 23-26 ಅಕ್ರಮ ಬಡಾವಣೆಗಳು ನಿರ್ಮಾಣವಾಗಿವೆ. ಉದಾಹರಣೆಗೆ ಹುಬ್ಬಳ್ಳಿ-ಧಾರವಾಡದಲ್ಲಿ ಸುಮಾರು 163 ಅನಧಿಕೃತ ಬಡಾವಣೆಗಳಿದ್ದು ಈ ಪೈಕಿ ನಾವು 102 ಬಡಾವಣೆಗಳನ್ನು ನಾವು ತೆರವು ಮಾಡಿಸಿದ್ದೇವೆ. ಉಳಿದ ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸಲು ನೋಟಿಸ್ ನೀಡಲಾಗಿದೆ. ಇಡೀ ರಾಜ್ಯದಲ್ಲಿ ಇರುವ ಅನಧಿಕೃತ ಬಡಾವಣೆಗಳನ್ನು ತೆರವುಗೊಳಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಯಾವ ಅಧಿಕಾರಿಗಳು ತೆರವು ಮಾಡಿಸುವ ಕೆಲಸ ಮಾಡುವುದಿಲ್ಲವೋ ಅಂಥವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ.ಎನ್.ಮಂಜೇಗೌಡ:- ಮಾನ್ಯ ಸಭಾಪತಿಗಳೆ, ಈಗಾಗಲೇ ಆ ಬಡಾವಣೆಗಳು ರಚನೆಯಾಗಿವೆ. ಅವುಗಳನ್ನು ಯಾವುದೇ ಕಾರಣಕ್ಕೂ ತೆರವುಗೊಳಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ, ಸರ್ಕಾರವೇ, ಬಿ ಖಾತೆ ಮಾಡಿಸಬಹುದು ಎಂದು ಕಾನೂನು ಮಾಡಿದೆ. ಒಂದು ಬಡಾವಣೆಯಲ್ಲಿರಬಹುದಾದ 50 ನಿವೇಶನಗಳ ಪೈಕಿ 25 ನಿವೇಶನಗಳಿಗೆ ನೀವು 'ಬಿ' ಖಾತೆಯನ್ನು ಕೊಟ್ಟಿರುತ್ತೀರಿ. ಉಳಿದ ನಿವೇಶನಗಳಿಗೆ 'ಬಿ' ಖಾತೆ ಕೊಡದೇ ಇರುವ ಸಂದರ್ಭದಲ್ಲಿ ಅಂತಹ ಬಡಾವಣೆಗಳನ್ನು ನೀವು ಹೇಗೆ ತೆರವುಗೊಳಿಸುತ್ತೀರಿ?

ಶ್ರೀ ಬಿ.ಎಸ್.ಸುರೇಶ್:- ಮಾನ್ಯ ಸಭಾಪತಿಗಳೆ, ನನಗಿರುವ ಮಾಹಿತಿ ಪ್ರಕಾರ ಇದು ಬಡವರಿಗೆ ಸಂಬಂಧಪಟ್ಟಿದ್ದಾಗಿದೆ. 300 ಎಕರೆಯಲ್ಲಿ ಅನಧಿಕೃತವಾಗಿ ಬಡಾವಣೆ ಮಾಡಿಕೊಂಡಿರುವವರಿಗೂ ಇ-ಖಾತೆ ಮಾಡಿಕೊಡಿ, 'ಎ' ಖಾತೆ ಮಾಡಿಕೊಡಿ ಎಂದು ಕೇಳಿದರೆ ಹೇಗಾಗುತ್ತದೆ? ಅದು ಸಮಂಜಸವಾದುದಲ್ಲ. ಈ ಕುರಿತು ನಾನು ಇನ್ನೂ ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಮುಂದಿನ ದಿವಸಗಳಲ್ಲಿ ಈ ಕುರಿತು ನಾನು ಕಾನೂನು ಇಲಾಖೆಯೊಂದಿಗೆ ಸಮಾಲೋಚನೆ ಮಾಡಿ, ಇಂತಹ ದೊಡ್ಡ ದೊಡ್ಡ ಬಡಾವಣೆಗಳಲ್ಲಿ ಆಗಿರುವ ಅನಧಿಕೃತ ನಿವೇಶನಗಳ ಸಂಬಂಧ ಯಾವರೀತಿ ಕ್ರಮಕೈಗೊಳ್ಳಬಹುದು ಎಂಬ ಬಗ್ಗೆ ತಿಳಿದುಕೊಳ್ಳುತ್ತೇವೆ. ಕಾನೂನು ಇಲಾಖೆಯ ಜೊತೆ ಮಾತನಾಡದೇ ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಉತ್ತರ ಕೊಡುವುದು ಸಮಂಜಸವಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಸಿ.ಎನ್.ಮಂಜೇಗೌಡ:- ಮಾನ್ಯ ಸಭಾಪತಿಗಳೆ, ಈಗಾಗಲೇ ಕಾನೂನು ತಂದು, ಬಿ ಖಾತೆ ನೀಡಲಾಗುತ್ತಿದೆ. ನೀವು ಕಾನೂನು ಇಲಾಖೆಯ ಸಲಹೆಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ಎನ್ನುವ ಭಾವನೆಯಿಂದ ನಾನು ಮಾತನಾಡುತ್ತಿದ್ದೇನೆ. ಮೈಸೂರಿನಲ್ಲಿ ಸುಮಾರು 25-26 ಸಾವಿರ ನಿವೇಶನಗಳಿಗೆ ಬಿ ಖಾತೆಗಳನ್ನು ಕೊಟ್ಟಿದ್ದೀರಿ. ಈ ಕುರಿತು ನಿಮ್ಮ ಇಲಾಖೆಯಿಂದಲೇ ಪ್ರಕಟಣೆ ಹೊರಬಂದಿದೆ. ಹಾಗಾಗಿ ನೀವು ಉಳಿದ ನಿವೇಶನಗಳಿಗೆ ಸಂಬಂಧಪಟ್ಟಂತೆ ಖಾತೆಗಳನ್ನು ರದ್ದು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ನೀವು ಅದನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಹೊಸದಾಗಿ ಅನಧಿಕೃತ ಬಡಾವಣೆ ಮಾಡುವಂತಹ ಸಂದರ್ಭದಲ್ಲಿ ನಿಮ್ಮ ಅಧಿಕಾರಿಗಳು ಆ ನಿಟ್ಟಿನಲ್ಲಿ ಕಾನೂನಿನ ಪ್ರಕಾರ ಏನೂ ಪ್ರಕ್ರಿಯೆ ಕೈಗೊಳ್ಳದೇ ಇದ್ದರೆ ಆಗ ಅವರ ಮೇಲೆ ನೀವು ಕ್ರಮ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬಹುದು. ಈಗ ರಿಜಿಸ್ಟ್ರೇಷನ್ ಆಗದೇ ಇರುವ ಕಾರಣ ಹೊಸದಾಗಿ ಬಡಾವಣೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. 'ಎ' ಖಾತೆ ಮಾಡಿಸಬೇಕು, 'ಬಿ' ಖಾತೆ ಮಾಡಿಸಬೇಕು ಎಂದಾಗ, 'ಎ' ಖಾತೆ ಮಾಡಿಸುವಂಥದ್ದು ನಿಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಅನಧಿಕೃತ ಬಡಾವಣೆಗಳ ನಿರ್ಮಾಣವಾಗಬಾರದು ಎಂದರೆ ನಿಮ್ಮ ಪ್ರಾಧಿಕಾರಗಳಿಂದ ಸೂಕ್ತ ಸ್ಪಂದನೆ ಆಗಬೇಕು. ಮೈಸೂರಿನಲ್ಲಿ ಸುಮಾರು 10-15 ವರ್ಷಗಳಿಂದ ನಿವೇಶನಗಳನ್ನು ಮಾಡಿ ಕೊಡುತ್ತಿಲ್ಲ. ಈ ರೀತಿಯ ವೈಫಲ್ಯಕ್ಕೆ ಕಾರಣವೇನು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಬಿ.ಎಸ್.ಸುರೇಶ್:- ಮಾನ್ಯ ಸಭಾಪತಿಗಳೆ, ಇಡೀ ರಾಜ್ಯಾದ್ಯಂತ 50:50ರ ಅನುಪಾತದಲ್ಲಿ ಈಗಾಗಲೇ ನೋಟಿಫಿಕೇಷನ್ ಮಾಡಿದ್ದೇವೆ. ಸರ್ಕಾರಕ್ಕೆ 50% ಮತ್ತು ಭೂಮಾಲೀಕರಿಗೆ 50% ಕೊಡಬೇಕೆಂದು ಹುಬ್ಬಳ್ಳಿ-ಧಾರವಾಡ, ಬೆಳಗಾವಿಯಂತಹ ನಗರಗಳಲ್ಲಿ ಸುಮಾರು 200 ಎಕರೆಗಳಷ್ಟು ಜಾಗವನ್ನು ನೋಟಿಫಿಕೇಷನ್ ಮಾಡಿದ್ದೇವೆ. ಕೆಲವೇ ತಿಂಗಳುಗಳಲ್ಲಿ ಬಡವರಿಗೆ ನಿವೇಶನಗಳನ್ನು ಕೊಡುವಂತಹ ಕೆಲಸ ಮಾಡುತ್ತೇವೆ.

ಶ್ರೀ ಸಿ.ಎನ್.ಮಂಜೇಗೌಡ:- ಮಾನ್ಯ ಸಭಾಪತಿಗಳೆ, ನಾವು ರಾಜಕೀಯವನ್ನು ಹೊರತುಪಡಿಸಿ ಮಾತನಾಡಬೇಕಾಗುತ್ತದೆ. ನಾನು ನನ್ನ ಕಾಮನ್‌ಸೆನ್ಸ್ ಪ್ರಕಾರ ಮಾತನಾಡುವುದಾದರೆ, ಉದಾಹರಣೆಗೆ ಮೈಸೂರಿನಲ್ಲಿ ನೀವು ಭೂಮಾಲೀಕರಿಂದ ಜಾಗವನ್ನು ಪಡೆದುಕೊಂಡು ನೋಟಿಫಿಕೇಷನ್ ಮಾಡಿದ್ದೀರಿ. 10-15 ವರ್ಷಗಳಾದರೂ ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ; 50:50ರ ಅನುಪಾತದಂತೆಯೂ ಕೊಡುವುದಿಲ್ಲ. ಅಂತಹ ಸಂದರ್ಭದಲ್ಲಿ ಅನಧಿಕೃತ ಬಡಾವಣೆಗಳು ಹುಟ್ಟಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ಕಾರಣಕರ್ತರು ಯಾರು? ಇಂಥದ್ದನ್ನು ತಡೆಯುವುದಕ್ಕೆ ಏನು ಮಾಡಬೇಕು? ಇಂತಹ ಸಂದರ್ಭದಲ್ಲಿ ನೀವು, ಭೂಮಿಯನ್ನು ವಶಪಡಿಸಿಕೊಂಡ ತಕ್ಷಣ ಅವರಿಗೆ ಸೂಕ್ತ ಪರಿಹಾರ ಕೊಡಬೇಕಾಗುತ್ತದೆ. ಯಾವಾಗ ಭೂಮಾಲೀಕರು ಭೂಮಿಯನ್ನು ಕೊಡುತ್ತಾರೋ ಆ ಜಾಗದಲ್ಲಿ ನಿವೇಶನ ಮಾಡಿ ಹಂಚಬಹುದು. ನಿವೇಶನಗಳನ್ನು ಹಂಚುವಾಗ, ಅದರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ; ಬಡವರಿಗೆ ನಿವೇಶನಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮುಂಚೆ ಹಾಗೆಯೇ ಮಾಡುತ್ತಿದ್ದರು. ಈಗ ಕೊಡುತ್ತಿಲ್ಲ. ಆ ಕಾನೂನನ್ನು ನೀವು ಏಕೆ ತೆಗೆದಿರಿ? ಮೊದಲು, ಖಾಸಗಿ ಲೇಔಟ್ ಮಾಡುವಾಗ, ಅದರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆಂದು ಇಂತಿಷ್ಟು ನಿವೇಶನಗಳನ್ನು ಮೀಸಲಿಡುತ್ತಿದ್ದರು. ಆ ವ್ಯವಸ್ಥೆಯನ್ನು ನೀವು ತೆಗೆದಿದ್ದೀರಿ. ಪ್ರಾಧಿಕಾರಿಗಳು ಜಾಗವನ್ನು ಪಡೆದುಕೊಳ್ಳುವಾಗ ನಿರ್ದಿಷ್ಟ ಸಮಯದ ಒಳಗೆ ಭೂಮಾಲೀಕರಿಗೆ 50:50 ಪ್ರಕಾರ ಪರಿಹಾರ ಕೊಡಬೇಕು. ಮೊದಲು ಭೂಮಾಲೀಕರಿಗೆ 55%ನಷ್ಟು ಪರಿಹಾರ ರೂಪದಲ್ಲಿ ನೀಡಲಾಗುತ್ತಿತ್ತು. ಈಗಲೂ ಅದನ್ನೇ ಅನುಸರಿಸಿ. ಎಲ್ಲಾ ಇಲಾಖೆಗಳು ಭೂಮಾಲೀಕರ ಪರವಾಗಿ, ರೈತರ ಪರವಾಗಿ ಕೆಲಸ ಮಾಡುತ್ತಿವೆ. ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವುದಕ್ಕೆ ನೀವೇನು ಜಾಗಗಳನ್ನು ಭೂಸ್ವಾಧೀನ ಕಾನೂನು ನಿಯಮ 4(1), 6(1), 16, 32 ಇವುಗಳ ಅಡಿ ನೋಟಿಫಿಕೇಷನ್ ಮಾಡುತ್ತೀರೋ, ಆ ಸಮಯದಲ್ಲಿ ಭೂಮಾಲೀಕರಿಗೆ ಪರಿಹಾರ ಕೊಟ್ಟರೆ ಅನಧಿಕೃತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಡಾವಣೆಗಳು ನಿರ್ಮಾಣವಾಗುವುದಕ್ಕೆ ಕಾರಣವಾಗುವುದಿಲ್ಲ. ತಾವು ಮುಂದಿನ ದಿನಗಳಲ್ಲಿ, ಆದಷ್ಟು ಬೇಗ ಇಂತಹ ಒಂದು ಕಾನೂನನ್ನು ತರಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್.ಸುರೇಶ್:- ಈ ನಿಟ್ಟಿನಲ್ಲಿ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

12. ನಿಯಮ 68ರ ಮೇರೆಗೆ

ವಿಷಯ: ದಿನ್ನೂರು ಗ್ರಾಮದ ಹಿಂದುಳಿದ ಮತ್ತು ದಲಿತ ರೈತರ ಭೂಮಿಯನ್ನು ಅರಣ್ಯ ಭೂಮಿ ಎಂದು ಘೋಷಿಸಿರುವುದರಿಂದ ದಲಿತರು ಹಾಗೂ ತಳ ಸಮುದಾಯಕ್ಕೆ ಸೇರಿದ ರೈತರ ಜೀವನೋಪಾಯ ಅಪಾಯದಲ್ಲಿರುವ ಬಗ್ಗೆ.

.....

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಗಳೆ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಅರಣ್ಯ ಇಲಾಖೆಯಲ್ಲಿ ಇತ್ತೀಚಿಗೆ ಒಂದು ಗೊಂದಲ ಸೃಷ್ಟಿಯಾಗಿದೆ. ಪುಣೆಯಲ್ಲಿ 3-4 ಎಕರೆ ಜಾಗದ ಕುರಿತು ಒಂದು ಕೇಸ್ ರಿಜಿಸ್ಟರ್ ಆಗುತ್ತದೆ ಮತ್ತು ಅದು ಸುಪ್ರೀಂ ಕೋರ್ಟ್ ತನಕ ಹೋಗುತ್ತದೆ. ಈ ಸಂಬಂಧ ಶ್ರೀ ಗೋದಾವರಮನ್ ತಿರುಮಲಪಾಡ್ ಎನ್ನುವವರು ಒಂದು ಅರ್ಜಿ ಹಾಕುತ್ತಾರೆ. ಸುಪ್ರೀಂ ಕೋರ್ಟ್‌ನಲ್ಲಿ ಒಂದು ತೀರ್ಮಾನ ಬರುತ್ತದೆ. ಯಾವ ಯಾವ ಜಮೀನುಗಳು ಅರಣ್ಯ ಇಲಾಖೆಗೆ ಸಂಬಂಧಪಟ್ಟಿದ್ದು, ಅವುಗಳನ್ನು ಯಾರಿಗೆ ಕೊಟ್ಟಿದ್ದಾರೋ ಅದರಲ್ಲಿ ತಪ್ಪಾಗಿದೆ; ಅಲ್ಲಿ ಏನೂ ಅಭಿವೃದ್ಧಿ ಆಗದೇ ಇದ್ದರೆ ಅದನ್ನು ವಾಪಸ್ಸು ಪಡೆದುಕೊಳ್ಳಿ ಎಂದು ಹೇಳಲಾಗುತ್ತದೆ. ಇದು ಸುಪ್ರೀಂ ಕೋರ್ಟ್‌ನ ಆದೇಶವಾಗಿದ್ದರಿಂದ ಇಡೀ ರಾಷ್ಟ್ರಕ್ಕೆ ಸಂಬಂಧಪಡುತ್ತದೆ. ಅಲ್ಲಿ ಒಂದು ವಿಷಯ ಬರುತ್ತದೆ.

(ಮುಂದು)

(628) 11-8-2025 5.50 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-

ಅಲ್ಲಿ ಒಂದು ವಿಷಯ ಬರುತ್ತದೆ. ಅದರಲ್ಲಿ ಈ ರೀತಿ ಹೇಳುತ್ತಾರೆ:

"…. the possession of the land from the persons/institutions in possession of such lands and handover the same to the Forest Department."

ಅಂದರೆ, ವಾಪಸ್ ಕೊಡಬೇಕು ಎಂದು ಆಗುತ್ತದೆ.

ಮಾನ್ಯ ಸಭಾಪತಿಯವರೇ, ಸದನದಲ್ಲಿ ಅರಣ್ಯ ಇಲಾಖೆಯ ಸಚಿವರು ಇಲ್ಲ. ಇಷ್ಟು ಹೊತ್ತು ಸದನದಲ್ಲಿ ಅರಣ್ಯ ಇಲಾಖೆಯ ಸಚಿವರು ಇದ್ದರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ಸಭಾನಾಯಕರೇ, ಮಾನ್ಯ ಅರಣ್ಯ ಸಚಿವರನ್ನು ಸದನಕ್ಕೆ ಕರೆಯಿಸಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಿ. ಮತ್ತೆ ನಾಳೆ ತಮಗೆ ಅವಕಾಶ ಸಿಗುವುದಿಲ್ಲ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅಂದರೆ ಅರಣ್ಯ ಭೂಮಿಗಳನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ್ದಕ್ಕೆ ತಕ್ಕಂತೆ ಅವರಿಗೆ ಉತ್ತರ ಕೊಡಬೇಕು ಮತ್ತು ಕೆಲಸಗಳಾಗಬೇಕಲ್ಲವೇ?

ಸಭಾಪತಿಯವರು:– ಮಾನ್ಯ ಸಭಾನಾಯಕರೇ ಸರ್ಕಾರ ಉತ್ತರ ಕೊಡುತ್ತದೆಯಲ್ಲವೇ? ನಾಳೆ ತೆಗೆದುಕೊಳ್ಳೋಣ.

ಶ್ರೀ ಎನ್. ಎಸ್.ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ತಮ್ಮ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ.

ಸಭಾಪತಿಯವರು:– ಮಾನ್ಯ ಅರಣ್ಯ ಸಚಿವರು ನನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅವರು ಹೇಳಿದ ಹಾಗೆ ತಾವು ನಾಳೆ ಮುಂದುವರೆಸಿ ಎಂದು ಹೇಳಿದರೆ ನಾನು ನಾಳೆ ಮುಂದುವರೆಸುತ್ತೇನೆ.

ಸಭಾಪತಿಯವರು:– ಮಾನ್ಯ ಅರಣ್ಯ ಸಚಿವರು ಯಾವುದೋ ಕಾರ್ಯಕ್ರಮ ಇದೆ ಎಂದು ನನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಸರ್ಕಾರ ಉತ್ತರ ಕೊಡುತ್ತದೆ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇದು ಒಂದು ರೀತಿ ಮುಖ್ಯವಾದ ವಿಷಯವಾಗಿದೆ.

ಸಭಾಪತಿಯವರು:– ಹಾಗಾದರೆ ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ. ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಂಗಳವಾರ, ದಿನಾಂಕ 12ನೇ ಆಗಸ್ಟ್ ಮಾಹೇ 2025 ರಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)